
STAR OF MYSORE
Wednesday 22nd January 2020
Sadhakarondige Samvada and 'Yuva Kavigoshti' on Jan. 23


ಆಂದೋಲನ
ದಿನ ಪತ್ರಿಕೆ
ಆ. ೮. ೨೦೧೯
ಸಮಸ್ಯೆಗಳಿಗೆ ಪರಿಹಾರ ಸಿಗುವಂಥ ಸಂಶೋಧನೆ ಆಗಲಿ


ವಿಜಯ ಕರ್ನಾಟಕ
ಭಾನುವಾರ, 26 ಜನವರಿ 2020,
ಮಹಾಜನ ಕಾಲೇಜಿನಲ್ಲಿ ನಾಣ್ಯ ಪರಂಪರೆ ಅನಾವರಣ


ಪ್ರಜಾವಾಣಿ
ಗುರುವಾರ • ಆಗಸ್ಟ್ 1, 2019


ಮೈಸೂರು ಮಿತ್ರ
ಬುಧವಾರ, ಡಿಸೆಂಬರ್ ೨೫, ೨೦೧೯
ವ್ಯಕ್ತಿತ್ವ ರೂಪಿಸಿಕೊಳ್ಳಲು ಜ್ಞಾನ ಸಂಪಾದನೆ ಅಗತ್ಯ:ಡಾ.ಬಿ.ಜಯಕುಮಾರಿ


ವಿಜಯವಾಣಿ
ಕನ್ನಡಿಗರ ಧ್ವನಿ
ಸೋಮವಾರ 27 ಜನವರಿ 2020
27 JANUARY 2020
ಜನಾಕರ್ಷಿಸಿದ ಅಪರೂಪದ ನಾಣ್ಯಗಳು


ಪ್ರಜಾವಾಣಿ
ಭಾನುವಾರ • ಜನವರಿ 12, 2020
ಮೈಸೂರಲ್ಲೇ ಚಿಮೂ ಉನ್ನತ ವಿದ್ಯಾಭ್ಯಾಸ

MAHAJANA
IN THE EYES OF THE PRESS....

College with Potential for Excellence
Education to Excel

SBRR MAHAJANA FIRST GRADE COLLEGE (Autonomous)

Jayalakshmipuram, Mysore - 12

2020

MAHAJANA IN THE EYES OF THE PRESS.....

13

THIRTEENTH VOLUME

MAHAJANA EDUCATION SOCIETY (R.)

ಮುನ್ನುಡಿ

ಸಾಂಸ್ಕೃತಿಕ ನಗರ ಮೈಸೂರು ವೈವಿಧ್ಯಮಯ ರತ್ನಗಳಿಂದ ಶೋಭಿಸುತ್ತಿರುವ ದೊಡ್ಡ ಕಿರೀಟ. ಆ ಕಿರೀಟದಲ್ಲಿನ ಒಂದು ಮುತ್ತು ನಮ್ಮ ಮಹಾಜನ ವಿದ್ಯಾಸಂಸ್ಥೆ. ಸಮಾಜದಲ್ಲಿ ಶೈಕ್ಷಣಿಕವಾಗಿ ಸಹಾಯ ಮಾಡಬೇಕು ಎಂಬ ಸದುದ್ದೇಶದಿಂದ ಆರಂಭಗೊಂಡ ಸಂಸ್ಥೆ ನಮ್ಮದು. SBRR ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸದಾ ತುಡಿಯುತ್ತಾ, ಕಲಿಕೆಯ ಪ್ರಕ್ರಿಯೆಯನ್ನು ನಿರಂತರವಾಗಿ ಆರೋಗ್ಯ ಹಾಗೂ ಕ್ರಿಯಾಶೀಲವಾಗಿರಿಸಲು ಪಠ್ಯದ ಜೊತೆಗೆ ಪಠ್ಯ ಪೂರಕ, ಪಠ್ಯೇತರ ಮತ್ತು ಕೌಶಲ್ಯವರ್ಧಿತ ಚಟುವಟಿಕೆಗಳನ್ನು ಆಯೋಜಿಸುತ್ತಾ ಬರುತ್ತಿದೆ. ಇಂಥ ಯಾವುದೇ ಕಾರ್ಯಕ್ರಮ ಕಾಲೇಜಿನಲ್ಲಿ ನಡೆದರೂ ಮರುದಿನ ಪತ್ರಿಕೆಯಲ್ಲಿ ಅದರ ಮಾಹಿತಿ ಮತ್ತು ಛಾಯಚಿತ್ರವನ್ನು ನೋಡುವುದು ಅತ್ಯಂತ ಸಂತೋಷ ಮತ್ತು ತೃಪ್ತಿದಾಯಕವಾದುದು. ಅದಷ್ಟೇ ಅಲ್ಲ ಕಾಲೇಜಿನ ಮತ್ತು ಸಮಾಜದ ದೃಷ್ಟಿಯಿಂದ ಮಹತ್ವವಾದದ್ದೂ ಕೂಡ. ಇದರಿಂದ ಕಾಲೇಜು ಸಮಾಜದೊಂದಿಗೆ ನೇರ ಸಂಪರ್ಕ ಸಾಧಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ನಮ್ಮ ಸಾಧನೆಗಳನ್ನು, ಘಟನೆಗಳನ್ನು, ಕಾರ್ಯಕ್ರಮಗಳನ್ನು, ಸಮಾಜದೊಂದಿಗೆ ಹಂಚಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ. ಅಧ್ಯಾಪಕರ, ಅಧ್ಯಾಪಕೇತರರ, ವಿದ್ಯಾರ್ಥಿಗಳ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಂಸ್ಕೃತಿಕೇತರ ಸಾಧನೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಈ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಡಿಜಿಟಲ್ ರೂಪದಲ್ಲಿ ಸಂಕಲಿಸಿ ಅದನ್ನು ಪುಸ್ತಕ ರೂಪದಲ್ಲಿ ತಂದು ದಾಖಲಿಸಿ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಎಂಬ ಶೀರ್ಷಿಕೆಯೊಂದಿಗೆ ಕೃತಿ ರೂಪ ತಾಳಿದೆ. ಈ ಕೃತಿ ನಮ್ಮ ಕಾಲೇಜಿನ ಇತಿಹಾಸದ ಮೈಲಿಗಲ್ಲು. ಮುಂದಿನವರಿಗೆ ಮಾಹಿತಿಯ ಮೂಲವೂ ಆಗಿದೆ. ಪ್ರತಿದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ನಮ್ಮ ಗ್ರಂಥಾಲಯ ವಿಭಾಗ ಅತ್ಯಂತ ಬದ್ಧತೆಯಿಂದ ನಿರ್ವಹಿಸಿಕೊಂಡು ಬರುತ್ತಿದೆ.

ಮುಖ್ಯ ಗ್ರಂಥಪಾಲಕಿಯಾದ ಶ್ರೀಮತಿ ವೀಣಾ ಎಂ ಅವರಿಂದ ಗ್ರಂಥಾಲಯಕ್ಕೆ ಹೊಸ ಚೈತನ್ಯ ಬಂದಿದೆ. ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಗ್ರಂಥಾಲಯದೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಲೈಬ್ರರಿ ಕೇವಲ ಪುಸ್ತಕ ಸಂಗ್ರಹಿಸುವ ಕೇಂದ್ರವಾಗಿಲ್ಲ. ಸರಸ್ವತಿಯ ಮಂದಿರವಾಗಿದೆ. ಈ ಮಂದಿರಕ್ಕೆ ಗೌರವ ತರುವ ರೀತಿಯಲ್ಲಿ ಶ್ರೀ ಮಹೇಶ್ ಎಂ ಮತ್ತು ಶ್ರೀಮತಿ ಪುಷ್ಪ ಎಲ್ ಅವರು ಸಂಕಲ್ಪ ಸಿದ್ಧರಾಗಿ ದುಡಿಯುತ್ತಿದ್ದಾರೆ. ಗ್ರಂಥಾಲಯ ವಿಭಾಗದ ಎಲ್ಲಾ ಸದಸ್ಯರು ಇವರೊಂದಿಗೆ ಕೈ ಜೋಡಿಸಿ ಮುನ್ನಡೆಸುತ್ತಿದ್ದಾರೆ. ಈ ದುಡಿಮೆಯ ಫಲ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಸಂಪುಟಗಳು ಹೊರಬಂದಿವೆ. ಇವರೆಲ್ಲರಿಗೂ ವಿಶೇಷ ಅಭಿನಂದನೆಗಳು. ಈ ಕೃತಿಗಾಗಿ ಪರಿಶ್ರಮದಿಂದ ಕಾರ್ಯನಿರ್ವಹಿಸಿದ ಅಧ್ಯಾಪಕರು, ಅಧ್ಯಾಪಕೇತರರಿಗೆ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಕಾಲೇಜಿನ ಇತಿಹಾಸ ಹಸಿರಾಗಿ ಉಳಿಯಬೇಕಾದರೆ ಈ ಕೆಲಸ ನಿರಂತರವಾಗಿ ಸಾಗಲೆಂದು ಆಶಿಸುತ್ತೇನೆ.

(ಡಾ. ಬಿ.ಆರ್ ಜಯಕುಮಾರಿ)

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಜುಲೈ 3, 2019



ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಜಿ.ಬಿ.ಅರವಿಂದ್ ಮಾತನಾಡಿದರು

MFGE In the Eyes of the Press.....

ಕಂಠೀರವ

ದಿನ ಪತ್ರಿಕೆ

ಜು.೧, ೨೦೧೯

ಸಿಬಿಎಸ್‌ಇ ಪಠ್ಯಕ್ರಮ ಬಿಡುಗಡೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಆಯೋಜಿಸಿದ್ದ ೨೦೧೯-೨೦ನೇ ಸಾಲಿನ ಸಿಬಿಎಸ್‌ಇ ಪಠ್ಯ ಕ್ರಮವನ್ನು ಜೆಎಸ್ ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ನಂದೀಶ್ ಹಂಚೆ ಲೋಕಾರ್ಪಣೆಗೊಳಿಸಿದರು. ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಡಾ.ಎಸ್.ವೆಂಕಟರಾಮು, ಡಾ.ಎಸ್.ಆರ್. ರಮೇಶ್, ಡಾ.ಎಚ್.ಆರ್.ತಿಮ್ಮೇಗೌಡ, ಬಿ.ಆರ್.ಜಯಕುಮಾರಿ, ಡಾ.ವಿನೋದಮ್ಮ, ಪ್ರಕಾಶ್, ಎಂ.ನಾಗೇಶ್, ಸಿ. ಎಂ.ಕಿರಣ್‌ಕುಮಾರ್ ಇನ್ನಿತರರು ಭಾಗವಹಿಸಿದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 19.7.2019



ಎಂಟ್ರಿ ಟು ಸರ್ವೀಸ್, ಐಕ್ಯೂಎಸಿ ಮತ್ತು ಕೃತವಿದ್ಯಾ ನಾಗರಿಕ ಸೇವಾ ಪರೀಕ್ಷಾ ತರಬೇತಿ ಅಕಾಡೆಮಿಯಿಂದ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ಎನ್‌ಐಇ ಕಾಲೇಜಿನ ಪ್ರಾಧ್ಯಾಪಕ ಸಾಗರ್ ಎ. ದೇಶಪಾಂಡೆ ಉಪನ್ಯಾಸ ನೀಡಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 31.7.2019



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ 'ಬ್ರಿಸ್ಕರ್ಸ್ ಡೇ' ಎಂಬ ಸ್ವಾಗತ ಕಾರ್ಯಕ್ರಮ ಆಯೋಜಿಸಿತ್ತು. ಹಾಡು, ನೃತ್ಯ, ಸಂಗೀತ, ಕಾರ್ಯಕ್ರಮ ಮತ್ತು ಆಟ-ಓಟ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ರಂಜಿಸಲಾಯಿತು.

STAR OF MYSORE

Wednesday 31st July 2019

'Digitalisation leads to boom in media industry'



Mysuru, July 31- "Journalism is a different ball game with post internet and digital media. The social networking sites, internet, apps and digital media have laid a path of rapid development in the field of new era media. Emerging technologies have helped various media platforms to evolve and see their own development," said senior journalist and retired Senior General Manager, Tata Consultancy, Shamala Padmanabhan.

She was delivering a lecture on "Print to Digital - The Changing Phase of Media Revolution," organised by the Department of Journalism and Mass Communication at SBRR Mahajana First Grade College, Jayalakshmipuram, here recently.

Speaking on the positive effects of digitalisation on media industry and using illustrative examples, Shamala pointed out that technological advance has made it possible for the newer forms of media which has displaced others.

Online journalism has brought lot of exposure to students. Therefore, media persons should get hybrid training for strategic news from new media to the corporate level, she said.

There are many news media avenues like QR Codes, Facebook page, blogging and text messages which can figure out the correct way to use and learn the new media technologies. Broadcasters, digital media and publishers now have wider prospects because digitalisation has spurred the growth of online journalism, she said.

Shamala Padmanabhan called upon the students to minimise the gap between theory and practice. She emphasised the need to improve writing skills and stressed that the knowledge of multiple languages, computers and apps are a pre-requisite for students of Journalism. Her vast experience in the field of journalism enabled the students to have a good interaction session.

CEO and Academic Advisor Dr. S. R. Ramesh, College Principal Dr. S. Venkataramu, HoD L. Ravi Iyer and Assistant Professor Keshava Murthy were present on the occasion.

H.C. Bharathi rendered the invocation. Brunda welcomed. Sindhu Nagaraj introduced the speaker. Shwetha proposed a vote of thanks. Ravishankar compered the programme.

ಅಂಕೋಲಾ
ದಿನಪತ್ರಿಕೆ
ಜು. ೧೦, ೨೦೧೯

ಚರಿತ್ರೆಯ ಅಂತರಂಗ ತಿಳಿಯುವುದು ಅವಶ್ಯ

ಮಹಾಜನ ಕಾಲೇಜಿನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರೊ.ಮಲ್ಲೇಪುರಂ ಅಭಿಮತ



ಜ್ಯೋತಿಷ ಒಂದು ವಿಜ್ಞಾನವಾಗಿದೆ. ಆದರೆ, ಜ್ಯೋತಿಷವನ್ನು ಇಂದು ಹೊಟ್ಟೆಪಾಡಿನ ವಿಷಯವಾಗಿ ಪರಿವರ್ತಿಸಲಾಗಿದೆ. ಮಹಾನುಭಾವರು ಹಾಕಿಕೊಟ್ಟ ಪರಂಪರೆಯನ್ನು ಮುಂದಿನ ಪೀಳಿಗೆಯ ಜನತೆಗೆ ತಿಳಿಸಬೇಕಿದೆ.
-ಡಾ.ಎಸ್.ಶಿವರಾಜಪ್ಪ,
ನಿರ್ದೇಶಕರು, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿವಿ.

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗವು ಆಯೋಜಿಸಿದ್ದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಉದ್ಘಾಟಿಸಿದರು. ಡಾ.ಟಿ.ಎಜಯಲಕ್ಷ್ಮೀ ಮುರಳೀಧರ್, ಡಾ.ಎಸ್.ಶಿವರಾಜಪ್ಪ, ಡಾ.ಆರ್.ಎನ್.ನಾಗರಾಜು, ಡಾ.ಎಸ್.ವೆಂಕಟರಾಮು, ಡಾ.ಎಸ್.ಆರ್.ರಮೇಶ್ ಚಿತ್ರದಲ್ಲಿದ್ದಾರೆ.

ಮೈಸೂರು,ಜು.9– ವಿದ್ಯಾರ್ಥಿಗಳು ಭಾರತದ ಚರಿತ್ರೆಯ ಅಂತರಂಗವನ್ನು ತಿಳಿಯಬೇಕಿದೆ ಎಂದು ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ ಹಾಗೂ ಮಹಾಜನ ಕಾಲೇಜು ಇತಿಹಾಸ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆ ಕುರಿತ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಚರಿತ್ರೆಯನ್ನು ಕಾಲಾನುಕ್ರಮದಲ್ಲಿ ಅಧ್ಯಯನ ಮಾಡುವುದು ಚಾರಿತ್ರಿಕ ವಿಶ್ಲೇಷಣೆಯ ಕ್ರಮವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಚರಿತ್ರೆಯ ಅಂತರಂಗದ ಒಳಹಿರುಳನ್ನು ಅಧ್ಯಯನ ಮಾಡಬೇಕು ಎಂದರು.

ಭಾರತದ ಚರಿತ್ರೆಗೆ ಮಾರ್ಕ್ಸ್, ಸಮಾಜವಾದ, ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಕೋನಗಳಿವೆ. ಕಲೆ, ಸಾಹಿತ್ಯ, ಶಿಲ್ಪ, ನೃತ್ಯ, ರಂಗಭೂಮಿಯ ರಂಗಕಲೆಯನ್ನು ಆಳವಡಿಸಲಾಗಿದೆ. ಆದ್ದರಿಂದ ಸಂಗೀತಗಾರ, ಕಥೆಗಾರ, ಸಾಹಿತಿಗಳು ನಮ್ಮೊಂದಿಗಿಲ್ಲದಿದ್ದರೂ ಅವರು ಹಾಕಿಕೊಟ್ಟ ಸಿದ್ಧಾಂತ ಜೀವಂತವಾಗಿರುತ್ತದೆ. ಹಾಗಾಗಿ ಸಾಂಸ್ಕೃತಿಕ ಚರಿತ್ರೆಯನ್ನು ಹೊಸ ದೃಷ್ಟಿಕೋನಗಳಿಂದ ಅರ್ಥೈಸಬೇಕಿದೆ ಎಂದು ಹೇಳಿದರು.

ಸಂಸ್ಕೃತ ವಿದ್ವಾಂಸ ಡಾ.ಆರ್.ಎನ್. ನಾಗರಾಜು ಮಾತನಾಡಿ, ಕೌಟಿಲ್ಯನ ಅರ್ಥಶಾಸ್ತ್ರವು ಇಂದಿನ ಕಾಲಘಟ್ಟಕ್ಕೂ ವಾಸ್ತವವಾಗಿದೆ. ಆರು ಸಾವಿರ ಶ್ಲೋಕಗಳ ಪರಿಧಿಯಲ್ಲಿ ಈ ಗ್ರಂಥವು ರಚಿತವಾಗಿದೆ. ಇಂದಿನ ಜಾಗತಿಕ ಸಮಸ್ಯೆಗಳಿಗೆ ಕೌಟಿಲ್ಯನ ರಾಜನೀತಿಶಾಸ್ತ್ರ ಉಪಯುಕ್ತವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದ ಅನೇಕ ಹಸ್ತಪ್ರತಿಗಳಿಗೆ ಹೊಸ ಬೆಳಕನ್ನು ಚೆಲ್ಲಬೇಕಿದೆ ಎಂದು ಹೇಳಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಮೈವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ ನಿರ್ದೇಶಕ ಡಾ.ಎಸ್. ಶಿವರಾಜಪ್ಪ, ಪ್ರಾಂಶುಪಾಲ ಡಾ.ಎಸ್.ವೆಂಕಟ ರಾಮು, ಡಾ.ಎಸ್.ಆರ್.ರಮೇಶ್, ಡಾ.ಎಚ್. ಆರ್.ಶ್ರೀಧರ್, ಡಾ.ಕೆ.ವಿ.ರಾಮಪ್ರಿಯ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಜು.೧೩, ೨೦೧೯

ವಿಶೇಷ ಉಪನ್ಯಾಸ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತದಲ್ಲಿ ಬ್ರಿಟಿಷ್ ಪ್ರಭುತ್ವದ ವಿಸ್ತರಣೆ ವಿಷಯ ಕುರಿತು ನಿವೃತ್ತ ಪ್ರಾಧ್ಯಾಪಕ ಡಾ.ನೈಮುರ್ ರೆಹಮಾನ್ ಅವರು ಉಪನ್ಯಾಸ ನೀಡಿದರು. ಡಾ.ಎಸ್.ವೆಂಕಟರಾಮು, ಡಾ.ಎಚ್.ಶ್ರೀಧರ, ಡಾ.ಎ.ಜಿ.ಧರ್ಮೇಶ್, ಎ.ಆರ್.ನಂದೀಶ್ ಹಾಗೂ ವಿದ್ಯಾರ್ಥಿಗಳನ್ನು ಚಿತ್ರದಲ್ಲಿ ಕಾಣಬಹುದು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 3.7.2019

ಮಹಾಜನ ಕಾಲೇಜಿನಲ್ಲಿ ಉಪನ್ಯಾಸ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗದ ವತಿಯಿಂದ ಮಂಗಳವಾರ ಆಜಾದ್ ಹಿಂದ್ ಸರ್ಕಾರದ 75ನೇ ವಾರ್ಷಿಕೋತ್ಸವ ಹಮ್ಮಿಕೊಳ್ಳಲಾಗಿತ್ತು. ಇಂಡಿಯನ್ ಹೋಂರೂಲ್ ಲೀಗ್ ಹಾಗೂ ಜಲಿಯನ್ ವಾಲಾಬಾಗ್ ದುರಂತದ ಶತಮಾನೋತ್ಸವದ ಸ್ಮರಣೆ ಅಂಗವಾಗಿ ರಾಷ್ಟ್ರ ಗೌರವ ಸಂರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಟಿ.ಎನ್. ರಾಮಕೃಷ್ಣ ವಿಶೇಷ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ವಿವಿಧ ಕ್ರಾಂತಿಕಾರಿ ನಾಯಕರ ಭಿತ್ತಿಚಿತ್ರಗಳನ್ನು ಪ್ರದರ್ಶಿಸಲಾಯಿತು. ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ ಎಚ್., ಅಧ್ಯಾಪಕರಾದ ಡಾ. ಧರ್ಮೇಶ ಎ.ಜಿ., ನಂದೀಶ್ ಎ.ಆರ್. ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 10.7.2019

ಕೃಷಿ, ಜನರ ಬದುಕಿಂದ ಪ್ರಾಚೀನ ಭಾರತದ ವೈಭವ ಅನಾವರಣ

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ, ರಾಜಕೀಯ ವಿಶ್ಲೇಷಣೆ ಉಪನ್ಯಾಸದಲ್ಲಿ ಪ್ರೊ. ಮಲ್ಲೇಪುರಂ

• **ಕನ್ನಡಪ್ರಭ ವಾರ್ತೆ** ಮೈಸೂರು

ಪ್ರಾಚೀನ ಭಾರತದ ವೈಭವವನ್ನು ತಿಳಿಯಬೇಕಾದರೆ ಅಲ್ಲಿನ ಕೃಷಿ, ಜನರ ಬದುಕು, ನಗರ ನಿರ್ಮಾಣ, ಯುದ್ಧದ ಪರಿಕಲ್ಪನೆ ತಿಳಿಯಬೇಕು ಎಂದು ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ತಿಳಿಸಿದರು.

ನಗರದ ಮಹಾಜನ ಪದವಿ ಕಾಲೇಜಿನಲ್ಲಿ ಮಂಗಳವಾರ ಮೈಸೂರು ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಅಧ್ಯಯನ ವಿಭಾಗದ ಸಹಯೋಗದಲ್ಲಿ ಮಂಗಳವಾರ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆ ಕುರಿತ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದ ಇತಿಹಾಸವನ್ನು ಅಧ್ಯಯನ ಮಾಡುವವರಿಗೆ ಕಾಲಾನುಕ್ರಮ ನೋಡುವ ಒಂದು ದೃಷ್ಟಿಕೋನ ಇದೆ. ಆದರೆ ಇತಿಹಾಸವನ್ನು ಅನೇಕ ದೃಷ್ಟಿಕೋನಗಳಿಂದ ನೋಡಬಹುದು. ಅವುಗಳೆಂದರೆ ಮಾರ್ಕ್ಸ್‌ವಾದ, ಸಮಾಜವಾದ, ಧಾರ್ಮಿಕವಾದ, ಸಾಂಸ್ಕೃತಿಕವಾದದ ದೃಷ್ಟಿಕೋನಗಳಲ್ಲಿಯೂ ಕಟ್ಟಿಕೊಳ್ಳಬಹುದು ಎಂದರು.

ಪ್ರಾಚೀನ ಭಾರತವನ್ನು ಅರ್ಥಮಾಡಿಕೊಳ್ಳಬೇಕಾದರೆ ವಾತ್ಸಾಯನನ ಕಾಮಸೂತ್ರ, ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಭರತನಾಟ್ಯಶಾಸ್ತ್ರದ ಮುಖ್ಯ ಗ್ರಂಥಗಳು ಗಟ್ಟಿಯಾಗಿ ಹಿಡಿದಿವೆ. ಕಾಮಸೂತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅದನ್ನು ಬಹಳಷ್ಟು ಜನ ಮಡಿವಂತಿಕೆಯಿಂದ ನೋಡುತ್ತಿದ್ದಾರೆ. ಸರಿಯಾಗಿ ಅರ್ಥಮಾಡಿಕೊಂಡರೆ ಹೇಗೆ ನಿಜ ಜೀವನದಲ್ಲಿ ಸಂಸಾರ ನಡೆಸಬೇಕು ಎಂಬುದಕ್ಕೆ ತುಂಬಾ ಸಹಾಯಕವಾಗುತ್ತದೆ. ಹಾಗೇ ನಾಟ್ಯಶಾಸ್ತ್ರದಲ್ಲಿ ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ ಹೀಗೆ 36 ಅಧ್ಯಾಯಗಳನ್ನು ತಿಳಿಸಿ ಮತ್ತು ಜನ-ಜೀವನ, ಗಂಡು-ಹೆಣ್ಣು, ಬದುಕು, ಕುಟುಂಬ ಪದ್ಧತಿ ಇವುಗಳನ್ನು ತಿಳಿಸುವುದರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಮುಖ್ಯವಾಗುತ್ತದೆ. ಹಾಗೆ 1909ರಲ್ಲಿ ಡಾ. ಆರ್. ಶ್ಯಾಮಶಾಸ್ತ್ರಿಗಳು ಸಂಪಾದಿಸಿ ಅನುವಾದಿಸಿದರು ಎಂದು ಅವರು ತಿಳಿಸಿದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರ ಜಿ. ವೆಂಕಟೇಶ್ ಉದ್ಘಾಟಿಸಿದರು. ಡಾ.ಎಸ್. ಶಿವರಾಜಪ್ಪ, ಡಾ. ಆರ್.ಎನ್. ನಾಗರಾಜ್, ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಡಾ. ಎಸ್. ವೆಂಕಟರಾಮು, ಡಾ. ಎಚ್. ಶ್ರೀಧರ್ ಇದ್ದರು.

ವಿದ್ವಾಂಸರು, ಕವಿ, ಕಲೆಗಾರರು ನಿರಂತರವಾಗಿ ಸಂಸ್ಕೃತಿ ಪರ ಇರುತ್ತಾರೆ ಎಂದು ಮಹಾತ್ಮ ಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್, ಬಾಲಗಂಗಾಧರನಾಥ ತಿಲಕ್, ಗೋಖಲೆ ಬಿಟ್ಟರೆ ಭಾರತದ ಆಧುನಿಕತೆಯ ಬಗ್ಗೆ ಏನು ಮಾತನಾಡಲು ಸಾಧ್ಯ? ಭಾರತದ ಸಾಂಸ್ಕೃತಿಕ ಸಂಪತ್ತನ್ನು ನೀವು ಅಧ್ಯಯನ ಮಾಡಿದಾರೆ ನಿಮಗೆ ಜ್ಞಾನ ಕೋಶ ಮತ್ತು ಹೊಸ ದೃಷ್ಟಿಕೋನ ಹೆಚ್ಚಾಗುತ್ತವೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ. ಎಸ್. ಶಿವರಾಜಪ್ಪ ಪ್ರಾಸ್ತಾವಿಕ ಭಾಷಣ ಮಾಡುತ್ತ, ರಾಜಕೀಯ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಆಡಳಿತಾಧಿಕಾರಿಗಳು ಹೇಗಿರಬೇಕು ಎಂದು ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ತಿಳಿಸಿದ್ದಾನೆ ಎಂದರು.

ಸಂಸ್ಕೃತ ವಿದ್ವಾಂಸ ಡಾ. ಆರ್.ಎನ್. ನಾಗರಾಜು, ಕೌಟಿಲ್ಯನ ಅರ್ಥಶಾಸ್ತ್ರದ ಪಾರಿಭಾಷಿಕ ಶಬ್ದಗಳು ತುಂಬಾ ಕ್ಲಿಷ್ಟಕರಕವಾದದ್ದು, ರಾಜನೀತಿಯನ್ನು ತುಂಬಾ ಸಂಯೋಜಿತವಾಗಿ ವಿಷಯ ನಿರೂಪಿಸಿರುವುದು 21ನೇ ಶತಮಾನಕ್ಕೂ ಕೂಡ ಬೇಕಾಗಿರುವುದು ಸತ್ಯ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು ಕೌಟಿಲ್ಯನ ಅರ್ಥಶಾಸ್ತ್ರದ ಇತಿಹಾಸ ಮತ್ತು ರಾಜಕೀಯ ವಿಷಯದ ಕುರಿತು ಉಪನ್ಯಾಸ ನೀಡಿದರು.

ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ.. ಎಸ್. ವೆಂಕಟರಾಮು, ವಿಭಾಗದ ಮುಖ್ಯಸ್ಥ ಡಾ. ಎಚ್. ಶ್ರೀಧರ್ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಬುಧವಾರ 10 ಜುಲೈ 2019

ಪ್ರಾಚೀನ ಜನರ ಕೃಷಿ, ಬದುಕು ತಿಳಿದರೆ ಪ್ರಾಚೀನ ವೈಭವದ ಅರಿವು

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿಮತ

ಮೈಸೂರು. ಜು.9(ಆರ್‌ಕೆಬಿ)- ಪ್ರಾಚೀನ ಭಾರತದ ವೈಭವವನ್ನು ತಿಳಿಯಬೇಕಾದರೆ ಅಂದಿನ ಕೃಷಿ, ಜನರ ಬದುಕು, ನಗರ ನಿರ್ಮಾಣ, ಯುದ್ಧದ ಪರಿಕಲ್ಪನೆ ಇವುಗಳನ್ನು ತಿಳಿಯಬೇಕಾಗುತ್ತದೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಕಾಲೇಜಿನ ಇತಿಹಾಸ ವಿಭಾಗವು ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆಯ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇತಿಹಾಸವನ್ನು ಮಾರ್ಕ್ಸ್ ವಾದ, ಸಮಾಜವಾದ, ಧಾರ್ಮಿಕವಾದ, ಸಾಂಸ್ಕೃತಿಕ ವಾದ ಹೀಗೆ ಅನೇಕ ದೃಷ್ಟಿಕೋನಗಳಿಂದ ನೋಡುವುದಾಗಿದೆ. ಭಾರತದ ಇತಿಹಾಸವನ್ನು ಅಧ್ಯಯನ ಮಾಡುವವರಿಗೆ ಕಾಲಾನುಕ್ರಮವನ್ನು ನೋಡುವ ಒಂದು ದೃಷ್ಟಿ ಕೋನ ಇದೆ ಎಂದು ತಿಳಿಸಿದರು. ಪ್ರಾಚೀನ ಭಾರತವನ್ನು ಅರ್ಥಮಾಡಿಕೊಳ್ಳಬೇಕಾದರೆ ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಭರತನ ನಾಟ್ಯಶಾಸ್ತ್ರ, ವಾತ್ಸಾಯನನ ಕಾಮಸೂತ್ರ ಈ ಮೂರು ಮುಖ್ಯ ಗ್ರಂಥಗಳು ಗಟ್ಟಿಯಾಗಿ ಹಿಡಿದಿವೆ. ಕಾಮಸೂತ್ರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅದನ್ನು ಬಹಳಷ್ಟು ಜನ ಮಡಿವಂತಿಕೆಯಿಂದ ನೋಡುತ್ತಿದ್ದಾರೆ. ಸರಿಯಾಗಿ ಅರ್ಥ ಮಾಡಿಕೊಂಡರೆ ಹೇಗೆ ನಿಜ ಜೀವನದಲ್ಲಿ ಸಂಸಾರ ನಡೆಸಬೇಕು ಎಂಬುದಕ್ಕೆ ತುಂಬ ಸಹಾಯಕವಾಗುತ್ತದೆ. ಅಲ್ಲದೆ ನಾಟ್ಯಶಾಸ್ತ್ರದಲ್ಲಿ ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ ಹೀಗೆ 36 ಅಧ್ಯಾಯಗಳನ್ನು ತಿಳಿಸಿ ಮತ್ತು ಜನ-ಜೀವನ,ಗಂಡು-ಹೆಣ್ಣು, ಬದುಕು, ಕುಟುಂಬ ಪದ್ಧತಿ ಇವುಗಳನ್ನು ತಿಳಿಸುವುದರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಮುಖ್ಯವಾಗುತ್ತದೆ. ಹಾಗೆ 1909 ರಲ್ಲಿ ಡಾ.ಆರ್. ಶ್ಯಾಮಶಾಸ್ತ್ರಿಗಳು ಸಂಪಾದಿಸಿ ಅನುವಾದಿಸಿದರು ಎಂದು ಹೇಳಿದರು. ಸಂಸ್ಕೃತ ವಿದ್ವಾಂಸ ಡಾ.ಆರ್.ಎನ್.ನಾಗರಾಜು ಕೌಟಿಲ್ಯನ ಅರ್ಥಶಾಸ್ತ್ರದ ಇತಿಹಾಸ ಮತ್ತು ರಾಜಕೀಯ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ವಿಭಾಗದ ಮುಖ್ಯಸ್ಥ ಡಾ. ಎಚ್.ಶ್ರೀಧರ್ ಉಪಸ್ಥಿತರಿದ್ದರು.



ಮೈಸೂರು ವಿವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಮಹಾರಾಜ ಕಾಲೇಜಿನಲ್ಲಿ ಏರ್ಪಡಿಸಿದ್ದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆಯ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮಕ್ಕೆ ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಚಾಲನೆ ನೀಡಿ ಮಾತನಾಡಿದರು. ಚಿತ್ರದಲ್ಲಿ ಡಾ.ಆರ್.ಎನ್.ನಾಗರಾಜು, ಡಾ.ಎಸ್.ಶಿವರಾಜಪ್ಪ, ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಇನ್ನಿತರರು ಇದ್ದಾರೆ.

MFGE In the Eyes of the Press.....

STAR OF MYSORE

Friday 12th July 2019

'Ancient Indian History should be studied Chronologically'



Mysuru, July 12 (RKB&US)- Oriental Research Institute (ORI) and Department of History of Mahajana First Grade College had organised a lecture and interaction on 'Historical and Political Analysis in Kautilyana Arthashastra' at the college premises in Jayalakshmipuram here recently.

Inaugurating the programme, former Vice-Chancellor of Sanskrit University Dr. Mallepuram G. Venkatesh opined that to understand the grandeur of ancient India, one should first have an idea of the then style of agriculture, living pattern, formation of cities and concept of warfare.

He contended that history can be viewed through various angles and added that Indian History should be studied chronologically.

He opined that to understand ancient Indian History one should read Kautilya's *Arthashastra,* Bharatha's *Natyashastra* and Vatsayana's *Kamasutra* which together throw light on all aspects of life.

Sanskrit Scholar Dr. R.N. Nagaraj delivered a lecture on *Kautilyana Arthashastra.*

Oriental Research Institute Director Dr. S. Shivarajapa delivered the keynote address. Dr. T. Vijayalakshmi Muralidhar presided. College Principal Dr. S. Venkatarama, HoD of History Dr. H. Sridhar and others were present.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಗುರುವಾರ, 11 ಜುಲೈ 2019

ಭಾರತದ ವೈಭವ ತಿಳಿಯಲು ಅಧ್ಯಯನ ಅವಶ್ಯ

■ ವಿಕ ಸುದ್ದಿಲೋಕ ಮೈಸೂರು

ಇತಿಹಾಸವನ್ನು ಮಾರ್ಕ್ಸ್‌ವಾದ, ಸಮಾಜವಾದ, ಧಾರ್ಮಿಕವಾದ, ಸಾಂಸ್ಕೃತಿಕ ವಾದ ಹೀಗೆ ಅನೇಕ ದೃಷ್ಟಿ ಕೋನಗಳಿಂದ ನೋಡಬಹುದಾಗಿದೆ ಎಂದು ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಮೈಸೂರು ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಮಹಾಜನ ಕಾಲೇಜಿನ ಇತಿಹಾಸ ವಿಭಾಗವು ಕಾಲೇಜಿನ ಕಾಮರ್ಸ್ ಲ್ಯಾಬ್ ಸಭಾಂಗಣದಲ್ಲಿ ಆಯೋಜಿಸಿದ್ದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆಯ ಉಪನ್ಯಾಸ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

''ಭಾರತದ ಇತಿಹಾಸವನ್ನು ಅಧ್ಯಯನ ಮಾಡುವವರಿಗೆ ಕಾಲನು ಕ್ರಮವನ್ನು ನೋಡುವ ಒಂದು ದೃಷ್ಟಿಕೋನ ಇದೆ. ಪ್ರಾಚೀನ ಭಾರತದ ವೈಭವವನ್ನು ತಿಳಿಯಬೇಕಾದರೆ ಅಂದಿನ ಕೃಷಿ, ಜನರ ಬದುಕು, ನಗರ ನಿರ್ಮಾಣ, ಯುದ್ಧದ ಪರಿಕಲ್ಪನೆ ಇವುಗಳನ್ನು ತಿಳಿಯಬೇಕು,'' ಎಂದರು.



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕಾಮರ್ಸ್ ಲ್ಯಾಬ್ ಸಭಾಂಗಣದಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮವನ್ನು ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಉದ್ಘಾಟಿಸಿದರು.

''ಪ್ರಾಚೀನ ಭಾರತವನ್ನು ಅರ್ಥಮಾಡಿಕೊಳ್ಳಬೇಕಾದರೆ ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಭರತನ ನಾಟ್ಯಶಾಸ್ತ್ರ ವಾತ್ಸಯನ ಕಾಮಸೂತ್ರ ಈ ಮೂರು ಮುಖ್ಯಗ್ರಂಥಗಳು ಗಟ್ಟಿಯಾಗಿ ಹಿಡಿದಿವೆ. ಕಾಮ ಸೂತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅದನ್ನು ಬಹಳಷ್ಟು ಜನ ಮಡಿವಂತಿಕೆಯಿಂದ ನೋಡುತ್ತಿದ್ದಾರೆ. ಸರಿಯಾಗಿ ಅರ್ಥ ಮಾಡಿಕೊಂಡರೆ ಹೇಗೆ ನಿಜ ಜೀವನದಲ್ಲಿ ಸಂಸಾರ ನಡೆಸಬೇಕು ಎಂಬುದಕ್ಕೆ ತುಂಬ ಸಹಾಯಕವಾಗುತ್ತದೆ,''ಎಂದು ಹೇಳಿದರು.

''ನಾಟ್ಯಶಾಸ್ತ್ರದಲ್ಲಿ ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ ಹೀಗೆ 36 ಅಧ್ಯಾಯಗಳನ್ನು ತಿಳಿಸಲಾಗಿದೆ. ಜನ-ಜೀವನ, ಗಂಡು-ಹೆಣ್ಣು ಬದುಕು, ಕುಟುಂಬ ಪದ್ಧತಿ ಇವುಗಳನ್ನು ತಿಳಿಸುವು ದರಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಮುಖ್ಯವಾಗುತ್ತದೆ. 1909ರಲ್ಲಿ ಡಾ.ಆರ್.ಶ್ಯಾಮಶಾಸ್ತ್ರಿಗಳು ಕೌಟಿಲ್ಯನ ಅರ್ಥಶಾಸ್ತ್ರ ಗಂಥ್ರವನ್ನು ಸಂಪಾದಿಸಿ ಅನುವಾದಿಸಿ ದರು,'' ಎಂದರು.

''ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಸಂಸ್ಕೃತ ವಿದ್ವಾಂಸ ಡಾ.ಆರ್.ಎನ್.ನಾಗರಾಜು, ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್ ಮತ್ತಿತರರು ಹಾಜರಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 3 ಜುಲೈ 2019
3 JULY 2019

75ನೇ ವರ್ಷಾಚರಣೆ ಕಾರ್ಯಕ್ರಮ | ಯುವ ಜನಾಂಗಕ್ಕೆ ಟಿ.ಎನ್.ರಾಮಕೃಷ್ಣ ಸಲಹೆ

ದೇಶದ ಹಿತಕ್ಕಾಗಿ ದುಡಿಯುವ ಪ್ರತಿಜ್ಞೆ ಮಾಡಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಇಂದಿನ ಯುವ ಜನಾಂಗ ಮಾತೃಭೂಮಿ ಬಗ್ಗೆ ನಿಷ್ಠಾವಂತರಾಗಿದ್ದು, ದೇಶದ ಹಿತಾಸಕ್ತಿಗಾಗಿ ದುಡಿಯುವ ಪ್ರತಿಜ್ಞೆ ಮಾಡಬೇಕಿದೆ ಎಂದು ರಾಷ್ಟ್ರ ಗೌರವ ಪ್ರತಿಷ್ಠಾನ ಪರಿಷತ್ತಿನ ಅಧ್ಯಕ್ಷ ಟಿ.ಎನ್.ರಾಮಕೃಷ್ಣ ಅಭಿಪ್ರಾಯಪಟ್ಟರು.



ಎಸ್‌ಎಸ್‌ಆರ್‌ಬಿ ಮಹಾಜನ ಪದವಿ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ ಮಂಗಳವಾರ ಆಯೋಜಿಸಿದ್ದ ಲಾಲಾ ಲಜಪತ್‌ರಾಯ್ ಸ್ಥಾಪಿಸಿದ ಇಂಡಿಯನ್ ಹೋಂ ರೂಲ್ ಲೀಗ್ ಆಫ್ ಅಮೆರಿಕದ ಶತಮಾನೋತ್ಸವ, ನೇತಾಜಿ ಸುಭಾಷ್‌ಚಂದ್ರ ಬೋಸ್‌ರ ಆಜಾದ್ ಹಿಂದ್ ಫೌಜ್ ಸರ್ಕಾರ ಸ್ಥಾಪನೆಯ 75ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ದೇಶ ಪ್ರಗತಿಯ ಪರಾಕಾಷ್ಠೆ ತಲುಪುವಲ್ಲಿ ಯುವಜನತೆ ಪಾತ್ರ ಮಹತ್ವದ್ದಾಗಿದೆ. ನಮ್ಮ ಹಿರಿಯರ ತ್ಯಾಗ, ಬಲಿದಾನದಿಂದ ನಾವಿಂದು ಬ್ರಿಟಿಷರ ದಾಸ್ಯದಿಂದ ಮುಕ್ತಿಗೊಂಡು ಸ್ವಾತಂತ್ರ್ಯರಾಗಿದ್ದೇವೆ. ಹಿರಿಯರು ಪರಿಶ್ರಮದಿಂದ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗಬೇಕಿದೆ ಎಂದರು.



ರಾಷ್ಟ್ರಗೌರವ ಪ್ರತಿಷ್ಠಾನ ಪರಿಷತ್ತಿನಿಂದ ಎಸ್‌ಎಸ್‌ಆರ್‌ಬಿ ಮಹಾಜನ ಪದವಿ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಾಜರಿದ್ದ ವಿದ್ಯಾರ್ಥಿಗಳು.

ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್, ಅಧ್ಯಾಪಕರಾದ ಡಾ.ಎ.ಜಿ. ಧರ್ಮೇಶ್, ಎ.ಆರ್.ನಂದೀಶ್ ಇತರರು ಹಾಜರಿದ್ದರು.

ವಿಜಯ ವಿಠಲ ಕಾಲೇಜು: ಸರಸ್ವತಿಪುರಂನ ವಿಜಯ ವಿಠಲ ಪದವಿಪೂರ್ವ ಕಾಲೇಜಿನಲ್ಲಿ ರಾಷ್ಟ್ರಗೌರವ ಸಂರಕ್ಷಣಾ ಪರಿಷತ್ ನಿಂದ ಲಾಲಾ ಲಜಪತ್‌ರಾಯ್ ಸ್ಥಾಪಿಸಿದ ಇಂಡಿಯನ್ ಹೋಂ ರೂಲ್ ಲೀಗ್ ಆಫ್ ಅಮೆರಿಕದ ಶತಮಾನೋತ್ಸವ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ 100, ನೇತಾಜಿ ಸುಭಾಷ್‌ಚಂದ್ರ ಬೋಸರ ಆಜಾದ್ ಹಿಂದ್ ಫೌಜ್ ಸರ್ಕಾರ ಸ್ಥಾಪನೆಯ 75ನೇ ವರ್ಷಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪರಿಷತ್ತಿನ ಅಧ್ಯಕ್ಷ ಟಿ.ಎನ್. ರಾಮಕೃಷ್ಣ ಅವರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಹೋರಾಟಗಾರರ ಬದುಕು, ದೇಶಪ್ರೇಮ, ಅವರು ನಡೆದು ಬಂದ ಹಾದಿ ಕುರಿತು ಉಪನ್ಯಾಸ ನೀಡಿದರು.

ಸ್ವಾತಂತ್ರ್ಯ ಹೋರಾಟಗಾರರು, ಕ್ರಾಂತಿಕಾರಿ ನಾಯಕರ ಭಿತ್ತಿಪತ್ರ ಪ್ರದರ್ಶಿಸಲಾಗಿತ್ತು. ಪ್ರಾಂಶುಪಾಲ ಎಚ್. ಸತ್ಯ ಪ್ರಸಾದ್, ಉಪನ್ಯಾಸಕಿ ಮಯೂರಲಕ್ಷ್ಮಿ ಇತರರು ಹಾಜರಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 10 ಜುಲೈ 2019
10 JULY 2019

ಇನ್ಫೋಸಿಸ್‌ನ ಫಿನೇಕಲ್ ಅಕಾಡೆಮಿ ವಿಭಾಗದ ಅಧ್ಯಕ್ಷ ಆರ್.ಎನ್.ನಾಗರಾಜು ಅಭಿಮತ

ಜಾಗತಿಕ ಸಮಸ್ಯೆಗೆ ಕೌಟಿಲ್ಯ ಅರ್ಥಶಾಸ್ತ್ರ ಪರಿಹಾರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಸಹಸ್ರಾರು ವರ್ಷ ಇತಿಹಾಸ ಹೊಂದಿರುವ ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥವು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೂ ಮಾದರಿಯ ಮೈಲುಗಲ್ಲಾಗಿದೆ ಎಂದು ಇನ್ಫೋಸಿಸ್‌ನ ಯುಈಟಿ ಮತ್ತು ಫಿನೇಕಲ್ ಅಕಾಡೆಮಿ ವಿಭಾಗದ ಅಧ್ಯಕ್ಷ ಡಾ.ಆರ್.ಎನ್. ನಾಗರಾಜು ಅಭಿಪ್ರಾಯಪಟ್ಟರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಮಂಗಳವಾರ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆ ವಿಷಯ ಕುರಿತು ಉಪನ್ಯಾಸ ನೀಡಿದರು.



ವಿಜಯವಾಣಿ ಚಿತ್ರ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಉದ್ಘಾಟಿಸಿದರು.

ಸಾವಿರಾರು ಶ್ಲೋಕಗಳನ್ನು ಒಳಗೊಂಡಿರುವ ಕೌಟಿಲ್ಯನ ಅರ್ಥಶಾಸ್ತ್ರ ಕೇವಲ ರಾಜ್ಯಾಡಳಿತಕ್ಕೆ ಸೀಮಿತವಾಗಿರದೆ, ನ್ಯಾಯಾಡಳಿತ, ಸೈನ್ಯಾಡಳಿತ, ಹಣಕಾಸು, ಗೂಢಾಚಾರಿಕೆ, ರಾಜನೀತಿ ಹಾಗೂ ವಿದೇಶಾಂಗ ನೀತಿಯಂತಹ ಹತ್ತು ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲುವ ಅದ್ವಿತೀಯ ಐತಿಹಾಸಿಕ ಕೃತಿಯಾಗಿದೆ. ಈ ಗ್ರಂಥವು ಇಂದಿನ ಜಾಗತಿಕ ಸಮಸ್ಯೆಗಳಿಗೆ ಪರಿಹಾರವು ಆಗಿದೆ ಎಂದು ವಿಶ್ಲೇಷಿಸಿದರು.

ಕೌಟಿಲ್ಯನ ಅರ್ಥಶಾಸ್ತ್ರದ ಕೆಲವು ಅಂಶಗಳನ್ನು ಬೌದ್ಧ ಹಾಗೂ ಜೈನಧರ್ಮ ಮತ್ತು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಕೃತಿಯಲ್ಲಿ ರಾಜನ ಅರ್ಹತೆಗಳು, ಗುಣಗಳು, ಧರ್ಮ ಅರ್ಥ ಹಾಗೂ ರಾಜನೀತಿಯಂತಹ ಅಂಶಗಳನ್ನು ಉಲ್ಲೇಖಿಸಲಾಗಿದೆ. ಇದು ಸನಾತನ ಭಾರತೀಯರ ಜ್ಞಾನ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಮೈಸೂರು ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಮಾತನಾಡಿದರು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾಲೇಜಿನ ಮುಖ್ಯಕಾರ್ಯನಿರ್ವಣಾಧಿಕಾರಿ ಡಾ.ಎಸ್.ಆರ್.ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಅಧ್ಯಾಪಕ ಡಾ.ಎ.ಜಿ.ಧರ್ಮೇಶ ಇತರರು ಹಾಜರಿದ್ದರು.

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಬುಧವಾರ 31.7.2019

ಕಾರ್ಗಿಲ್ ವಿಜಯ ದಿವಸ ಸಂಭ್ರಮಾಚರಣೆ



ಮೈಸೂರು: ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕ ಮತ್ತು ಅಧ್ಯಾಪಕೇತರರು 'ಕಾರ್ಗಿಲ್ ವಿಜಯ ದಿವಸ'ದ 20ನೇ ವರ್ಷದ ಸಂಭ್ರಮಾಚರಣೆಯನ್ನು ಕಾಲೇಜಿನ ಎನ್‌ಸಿಸಿ ಘಟಕದ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಿಕ್ಕೂ ಎಂ.ಎಸ್. ಸೌಮ್ಯ ಅವರು ಕಾರ್ಗಿಲ್ ಯುದ್ಧದ ಇತಿಹಾಸ ಹಾಗೂ ಘಟನಾವಳಿಗಳನ್ನು ಕುರಿತು ಮಾತನಾಡಿ, ದೇಶದ ಸೈನಿಕರ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು.

ನಗರದ ಎನ್‌ಸಿಸಿ ಕಚೇರಿಯ ಸುಬೇದಾರ್ ಮೇಜರ್ ಎಸ್.ಕೆ. ಸಿಂಗ್, ಸುಬೇದಾರ್ ಗುರುದೀಪ್ ಸಿಂಗ್, ಬಿಎಚ್‌ಎನ್ ಕರಮ್‌ಚಂದ್, ಬಿಎಚ್‌ಎನ್ ಅರವಿಂದರ್ ಸಿಂಗ್ ಹಾಗೂ ಎಂ.ಡಿ. ಹವಲ್‌ದಾರ್ ಅಶೋಕ್ ಭಾಗವಹಿಸಿದ್ದು ವಿಶೇಷವಾಗಿತ್ತು. ಎನ್‌ಸಿಸಿ ಘಟಕದ ಅಧಿಕಾರಿಗಳಾದ ಕ್ಯಾಪ್ಟನ್ ಬಿ.ಆರ್. ನಿಖಿಲ್, ಲೆ.ಎಂ.ಆರ್.ಇಂದ್ರಾಣಿ, ಫ್ಲೈಯಿಂಗ್ ಆಫಿಸರ್ ಪುಷ್ಪರಾಣಿ ಇದ್ದರು.

ಆಂದೋಲನ
ದಿನ ಪತ್ರಿಕೆ
ಜು.೧೩, ೨೦೧೯

ಜ್ಞಾನ ಹೆಚ್ಚಿಸಿಕೊಳ್ಳಲು ಪ್ರಾಯೋಗಿಕ ತರಗತಿ ಸಹಕಾರಿ

ಕಾರ್ಯಾಗಾರದಲ್ಲಿ ಗಣಿತಶಾಸ್ತ್ರ ಮುಖ್ಯಸ್ಥ ಪ್ರೊ.ಸೋನಾರ್ ನಂದಪ್ಪ ಅಭಿಮತ

ಮೈಸೂರು,ಜು.12- ಪಠ್ಯಕ್ರಮಕ್ಕೂ ಮಿಗಿಲಾಗಿ ಜ್ಞಾನ ಹೆಚ್ಚಿಸಿಕೊಳ್ಳಲು ಪ್ರಾಯೋಗಿಕ ತರಗತಿ ಸಹಕಾರಿಯಾಗಿದ್ದು, ವಿದ್ಯಾರ್ಥಿಗಳು ಪ್ರಾಯೋಗಿಕ ತರಗತಿಗಳ ಮೂಲಕ ತಮ್ಮ ಕಲಿಕೆಯನ್ನು ಹೆಚ್ಚಿಸಿ ಕೊಳ್ಳಬೇಕು ಎಂದು ಮೈಸೂರು ವಿವಿ ಗಣಿತಶಾಸ್ತ್ರ ಮುಖ್ಯಸ್ಥ ಪ್ರೊ.ಸೋನಾರ್ ನಂದಪ್ಪ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗಣಿತಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ (ಆಂತರಿಕ ಗುಣಮಟ್ಟ ನಿರ್ವಹಣಾ ಕೋಶ) ಆಯೋಜಿಸಿದ್ದ ವಿಶ್ವವಿದ್ಯಾನಿಲಯ ಮಟ್ಟದ 'ಗಣಿತಶಾಸ್ತ್ರ ಪ್ರಾಯೋಗಿಕ ಕೈಪಿಡಿ ರಚನೆ' ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಗಣಿತಶಾಸ್ತ್ರದಂತಹ ವಿಷಯಕ್ಕೂ ಪ್ರಾಯೋಗಿಕ ತರಗತಿಗಳನ್ನು ಆರಂಭಿಸಿರುವುದು ಉನ್ನತ ಶಿಕ್ಷಣ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಸಹಾಯಕ ವಾಗಲಿದೆ. ಈ ಕಾರ್ಯಾಗಾರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವಿ ಕಾಲೇಜುಗಳ 100ಕ್ಕೂ ಹೆಚ್ಚು ಅಧ್ಯಾಪಕರು ಭಾಗವಹಿಸಿರುವುದು ವಿಶೇಷ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್ ಉದ್ಘಾಟಿಸಿದರು. ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಸುಮತಿ, ನಿರಂಜನ್, ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪೂರ್ಣಿಮಾ, ಸಂಪನ್ಮೂಲ ವ್ಯಕ್ತಿಗಳಾದ ಡಾ.ಪಿ.ಎಸ್.ಗುರುಪ್ರಸಾದ್, ಎ.ದರ್ಶನ್, ಎನ್.ಎಸ್.ತೇಜಸ್ ಭಾಗವಹಿಸಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ವಿವಿ ಮಟ್ಟದ 'ಗಣಿತಶಾಸ್ತ್ರ ಪ್ರಾಯೋಗಿಕ ಕೈಪಿಡಿ ರಚನೆ' ಕಾರ್ಯಾಗಾರವನ್ನು ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್ ಉದ್ಘಾಟಿಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಜು.೨೨, ೨೦೧೯

ಮಹಾಜನ ಕಾಲೇಜಿನಿಂದ ಸ್ವಚ್ಛತೆ ಬಗ್ಗೆ ಅರಿವು



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸ್ವಯಂ ಸೇವಾ ಘಟಕದ ವತಿಯಿಂದ ಆಷಾಢ ಶುಕ್ರವಾರದ ಪ್ರಯುಕ್ತ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಲಾಯಿತು. ಎನ್‌ಎಸ್‌ಎಸ್ ಘಟಕದ ಅಧಿಕಾರಿ ಡಾ.ಎ.ಜಿ.ಧರ್ಮೇಶ, ಕೇಶವಮೂರ್ತಿ ಮತ್ತು ವಿದ್ಯಾರ್ಥಿಗಳನ್ನು ಚಿತ್ರದಲ್ಲಿ ಕಾಣಬಹುದು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 13.7.2019

ಪ್ರಾಯೋಗಿಕ ತರಗತಿ ಸಹಕಾರಿ

ಮೈಸೂರು ವಿವಿ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಸೋನಾರ್ ನಂದಪ್ಪ



ಗಣಿತಶಾಸ್ತ್ರ ಪ್ರಾಯೋಗಿಕ ಕೈಪಿಡಿ ರಚನೆ ಕಾರ್ಯಾಗಾರದಲ್ಲಿ ಮೈವಿವಿ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಸೋನಾರ್ ನಂದಪ್ಪ ಇತರರಿದ್ದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ಪ್ರಾಯೋಗಿಕ ತರಗತಿಗಳ ಮೂಲಕ ತಮ್ಮ ಜ್ಞಾನಭಂಡಾರವನ್ನು ಪಠ್ಯ ಕ್ರಮಕ್ಕೂ ಮಿಗಿಲಾಗಿ ಹೆಚ್ಚಿಸಿಕೊಳ್ಳುವ ಅವಕಾಶ ವಿದ್ಯಾರ್ಥಿಗಳಿಗೆ ಲಭ್ಯವಾ ಗುತ್ತದೆ. ಆದ್ದರಿಂದ ಪ್ರಾಯೋಗಿಕ ತರಗತಿಗಳಲ್ಲಿ ವಿದ್ಯಾರ್ಥಿಗಳು ದೈನಂದಿನ ಬದುಕಿನ ನೈಜ ಪರಿಸ್ಥಿತಿಗಳಿಗೆ ಅನ್ವಯವಾಗುವಂತೆ ತಮ್ಮ ಕಲಿಕೆಯನ್ನು ರೂಢಿಸಿಕೊಳ್ಳಬೇಕು ಎಂದು ಮೈವಿವಿ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಸೋನಾರ್ ನಂದಪ್ಪ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗಣಿತಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ (ಆಂತರಿಕ ಗುಣಮಟ್ಟ ನಿರ್ವಹಣಾ ಕೋಶ) ಆಯೋಜಿಸಿದ್ದ ವಿಶ್ವವಿದ್ಯಾನಿಲಯ ಮಟ್ಟದ ಗಣಿತಶಾಸ್ತ್ರ ಪ್ರಾಯೋಗಿಕ ಕೈಪಿಡಿ ರಚನೆ ಕಾರ್ಯಾಗಾರದಲ್ಲಿ ಆಶಯ ಭಾಷಣ ಮಾಡಿದರು.

ಗಣಿತಶಾಸ್ತ್ರದಂತಹ ವಿಷಯಕ್ಕೂ ಪ್ರಾಯೋಗಿಕ ತರಗತಿ ಆರಂಭಿಸಿರು ವುದು ಉನ್ನತ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಸಹಾಯಕ ವಾಗಲಿದೆ ಎಂದು ಆಶಿಸಿದರು. ಪದವಿ ತರಗತಿಗಳ ಗಣಿತಶಾಸ್ತ್ರ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೂ ಉಪಯುಕ್ತ ವಾಗುವಂತಹ ಪ್ರಾಯೋಗಿಕ ಕೈಪಿಡಿ ರಚಿಸಲು ಆಯೋಜಿಸಿದ್ದ ಈ ಕಾರ್ಯಾ ಗಾರದಲ್ಲಿ ಮೈಸೂರು ವಿಶ್ವವಿದ್ಯಾನಿಲ ಯದ ಪದವಿ ಕಾಲೇಜುಗಳ 100ಕ್ಕೂ ಹೆಚ್ಚು ಅಧ್ಯಾಪಕರು ಭಾಗವಹಿಸಿದ್ದು ವಿಶೇಷ. ಸಂಸ್ಥೆಯ ಗೌರವ ಕಾರ್ಯ ದರ್ಶಿ ಡಾ. ವಿಜಯಲಕ್ಷ್ಮೀ ವಿಶ್ವಾರಾಧ್ಯ ಉದ್ಘಾಟಿಸಿದರು. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಎಸ್.ಆರ್. ರಮೇಶ್, ತಾಂತ್ರಿಕ ಅಧಿವೇಶದ ಪ್ರಾಧ್ಯಾಪಕ ಡಾ.ಪಿ.ಎಸ್. ಗುರು ಪ್ರಸಾದ್, ಎ. ದರ್ಶನ್, ಎನ್.ಎಸ್. ತೇಜಸ್ ಇದ್ದರು.



ಜು.೧೨, ೨೦೧೯

■ **ಗಣಿತ ಪ್ರಯೋಗಿಕ-3ರ ಕುರಿತು ಕಾರ್ಯಾಗಾರ**
ಬೆಳಿಗ್ಗೆ 10ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ- ಮಹಾಜನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಅತಿಥಿ- ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಿ.ಸೊನರ್ ನಂದಪ್ಪ, ಉಪಸ್ಥಿತಿ- ಡಾ.ಎಸ್.ಆರ್. ರಮೇಶ್, ಅಧ್ಯಕ್ಷತೆ- ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಸ್ಥಳ- ಕಾಲೇಜಿನ ವಾಣಿಜ್ಯ ಪ್ರಯೋಗಾಲಯ, ಜಯಲಕ್ಷ್ಮಿಪುರಂ.



ಶುಕ್ರವಾರ 12.7.2019

■ **ಮಹಾರಾನ ಪ್ರಥಮ ದರ್ಜೆ ಕಾಲೇಜು:** ಗಣಿತ ಕಾರ್ಯಾಗಾರ, ಉದ್ಘಾಟನೆ- ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಅತಿಥಿ- ಪ್ರೊ. ಡಿ. ಸೊನೆರ್ ನಂದಪ್ಪ, ಅಧ್ಯಕ್ಷತೆ- ಡಾ. ಎಸ್. ವೆಂಕಟರಾಮು, ಜಯಲಕ್ಷ್ಮಿಪುರಂ, ಬೆಳಗ್ಗೆ 10.

ಆಂದೋಲನ
ದಿನ ಪತ್ರಿಕೆ
ಜು.೧೨, ೨೦೧೯

ಜನಪದ ಕಲೆಯ ಸೊಗಡು ಕ್ಷೀಣ: ಪಿ.ಕೆ.ರಾಜಶೇಖರ್

'ಜಾನಪದ ಸಾಹಿತ್ಯ ಮತ್ತು ಜೀವನ' ಕಾರ್ಯಾಗಾರ ಉದ್ಘಾಟಿಸಿ ಅಭಿಮತ



ಮೈಸೂರಿನ ಮಹಾಜನ ಕಾಲೇಜಿನಲ್ಲಿ ನಡೆದ ಜಾನಪದ ಸಾಹಿತ್ಯ ಮತ್ತು ಜೀವನ ಕಾರ್ಯಾಗಾರವನ್ನು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಉದ್ಘಾಟಿಸಿದರು.

ಮೈಸೂರು,ಜು.11- ಈಚೆಗೆ ಜನಪದ ಕಲೆಯ ಸೊಗಡು ಕಡಿಮೆಯಾಗುತ್ತಿದೆ ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಆತಂಕ ವ್ಯಕ್ತಪಡಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ವಿವೇಕಾನಂದ ಸಭಾಂಗಣದಲ್ಲಿ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಘಟಕದಿಂದ ಏರ್ಪಡಿಸಿದ್ದ 'ಜಾನಪದ ಸಾಹಿತ್ಯ ಮತ್ತು ಜೀವನ' ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ಮದುವೆಗಳೆಂದರೆ ಹಬ್ಬದ ಸಡಗರ ವಿರುತ್ತಿತ್ತು. ಮುಯ್ಯಿ ಬರೆದಿಟ್ಟು ಅತಿ ವಿಶ್ವಾಸದಿಂದ ಉಪಚಾರಗಳನ್ನು ಮಾಡಿ ಇಡೀ ಗ್ರಾಮವೇ ಒಗ್ಗಟ್ಟಾಗಿ ಮದುವೆ ಮಾಡುತ್ತಿದ್ದರು. ಇತ್ತೀಚಿನ ಮದುವೆಗಳನ್ನು ನೋಡಿದರೆ ಅತಿಥಿಗಳು ಹಾಜರಿ ಹಾಕುವ ಕಾರ್ಯಕ್ರಮವಾಗಿ ಮಾರ್ಪಡುತ್ತಿದೆ ಎಂದು ಬೇಸರಿಸಿದರು.

ಜನಪದ ಸಂಸ್ಕೃತಿ ಅತ್ಯಂತ ಸಂಸ್ಕಾರವುಳ್ಳ ಸಂಸ್ಕೃತಿ. ನಾಗರಿಕತೆ ಬೆಳೆದಂತೆ ನಮ್ಮ ಹಿರಿಯರು ತಮ್ಮ ಭಾವನೆಗಳನ್ನು ಪದಕಟ್ಟಿ ಹಾಡಿ ವ್ಯಕ್ತಪಡಿಸುತ್ತಿದ್ದರು. ರಾಜರ ಆಸ್ಥಾನದಲ್ಲಿ ಹಾಡುವ ಕವಿಗಳು ರಾಜರನ್ನು ಪೃಥ್ವಿಯಾಧಿಪತಿ ಎಂದು ವರ್ಣಿಸಿದರೆ, ಜನಪದರು ಭೂಮಿಯನ್ನು ತಾಯಿ ಎಂದು ಬಣ್ಣಿಸಿ ಗೌರವ ನೀಡುತ್ತಿದ್ದರು ಎಂದು ಸ್ಮರಿಸಿದರು.

> ಜನಪದ ನಾಡು, ನಾಡಿನ ಸಂಸ್ಕೃತಿಯನ್ನು ತಿಳಿಸುತ್ತದೆ. ಅಡುಗೆ, ಉಡುಗೆ ಯಾವುದರಲ್ಲೇ ಇರಲಿ, ಅದರಲ್ಲಿ ಜನಪದವಿದೆ. ಜನಪದ ಸಂಸ್ಕೃತಿ ಶುದ್ಧ, ಹೃದಯವಂತಿಕೆ ಸಂಸ್ಕೃತಿ. ಜನಪದ ಕಲೆ ಸೃಷ್ಟಿದವರು ಯಾರು ಎಂಬುದು ಇಲ್ಲ. ಅನಕ್ಷರಸ್ಥ ಅನಾಮಧೇಯರು ಅಮೃತ ಕಾವ್ಯಗಳನ್ನು ಸೃಷ್ಟಿಸಿದ್ದಾರೆ.
>
> -ಡಾ.ಪಿ.ಕೆ.ರಾಜಶೇಖರ್

ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ, ಮಹಾರಾಜ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಟಿ.ಕೆ.ಕೆಂಪೇಗೌಡ, ಕನ್ನಡ ವಿಭಾಗದ ಮುಖಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 12.7.2019

ಜಾನಪದ ಸಾಹಿತ್ಯ, ಸಂಸ್ಕೃತಿ ಉಳಿಸಬೇಕಿದೆ

ಜಾನಪದ ಸಾಹಿತ್ಯ ಮತ್ತು ಜೀವನ ಕುರಿತ ಕಾರ್ಯಾಗಾರದಲ್ಲಿ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್

• ಕನ್ನಡಪ್ರಭ ವಾರ್ತೆ ಮೈಸೂರು

ಕನ್ನಡ ಸಂಸ್ಕೃತಿ ಉಳಿಸುವ ಕಾರ್ಯದಲ್ಲಿ ಕನ್ನಡ ಜಾನಪದ ಸಾಹಿತ್ಯವು ಮಹತ್ವದ ಪಾತ್ರ ವಹಿಸಿದೆ. ಕನ್ನಡಿಗರಾದ ನಾವು ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕಾದ ಕರ್ತವ್ಯ ನಮ್ಮ ಮೇಲಿದೆ ಎಂದು ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ ವಿವೇಕಾನಂದ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಜಾನಪದ ಸಾಹಿತ್ಯ ಮತ್ತು ಜೀವನ' ಕುರಿತು ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಈ ಬಗ್ಗೆ ಚಿಂತನೆ ನಡೆಸಬೇಕು ಹಾಗೂ ಕನ್ನಡ ಭಾಷೆಯ ಮೂಲಕ ಜನಪದ ಸಾಹಿತ್ಯ ಗಟ್ಟಿಗೊಳಿಸುವ ಪ್ರಯತ್ನ ಆಗಬೇಕು. ಜಾನಪದ ಸಾಹಿತ್ಯವು ಸ್ತ್ರೀಗೆ ಪ್ರಾತಿನಿಧ್ಯ, ಮನ್ನಣೆ, ಗೌರವ ಸ್ಥಾನ ನೀಡುವ ಸಂಸ್ಕೃತಿಯಾಗಿದೆ. ಬಹಳಷ್ಟು ಜನಪದದ ಹಾಡುಗಳಲ್ಲಿ ಸ್ತ್ರೀ ಸಂವೇದನೆ ಕಾಣುತ್ತೇವೆ. ಜನಪದ ಸಾಹಿತ್ಯವು ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬಂದಿದೆ. ಜನಪದ ಸಾಹಿತ್ಯವು ಪ್ರತಿಯೊಂದು ಜನಾಂಗದ ಪ್ರಾಚೀನ ಪರಂಪರೆಯಾಗಿದೆ ಎಂದರು.

ಜಾನಪದ ಸಾಹಿತ್ಯವು ಒಂದು ನಿರ್ದಿಷ್ಟ ಗುಂಪಿನಿಂದ ಹಂಚಿಕೊಳ್ಳಲ್ಪಟ್ಟಸಂಸ್ಕೃತಿ,ಉಪಸಂಸ್ಕೃತಿ,ಸಂಪ್ರದಾಯಗಳು, ಒಗಟುಗಳು, ನಾಣ್ನುಡಿಗಳು, ಹಾಸ್ಯಗಳು, ಜನಪದ ಹಾಡುಗಳು ಮತ್ತು ಸಂಪ್ರದಾಯಿಕ ಆಚರಣೆಗಳನ್ನು ಸಾರುವ ನಿಟ್ಟಿನಲ್ಲಿ ಮಾನವನ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಜಾನಪದಸಾಹಿತ್ಯವುಲಿಖಿತರೂಪವಿಲ್ಲದೇಬಾಯ್ದೆರೆಯಾಗಿ



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಜಾನಪದ ಸಾಹಿತ್ಯ ಕುರಿತ ಕಾರ್ಯಾಗಾರವನ್ನು ಡಾ. ಪಿ.ಕೆ. ರಾಜಶೇಖರ್ ಉದ್ಘಾಟಿಸಿದರು.

ಬರುವುದರಿಂದ ಹಲವಾರು ಹೊಸ ಹೊಸ ವಿಷಯಗಳನ್ನು ಆಡು ಭಾಷೆಯಲ್ಲಿ ತಿಳಿಸುವ ಕಾವ್ಯವಾಗಿದೆ.

ಜಾನಪದ ಸಾಹಿತ್ಯದಲ್ಲಿಯೂ ಸಹ ಜನಪದ ಮಹಾಕಾವ್ಯಗಳನ್ನು ನಾವು ನೋಡಬಹುದು. ಮಂಟೇಸ್ವಾಮಿ, ಮಲೆಮಾದೇಶ್ವರ, ಜುಂಜಪ್ಪ ಮೈಲಾರಲಿಂಗ ಹೀಗೆ ಮೊದಲಾದ ಮಹಾಕಾವ್ಯಗಳು ಇಂದು ಪುಸ್ತಕ ರೂಪದಲ್ಲಿ ಹೊರಬಂದಿದೆ ಎಂದರಲ್ಲದೆ, ಜನಪದ ಗಾದೆಗಳು, ಹಾಡುಗಳು ಮತ್ತು ಒಗಟುಗಳನ್ನು ಹೇಳಿ ವಿದ್ಯಾರ್ಥಿಗಳನ್ನು ರಂಜಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಎಸ್. ವೆಂಕಟರಾಮು ಮಾತನಾಡಿ, ಜಾನಪದ ಸಾಹಿತ್ಯವನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಜಾನಪದ ವಿದ್ವಾಂಸ ಪಿ.ಕೆ. ರಾಜಶೇಖ ಅವರಿಗೆ ಅಭಿನಂದನೆ ಸಲ್ಲಿಸಿದರು.

ಇದೇ ವೇಳೆ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮಹಾರಾಜ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಟಿ.ಕೆ. ಕೆಂಪೇಗೌಡ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಇದ್ದರು. ಬಿಂಬ ಮತ್ತು ಭಾರತಿ ಪ್ರಾರ್ಥಿಸಿದರು. ಎಂ. ನಾಗೇಶ ವಂದಿಸಿದರು, ಕಿರಣ್‌ಕುಮಾರ್ ನಿರೂಪಿಸಿದರು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 12 ಜುಲೈ 2019

ಅಡುಗೆ, ಉಡುಗೆ, ನಡೆ, ನುಡಿಯಲ್ಲಿ ಅಂದು ಕಾಣುತ್ತಿದ್ದ ಜನಪದ ಇಂದು ಇಲ್ಲ

ಜನಪದ ಸಾಹಿತ್ಯ, ಜೀವನ ಕುರಿತ ಕಾರ್ಯಕ್ರಮದಲ್ಲಿ ಡಾ.ಪಿ.ಕೆ.ರಾಜಶೇಖರ್ ಬೇಸರ



ಮೈಸೂರಿನ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಕಾರ್ಯಾಗಾರ, ಜಾನಪದ ಸಾಹಿತ್ಯ ಮತ್ತು ಜೀವನ ಕುರಿತ ಕಾರ್ಯಕ್ರಮಕ್ಕೆ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಚಾಲನೆ ನೀಡಿದರು.

ಮೈಸೂರು, ಜು.11(ಆರ್‌ಕೆಬಿ)– ಹಿಂದೆ ಅಡುಗೆ, ಉಡುಗೆ, ನಡೆ, ನುಡಿ, ಹಾಡು ಎಲ್ಲದರಲ್ಲೂ ಜನಪದವನ್ನು ಪ್ರತಿಬಿಂಬಿಸುತ್ತಿದ್ದವು. ನಾಡಿನ ಸಂಸ್ಕೃತಿಯನ್ನು ತಿಳಿಸುತ್ತಿತ್ತು. ಜನಪದವಿದ್ದಲ್ಲಿ ವಾತಾವರಣ ನೀರಸವಾಗಿರದೆ ಲವಲವಿಕೆಯಿಂದ ಇರುತ್ತಿತ್ತು. ಅಂತಹ ಜನಪದ ಇಂದು ಇಲ್ಲವಾಗಿದೆ ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ತಿಳಿಸಿದರು.

ಮೈಸೂರಿನ ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಕಾರ್ಯಾಗಾರ, ಜಾನಪದ ಸಾಹಿತ್ಯ ಮತ್ತು ಜೀವನ ಕುರಿತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಜನಪದ ಸಂಸ್ಕೃತಿ ಶುದ್ಧ, ಹೃದಯವಂತಿಕೆಯ ಸಂಸ್ಕೃತಿ, ಅನಕ್ಷರಸ್ಥ ಅನಾಮಧೇಯರ ಅಮೃತ ಕಾವ್ಯಗಳು, ಅವು ಅನುಭವ ಶ್ರೀಮಂತಿಕೆಯನ್ನು ನೀಡುತ್ತಿದ್ದವು ಎಂದರು.

ಅಂದು ಮಹಿಳೆಯರು ಬೆಳಿಗ್ಗೆ ಏಳುವಾಗಲೇ 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ, ಎಳ್ಳು, ಜೀರಿಗೆ ಬೆಳೆಯೋಳ, ಭೂಮಿತಾಯಿ ಎದ್ಹೊಂದು ಗಳಿಗೆ ನೆನೆದೇನು' ಎಂದು ಜನಪದ ಹಾಡಿನೊಂದಿಗೇ ದಿನವನ್ನು ಆರಂಭಿಸುತ್ತಿದ್ದರು. ಜೀರಿಗೆ ಗಂಡು ಹೆಣ್ಣಿನ ಸಂಬಂಧವನ್ನು, ಎಳ್ಳು ಸಂತಾನವನ್ನು ತಿಳಿಸುತ್ತದೆ. ಎಳ್ಳಿಗೆ ಸಂಸ್ಕೃತಿಯಲ್ಲಿ ಹೆಚ್ಚಿನ ಸ್ಥಾನವಿದೆ. ಅದು ಜನಪದರಿಗೆ ಪವಿತ್ರ, ಭೂಮಿ ಸಹನಾಮಯಿ, ಎಲ್ಲವನ್ನೂ ಸಹಿಸಿಕೊಂಡಿದ್ದಾಳೆ. ಹೆಣ್ಣಿಗೂ ಕೂಡ ಅದೇ ಸಹನೆ ಬಂದಿದೆ. ಆ ಸಹನೆ ಗಂಡಿಗೆ ಸಾಧ್ಯವಿಲ್ಲ. ಮಗುವಿನ ಲಾಲನೆ ಹೆಣ್ಣಿನಿಂದ ಮಾತ್ರ ಸಾಧ್ಯ ಎಂದರು.

ಭತ್ತವನ್ನು ಕಟ್ಟುವಾಗ ಅತ್ತಿಗೆ–ನಾದಿನಿ ಜಗಳ ಮಾಡಿಕೊಳ್ಳದೆ ಜಾನಪದ ಹಾಡು ಹೇಳುತ್ತಾ ಒನಕೆ ಹಿಡಿದು ಭತ್ತ ಕುಟ್ಟುತ್ತಿದ್ದರು. ಗ್ರಾಮಗಳಲ್ಲಿ ಇವತ್ತಿನ ಮದುವೆ ನೋಡಿದರೆ ಹಾಜರಿ ಹಾಕೋದೊಂದೇ ಅತಿಥಿಗಳ ಕೆಲಸ. ಖಾಲಿ ಕವರ್ ಕೊಟ್ಟು ಹೋದರೂ ಆಯಿತು. ಆದರೆ ಅಂದು ಹಾಗಿರಲಿಲ್ಲ. ಮುಯ್ಯಿ ಬರೆದಿಟ್ಟುಕೊಳ್ಳುತ್ತಿದ್ದರು. ಒಂದು ತಿಂಗಳ ಕಾಲ ಮದುವೆ ಇರುತ್ತಿತ್ತು. ಹಪ್ಪಳ, ಸಂಡಿಗೆ ಹೀಗೆ ಅನೇಕ ಕೆಲಸಗಳಿರುತ್ತಿದ್ದವು. ಇಡೀ ಗ್ರಾಮವೇ ಒಗ್ಗಟ್ಟಿನಿಂದ ಮದುವೆ ತಯಾರಿಯಲ್ಲಿ ಪಾಲ್ಗೊಳ್ಳುತ್ತಿತ್ತು. ಪ್ರತಿಯೊಂದು ಕೆಲಸಕ್ಕೂ ಒಂದು ಹಾಡಿರುತ್ತಿತ್ತು. ಆದರೆ ಇಂದು ಮದುವೆಗಳಲ್ಲಿ ಜನಪದ ಹಾಡುಗಳನ್ನೇ ಕಾಣಲಾಗುತ್ತಿಲ್ಲ. ಅದರ ಬದಲಿಗೆ ಆರ್ಕೆಸ್ಟ್ರಾಗಳು ಮನೆ ಮಾಡಿವೆ ಎಂದು ಬೇಸರ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ ಹೆಚ್.ಆರ್. ತಿಮ್ಮೇಗೌಡ ಇನ್ನಿತರರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ

ಸಮಸ್ತ ಕನ್ನಡಿಗರ ಹೆಮ್ಮೆ

ಶುಕ್ರವಾರ, 12 ಜುಲೈ 2019

ಜನಪದರು ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ: ಡಾ.ಪಿಕೆಆರ್

■ ವಿಕ ಸುದ್ದಿಲೋಕ ಮೈಸೂರು

ಜನಪದರು ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ ತಿಳಿಸಿದರು.

ನಗರದ ಎನ್‌ಬಿಎಂಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಜಾನಪದ ಸಾಹಿತ್ಯ ಮತ್ತು ಜೀವನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

''ಜನಪದ ನಾಡು, ನುಡಿಯ ಸಂಸ್ಕೃತಿಯನ್ನು ತಿಳಿಸುತ್ತದೆ. ಅಡುಗೆ, ಉಡುಗೆ, ನಮ್ಮ ನಡೆ, ನುಡಿ ಯಾವುದರಲ್ಲೇ ಇರಲಿ ಅದರಲ್ಲಿ ಜನಪದವಿದೆ. ಅನಕ್ಷರಸ್ಥರು ಅನಾಮಧೇಯರು ಅಮೃತ ಕಾವ್ಯಗಳನ್ನು ಸೃಷ್ಟಿಸಿದ್ದಾರೆ. ಜನಪದರು ಅನಕ್ಷರಸ್ಥರಾಗಿದ್ದರೇ ಹೊರತು ಅವಿದ್ಯಾವಂತರಲ್ಲ,'' ಎಂದು ಹೇಳಿದರು.



ನಗರದ ಮಹಾಜನ ಕಾಲೇಜಿನಲ್ಲಿ ಏರ್ಪಡಿಸಿದ್ದ ಜನಪದ ಸಾಹಿತ್ಯ ಮತ್ತು ಜೀವನ ಕುರಿತ ಕಾರ್ಯಾಗಾರವನ್ನು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಉದ್ಘಾಟಿಸಿದರು.

''ಈಚೆಗೆ ಜನಪದ ಕಲೆಯ ಸೊಗಡು ಕಡಿಮೆಯಾಗುತ್ತಿದೆ. ಇಂದಿನ ಮದುವೆಗಳನ್ನು ನೋಡಿದರೆ ಆತಿಥಿಗಳು ಹಾಜರಿ ಹಾಕುವ ಕಾರ್ಯಕ್ರಮವಾಗಿ ಮಾರ್ಪಡುತ್ತಿದೆ. ಆದರೆ, ಹಿಂದೆ ಗ್ರಾಮಗಳಲ್ಲಿ ಹಾಗಿರಲಿಲ್ಲ ಮುಂಜಾ ಬರದಿಟ್ಟು ಅತಿ ವಿಶ್ವಾಸದಿಂದ ಉಪಚಾರಗಳನ್ನು ಮಾಡಿ, ಇಡೀ ಗ್ರಾಮವೇ ಒಗ್ಗಟ್ಟಾಗಿ ಮದುವೆ ಮಾಡುತ್ತಿದ್ದರು,'' ಎಂದು ತಿಳಿಸಿದರು.

''ನಾಗರಿಕತೆ ಬೆಳೆದಂತೆ ನಮ್ಮ ಹಿರಿಯರು ತಮ್ಮ ಭಾವನೆಗಳನ್ನು ಪದಕಟ್ಟಿ ಹಾಡಿ ವ್ಯಕ್ತಪಡಿಸುತ್ತಿದ್ದರು. ರಾಜರ ಆಸ್ಥಾನದಲ್ಲಿ ಹಾಡುವ ಕವಿಗಳು ರಾಜರನ್ನು ಪೃಥ್ವಿಯಾವತಿ ಎಂದು ವರ್ಣಿಸಿದರೆ, ಜನಪದರು ಭೂಮಿಯನ್ನು ತಾಯಿ ಎಂದು ಬಗ್ಗಿ, ಗೌರವ ನೀಡಿದರು. ಸಹನಾಮಯಿಯಾಗಿರುವ ಭೂಮಿ ಎಲ್ಲವನ್ನು ಸಹಿಸಿಕೊಂಡಿದ್ದಾಳೆ. ಹೆಣ್ಣು ಕೂಡ ಹಾಗೇ ಸಹನಾಮಯಿ ಮಗುವಿನ ಲಾಲನೆ ಪಾಲನೆ ಮಾಡಲು ಗಂಡಿನಿಂದ ಸಾಧ್ಯವಿಲ್ಲ ಹೆಣ್ಣಿಂದ ಮಾತ್ರ ಸಾಧ್ಯ. ಹಾಗಾಗಿ ಜನಪದ ಸಂಸ್ಕೃತಿ ಅತ್ಯಂತ ಮೌಲ್ಯ,'' ಎಂದು ಬಣ್ಣಿಸಿದರು.

ಕಾಲೇಜಿನ ವ್ಯಾಸಂಪಾಲ ಡಾ.ಎನ್. ವೆಂಕಟರಾಮು, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಕಾರಿ ಡಾ.ಎನ್.ಆರ್.ರಮೇಶ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಸಹ ಪ್ರಾಧ್ಯಾಪಕ ವೈ.ಕೃಷ್ಣಮೂರ್ತಿ, ಮಹಾರಾಜ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಟಿ.ಕೆ.ಕಂಬೇಗೌಡ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ ಕಾರ್ಯಕ್ರಮದಲ್ಲಿ ಹಾಜರಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 12 ಜುಲೈ 2019
12 JULY 2019

ಈಚೆಗೆ ಜನಪದ ಕಲೆಯ ಸೊಗಡು ಕ್ಷೀಣ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಈಚೆಗೆ ಜನಪದ ಕಲೆಯ ಸೊಗಡು ಕಡಿಮೆಯಾಗುತ್ತಿದೆ. ಇಂದಿನ ಮದುವೆಗಳನ್ನು ಅತಿಥಿಗಳು ಹಾಜರಿ ಹಾಕುವ ಕಾರ್ಯಕ್ರಮವಾಗಿ ಮಾರ್ಪಡುತ್ತಿದೆ ಎಂದು ಜನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಬೇಸರವ್ಯಕ್ತಪಡಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಜಾನಪದ ಸಾಹಿತ್ಯ ಮತ್ತು ಜೀವನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಈ ಹಿಂದೆ ಗ್ರಾಮಗಳಲ್ಲಿ ಹಾಗಿರಲಿಲ್ಲ. ಮುಯ್ಯಿ ಬರೆದಿಟ್ಟು, ಅತಿ ವಿಶ್ವಾಸದಿಂದ ಉಪಚಾರ ಮಾಡಿ, ಇಡೀ ಗ್ರಾಮವೇ ಒಗ್ಗಟ್ಟಾಗಿ ಮದುವೆ ಮಾಡುತ್ತಿತ್ತು ಎಂದು ತಿಳಿಸಿದರು.

» ಕಾರ್ಯಾಗಾರ ಉದ್ಘಾಟಿಸಿ ಡಾ.ಪಿ.ಕೆ. ರಾಜಶೇಖರ ಬೇಸರ

ನಾಗರಿಕತೆ ಬೆಳೆದಂತೆ ಹಿರಿಯರು ತಮ್ಮ ಭಾವನೆಗಳನ್ನು ಪದಕಟ್ಟಿ ಹಾಡಿ ವ್ಯಕ್ತಪಡಿಸುತ್ತಿದ್ದರು. ರಾಜರ ಆಸ್ಥಾನದಲ್ಲಿ ಹಾಡುವ ಕವಿಗಳು ರಾಜರನ್ನು ಪೃಥ್ವಿಯಾಪತಿ ಎಂದು ವರ್ಣಿಸಿದರೆ, ಜನಪದರು ಭೂಮಿಯನ್ನು ತಾಯಿ ಎಂದು ಬಣ್ಣಿಸಿ ಗೌರವ ನೀಡಿದರು. ಸಹನಾಮಯಿಯಾಗಿರುವ ಭೂಮಿಯ ರೀತಿ ಹೆಣ್ಣು ಕೂಡ ಸಹನಾಮಯಿ. ಮಗುವಿನ ಲಾಲನೆ ಪಾಲನೆ ಮಾಡಲು ಗಂಡನಿಂದ ಸಾಧ್ಯವಿಲ್ಲ. ಹೆಣ್ಣಿನಿಂದ ಮಾತ್ರ ಸಾಧ್ಯ. ಹಾಗಾಗಿ ಜನಪದ ಸಂಸ್ಕೃತಿ ಅತ್ಯಂತ ಅಮೂಲ್ಯ ಎಂದು ಬಣ್ಣಿಸಿದರು.


ವಿಜಯವಾಣಿ ಚಿತ್ರ

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಜನಪದ ಸಾಹಿತ್ಯ ಮತ್ತು ಜೀವನ ಕಾರ್ಯಾಗಾರವನ್ನು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಉದ್ಘಾಟಿಸಿದರು.

ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾರ್ಯ ನಿರ್ವಹಣಾಕಾರಿ ಡಾ.ಎಸ್.ಆರ್.ರಮೇಶ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಸಹ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ, ಮಹಾರಾಜ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಟಿ.ಕೆ.ಕೆಂಪೇಗೌಡ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಹಾಜರಿದ್ದರು.

MFGE In the Eyes of the Press.....

ಆಂದೋಲನ

ದಿನ ಪತ್ರಿಕೆ



ಜು.೧೧, ೨೦೧೯

■ **ಜಾನಪದ ಸಾಹಿತ್ಯ ಮತ್ತು ಜೀವನ ಕುರಿತು ಕಾರ್ಯಾಗಾರ**

ಬೆಳಿಗ್ಗೆ 11.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ, ಐಕ್ಯೂಎಸಿ, ಉದ್ಘಾಟನೆ- ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ, ಸಂಪನ್ಮೂಲ ವ್ಯಕ್ತಿಗಳು- ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಹ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ, ಮಹಾರಾಜ ಕಾಲೇಜು ಸಹ ಪ್ರಾಧ್ಯಾಪಕ ಡಾ.ಟಿ.ಕೆ.ಕೆಂಪೇಗೌಡ, ಉಪಸ್ಥಿತರು- ಮಹಾಜ ಪ್ರಥಮ ದರ್ಜೆ ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ, ಅಧ್ಯಕ್ಷತೆ- ಪ್ರಾಂಶುಪಾಲ ಡಾ. ಎಸ್.ವೆಂಟಕರಾಮು, ಸ್ಥಳ- ಕಾಲೇಜಿನ ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ.

ಆಂದೋಲನ



ದಿನ ಪತ್ರಿಕೆ

ಜು.೧೨, ೨೦೧೯

■ **ಗಣಿತ ಪ್ರಯೋಗಿಕ-3ರ ಕುರಿತು ಕಾರ್ಯಾಗಾರ**

ಬೆಳಿಗ್ಗೆ 10ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ- ಮಹಾಜನ ಶಿಕ್ಷಣ ಸಂಸ್ಥೆಯ ಕಾರ್ಯ ದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಅತಿಥಿ- ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಿ.ಸೊನರ್ ನಂದಪ್ಪ, ಉಪಸ್ಥಿತಿ- ಡಾ.ಎಸ್.ಆರ್. ರಮೇಶ್, ಅಧ್ಯಕ್ಷತೆ- ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಸ್ಥಳ- ಕಾಲೇಜಿನ ವಾಣಿಜ್ಯ ಪ್ರಯೋಗಾಲಯ, ಜಯಲಕ್ಷ್ಮಿಪುರಂ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 11.7.2019

■ ಮಹಾಜನ ಪ್ರಥಮ ದರ್ಜೆ ಕಾಲೇಜು: ಜಾನಪದ ಸಾಹಿತ್ಯ ಮತ್ತು ಜೀವನ ಕುರಿತ ಉಪನ್ಯಾಸ– ಪ್ರೊ. ಕೃಷ್ಣಮೂರ್ತಿ, ಡಾ. ಟಿ.ಕೆ. ಕೆಂಪೇಗೌಡ, ಉದ್ಘಾಟನೆ– ಡಾ. ಪಿ.ಕೆ. ರಾಜಶೇಖರ್, ಅಧ್ಯಕ್ಷತೆ– ಡಾ. ಎಸ್. ವೆಂಕಟರಾಮು, ವಿವೇಕಾನಂದ ಸಭಾಂಗಣ, ಜಯಲಕ್ಷ್ಮೀಪುರಂ, ಬೆಳಗ್ಗೆ 11.30.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 11 ಜುಲೈ 2019

■ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು: ಕನ್ನಡ ವಿಭಾಗ ಮತ್ತು ಐಕ್ಯೂ ಎಸಿ ಕಾರ್ಯಾಗಾರ ಜಾನಪದ ಸಾಹಿತ್ಯ ಮತ್ತು ಜೀವನ: ಉದ್ಘಾಟನೆ: ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ ಅಧ್ಯಕ್ಷತೆ: ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್. ವೆಂಕಟರಾಜು. ಉಪಸ್ಥಿತಿ: ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್. ಆರ್.ತಿಮ್ಮೇಗೌಡ. ಸ್ಥಳ: ವಿವೇಕಾನಂದ ಸಭಾಂಗಣ. ಬೆಳಿಗ್ಗೆ 11.30ಕ್ಕೆ.

DECCAN HERALD

Thursday, July 11, 2019

SBRR Mahajana PU College: Workshop on folk literature, folk scholar P K Rajashekar to inaugurate, principal S Venkataramu to preside, Vivekananda Hall, 11.30 am.

ವಿಜಯವಾಣಿ

ಕನ್ನಡಿಗರ ಧ್ವನಿ

ಗುರುವಾರ 11 ಜುಲೈ 2019
11 JULY 2019



■ **ಕಾರ್ಯಾಗಾರ:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ವಿಷಯ: ಜಾನಪದ ಸಾಹಿತ್ಯ ಮತ್ತು ಜೀವನ. ಅತಿಥಿಗಳು: ಡಾ.ಪಿ.ಕೆ. ರಾಜಶೇಖರ್, ಡಾ.ಎಸ್. ವೆಂಕಟರಾಮು. ಸ್ಥಳ: ಕಾಲೇಜು ಸಭಾಂಗಣ, ಬೆ.11.30

ಪ್ರಜಾವಾಣಿ

ಗುರುವಾರ • ಜುಲೈ 11, 2019

ಎಸ್‌ಬಿಆರ್‌ಆರ್ ಮಹಾಜನ ಪದವಿಪೂರ್ವ ಕಾಲೇಜು: ಜನಪದ ಸಾಹಿತ್ಯ- ಮತ್ತು ಜೀವನ ಕಾರ್ಯಾಗಾರ, ಉದ್ಘಾಟನೆ- ಜನಪದ ವಿದ್ವಾಂಸ ಡಾ.ಪಿ. ಕೆ.ರಾಜಶೇಖರ. ಸಂಪನ್ಮೂಲ ವ್ಯಕ್ತಿಗಳು- ಪ್ರೊ.ಕೃಷ್ಣಮೂರ್ತಿ, ಡಾ.ಟಿ.ಕೆ.ಕೆಂಪೇಗೌಡ, ಕಾಲೇಜಿನ ಸಿಇಒ ಡಾ.ಎಸ್.ಆರ್. ರಮೇಶ್, ಡಾ.ಎಚ್.ಆರ್.ತಿಮ್ಮೇಗೌಡ. ಅಧ್ಯಕ್ಷತೆ- ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು. ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ. ಬೆಳಿಗ್ಗೆ 11.30.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 31 ಜುಲೈ 2019

ಮಹಾಜನ ಕಾಲೇಜಿನಲ್ಲಿ ಕಾರ್ಯಾಗಾರ

ಮೈಸೂರು.ಜು.30–ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಗ್ರಂಥಾಲಯ ವಿಭಾಗ, ಸಂಶೋಧನಾ ಘಟಕ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ ಆ. 7 ರಂದು ಎಮರ್ಜಿಂಗ್ ಟ್ರೆಂಡ್ಸ್ ಇನ್ ರಿಸರ್ಚ್ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9945841777, 9901041470 ಸಂಪರ್ಕಿಸಬಹುದು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಜುಲೈ 31, 2019

ಕಾರ್ಯಾಗಾರ 7ಕ್ಕೆ

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆ.7ರಂದು 'ಎಂಜಿನಿಯರಿಂಗ್ ಟ್ರೆಂಡ್ಸ್ ಇನ್ ರಿಸರ್ಚ್-2' ಕುರಿತ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರ ನಡೆಯಲಿದೆ. ಆಸಕ್ತ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 9945841777 ಸಂಪರ್ಕಿಸಿ.

ಆಂದೋಲನ
ದಿನ ಪತ್ರಿಕೆ
ಜು. ೨, ೨೦೧೯

ಮೈಸೂರಿನ ಕಿಕ್ ಬಾಕ್ಸರ್‌ಗೆ ದಕ್ಕಿದ ಲಕ್!

ಮಿನುಗುವ ತಾರೆ

ಅಂತಾರಾಷ್ಟ್ರೀಯ ಕಿಕ್ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದು ಸುಹಾಸ್ ಸಾಧನೆ



ಮೈಸೂರು,ಜು.1- ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಆಟದಲ್ಲಿ ತೊಡಗಿಸಿಕೊಂಡು ಅಂತಾರಾಷ್ಟ್ರೀಯ ಮಟ್ಟದ ಬಾಕ್ಸಿಂಗ್ ಪಂದ್ಯದಲ್ಲಿ ಜಯ ಗಳಿಸಿ ಬೆಳ್ಳಿ ಪದಕವನ್ನು ಮುಡಿಗೇರಿಸಿಕೊಂಡು ಮೈಸೂರಿನ ಹಿರಿಮೆಯನ್ನು ಸಾರಲು ಹೊರಟಿದ್ದಾರೆ.

ನಗರದ ಆಶೋಕಪುರಂ ನಿವಾಸಿ ಒಮೇಶ್ವರ್ ಹಾಗೂ ತೇಜೋಮಣಿ ದಂಪತಿಯ ಪುತ್ರ ಸುಹಾಸ್ ತನ್ನ ಪರಿಶ್ರಮದ ಮೂಲಕ ಎತ್ತರಕ್ಕೆ ಬೆಳೆದ ಕ್ರೀಡಾಪಟು ಎನಿಸಿಕೊಂಡಿದ್ದಾರೆ. 19ನೇ ವರ್ಷದಲ್ಲೇ ಈ ಆಟವನ್ನು ಆಡಬೇಕೆಂಬ ಆಸೆಯಾಗಿತ್ತು. ಆದ್ದರಿಂದ ಈ ಕ್ರೀಡೆಯತ್ತ ಹೆಚ್ಚು ಆಸಕ್ತಿ ಬೆಳೆಸಿಕೊಂಡೆ. ಸತತ ಪರಿಶ್ರಮದಿಂದ ಸಾಧನೆ ಮಾಡಲು ಸಹಾಯಕವಾಯಿತು ಎನ್ನುತ್ತಾರೆ.

ಮೈಸೂರಿನ ಆಕಾಡೆಮಿ ಆಫ್ ಸೆಲ್ಫ್ ಡಿಫೆನ್ಸ್ ಎಂಬ ತರಬೇತಿ ಶಾಲೆಯಲ್ಲಿ ತರಬೇತಿ ಪಡೆದರು. ಹರ್ಷಶಂಕರ್ ಹಾಗೂ ಪೂಜಾ ಅವರು ನನಗೆ ತರಬೇತಿಯ ಜೊತೆಗೆ ಹೆಚ್ಚು ಸ್ಫೂರ್ತಿಯನ್ನು ನೀಡುತ್ತಿದ್ದಾರೆ. ಇವರ ಜತೆಗೆ ಮಹಾಜನ ಕಾಲೇಜಿನ ದೈಹಿಕ ಶಿಕ್ಷಕರಾದ ಎಚ್.ಎನ್.ಭಾಸ್ಕರ್ ಅವರು ನನ್ನ ಆಟಕ್ಕೆ ಮತ್ತಷ್ಟು ಪುಷ್ಟಿ ನೀಡಿದರು. ಹಾಗೆಯೇ ಸಂಸ್ಥೆಯು ಕೂಡ ನನಗೆ ಬೆನ್ನೆಲುಬಾಗಿ ನಿಂತಿದೆ ಎನ್ನುತ್ತಾರೆ ಸುಹಾಸ್.

ಮೈಸೂರಿನಲ್ಲೇ ಹುಟ್ಟಿ ಬೆಳೆದು ವಿದ್ಯಾಭ್ಯಾಸ ಮುಂದುವರಿಸಿದ ಇವರು, ಪ್ರಸ್ತುತ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಕಳೆದ ಎರಡು ವರ್ಷಗಳಿಂದ ವಿದ್ಯಾಭ್ಯಾಸದೊಂದಿಗೆ ಕ್ರೀಡೆಯನ್ನೂ ಸ್ಫೂರ್ತಿಯಾಗಿಸಿಕೊಂಡ ಇವರು, ಈಗ ದೇಶದಾಚೆಗೂ ತನ್ನ ಕಿಕ್ ಬಾಕ್ಸಿಂಗ್ ಆಟವನ್ನು ಮುಂದುವರಿಸಿ ಯುವ ಪ್ರತಿಭೆಯಾಗಿದ್ದಾರೆ.

3 ತಿಂಗಳ ಹಿಂದೆ ಮಹಾರಾಷ್ಟ್ರದಲ್ಲಿ ನಡೆದ ವಾಕೋ ಇಂಡಿಯಾ ಫೆಡರೇಷನ್ ನ್ಯಾಷನಲ್ ಕಿಕ್ ಬಾಕ್ಸಿಂಗ್ (ಈವೆಂಟ್ ಕೆ-1) ನಲ್ಲಿ ಬೆಳ್ಳಿ ಪದಕವನ್ನು ಗಳಿಸಿದ್ದಾರೆ. ಇದು ಅವರ ಅಂತಾರಾಷ್ಟ್ರೀಯ ಕನಸ್ಸಿಗೆ ದಾರಿದೀಪವಾಯಿತು. ಇದರಲ್ಲಿ ಆಯ್ಕೆಯಾದ ಇವರು ಮುಂದಿನ ಗುರಿಯತ್ತ ಹೆಜ್ಜೆ ಇಡಲು ಸಾಧ್ಯವಾಯಿತು..

ಬೆಳ್ಳಿ ಪದಕ: ನೇಪಾಳದ ಕಠ್ಠಂಡುವಿನಲ್ಲಿ ಇತ್ತೀಚೆಗೆ ನಡೆದ 19ವರ್ಷದ 'ನೇಪಾಳ್ ಒಪನ್ ಇಂಟರ್ ನ್ಯಾಷನಲ್ ಕಿಕ್ ಬಾಕ್ಸಿಂಗ್ ಚಾಂಪಿಯನ್ ಶಿಪ್' ಕ್ರೀಡಾಕೂಟದಲ್ಲಿ ಜಯಗಳಿಸಿ ಬೆಳ್ಳಿಪದಕವನ್ನು ಗಳಿಸಿದ್ದಾರೆ.

ನನ್ನ ಸ್ವಂತ ಪರಿಶ್ರಮದಿಂದ ದಿನನಿತ್ಯ ಅಭ್ಯಾಸ ನಡೆಸಿ, ವೈಯಕ್ತಿಕವಾಗಿ ಆರ್ಥಿಕ ಸಹಾಯವನ್ನು ಭರಿಸಿಕೊಂಡು, ಮುನ್ನಡೆದೆ ಎನ್ನುವ ಸುಹಾಸ್



ಮುಂದಿನ ದಿನಗಳಲ್ಲಿ ಇನ್ನೂ ಆಟದಲ್ಲಿ ಕಠಿಣ ಪರಿಶ್ರಮ ವಹಿಸಿ, ಚಿನ್ನದ ಪದಕವನ್ನು ಗೆದ್ದೆ ಗೆಲ್ಲುತ್ತೇನೆ ಎಂಬ ದೃಢ ವಿಶ್ವಾಸವಿದೆ. ಒಲಂಪಿಕ್‌ನಲ್ಲಿ ಭಾರತೀಯ ಆಟಗಾರನಾಗಿ ಭಾಗವಹಿಸಿ ಚಿನ್ನದ ಪದಕವನ್ನು ಪಡೆಯಬೇಕು ಎಂಬುದು ನನ್ನ ಕನಸಾಗಿದೆ.

-ಸುಹಾಸ್, ಕಿಕ್ ಬಾಕ್ಸಿಂಗ್ ಆಟಗಾರ.



ಇತರೆ ಆಟಗಳಾದ ಫೈರಿಂಗ್ ಹಾಗೂ ಕಬ್ಬಡ್ಡಿಯಲ್ಲೂ ಆಸಕ್ತಿ ಹೊಂದಿದ್ದಾರೆ. ಕಿಕ್ ಬಾಕ್ಸಿಂಗ್ ತರಬೇತಿ ಶಾಲೆಯಲ್ಲಿ ಉತ್ತಮ ಆಟವಾಡುವ ಆಟಗಾರರನ್ನ ಆಯ್ಕೆ ಮಾಡಿ, ಇತರೆ ರಾಜ್ಯ ಹಾಗೂ ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಅವಕಾಶ ಕಲ್ಪಿಸಿಕೊಡುತ್ತಾರೆ.

ಆದರೆ ಈ ಆಟಕ್ಕೆ ಬೇಡಿಕೆ ಕಡಿಮೆ. ಈ ಆಟವನ್ನು ಯಾರೂ ಕೂಡ ಗುರುತಿಸುವುದಿಲ್ಲ ಹಾಗೂ ಬೆಲೆಯನ್ನೂ ಕೊಡುವುದಿಲ್ಲ. ಇದು ಸಾವು-ಬದುಕಿನ ನಡುವಿನ ಆಟವಾದ್ದರಿಂದ ಇದೊಂದು ಅಪಾಯಕಾರಿ ಕ್ರೀಡೆಯಾಗಿದೆ. ಆಟದ ಸಂದರ್ಭದಲ್ಲಿ ವಿನಾಗುತ್ತೋ ಗೊತ್ತಿಲ್ಲ. ಕಾಲು, ಕೈ ಮುರಿಯಬಹುದು ಅಥವಾ ಸಾವು ಕೂಡ ಸಂಭವಿಸುವ ಸನ್ನಿವೇಶ ವರ್ಷಡುತ್ತದೆ. ಭಯವನ್ನು ಬಿಟ್ಟು ಧೈರ್ಯದಿಂದ ಮುನ್ನಡೆದಾಗ ಯಶಸ್ಸು ಸಿಗುತ್ತದೆ. ಇಂದಿನ ಯುವಕರು ಕಿಕ್ ಬಾಕ್ಸಿಂಗ್ ಆಟದಲ್ಲಿ ಹೆಚ್ಚು ಭಾಗವಹಿಸಿ ಈ ಆಟಕ್ಕೂ ಮಹತ್ವ ಕೊಡಬೇಕಾಗಿದೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಸೋಮವಾರ 8.7.2019

ಕ್ರಿಕೆಟಿಗ ವೆಂಕಟೇಶ್‌ಗೆ ಎಂಆರ್‌ಎಫ್ ಪೇಸ್ ಫೌಂಡೇಷನ್‌ನಲ್ಲಿ ತರಬೇತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದ್ವಿತೀಯ ಬಿಕಾಂ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಕ್ರಿಕೆಟಿಗ ವೆಂಕಟೇಶ್ ಎಡಗೈ ವೇಗದ ಬೌಲರ್ ಆಗಿದ್ದು, ಪ್ರಸಕ್ತ ಚೆನೈನ ಎಂಆರ್‌ಎಫ್ ಪೇಸ್ ಫೌಂಡೇಷನ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಮುರಳೀಧರ್ ಮತ್ತು ದ್ರಾಕ್ಷಾಯಿಣಿ ಪುತ್ರರಾದ ವೆಂಕಟೇಶ್ ಸಂಗೀತದಲ್ಲಿ ತರಬೇತಿ ಪಡೆದಿದ್ದು, ತಮ್ಮ ತಂದೆಯು ಕ್ಲಬ್ ಕ್ರಿಕೆಟ್ ಆಡುತ್ತಿದ್ದನ್ನು ನೋಡಿ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ.

ಕರ್ನಾಟಕ ಮತ್ತು ಭಾರತದ ಪರ 19ರ ವಯೋಮಿತಿ ಒಳಗಿನ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಭಾಗವಹಿಸುವಾಗ ಎಂಆರ್‌ಎಫ್ ಪೇಸ್ ಫೌಂಡೇಷನ್‌ನ ಆಯ್ಕೆದಾರರ ಗಮನ ಸೆಳೆದಿದ್ದು, ರಾಜ್ಯದಿಂದ ಆಯ್ಕೆಯಾದ ಕೇವಲ ನಾಲ್ಕು ಆಟಗಾರರಲ್ಲಿ ವೆಂಕಟೇಶ್ ಕೂಡ ಒಬ್ಬರು. ಇವರು ಭಾರತದ ಪರವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಂದ್ಯಗಳನ್ನಾಡುವ ಕನಸು ಹೊಂದಿದ್ದಾರೆ.



ವೆಂಕಟೇಶ್ ಅವರನ್ನು ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ. ಎಚ್.ಎನ್. ಭಾಸ್ಕರ್ ಸನ್ಮಾನಿಸಿದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಜುಲೈ 7, 2019



ಚೆನ್ನೈನ ಎಂಆರ್‌ಎಫ್ ಪೇಸ್ ಫೌಂಡೇಷನ್‌ನಲ್ಲಿ ತರಬೇತಿಗೆ ಆಯ್ಕೆಯಾಗಿರುವ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ವಿದ್ಯಾರ್ಥಿ, ಯುವ ಕ್ರಿಕೆಟ್ ಆಟಗಾರ ವೆಂಕಟೇಶ್ ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು. ಮಹಾಜನ ವಿದ್ಯಾಸಂಸ್ಥೆ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಭಾಸ್ಕರ್ ಎಚ್.ಎನ್ ಇದ್ದಾರೆ

STAR OF MYSORE

Friday 12th July 2019

Budding cricketer from city

to be trained at MRF Pace Foundation



Mysuru, July 12- **M. Venkatesh,** a second year B.Com student at SBRR Mahajana First Grade College, Jayalakshmipuram, Mysuru, is a talented, upcoming cricketer. A fast paced left-hand bowler, he is currently training at MRF Pace Foundation at Chennai, a coaching centre training fast bowlers.

Hailing from family of classical singers, Venkatesh, born to couple Muralidhar and K.R. Dakshayani, is himself a trained classical singer too.

However, cricket turned out to be his call and Venkatesh fondly recollects growing up seeing his father play Club Cricket. Inspired by his father, he took up cricket.

While playing U-19 State and National-level, he caught the attention of the selectors of MRF Pace Foundation. He is currently nurtured and groomed at the Foundation by the Australian Cricketer Glenn McGrath and Myluahanan Senthilnathan.

Speaking about his experience at the Foundation, the talented cricketer says it is a strict regimentation of training of seven hours per day. A fitness regime of three hours per day followed by three hours of bowling experience is his daily routine. Venkatesh is one of the four players from Karnataka to train at the Foundation along with 25 other players. He fondly recollects the moral support from his grandmother late Vidu. G. Saroja. Inspired by the captaincy traits of the great all-rounder Saurav Ganguly, Venkatesh desires to don the India colours soon and be one of the men in blue colours.

Despite his training, Venkatesh is able to pursue the degree course. He is thankful to the management, College Principal Dr. S. Venkatramu and PE Director Dr. H.N. Bhaskar. Venkatesh was felicitated at the Weekly Assembly of the College recently.

ಆಂದೋಲನ
ದಿನ ಪತ್ರಿಕೆ
೮.೩, ೨೦೧೯

ಮಹಾಜನ ಕಾಲೇಜಿನಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಣೆ



ಮೈಸೂರಿನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್‌ಸಿಸಿ ಘಟಕದ ವತಿಯಿಂದ 'ಕಾರ್ಗಿಲ್ ವಿಜಯೋತ್ಸವ'ವನ್ನು ಆಚರಿಸಲಾಯಿತು. ಸಿಕ್ಕ್ಯೂ ಎಂ.ಎಸ್.ಸೌಮ್ಯ. ಎನ್‌ಸಿಸಿ ಕಚೇರಿ ಸುಬೇದಾರ್ ಮೇಜರ್ ಎಸ್.ಕೆ. ಸಿಂಗ್, ಸುಬೇದಾರ್ ಗುರುದೀಪ್ ಸಿಂಗ್, ಬಿಎಚ್ ಎನ್ ಕರಮ್ ಚಂದ್, ಬಿಎಚ್ ಎನ್ ಅರವಿಂದರ್ ಸಿಂಗ್, ಹವಲ್ದಾರ್ ಎಂ.ಡಿ.ಅಶೋಕ್, ಎನ್‌ಸಿಸಿ ಘಟಕದ ಅಧಿಕಾರಿಗಳಾದ ಕ್ಯಾಪ್ಟನ್ ಬಿ.ಆರ್.ನಿಖಿಲ್, ಲೆ.ಎಂ.ಆರ್. ಇಂದ್ರಾಣಿ, ಪುಷ್ಪರಾಣಿ ಚಿತ್ರದಲ್ಲಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಗುರುವಾರ • ಆಗಸ್ಟ್ 1, 2019



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಕಾರ್ಗಿಲ್ ವಿಜಯ ದಿವಸ'ದ 20ನೇ ವರ್ಷಾಚರಣೆ ನಡೆಯಿತು. ಮೈಸೂರಿನ ಎನ್‌ಸಿಸಿ ಕಚೇರಿಯ ಸುಬೇದಾರ್ ಮೇಜರ್ ಎಸ್.ಕೆ.ಸಿಂಗ್, ಸುಬೇದಾರ್ ಗುರುದೀಪ್‌ಸಿಂಗ್, ಕರಮ್‌ಚಂದ್, ಅರವಿಂದರ್ ಸಿಂಗ್, ಹವಲ್ದಾರ್ ಅಶೋಕ್ ಎಂ.ಡಿ., ಎನ್‌ಸಿಸಿ ಘಟಕದ ಅಧಿಕಾರಿ ಕ್ಯಾಪ್ಟನ್ ನಿಖಿಲ್ ಬಿ. ಆರ್, ಲೆ. ಇಂದ್ರಾಣಿ ಎಂ.ಆರ್., ಪ್ಲೈಯಿಂಗ್ ಆಫಿಸರ್ ಪುಷ್ಪರಾಣಿ ಪಾಲ್ಗೊಂಡಿದ್ದರು

ಆಂಜೋಲನ
ದಿನ ಪತ್ರಿಕೆ
ಆ. ೭. ೨೦೧೯

ಮಹಾಜನ ಕಾಲೇಜಿನಲ್ಲಿ ಕಾನೂನು ಅರಿವು ಕಾರ್ಯಕ್ರಮ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಸುರೇಶ್ ಲಕ್ಷ್ಮಣ್ ಕೃಷ್ಣಪ್ಪ ಒಂಟಿಗೋಡಿ, ಡಾ.ಬಿ.ಚಂದ್ರಶೇಖರ್, ವಕೀಲ ಚಂದ್ರಮೌಳಿ, ಪ್ರಾಂಶುಪಾಲರಾದ ಡಾ.ಎಸ್.ವೆಂಕಟರಾಮು, ಡಾ.ಎಸ್.ಆರ್.ರಮೇಶ್, ವಾಣಿ, ಡಾ.ಎ.ಜಿ. ಧರ್ಮೇಶ, ಕೇಶವಮೂರ್ತಿ, ಡಾ.ಎಚ್.ಆರ್.ತಿಮ್ಮೇಗೌಡ, ಬಿ.ಆರ್.ಜಯಕುಮಾರಿ, ರೇಷ್ಮಾ, ಮಂಜುಶ್ರೀ, ಕೆ.ರಾಘವೇಂದ್ರ ಮತ್ತಿತರರು ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 7.8.2019

ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನೆ ಕಾನೂನು ಅರಿವು ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಎಸ್.ಕೆ. ವಂಟಿಗೋಡಿ

ನಾಗರಿಕ ಸಮಾಜಕ್ಕೆ ಕಾನೂನು ಅರಿವು ಅವಶ್ಯ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಾನೂನನ್ನು ಧಿಕ್ಕರಿಸುವುದಕ್ಕೆ ಅನುಮತಿ ಇಲ್ಲ. ಎಲ್ಲರಿಗೂ ಕಾನೂನಿನ ಅರಿವು ಅತ್ಯಗತ್ಯ. ಕಾನೂನುಗಳ ಬಗ್ಗೆ ಜ್ಞಾನ ವಕೀಲರಿಗೆ ಮಾತ್ರ ಸೀಮಿತ ಎಂದು ತಿಳಿಯದೇ ಸಾಮಾನ್ಯ ಜನರೂ ಕೂಡ ಅದರ ಬಗ್ಗೆ ತಿಳುವಳಿಕೆ ಹೊಂದಿರಬೇಕು. ಮಾತು ಬಲ್ಲವನಿಗೆ ಜಗಳವಿಲ್ಲ ಎಂಬಂತೆ ಕಾನೂನು ಬಲ್ಲವನಿಗೆ ಜಗಳವಿಲ್ಲ ಎಂಬುದು ಪ್ರಸ್ತುತತೆಗೆ ಸೂಕ್ತವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಸ್.ಕೆ. ವಂಟಿಗೋಡಿ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕಾನೂನು ಮತ್ತು ಭಾರತದ ಸಂವಿಧಾನ ವಿಭಾಗ ಮತ್ತು ಐಕ್ಯೂಎಸಿ ಮಂಗಳವಾರ ಏರ್ಪಡಿಸಿದ್ದ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನೆ ಮತ್ತು ಕಾನೂನು ಅರಿವು ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಪ್ರತಿ ನಿತ್ಯದ ಜೀವನದಲ್ಲಿ ಜನರು ಕಾನೂನನ್ನು ಉಲ್ಲಂಘನೆ ಮಾಡುತ್ತಲೇ ಇರುತ್ತಾರೆ. ಇದಕ್ಕೆ ಕಾರಣ ಕಾನೂನಿನ ಅರಿವಿನ ಕೊರತೆ. ಸಂವಿಧಾನದ 39ಎ ಸಮಾನ ಕಾನೂನು ಹಾಗೂ ಉಚಿತ ಸಂವಿಧಾನದ ನೆರವು, ಸಂವಿಧಾನದ ಸೇವಾ ಕಾಯಿದೆ ಉದ್ದೇಶ ಎಲ್ಲರಿಗೂ ಸಂವಿಧಾನದ ಅರಿವು ಮೂಡಿಸುವುದು ಎಂದರು.



ಒಂದು ಲಕ್ಷಕ್ಕಿಂತ ಕಡಿಮೆ ವರಮಾನ ಹೊಂದಿರವುವರಿಗೆ ಕಾನೂನು ನೆರವಿಗೆ ಕಾನೂನು ಸೇವಾ ಸಮಿತಿ ಅಥವಾ ಕಾನೂನು ಸೇವಾ ಪ್ರಾಧಿಕಾರಗಳು ಉಚಿತವಾಗಿ ವಕೀಲರನ್ನು ನೇಮಿಸಿ, ಅದರ ವೆಚ್ಚವನ್ನು ಭರಿಸುವಲ್ಲಿ ನೆರವಾಗುತ್ತಿದೆ. ಲೋಕ್ ಅದಾಲತ್ ಮೂಲಕ ಹೆಚ್ಚಾಗಿರುವ ನ್ಯಾಯಾಲಯ ಪ್ರಕರಣಗಳನ್ನು ನ್ಯಾಯಾಲಯದ ಹೊರಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಿಗೆ ರಾಜೀ ಮಾಡಿಸುವ ಅಥವಾ ಒಪ್ಪಂದಗಳಿಗೆ ಮಾರ್ಗಸೂಚಿಗಳನ್ನು ನೀಡಿ ನ್ಯಾಯ ಒದಗಿಸಲಾಗುತ್ತಿದೆ ಎಂದು ಅವರು ಹೇಳಿದರು.

ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಬಿ. ಚಂದ್ರಶೇಖರ್ ಮಾತನಾಡಿ, ನೀರು, ಮಣ್ಣು, ಗಾಳಿ ಇವುಗಳ ಕುರಿತು ಕಾನೂನಿನ ಅರಿವು ಇರಬೇಕು. ಎನ್‌ಎಸ್‌ಎಸ್ ನಾಯಕತ್ವದ ಬೆಳವಣಿಗೆಗೆ ಸಹಾಯಕ ಎಂದರು.

ರಾಜ್ಯ ಬಾರ್ ಕೌನ್ಸಿಲ್ ಸದಸ್ಯ ಚಂದ್ರಮೌಳಿ ಮಾತನಾಡಿ, ತ್ರಿಬಲ್ ರೈಡ್ ಮಾಡುವಾಗ ರಸ್ತೆ ಅಪಘಾತವಾದರೆ ಯಾವುದೇ ರೀತಿಯ ಕಾನೂನಿನ ನೆರವು ಸಿಗುವುದಿಲ್ಲ. 18 ವರ್ಷದ ಒಳಗಿನನವರು ಮತ್ತು ಡಿಎಲ್, ಆರ್‌ಸಿ, ಇನ್ಸೂರೆನ್ಸ್ ಫಿಟ್‌ನೆಸ್ ಸರ್ಟಿಫಿಕೇಟ್ ಇಲ್ಲದಿದ್ದರೆ ಅಂತಹ ಸಂದರ್ಭದಲ್ಲೂ ಕಾನೂನಿನ ನೆರವು ಸಿಗುವುದಿಲ್ಲ ಎಂದು ಎಚ್ಚರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್. ಆರ್. ರಮೇಶ್, ಕಾನೂನು ಮತ್ತು ಭಾರತದ ಸಂವಿಧಾನ ವಿಭಾಗದ ಮುಖ್ಯಸ್ಥೆ ಸಿ. ವಾಣಿ, ಎನ್‌ಎಸ್‌ಎಸ್‌ಕಾರ್ಯಕ್ರಮಾಧಿಕಾರಿಗಳಾದ ಡಾ. ಎ.ಜಿ. ಧರ್ಮೇಶ, ಕೇಶವಮೂರ್ತಿ, ಡಾ. ಎಚ್.ಆರ್. ತಿಮ್ಮೇಗೌಡ, ಬಿ.ಆರ್. ಜಯಕುಮಾರಿ, ರೇಷ್ಮಾ, ಮಂಜುಶ್ರೀ, ಕೆ. ರಾಘವೇಂದ್ರ ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಆ.೬, ೨೦೧೯

■ **ಉದ್ಘಾಟನೆ ಮತ್ತು ಕಾನೂನು ಅರಿವು**

ಬೆಳಿಗ್ಗೆ 9.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ರಾಸೇಯೋ ಹಾಗೂ ಕಾನೂನು ಮತ್ತು ಸಂವಿಧಾನ ವಿಭಾಗ, ಉದ್ಘಾಟನೆ- ಜಿಲ್ಲಾ ನ್ಯಾಯಾಧೀಶರಾದ ಸುರೇಶ್ ಲಕ್ಷ್ಮಣ್ ಕೃಷ್ಣಪ್ಪ ಒಂಟಿಗೋಡಿ, ಮುಖ್ಯ ಅತಿಥಿಗಳು- ವಕೀಲ ಚಂದ್ರಮೌಳಿ, ಡಾ. ಬಿ. ಚಂದ್ರಶೇಖರ, ಉಪಸ್ಥಿತರು- ಡಾ.ಎಸ್.ವೆಂಕಟರಾಮು, ಡಾ.ಎಸ್.ಆರ್.ರಮೇಶ್, ಅಧ್ಯಕ್ಷತೆ- ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಸ್ಥಳ- ಕಾಲೇಜಿನ ಎವಿಸಿ-2, ಜಯಲಕ್ಷ್ಮೀಪುರಂ.

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 6 ಆಗಸ್ಟ್ 2019
6 AUGUST 2019

■ **ಕಾನೂನು ಅರಿವು:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ಎನ್ ಎಸ್‌ಎಸ್, ಕಾನೂನು, ಭಾರತದ ಸಂವಿಧಾನ ವಿಭಾಗ. ಉದ್ಘಾಟನೆ: ಸುರೇಶ್ ಲಕ್ಷ್ಮಣ್ ಒಂಟಿಗೋಡಿ. ಅತಿಥಿ: ಚಂದ್ರಮೌಳಿ, ಡಾ.ಬಿ.ಚಂದ್ರಶೇಖರ. ಅಧ್ಯಕ್ಷತೆ: ಡಾ. ವಿಜಯಲಕ್ಷ್ಮೀ ಮುರಳೀಧರ್. ಸ್ಥಳ: ಎವಿಸಿ-2 ಸಭಾಂಗಣ, ಕಾಲೇಜಿನ ಆವರಣ, ಜಯಲಕ್ಷ್ಮೀಪುರಂ. ಬೆ.9.30

STAR OF MYSORE

Monday 5th August 2019

Winners of NCC Best Cadet Awards

Mysuru, Aug.5- Senior Under Officer (SUO) K.A. Erappa, studying B.Sc at SBRR Mahajana First Grade College, Mysuru, bagged the Best NCC Cadet award for the Mysore Group.

This is the third consecutive year, the College NCC unit has won this coveted award. In the previous years, SUOs K.V. Karthik and Shantharaju were the Best Cadets.

SUO Erappa was awarded a cash prize of Rs.4,500; CQMS Sowmya has been awarded CWS Scholarship of Rs.6,000.



Seen in the picture are CQMS R. Soumya, Administrative Officer of 13th KAR BNC NCC Mysore Lt. Col. Jagadeesh G. Nayar, Capt. B.R. Nikil and SUO Erappa.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 1.8.2019

ಕೆ.ಎ. ಈರಪ್ಪ ಉತ್ತಮ ಕೆಡೆಟ್

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎಸ್ಸಿ ವಿದ್ಯಾರ್ಥಿ ಸಿನಿಯರ್ ಅಂಡರ್ ಆಫಿಸರ್ ಕೆ.ಎ. ಈರಪ್ಪ ಅವರು ಮೈಸೂರು ಗ್ರಾಪ್‌ನ ಎನ್‌ಸಿಸಿ ಘಟಕದ ಉತ್ತಮ ಕೆಡೆಟ್ ಎಂಬ ಪ್ರಸಂಶೆಗೆ ಪಾತ್ರರಾಗಿದ್ದಾರೆ.

ಇವರಿಗೆ ₹ 4500 ನಗದು ಬಹುಮಾನ ನೀಡಲಾಗಿದೆ. ಕಾಲೇಜಿನ ಎನ್‌ಸಿಸಿ ಘಟಕವು ಸತತ ಮೂರನೇ ವರ್ಷ ಈ ಪ್ರಶಸ್ತಿಗೆ ಭಾಜನವಾಗಿರುವುದು ವಿಶೇಷ. ಕಳೆದ ಎರಡು ವರ್ಷಗಳಲ್ಲಿ ಸಿನಿಯರ್ ಅಂಡರ್ ಆಫೀಸರ್ ಕೆ.ವಿ. ಕಾರ್ತಿಕ್ ಮತ್ತು ಶಾಂತರಾಜು ಅವರು ಈ ಪ್ರಶಸ್ತಿ ಗಳಿಸಿದರು. ವಿದ್ಯಾರ್ಥಿನಿ ಸಿಕ್ಯೂಎಮ್ ಎಸ್ ಆರ್. ಸೌಮ್ಯ ₹ 6000 ವಿದ್ಯಾರ್ಥಿ ವೇತನ ಪಡೆದಿದ್ದಾರೆ. ವಿಶೇಷ ವಾರದ ಸಮಾವೇಶದಲ್ಲಿ ಉತ್ತಮ ಎನ್‌ಸಿಸಿ ಕೆಡೆಟ್ ಈರಪ್ಪ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬಿಎಸ್ಸಿ ವಿದ್ಯಾರ್ಥಿ ಕೆ.ಎ. ಈರಪ್ಪ ಉತ್ತಮ ಕೆಡೆಟ್ ಆಗಿ ಆಯ್ಕೆಯಾಗಿದ್ದಾರೆ. ಸಿಕ್ಯೂಎಂಎಸ್ ಆರ್. ಸೌಮ್ಯ, 13ನೇ ಕೆಎಆರ್ ಬಿಎನ್‌ಸಿಎನ್‌ಸಿಸಿ ವಿಭಾಗದ ಆಡಳಿತಾಧಿಕಾರಿ ಕರ್ನಲ್ ನಾಯಕರ್, ಕ್ಯಾಪ್ಟನ್ ಬಿ. ಆರ್. ನಿಖಿಲ್ ಇದ್ದಾರೆ.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಕ್ಯಾಪ್ಟನ್ ಬಿ. ಆರ್. ನಿಖಿಲ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಗುರುವಾರ • ಆಗಸ್ಟ್ 1, 2019



ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ಬಿಎಸ್ಸಿ ವಿದ್ಯಾರ್ಥಿ ಸೀನಿಯರ್ ಅಂಡರ್ ಆಫೀಸರ್ ಕೆ.ಎ.ಈರಪ್ಪ (ಬಲತುದಿ) ಅವರು ಮೈಸೂರು ಗ್ರೂಪ್‌ನ ಎಸ್‌ಸಿಸಿ ಘಟಕದ ಉತ್ತಮ ಕೆಡೆಟ್ ಗೌರವ ಪಡೆದುಕೊಂಡರು. ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ಆರ್.ಸೌಮ್ಯಾ, ಎನ್‌ಸಿಸಿ ವಿಭಾಗದ ಆಡಳಿತಾಧಿಕಾರಿ ಲೆ. ಕರ್ನಲ್ ಜಗದೀಶ್ ನಾಯರ್, ಕ್ಯಾಪ್ಟನ್ ಬಿ.ಆರ್.ನಿಖಿಲ್ ಇದ್ದಾರೆ



ಆರೋಹಣ

ದಿನ ಪತ್ರಿಕೆ

ಶುಕ್ರವಾರ,ಆಗಸ್ಟ್ ೨೩, ೨೦೧೯

■ ಒಂದು ದಿನದ ಜಿಲ್ಲಾ ಮಟ್ಟದ ಕಾರ್ಯಾಗಾರ

ಬೆಳಿಗ್ಗೆ 10.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ರುಡ್‌ಸೆಟ್ ಸಂಸ್ಥೆ, ಉದ್ಘಾಟನೆ- ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಚಾಲಕ ಡಾ.ಬಿ.ಚಂದ್ರಶೇಖರ, ಉಪಸ್ಥಿತರು- ರುಡ್‌ಸೆಟ್ ಎನ್.ಜಿ.ಲಕ್ಷ್ಮಣ್ ರಾವ್, ವಿ.ರವೀಂದ್ರ, ಸ್ಥಳ- ಕಾಲೇಜಿನ ಎವಿಸಿ-2, ಜಯಲಕ್ಷ್ಮೀಪುರಂ.

ವಿಜಯ ಕರ್ನಾಟಕ

ಶುಕ್ರವಾರ, 23 ಆಗಸ್ಟ್ 2019

◢ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಸ್ವಯಂ ಉದ್ಯೋಗ ಮತ್ತು ಉದ್ಯಮಶೀಲತೆ ಕುರಿತು ಜಿಲ್ಲಾ ಮಟ್ಟದ ಕಾರ್ಯಾಗಾರ. ಉದ್ಘಾಟನೆ- ರಾ.ಸೇ. ಯೋಜನೆ ಕಾರ್ಯಕ್ರಮ ಸಂಯೋಜಕ ಡಾ.ಬಿ.ಚಂದ್ರಶೇಖರ, ಅಧ್ಯಕ್ಷತೆ- ಮಹಾಜನ ಎಜುಕೇಷನ್ ಸೊಸೈಟಿಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್. ಕಾಲೇಜಿನ ಸಭಾಂಗಣ, ಜಯಲಕ್ಷ್ಮೀಪುರಂ. ಬೆ.10.30.

STAR OF MYSORE

Tuesday 13th August 2019

'India has seen a significant rise in the tiger population'

Mysuru, Aug.13- "Globally, the population of the 'great cat' tiger including the sub-species is 3,890 in the wilderness. Of these, 2,967 are in India. US alone accounts for 5,000 tigers in captivity," said M. Mohan Kumar, Chief Naturalist, Kanha National Park, also Field Director, Tiger Adventure Foundation, Mysuru.

He spoke at a workshop on 'Conservation of Flora and Fauna' organised by the Department of Environmental Studies and IQAC (Internal Quality Assessment Cell) of SBRR Mahajana First Grade College, at its premises here recently.



M. Mohan Kumar, Chief Naturalist, Kanha National Park, also Field Director, Tiger Adventure Foundation, Mysuru, watering a sapling to mark the inauguration of workshop on 'Conservation of Flora and Fauna' at SBRR Mahajana First Grade College premises in city recently.

Speaking on the topic 'Tigers in Peril,' he said that India has seen a significant rise in the tiger population — 33 percent in the last four years. While the increase in number is good keeping in mind it is an endangered species, the swelling number could also spell disaster for them.

"Tigers are highly territorial; they fight for it. Lack of territorial space is a threat faced in the conservation. With an average lifespan of 14 year in wilderness, the male tiger lives in a territory of 30-40 sq.km, while the female tiger lives in an area 15-20 sq.km. They can live in all climate and weather conditions except the desert," said Mohan Kumar and added, "the threats to their existence is habitat loss, habitat fragmentation, poaching etc. Methods of conservation are protection management research, tourism, education and filming."

Dr. Shankar Bhat, Professor of Microbiology, University of Mysore (UoM), who spoke on the topic 'Plant Microbes and Environment,' said about the threats to plants by microbes and emphasised on the importance of field study to protect them.

Mahajana Education Society (MES) Hon. Secretary Dr. Vijayalakshmi Muralidhar, SBRR Mahajana First Grade College CEO and Academic Advisor Dr. S.R. Ramesh, Principal Dr. S. Venkataramu and HoD of Environmental Studies M.H. Sunitha were present on the occasion. Students of 1st year B.Com attended the programme.

ಆಂದೋಲನ
ದಿನಪತ್ರಿಕೆ
ಆ. ೮. ೨೦೧೯

ಸಮಸ್ಯೆಗಳಿಗೆ ಪರಿಹಾರ ಸಿಗುವಂಥ ಸಂಶೋಧನೆ ಆಗಲಿ

ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮೈವಿವಿ ಕುಲಸಚಿವ ಡಾ.ಕೆ.ಎಂ.ಮಹದೇವನ್ ಅಭಿಮತ

ಮೈಸೂರು,ಆ.7- ಸಂಶೋಧಕರು ಸಮಸ್ಯೆಯ ಆಯ್ಕೆ, ಸಂಬಂಧಿತ ಸಾಹಿತ್ಯಾವಲೋಕನ, ಸಮಸ್ಯೆಯ ವ್ಯಾಖ್ಯಾನ, ಸಂಶೋಧನೆಯ ವಿನ್ಯಾಸ ತಯಾರಿಕೆ, ದತ್ತಾಂಶ ಸಂಗ್ರಹಣ ಮತ್ತು ವಿಶ್ಲೇಷಣೆ ವಿಧಾನಗಳು ಸಂಶೋಧನೆಗೆ ಅವಶ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ಕೆ.ಎಂ.ಮಹದೇವನ್ ತಿಳಿಸಿದರು.

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಗ್ರಂಥಾಲಯ ಮತ್ತು ರಿಸರ್ಚ್ ಸೆಲ್ ಮತ್ತು ಐಕ್ಯೂಎಸಿ ವತಿಯಿಂದ ಏರ್ಪಡಿಸಿದ್ದ 'ಸಂಶೋಧನೆಯಲ್ಲಿ ಉದಯೋನ್ಮುಖ ಪ್ರವೃತ್ತಿಗಳು-2' ಎಂಬ ವಿಷಯ ಬಗ್ಗೆ ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಳೆಯದರಲ್ಲಿ ಹೊಸ ಹೊಸ ವಿಚಾರಗಳನ್ನು ಅನ್ವೇಷಣೆ ಮಾಡುವುದು, ತಮ್ಮ ಪ್ರಬಂಧದಲ್ಲಿ ಹೊಸತನ್ನು ನೀಡುವುದು ಮುಖ್ಯವಾಗಿರುತ್ತದೆ. ಲಭ್ಯವಿರುವ ಜ್ಞಾನವನ್ನು ಮಾನವ ಉಪಯುಕ್ತತೆಗಾಗಿ ಸದ್ಬಳಕೆ ಮಾಡುವುದೇ ಸಂಶೋಧನೆಯ ಸಿದ್ಧಾಂತ. ಸಂಶೋಧನೆಗಳು ಒಂದು ಕ್ಷೇತ್ರಕ್ಕೆ ಸೀಮಿತವಾಗಿರದೇ, ಸಮಸ್ಯೆಗಳಿಗೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಾಗಾರವನ್ನು ಕುಲಸಚಿವ ಡಾ.ಕೆ.ಎಂ.ಮಹದೇವನ್ ಉದ್ಘಾಟಿಸಿದರು. ಡಾ.ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್.ಆರ್.ರಮೇಶ್, ಡಾ.ಎಸ್.ವೆಂಕಟ ರಾಮು, ಡಾ.ಶ್ರೀಧರ, ಡಾ.ಎಂ.ವಿ.ಸುನಿಲ್ ಚಿತ್ರದಲ್ಲಿದ್ದಾರೆ.

ತಕ್ಷಣ ಪರಿಹಾರವನ್ನು ಕಂಡುಹಿಡಿಯುವ ಗುರಿಯನ್ನು ಹೊಂದಿರಬೇಕು ಎಂದರು.

ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಗ್ರಂಥಪಾಲಕ ಎಂ.ವೀಣಾ, ಸ್ಥಬ್ಧಚಿತ್ರಗಳ ಪ್ರದರ್ಶನದ ಆಯೋಜಕರಾದ ಡಾ.ಇಂದ್ರಾಣಿ, ಎಸ್‌ಡಿಎಂ-ಐಬಿಡಿಯ ಗ್ರಂಥಪಾಲಕ ಡಾ.ಎಂ.ವಿ.ಸುನಿಲ್, ಪ್ರೊ.ಎಂ. ಮಿನಾಜ್, ಮೈವಿವಿ ಆಡಳಿತ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಆನಂದ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 8.8.2019

ಹೊಸತನ ಮುಖ್ಯ ಕಾರ್ಯಾಗಾರದಲ್ಲಿ ಮೈವಿವಿ ಪರೀಕ್ಷಾಂಗ ಕುಲಸಚಿವ ಡಾ. ಕೆ.ಎಂ. ಮಹದೇವನ್ ಅಭಿಪ್ರಾಯ

ಸಂಶೋಧನೆಗೆ ಪಂಚಭೂತಗಳೇ ಅವಶ್ಯ

ಮೈಸೂರು: ಸಂಶೋಧಕರು ಸಮಸ್ಯೆಯ ಆಯ್ಕೆ,ಸಂಬಂಧಿತಸಾಹಿತ್ಯಾವಲೋಕನ, ಸಮಸ್ಯೆಯವ್ಯಾಖ್ಯಾನ,ಸಂಶೋಧನೆಯ ವಿನ್ಯಾಸ ತಯಾರಿಕೆ, ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆ ವಿಧಾನಗಳು ಸಂಶೋಧನೆಗೆಮುಖ್ಯವಾಗಿಅವಶ್ಯಕವಾಗಿರುತ್ತದೆ ಹಾಗೂ ಹಳೆಯದರಲ್ಲಿ ಹೊಸ ಹೊಸ ವಿಚಾರಗಳನ್ನು ಅನ್ವೇಷಣೆ ಮಾಡುವುದು, ತಮ್ಮ ಪ್ರಬಂಧದಲ್ಲಿ ಹೊಸತನ್ನು ನೀಡುವುದು ಮುಖ್ಯವಾಗುತ್ತದೆ ಎಂದು ಮೈವಿವಿ ಪರೀಕ್ಷಾಂಗ ಕುಲಸಚಿವ ಡಾ. ಕೆ.ಎಂ. ಮಹದೇವನ್ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ 'ಸಂಶೋಧನೆಯಲ್ಲಿ ಉದಯೋನ್ಮುಖ ಪ್ರವೃತ್ತಿಗಳು-2' ಎಂಬ ವಿಷಯದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸೃಷ್ಟಿಯಲ್ಲಿ ನಾವು ಧನಾತ್ಮಕ, ಋಣಾತ್ಮಕದಂತಹ ಕಣ್ಣಿಗೆ ಕಾಣದ



ಅಂಶಗಳನ್ನು ಕಾಣುತ್ತೇವೆ. ಇವು ಭೂಮಿಯಲ್ಲಿರುವ ಜೀವಿಗಳಿಗೆ ಬೇಕಾದಂತಹ ಶಕ್ತಿಯನ್ನು ನೀಡುವಲ್ಲಿ ಕಾರ್ಯೋನ್ಮುಖವಾಗಿವೆ. ಇವೇ ಪಂಚಭೂತಗಳಾದ ಗಾಳಿ, ನೀರು, ಬೆಳಕು, ಭೂಮಿ ಮತ್ತು ಆಕಾಶ ಇವುಗಳಲ್ಲಿ ಅಡಗಿರುವ ಅಗಾಧ ಶಕ್ತಿಯೇ ದೇವರು. ಕಣ್ಣಿಗೆ ಕಾಣದ್ದು ಬಹಳಷ್ಟಿದೆ. ಸಣ್ಣ ಸಣ್ಣ ಪರಮಾಣು ಕಣಗಳಿಂದ ಮಾನವ ಏನೆಲ್ಲಾ ಸಂಪಾದಿಸಬಲ್ಲ. ಹೊಸ ಅನ್ವೇಷಣೆಗಳ ಕಡೆಗೆ ಮುನ್ನುಗ್ಗುತ್ತಿದ್ದಾನೆ. ಆದರೂ ಮಾನವ ಸೃಷ್ಟಿಯ ಬಗ್ಗೆ ಹೆಚ್ಚು ಗಮನಹರಿಸುವುದು ಒಳ್ಳೆತು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಸಂಶೋಧನೆ ಎಂದರೆ ಹಳೆಯ ವಸ್ತುವನ್ನು ಹೊಸ ದೃಷ್ಟಿಯಲ್ಲಿ ನೋಡುವುದು, ಹೊಸತಾಗಿ ಅನ್ವೇಷಣೆ ಮಾಡುವುದು. ಸಂಶೋಧನೆಯಲ್ಲಿ ಹಳತನ್ನು ಬಿಟ್ಟು ಹೊಸತನ್ನು ನೋಡಲು ಸಾಧ್ಯವಿಲ್ಲ.ಸಂಶೋಧನೆಗೆಮುಖ್ಯವಾಗಿ ಸಂಶೋಧನಾ ಪ್ರಾಕಲ್ಪನೆ ಮುಖ್ಯವಾಗಿರುತ್ತದೆ. ಪ್ರಾಕಲ್ಪನೆಗೆ ಜ್ಞಾನದ ಪ್ರಭುತ್ವ, ವೈಯಕ್ತಿಕ ಅನುಭವ, ದತ್ತಾಂಶಮತ್ತು ದಾಖಲೆಗಳ ಪರಿಶೀಲನೆ, ಸಂಬಂಧಿತ ಅಧ್ಯಯನಗಳ ಅವಲೋಕನ ಮತ್ತು ಹಿಂದಿನ ಅಧ್ಯಯನಗಳ ಅವಲೋಕನಗಳು ಸಂಶೋಧನೆಯ ಮುಖ್ಯ ಅಂಗವಾಗುತ್ತದೆ ಎಂದು ತಿಳಿಸಿದರು.

ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎಚ್. ಶ್ರೀಧರ, ಗ್ರಂಥಪಾಲಕಿ ಎಂ. ವೀಣಾ, ಡಾ. ಇಂದ್ರಾಣಿ ಇದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 7.8.2019

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ಸಂಶೋಧನೆಯಲ್ಲಿ ಪ್ರಚಲಿತ ವಿದ್ಯಮಾನಗಳು ಕುರಿತ ಕಾರ್ಯಾಗಾರ, ಉದ್ಘಾಟನೆ- ಪ್ರೊ. ಜಿ. ಹೇಮಂತ್‌ಕುಮಾರ್, ಅಧ್ಯಕ್ಷತೆ- ಡಾ. ವಿಜಯಲಕ್ಷ್ಮೀ ಮುರಳೀಧರ್, ಎವಿಸಿ- 2 ಸಭಾಂಗಣ, ಬೆಳಗ್ಗೆ 10.30.

ವಿಜಯವಾಣಿ

ಕನ್ನಡಿಗರ ಧ್ವನಿ

ಬುಧವಾರ
7 ಆಗಸ್ಟ್ 2019
7 AUGUST 2019

■ **ಕಾರ್ಯಾಗಾರ:** ಎಸ್‌ಬಿಆರ್‌ಆರ್ ಮಹಾರಾಜ ಪ್ರಥಮ ದರ್ಜೆ ಕಾಲೇಜು. ಒಂದು ದಿನದ ಕಾರ್ಯಾಗಾರ. ಉದ್ಘಾಟನೆ: ಪ್ರೊ.ಜಿ.ಹೇಮಂತಕುಮಾರ್. ಅಧ್ಯಕ್ಷತೆ: ಡಾ.ವಿಜಯಲಕ್ಷ್ಮೀ, ಮುರಳೀಧರ್. ಸ್ಥಳ: ಎವಿಸಿ-2, ಕಾಲೇಜು ಆವರಣ, ಜಯಲಕ್ಷ್ಮೀಪುರಂ. ಬೆ.10



ಪ್ರಜಾವಾಣಿ
ಆತ್ಮದ ವಿಶ್ವಾಸದ ಕನ್ನಡ ದಿನಪತ್ರಿಕೆ
ಬುಧವಾರ • ಆಗಸ್ಟ್ 7, 2019

ಮಹಾಜನ ಎಜುಕೇಷನ್ ಸೊಸೈಟಿ: ಎಂಜಿನಿಯರಿಂಗ್ ಟ್ರೆಂಡ್ಸ್ ಇನ್ ರಿಸರ್ಚ್-2 ಕುರಿತು ಕಾರ್ಯಾಗಾರ.



ಉದ್ಘಾಟನೆ- ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್. ಅತಿಥಿ- ಮಹಾಜನ ಎಜುಕೇಷನ್ ಸೊಸೈಟಿ ಉಪಾಧ್ಯಕ್ಷ ಮುರಳೀಧರ್ ಭಗವತ್. ಅಧ್ಯಕ್ಷತೆ- ಸಂಸ್ಥೆ ಕಾರ್ಯದರ್ಶಿ ವಿಜಯಲಕ್ಷ್ಮಿ ಮುರಳೀಧರ್. ಸ್ಥಳ: ಎವಿಸಿ-2, ಸೊಸೈಟಿ ಆವರಣ, ಜಯಲಕ್ಷ್ಮಿಪುರಂ. ಬೆಳಿಗ್ಗೆ 10.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪತ್ರಿಕೆ
ಬುಧವಾರ, 7 ಆಗಸ್ಟ್ 2019

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: 'ಸಂಶೋಧನೆಯಲ್ಲಿ ಇತ್ತೀಚಿನ ಬೆಳವಣಿಗೆಗಳು' ಕುರಿತು ರಾಜ್ಯಮಟ್ಟದ ಕಾರ್ಯಾಗಾರ. ಉದ್ಘಾಟನೆ- ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಅಧ್ಯಕ್ಷತೆ- ಮಹಾಜನ ಎಜುಕೇಷನ್ ಸೊಸೈಟಿ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್. ಕಾಲೇಜಿನ ಸಭಾಂಗಣ, ಜಯಲಕ್ಷ್ಮಿಪುರಂ. ಬೆ.10.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 25.8.2019

ಕಾಲೇಜಲ್ಲಿ ಸದ್ಭಾವನಾ ದಿನಾಚರಣೆ



ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮ ದಿನದ ನಿಮಿತ್ತ ಸದ್ಭಾವನಾ ದಿನವನ್ನು ಆಚರಿಸಲಾಯಿತು. ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಜೊತೆಗೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಜನ್ಮ ದಿನವನ್ನು ಸಹ ಆಚರಿಸಲಾಯಿತು. ಕಾಲೇಜಿನ ಪ್ರಾಶುಪಾಲ ಡಾ.ಎಸ್. ವೆಂಕಟರಾಮು, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ. ಧರ್ಮೇಶ, ಕೇಶವಮೂರ್ತಿ ಮೊದಲಾದವರು ಇದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 22.8.2019



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂಸ್ಕೃತ ದಿನಾಚರಣೆಯಲ್ಲಿ ಸಂಸ್ಕೃತ ವಿದ್ವಾಂಸ ಡಾ.ಕೆ. ನಾರಾಯಣ ಭಟ್ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಹಲವರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಗುರುವಾರ, 22 ಆಗಸ್ಟ್ 2019

ಮಕ್ಕಳಿಗೆ ಸಂಸ್ಕೃತ ಜ್ಞಾನ ಅಗತ್ಯ

■ **ವಿಕ ಸುದ್ದಿಲೋಕ** ಮೈಸೂರು

ಅಂಕಗಳಿಕೆಗಾಗಿ ಸಂಸ್ಕೃತವನ್ನು ಅಧ್ಯಯನ ಮಾಡದೆ ಜ್ಞಾನ ಸಂಪಾದನೆ ದೃಷ್ಟಿಯಿಂದ ಅಧ್ಯಯನ ಮಾಡುವ ಅಗತ್ಯವಿದೆ ಎಂದು ಮೈಸೂರು ವಿವಿ ಸಂಸ್ಕೃತ ಅಧ್ಯಯನ ವಿಭಾಗ ಪ್ರಾಧ್ಯಾಪಕ ಡಾ.ಕೆ.ನಾರಾಯಣ ಭಟ್ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಸ್ಕೃತ ವಿಭಾಗವು 'ಸಂಸ್ಕೃತೋತ್ಸವ'ದ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿರಿಯರು ನೀಡಿದ ಬಹುದೊಡ್ಡ ಆಸ್ತಿಯಾದ ಸಂಸ್ಕೃತ ಸಾಹಿತ್ಯವನ್ನು ಮುಂದಿನ ಜನಾಂಗಕ್ಕೆ ಕೊಡುಗೆಯಾಗಿ ನೀಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಹಾಗಾಗಿ, ಸಂಸ್ಕೃತ ಭಾಷೆಯಲ್ಲಿರುವ ಸಾಹಿತ್ಯವನ್ನು ಓದಿ ಅರ್ಥಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಸಂಸ್ಕೃತೋತ್ಸವ'ದ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಕೆ.ನಾರಾಯಣ ಭಟ್, ಡಾ.ಎಸ್. ವೆಂಕಟರಾಮು, ಡಾ.ಶ್ರೀನಿವಾಸ್ ಇದ್ದರು.

ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು ಮಾತನಾಡಿದರು. ಉಪ ಪ್ರಾಂಶುಪಾಲರಾದ ಜಯಕುಮಾರಿ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ.ಶ್ರೀನಿವಾಸ್ ಇತರರು ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಬುಧವಾರ, ಆಗಸ್ಟ್ ೨೮, ೨೦೧೯

ಮಹಾಜನ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಸ್ಕೃತ ವಿಭಾಗದ ವತಿಯಿಂದ ನಡೆದ 'ಸಂಸ್ಕೃಕೋತ್ಸವ'ದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಕೆ.ನಾರಾಯಣ ಭಟ್ ವಿಶೇಷ ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್, ಉಪ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ ಮತ್ತಿತರರು ಚಿತ್ರದಲ್ಲಿದ್ದಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ
23.08.2019 ಶುಕ್ರವಾರ

ಸಂಸ್ಕೃತ ಅಧ್ಯಯನ ಕರ್ತವ್ಯವೆಂದು ಭಾವಿಸಿ

ಮೈಸೂರು: ಸಂಸ್ಕೃತ ಅಧ್ಯಯನ ಕೇವಲ ಉದ್ಯೋಗಕ್ಕೆ ಸೀಮಿತವಾಗದೆ ಕರ್ತವ್ಯ ಎಂದು ಭಾವಿಸಿ ಅಧ್ಯಯನ ನಡೆಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಕೆ.ನಾರಾಯಣ ಭಟ್ಟ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎವಿಸಿ-2 ಸಭಾಂಗಣದಲ್ಲಿ ಕಾಲೇಜಿನ ಸಂಸ್ಕೃತ ವಿಭಾಗದಿಂದ ಆಯೋಜಿಸಿದ್ದ ಸಂಸ್ಕೃತೋತ್ಸವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಕೇವಲ ಒಂದು ವರ್ಗಕ್ಕೆ ಮಾತ್ರ ಸಂಸ್ಕೃತ ಭಾಷೆ ಮೀಸಲಾಗಿದೆ ಎಂದು ಬಿಂಬಿಸಲಾಗುತ್ತಿದೆ. ಸಂಸ್ಕೃತವೆಂದರೆ ಪರಿಶುದ್ಧವಾದದ್ದು, ಸಂಸ್ಕೃತ ಒಂದು ವರ್ಗಕ್ಕೆ ಸೀಮಿತವಾಗಿಲ್ಲ ಹಾಗಾಗಿ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಸಂಸ್ಕೃತ ಅಧ್ಯಯನ ನಡೆಸುವುದನ್ನು ಬಿಟ್ಟು, ಕರ್ತವ್ಯವೆಂದು ಭಾವಿಸಿ ಅಧ್ಯಯನ ನಡೆಸಬೇಕು ಎಂದರು. ಭಾರತದಲ್ಲಿ 50ಕ್ಕೂ ಹೆಚ್ಚು ಸಂಸ್ಕೃತ ವಿಶ್ವವಿದ್ಯಾನಿಲಯಗಳಿವೆ. ಆಧುನೀಕತೆಯಿಂದ ಸಂಸ್ಕೃತ ನಶಿಸುತ್ತಿದೆ ಎಂದುಕೊಳ್ಳುತ್ತಿದ್ದೇವೆ. ಆದರೆ, ಯಾವುದೇ ಆಧುನೀಕತೆ ಇದ್ದರೂ ಕೂಡ ಒಂದು ಕಾಲಕ್ಕೆ ಸಂಸ್ಕೃತವೇ ಬೇಕಾಗುತ್ತದೆ. ಹಿಂದಿ ಭಾಷೆ ಏಕತೆಯ ಸಂಕೇತವಾದರೆ ಅದಕ್ಕಿಂತಲ್ಲೂ ದೊಡ್ಡ ಏಕತೆ ಸಾರುವುದೇ ಸಂಸ್ಕೃತ. ವೇದ ಘೋಷಗಳಲ್ಲಿ ಅಡಕವಾಗಿರುವ ಸಂಸ್ಕೃತ ಭಾರತೀಯ ಸಂಸ್ಕೃತಿ ಹೇಳುತ್ತದೆ. ಸಕಲರಿಗೂ ಒಳಿತನ್ನು, ಬೇಕಾದದ್ದನ್ನು ನಿಷಕಲ್ಮಶವಾಗಿ ವೇದಗಳಲ್ಲಿ ಹೇಳಲಾಗಿದೆ ಎಂದು ಶ್ಲಾಘೀಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಜಯಕುಮಾರಿ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 20.8.2019



ಡಾ. ಶ್ರೀಧರಗೆ ಶಿಕ್ಷಣ ರತ್ನ ಪ್ರಶಸ್ತಿ

ಮೈಸೂರು: ಬೆಂಗಳೂರಿನ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನವು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಯನ್ನು ಪರಿಗಣಿಸಿ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಅವರನ್ನು ಡಾ. ರಾಧಾಕೃಷ್ಣನ್ ಶಿಕ್ಷಣ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಆ.25 ರಂದು ಬೆಂಗಳೂರಿನ ಕನ್ನಡ ಭವನದಲ್ಲಿ ನಡೆಯುವ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಶ್ರೀಧರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ತಿಳಿಸಿದ್ದಾರೆ.

STAR OF MYSORE

Tuesday 20th August 2019

City Asst. Professor selected for Dr. Radhakrishnan Award

Mysuru, Aug. 20- Dr. H. Sreedhara, Head, Department of History, SBRR Mahajana First Grade College, Jayalakshmipuram, Mysuru, has been chosen for Dr. Radhakrishnan Award - 2019 to be presented by 'Athmashri Kannada Samskrutika Prathistana,' Bengaluru, for his service in the field of Higher Education and Research. The award will be presented to him on Aug. 25 at a function to be held in Kannada Bhavana, Bengaluru, according to a press release from College Principal Dr. S. Venkataramu.



Dr. H. Sreedhara

ಆಂದೋಲನ
ದಿನ ಪತ್ರಿಕೆ
೮.೨, ೨೦೧೯

ಮನುಷ್ಯನಿಗೆ ಸಹಜ ಬದುಕಿನ ಶಿಕ್ಷಣ ಅವಶ್ಯ

ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಉದ್ಘಾಟನೆ ಸಮಾರಂಭದಲ್ಲಿ ನಟ ಮಂಡ್ಯ ರಮೇಶ್ ಸಲಹೆ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಕಾರ್ಯಕ್ರಮವನ್ನು ರಂಗಕರ್ಮಿ ಮಂಡ್ಯ ರಮೇಶ್ ಉದ್ಘಾಟಿಸಿದರು. ಡಾ.ಎಸ್. ವಿದ್ಯಾಶಂಕರ್, ಡಾ.ವಿಜಯಲಕ್ಷ್ಮೀ ಮುರುಳೀಧರ್, ಡಾ.ಎಸ್.ಆರ್. ರಮೇಶ್, ಡಾ.ಎಸ್. ವೆಂಕಟರಾಮು, ಡಾ.ಲೆ. ಎಂ.ಆರ್. ಇಂದ್ರಾಣಿ, ಬಿ.ಆರ್. ಜಯಕುಮಾರಿ ಚಿತ್ರದಲ್ಲಿದ್ದಾರೆ.

ಮೈಸೂರು,೮.೨- ಮನುಷ್ಯನು ಸಮಾಜದಲ್ಲಿ ಸಹಜವಾಗಿ ಬದುಕಲು ಬೇಕಾಗಿರುವ ಶಿಕ್ಷಣವನ್ನು ಕಲಿಯಬೇಕಾಗಿದೆ ಎಂದು ಚಲನಚಿತ್ರ ನಟ ಹಾಗೂ ರಂಗಕರ್ಮಿ ಮಂಡ್ಯ ರಮೇಶ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಅಬ್ದುಲ್ ಕಲಾಂ ರಜತಮಹೋತ್ಸವಸಭಾಂಗಣದಲ್ಲಿಗುರುವಾರ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಪ್ರತಿಭಾವಂತರು ಮತ್ತು ಬುದ್ಧಿವಂತರಿಗೆ ನೆಮ್ಮದಿಯಿಂದ ಬದುಕುವ ವಿಧಾನ ತಿಳಿಯದೇ ಅನಾಹುತಗಳಿಗೆ ತುತ್ತಾಗುತ್ತಿದ್ದಾರೆ. ಈ ಒನ್ಸೆಲೆಯಲ್ಲಿ ಮಾನವೀಯತೆ ಸೆಲೆ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಬದುಕುವ ಶಿಕ್ಷಣ ಇಂದಿನ ಯುವಜನತೆಗೆ ಅವಶ್ಯಕ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್.ವಿದ್ಯಾಶಂಕರ್ ಮಾತನಾಡಿ, ಚಿನ್ನದ ಪದಕಕ್ಕಿಂತ, ಸಾಮಾನ್ಯ ಜ್ಞಾನ ದೊಡ್ಡದು. ನಿಮ್ಮ ಜ್ಞಾನಕ್ಕೆ ವ್ಯಾಪ್ತಿಯ ಕೊರತೆ ಇಲ್ಲ. ನಾನು ಏನಾಗಬೇಕೆಂದು ಕನಸು ಕಟ್ಟಿಕೊಂಡು, ನ್ಯೂನತೆಗಳನ್ನು ಸರಿಪಡಿಸಿಕೊಳ್ಳುತ್ತಾ ಉನ್ನತಿಯೆಡೆಗೆ ಮುಖ ಮಾಡಿರಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್ ಕಾರ್ಯಕ್ರಮದ ಆಧ್ಯಕ್ಷತೆ ವಹಿಸಿದ್ದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ.ಎಸ್.ವೆಂಕಟರಾಮು, ವಿದ್ಯಾರ್ಥಿ ಸಂಸತ್ ಸಂಚಾಲಕಿ ಡಾ.ಎಂ.ಆರ್.ಇಂದ್ರಾಣಿ, ಪ್ರತಿಭಾ ವೇದಿಕೆ ಸಂಚಾಲಕಿ ಬಿ.ಆರ್.ಜಯಕುಮಾರಿ ಉಪಸ್ಥಿತರಿದ್ದರು.

ಆಂದೋಲನ
ದಿನಪತ್ರಿಕೆ
ಆ.೧, ೨೦೧೯

ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಉದ್ಘಾಟನೆ ಸಮಾರಂಭ

ಬೆಳಿಗ್ಗೆ 11.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ವಿದ್ಯಾರ್ಥಿ ಸಂಸತ್ ಉದ್ಘಾಟನೆ- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎಸ್.ವಿದ್ಯಾಶಂಕರ್, ಪ್ರತಿಭಾ ವೇದಿಕೆ ಉದ್ಘಾಟನೆ- ರಂಗಕರ್ಮಿ ಮಂಡ್ಯ ರಮೇಶ್, ಉಪಸ್ಥಿತರು- ಮಹಾಜನ ವಿದ್ಯಾಸಂಸ್ಥೆ ಉಪಾಧ್ಯಕ್ಷ ಟಿ.ಮುರಳೀಧರ್ ಭಾಗವತ್, ಪೂಜಾ ಭಾಗವತ್ ಸ್ನಾತ ಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಮುಖ್ಯ ಕಾರ್ಯನಿರ್ವಹಣಾಧಿ ಕಾರಿ ಡಾ.ಎಸ್.ಆರ್.ರಮೇಶ್, ಅಧ್ಯಕ್ಷತೆ- ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಸ್ಥಳ- ಕಾಲೇಜಿನ ಡಾ.ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣ, ಜಯಲಕ್ಷ್ಮೀಪುರಂ.



MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ.26.2.2020

ಘನತೆ ಕಳೆದುಕೊಳ್ಳುತ್ತಿರುವ ಮಾತು

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ವಿಷಾದ | ವಿದ್ಯಾರ್ಥಿ ಸಂಸತ್ ಸಮಾರೋಪ



ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪದಲ್ಲಿ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ನಮ್ಮ ಸಮಾಜದಲ್ಲಿ ಮಾತು ಘನತೆಯನ್ನು ಕಳೆದುಕೊಂಡಿದೆ. ಇಂದಿನ ಯುವ ಸಮೂಹಕ್ಕೆ ಮಾತು ಮುಖ್ಯವಾಗುತ್ತದೆ. ಕೇಳಿಸಿಕೊಳ್ಳುವಂತಹ ಗುಣ ನಿಮ್ಮದಾಗಬೇಕು, ಕೇಳುವ ತಾಳ್ಮೆ ಇರಬೇಕು, ಇದು ಒಂದು ಕಲೆ. ಸಮಾಜವನ್ನು ಬೆಳೆಸುವ, ಪೋಷಿಸುವ ಕೆಲಸ ನಿಮ್ಮ ಕೈಯಲ್ಲೇ ಇದೆ. ಇಂದಿನ ಯುವ ಜನಾಂಗ ದೇಶದ ಪ್ರಗತಿಯ ಪ್ರತೀಕ ಎಂದು ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ (ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ) ದ ಸಮಾರೋಪ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪ್ರೀತಿ ಅವಶ್ಯಕತೆ ಇದೆ: ನಾಡಿನ ಭವಿಷ್ಯ ಬದಲಾಯಿಸಿ, ಉನ್ನತ ಮಟ್ಟಕ್ಕೆ ಕೊಂಡೊಯ್ಯವ ಜವಾಬ್ದಾರಿ ನಿಮ್ಮ ಮೇಲಿದೆ. ಇಂದಿನ ಸಮಾಜಕ್ಕೆ ಪ್ರೀತಿಯ ಅವಶ್ಯಕತೆಯಿದೆ. ಪ್ರೀತಿಯಿಂದ ಏನನ್ನಾದರೂ ಸಾಧಿಸಬಹುದು. ಪ್ರೀತಿ ಎಂಬುದು ನಿಮ್ಮ ಯುವ ಸಮೂಹದ ಲವ್ ಅಲ್ಲ, ಪ್ರೀತಿ, ಮಮತೆ, ಅಕ್ಕರೆ ಹೀಗೆ ನಾನಾ ವೈವಿಧ್ಯದಲ್ಲಿ ನಾವು ಸಮಾಜದಲ್ಲಿ ಬೆರೆತು, ಗೌರವದಿಂದ ಮುನ್ನಡೆಯಬೇಕು. ಹೆತ್ತ ತಂದೆತಾಯಿಯನ್ನು, ಬೆಳೆಸಿದ ಪೋಷಕರನ್ನು, ವ್ಯಕ್ತಿತ್ವ ರೂಪಿಸಿದ ಗುರುಗಳನ್ನು ಪ್ರೀತಿಸಬೇಕು ಎಂದರು.

ಇಂದು ನಾವು ಕನಸು ಕಾಣುವುದನ್ನೇ ಮರೆತಿದ್ದೇವೆ. ದೊಡ್ಡ, ದೊಡ್ಡ ಕನಸುಗಳನ್ನು ಕಾಣಬೇಕು. ಕನಸು ನನಸಾಗಲು ಸಾಧನೆ ಮುಖ್ಯವಾಗುತ್ತದೆ. ಅದಕ್ಕಾಗಿ ನಿಮ್ಮಲ್ಲಿ ಶಕ್ತಿ ಹಾಗೂ ಗುರಿ ಮುಖ್ಯವಾಗುತ್ತದೆ. ಗುರಿ ಕನಸಾಗಬಾರದು. ಖಚಿತವಾದಕನಸುಗುರಿಯಾಗುತ್ತದೆ. ಖಚಿತವಲ್ಲದಕನಸು ಬರೀ ಕನಸಾಗಿಯೇ ಉಳಿಯುತ್ತದೆ. ಬದುಕಿನಲ್ಲಿ ಹವ್ಯಾಸ, ಕೌಶಲ ಬೆಳೆಸಿಕೊಳ್ಳಿ. ಓದು ನಿರಂತರವಾಗಬೇಕು ಎಂದವರು ಹೇಳಿದರು.

ಯಶಸ್ಸುಗಳಿಸಲು ಬದುಕಿನಲ್ಲಿ ನಾಲ್ಕು ಕಂಬಗಳಾದ ಜ್ಞಾನ, ಕೌಶಲ, ಮನೋಭಾವ, ಆತ್ಮವಿಶ್ವಾಸ ಮತ್ತು ಕಲಿಕೆಯ ಅವಶ್ಯಕತೆ ಇದೆ ಎಂದರು.

ರಾಷ್ಟ್ರೀಯ ಯೋಜನೆಯ ಜಂಟಿ ನಿರ್ದೇಶಕ ಜಿ.ಎಸ್. ಜಯಸಿಂಹ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಇದು ಮಾದರಿಯಾಗಿದೆ ಎಂದರು. ವಿದ್ಯಾರ್ಥಿ ಸಂಸತ್ ಸಂಸದರಾದ ರವಿಶಂಕರ್ ಎಸ್ ಅವರು ಈ ವೇದಿಕೆಯ ಅಧ್ಯಕ್ಷತೆ ವಹಿಸಿರುವುದು, ಕಾಲೇಜು ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಪ್ರಾಮುಖ್ಯತೆ ಮತ್ತು ಪಠ್ಯೇತರ ಚಟು ವಟಿಕೆಯ ಮಹತ್ವ ಸೂಚಿಸುತ್ತದೆ ಎಂದು ಹೇಳಿದರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಅಂತಿಮ ಬಿ.ಎ. ವಿದ್ಯಾರ್ಥಿ ಎಸ್. ರವಿ ಶಂಕರ್, ಗೌ. ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ವಿದ್ಯಾರ್ಥಿ ಸಂಸತ್‌ನ ಸಂಚಾಲಕ ಡಾ.ಎಂ.ಆರ್. ಇಂದ್ರಾಣಿ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಶುಕ್ರವಾರ • ಆಗಸ್ಟ್ 2, 2019

ಮಹಾಜನ ಕಾಲೇಜು ವಿದ್ಯಾರ್ಥಿ ಸಂಸತ್ ಉದ್ಘಾಟನೆ

ನಾಯಕತ್ವ ಗುಣ ಬೆಳೆಸಿಕೊಳ್ಳಿ: ಸಲಹೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಂದು ಉತ್ತಮ ನಾಯಕತ್ವದ ಕೊರತೆಯಿದ್ದು, ವಿದ್ಯಾರ್ಥಿಗಳು ಕಾಲೇಜು ಹಂತದಲ್ಲೇ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಕೆಎಸ್‌ಒಯು ಕುಲಪತಿ ಡಾ.ಎಸ್. ವಿದ್ಯಾಶಂಕರ್ ಸಲಹೆ ನೀಡಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆಯು ವಿದ್ಯಾರ್ಥಿಗಳ ಸರ್ವತೋಮುಖ ಏಳಿಗೆಗೆ ಪೂರಕವಾಗಿದೆ. ಇಲ್ಲಿ ಲಭಿಸುವ ಅವಕಾಶಗಳನ್ನು ಬಳಸಿಕೊಂಡು ನಿಮ್ಮ ನಾಯಕತ್ವ ಗುಣ ಮತ್ತು ಪ್ರತಿಭೆಯನ್ನು ಅನಾವರಣಗೊಳಿಸಿ. ಸಮಾಜ ನನಗೇನು ಮಾಡಿದೆ ಎಂದು ಯೋಚಿಸದೆ, ಸಮಾಜಕ್ಕೆ ನಾನು ಏನು ಕೊಟ್ಟಿದ್ದೇನೆ ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ. ಸಮಾಜದ ಏಳಿಗೆಗಾಗಿ ಒಳಿತನ್ನು ಮಾಡಿ' ಎಂದು ಕಿವಿಮಾತು ಹೇಳಿದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸಂಸತ್‌ಮತ್ತು ಪ್ರತಿಭಾ ವೇದಿಕೆಯನ್ನು ಡಾ.ಎಸ್.ವಿದ್ಯಾಶಂಕರ್ ಉದ್ಘಾಟಿಸಿದರು. ಮಂಡ್ಯ ರಮೇಶ್, ಡಾ.ಎಸ್.ವೆಂಕಟರಾಮು, ಡಾ.ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್. ಆರ್.ರಮೇಶ್ ಇದ್ದರು

ಹೊರದೇಶದ ಸಂಸ್ಕೃತಿಗೆ ಆಕರ್ಷಿತರಾಗದೆ, ಅವರು ಅನ್ವೇಷಣೆ ಮಾಡಿರುವ ತಂತ್ರಜ್ಞಾನವನ್ನು ಕಲಿತು ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಜವಾಬ್ದಾರಿ ಇಂದಿನ ವಿದ್ಯಾರ್ಥಿ ಸಮೂಹದ ಮೇಲಿದೆ. ಸಮಾಜದ ಎಲ್ಲಾ ವಿಭಾಗಗಳಲ್ಲೂ ಇಂದು ಸ್ಪರ್ಧೆ ಏರ್ಪಟ್ಟಿದೆ. ನಾವು ಬರೀ ಪದವಿ ಗಳಿಸಿದರೆ ಸಾಲದು, ನಮ್ಮಲ್ಲಿ ಹುದುಗಿ ರುವ ಕೌಶಲ ಹೊರಹಾಕಬೇಕು ಎಂದರು.

ಚಲನಚಿತ್ರ ನಟ ಮಂಡ್ಯ ರಮೇಶ್ ಮಾತನಾಡಿ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮಾನವೀಯ ಮೌಲ್ಯಗಳು ಅಡಕವಾಗಿರಬೇಕು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಎಸ್. ವೆಂಕಟರಾಮು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕನ್ನಡ ವಿಭಾಗದಿಂದ 'ಸ್ಫೂರ್ತಿ' ಮಾಸಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ವಿದ್ಯಾರ್ಥಿ ಸಂಸತ್ ಸಂಚಾಲಕರಾದ ಡಾ.ಲೆ.ಇಂದ್ರಾಣಿ ಎಂ.ಆರ್., ಪ್ರತಿಭಾ ವೇದಿಕೆಯ ಸಂಚಾಲಕರಾದ ಆರ್.ಜಯಕುಮಾರಿ ಇದ್ದರು.

ಮುಖ್ಯಾಂಶಗಳು

- ಸಮಾಜದ ಏಳಿಗೆಗಾಗಿ ಒಳಿತನ್ನು ಮಾಡಿ
- ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಜವಾಬ್ದಾರಿ ನಿರ್ವಹಿಸಿ
- 'ಸ್ಫೂರ್ತಿ' ಮಾಸಪತ್ರಿಕೆ ಬಿಡುಗಡೆ

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಶುಕ್ರವಾರ, 2 ಆಗಸ್ಟ್ 2019

ವಿದ್ಯಾರ್ಥಿಗಳಲ್ಲಿ ನಾಯಕತ್ವದ ಕೊರತೆ

■ ವಿಕ ಸುದ್ದಿಲೋಕ ಮೈಸೂರು

ಇಂದು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಕೊರತೆ ಇದೆ. ಹಾಗಾಗಿ ಪ್ರತಿಯೊಬ್ಬರು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕುಲಪತಿ ಡಾ. ಎಸ್. ವಿದ್ಯಾಶಂಕರ್ ಸಲಹೆ ನೀಡಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟಿಸಿ ಅವರು ಮಾತನಾಡಿದರು.

''ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆಯು ವಿದ್ಯಾರ್ಥಿಗಳ ಸರ್ವತೋಮುಖ ಏಳಿಗೆಗೆ ಪೂರಕ ವಾಗಿದೆ. ಇಲ್ಲಿ ನಿಮ್ಮ ನಾಯಕತ್ವ ಗುಣ ಮತ್ತು ಪ್ರತಿಭೆಗಳನ್ನು ಅನಾವರಣ ಗೊಳಿಸಿ, ಕಾಲೇಜಿನ ಜೀವನವನ್ನು ಸದುಪಯೋಗಪಡಿಸಿಕೊಳ್ಳಿ. ಸಮಾಜ ನನಗೇನು ಕೊಟ್ಟಿದೆ ಎಂದು ಯೋಚಿಸದೆ, ಸಮಾಜಕ್ಕೆ ನಾನು ಏನು ಕೊಟ್ಟಿದ್ದೀನಿ ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ, ಸಮಾಜಕ್ಕೆ ಒಳಿತನ್ನು ಮಾಡಿ. ಇಂದಿನ ಜಾಗತೀಕರಣ ಯುಗ ದಲ್ಲಿ ನಮ್ಮ ದೇಶ ಬಹಳಷ್ಟು ಮುಂದು ವರಿದಿದೆ. ಎಲ್ಲವೂ ಗಣಕೀಕರಣವಾಗಿದೆ.



ನಗರದ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಉದ್ಘಾಟಿಸಿದರು.

ನೀವು ಯಾವ ವಿಷಯದಲ್ಲಿ ಓದುತ್ತಿದ್ದೀರಿ ಎಂಬುದು ಮುಖ್ಯವಲ್ಲ. ನಿಮ್ಮ ಕೌಶಲ್ಯಾಧರಿತ ಜ್ಞಾನ ಎಷ್ಟಿದೆ ಎಂಬು ದನ್ನು ಅರಿತು, ಸಮಾಜಕ್ಕೆ ಏನಾದರೂ ಕೊಡುಗೆಗಳನ್ನು ನೀಡಿ,'' ಎಂದು ಕಿವಿಮಾತು ಹೇಳಿದರು.

ಹೊರದೇಶದ ಸಂಸ್ಕೃತಿಗೆ ಆರ್ಕಷಿತ ರಾಗದೆ, ಅವರು ಅನ್ವೇಷಣೆಗೈದ ತಂತ್ರಜ್ಞಾನವನ್ನು ಕಲಿತು, ಅಳವಡಿಸಿ ಕೊಂಡು, ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಜವಾಬ್ದಾರಿ ಇಂದಿನ ಯುವ ವಿದ್ಯಾರ್ಥಿ ಸಮೂಹದ ಮೇಲಿದೆ. ಇಂದು ಸಮಾಜದ ಎಲ್ಲಾ ಭಾಗದಲ್ಲೂ ಸ್ಪರ್ಧೆ ಏರ್ಪಟ್ಟಿದೆ. ನಾವು ಬರೀ ಓದಿ, ಪದವಿಯನ್ನು ಗಳಿಸಿದರೆ ಸಾಲದು, ನಮ್ಮಲ್ಲಿ ಒಳಗೆ ಹುದುಗಿರುವ ಕೌಶಲ್ಯ, ಪ್ರತಿಭೆಯನ್ನು ಹೊರಹಾಕಿ, ಯಾವುದಾದರೊಂದು ಭಾಗದಲ್ಲಿ ಮುಂದುವರಿಯಬೇಕಾಗುತ್ತದೆ. ಪ್ರತಿ ಯೊಬ್ಬ ವಿದ್ಯಾರ್ಥಿಯು ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಳ್ಳಿ, ನಿಮ್ಮಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ ಕೊಳ್ಳಿ, ಛಲದಿಂದ ಮುನ್ನುಗ್ಗಿ. ಒಳ್ಳೆಯ ಕನಸುಗಳನ್ನು ಕಾಣಿರಿ, ಕನಸನ್ನು ನನ ಸಾಗಿಸಲು ಮುನ್ನಡೆಯಿರಿ, ಸಮಾಜ ದಲ್ಲಿನ ಗುರುತರ ಜವಾಬ್ದಾರಿಯನ್ನು ಅರಿತು, ಮುಂದೆ ಬನ್ನಿ,'' ಎಂದು ಹೇಳಿದರು.

ನಟು, ರಂಗಕರ್ಮಿ ಮಂಡ್ಯ ರಮೇಶ್ ಮಾತನಾಡಿ, ನಮ್ಮ ಯುವ ಸಮೂಹ ಅವಕಾಶಕ್ಕಾಗಿ ಕಾಯುತ್ತಿರು ತ್ತಾರೆ. ಇದು ಸರಿಯಲ್ಲ, ಸಿಕ್ಕ ಅವಕಾಶ ಗಳನ್ನು ಉಪಯೋಗಿಸಿಕೊಂಡು ಮುಂದುವರಿಯಬೇಕು. ದೇವರು ನಮಗೆ ಕೆಲವು ಅವಕಾಶಗಳನ್ನು ಕೊಡು ತ್ತಾನೆ. ಅದನ್ನು ಗುರುತಿಸಿ, ಸದುಪ ಯೋಗಪಡಿಸಿಕೊಂಡು ಮುನ್ನಡೆದರೆ ನಮ್ಮ ಏಳಿಗೆಯ ಜೊತೆಗೆ ಸಮಾಜಕ್ಕೂ ಒಳಿತಾಗುತ್ತದೆ. ಸಮಾಜದಲ್ಲಿ ಸಹಬಾಳ್ವೆ ಮುಖ್ಯ. ಕನ್ನಡವನ್ನು ಉಳಿಸಿ, ಬೆಳೆಸಿ,'' ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಎಸ್. ವೆಂಕಟರಾಮು ಅವರು ಪ್ರಾಸ್ತಾವಿಕವಾಗಿ ಮಾತನಾಡಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ವಿಭಾಗದಿಂದ 'ಸ್ಫೂರ್ತಿ' ಮಾಸಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್. ಆರ್. ರಮೇಶ್, ವಿದ್ಯಾರ್ಥಿ ಸಂಸತ್ ಸಂಚಾಲಕರಾದ ಡಾ. ಲೆ. ಇಂದ್ರಾಣಿ ಎಂ.ಆರ್. ಮತ್ತು ಪತ್ರಿಭಾ ವೇದಿಕೆಯ ಸಂಚಾಲಕರಾದ ಜಯಕುಮಾರಿ ಆರ್. ಉಪಸ್ಥಿತರಿದ್ದರು.

MFGE In the Eyes of the Press.....

ಪ್ರಜಾವಾಣಿ



ಆತ್ಮಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಆಗಸ್ಟ್ 1, 2019

ಎಸ್.ಬಿ.ಆರ್.ಆರ್ ಮಹಾಜನ ಪ್ರಥಮದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಉದ್ಘಾಟನೆ– ಎಸ್.ವಿದ್ಯಾಶಂಕರ್, ಮಂಡ್ಯ ರಮೇಶ್. ಅಧ್ಯಕ್ಷತೆ– ವಿಜಯಲಕ್ಷ್ಮಿ ಮುರಳೀಧರ್. ಸ್ಥಳ: ಕಾಲೇಜಿನ ಡಾ.ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣ. ಬೆಳಿಗ್ಗೆ 11.30.

DECCAN HERALD

WWW.DECCANHERALD.COM

Thursday, August 1, 2019

SBRR Mahajana First Grade College: Students Parliament, inauguration of talent forum, KSOU VC S Vidyashankar to inaugurate, college premises, 11.30 am.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 1 ಆಗಸ್ಟ್ 2019

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನೆ ಸಮಾರಂಭ, ವಿದ್ಯಾರ್ಥಿ ಸಂಸತ್ ಉದ್ಘಾಟನೆ: ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎಸ್. ವಿದ್ಯಾಶಂಕರ್, ಪ್ರತಿಭಾ ವೇದಿಕೆ ಉದ್ಘಾಟನೆ : ನಟ ಮಂಡ್ಯ ರಮೇಶ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ : ಡಾ. ಅಬುಲ್ ಕಲಾಂ ರಜತ ಮಹೋತ್ಸವ ಸಭಾಂಗಣ, ಕಾಲೇಜು ಆವರಣ, ಬೆಳಿಗ್ಗೆ 11.30ಕ್ಕೆ.

ವಿಜಯ ಕರ್ನಾಟಕ

ಗುರುವಾರ, 1 ಆಗಸ್ಟ್ 2019

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಉದ್ಘಾಟನೆ ಕಾರ್ಯಕ್ರಮ. ಉದ್ಘಾಟನೆ- ಮುಕ್ತ ವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್, ಪ್ರತಿಭಾ ವೇದಿಕೆ ಉದ್ಘಾಟನೆ- ರಂಗಕರ್ಮಿ ಮಂಡ್ಯ ರಮೇಶ್, ಅಧ್ಯಕ್ಷತೆ- ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್. ಕಾಲೇಜಿನ ಡಾ.ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮೀ ಪುರಂ. ಬೆ.11.30.

ವಿಜಯವಾಣಿ

ಕನ್ನಡಿಗರ ಧ್ವನಿ

ಗುರುವಾರ 1 ಆಗಸ್ಟ್ 2019
1 AUGUST 2019

■**ವಿದ್ಯಾರ್ಥಿ ಸಂಸತ್:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ಅತಿಥಿಗಳು: ಡಾ.ಎಸ್. ವಿದ್ಯಾಶಂಕರ್, ಮಂಡ್ಯ ರಮೇಶ್. ಸ್ಥಳ: ಕಾಲೇಜು ಸಭಾಂಗಣ, ಜಯಲಕ್ಷ್ಮೀಪುರಂ, ಬೆ.11.30



ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 21.8.2019



ಮೈಸೂರಿನ ಮಹಾಜನ ಪ್ರಥಮ ದರ್ದೆ ಕಾಲೇಜು ಸ್ವಚ್ಛ ಭಾರತ ಘಟಕದ ವಿದ್ಯಾರ್ಥಿಗಳು ಪಡುವಾರಹಳ್ಳಿಯ ವಿವಿಧ ಬೀದಿಗಳಲ್ಲಿ ಸ್ವಚ್ಛತಾ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಸ್ವಚ್ಛ ಘಟಕದ ಸಂಚಾಲಕ ಎ.ಆರ್. ನಂದೀಶ ಸೇರಿದಂತೆ ಈ ಸಂದರ್ಭದಲ್ಲಿ ಹಲವರು ಉಪಸ್ಥಿತರಿದ್ದು, ಸಾರ್ವಜನಿಕರಲ್ಲಿ ನಾಗರಿಕರಲ್ಲಿ ಸ್ವಚ್ಛತೆಯ ಕುರಿತಾಗಿ ಹೆಚ್ಚಿನ ವಿಷಯ ಹಂಚಿಕೊಂಡರು.

DECCAN HERALD
WWW.DECCANHERALD.COM

Sunday
August 25, 2019



Police personnel demonstrate on road traffic safety at SBRR Mahajana First Grade College in Mysuru, recently.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಭಾನುವಾರ 25.8.2019

ಗಾಯಾಳನ್ನು ಆಸ್ಪತ್ರೆಗೆ ದಾಖಲಿಸಿ

ಮೈಸೂರು: ಅಪಘಾತ ಉಂಟಾದ ಸ್ಥಳದಲ್ಲಿ ವಿಡಿಯೋ ಅಥವಾ ಫೋಟೋ ತೆಗೆದು ವಾಟ್ಸ್ ಅಫ್ ಮಾಡುವ ಬದಲು, ಗಾಯಗೊಂಡವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಬೇಕು. ಇದರಿಂದ ಒಂದು ಜೀವ ಉಳಿಸಿದ ಪುಣ್ಯ ನಿಮಗೆ ದೊರೆಯುತ್ತದೆ ಎಂದು ವಿವಿ ಪುರಂ ಸಂಚಾರ ಠಾಣೆಯ ಇನ್ ಸ್ಪೆಕ್ಟರ್ ಬಿ.ಜಿ. ಪ್ರಕಾಶ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ರಸ್ತೆ ಸಂಚಾರ ನಿಯಮ ಪಾಲನೆ ಕುರಿತು ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹರೀಶ್ ಸಾಂತ್ವನ ಯೋಜನೆಯ ಮೂಲಕ ಅಪಘಾತ ಉಂಟಾದ ವ್ಯಕ್ತಿಯನ್ನು ತಕ್ಷಣವೇ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸುವುದರಿಂದ ಆಸ್ಪತ್ರೆ ದಾಖಲಿಸಿದ ವ್ಯಕ್ತಿಯು ಯಾವುದೇ ಹಣವನ್ನು ಕಟ್ಟುವಂತಿಲ್ಲ



ಎಂದರು. ಇದೇ ವೇಳೆ ವಿವಿ ಪುರಂ ಸಂಚಾರ ಠಾಣೆಯ ಪೊಲೀಸರು ಪ್ರಾತ್ಯಕ್ಷಿಕೆ ಮೂಲಕ ಸಂಚಾರ ನಿಯಮಗಳ ಉಲ್ಲಂಘನೆಯಿಂದ ಉಂಟಾಗುವ ಅಪಘಾತ, ಪ್ರಾಣಹಾನಿ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ಪೆಂಕಟರಾಮು, ಸಹಾಯಕ ಪ್ರಾಧ್ಯಾಪಕರಾದ ಜಯಕುಮಾರಿ, ಡಾ.ಎ.ಜಿ. ಧರ್ಮೇಶ, ರುದ್ರೇಶ್, ಕೇಶವಮೂರ್ತಿ, ಕೆ. ರಾಘವೇಂದ್ರ, ಮಧುಸೂಧನ್ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಸೋಮವಾರ 26 ಆಗಸ್ಟ್ 2019

ರಸ್ತೆ ಸಂಚಾರ ನಿಯಮ, ಪಾಲನೆ ಕುರಿತು ಪ್ರಾತ್ಯಕ್ಷಿಕೆ



ಮೈಸೂರು,ಆ.25–ಎಸ್.ಬಿ.ಆರ್. ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಜಯಲಕ್ಷ್ಮೀಪುರಂ, ಮೈಸೂರು ರಾಷ್ಟ್ರೀಯ ಸೇವಾ ಯೋಜನೆ ಮತ್ತು ಸಂಚಾರ ನಿಯಮ ವತಿಯಿಂದ ಕಾಲೇಜಿನ ಆವರಣದಲ್ಲಿ ರಸ್ತೆ ಸಂಚಾರ ನಿಯಮ ಮತ್ತು ಪಾಲನೆಯನ್ನು ಕುರಿತು ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಯಿತು.

ವಿಜಯನಗರ ಸಂಚಾರಿ ಪೊಲೀಸ್ ಠಾಣೆ, ಮೈಸೂರು ವತಿಯಿಂದ ಈ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಅವರು ವಿದ್ಯಾರ್ಥಿಗಳಿಗೆ ರಸ್ತೆ ಸಂಚಾರ ಉಲ್ಲಂಘನೆಯಿಂದ ಉಂಟಾಗುವ ಅಪಘಾತಗಳ ಬಗ್ಗೆ ಅರಿವು ಮೂಡಿಸುತ್ತಾ, ಹರೀಶ್ ಸಾಂತ್ವನ ಯೋಜನೆಯ ಮೂಲಕ ಅಪಘಾತ ಉಂಟಾದ ವ್ಯಕ್ತಿಯನ್ನು ತಕ್ಷಣವೇ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸುವುದು. ಇದರಿಂದ ಆಸ್ಪತ್ರೆ ದಾಖಲಿಸಿದ ವ್ಯಕ್ತಿಯು ಯಾವುದೇ ಹಣವನ್ನು ಕಟ್ಟುವಂತಿಲ್ಲ. ಅಪಘಾತ ಉಂಟಾದ ಸ್ಥಳದಲ್ಲಿ ವಿಡಿಯೋ ಅಥವಾ ಚಿತ್ರಗಳನ್ನು ಚಿತ್ರಿಸಿ ವಾಟ್ಸ್ ಅಪ್ ಮಾಡುವ ಬದಲು ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಬೇಕು. ಇದರಿಂದ ಒಂದು ಜೀವ ಉಳಿಸಿದ ಪುಣ್ಯ ನಿಮಗೆ ದೊರೆಯುತ್ತದೆ ಎಂದು ಮನವರಿಕೆ ಮಾಡಿಕೊಟ್ಟರು. ಕೆಲವು ಘಟನೆಗಳನ್ನು ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿ, ಮುನ್ನೆಚ್ಚರಿಕೆ ವಹಿಸುವಂತೆ ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ವೆಂಕಟರಾಮು, ಶ್ರೀಮತಿ ಜಯಕುಮಾರಿ, ಕನ್ನಡ ಪ್ರಾಧ್ಯಾಪಕರು, ರಾ. ಸೇ.ಯೋ. ಕಾರ್ಯಕ್ರಮಾಧಿಕಾರಿಗಳಾದ ಡಾ.ಧರ್ಮೇಶ ಎ.ಜಿ., ಶ್ರೀ ರುದ್ರೇಶ್ ವೈ ಆರ್, ಶ್ರೀ ಕೇಶವಮೂರ್ತಿ, ಶ್ರೀ ಕೆ.ರಾಘವೇಂದ್ರ, ಶ್ರೀ ಮಧುಸೂಧನ್ ಮತ್ತು ರಾ.ಸೇ.ಯೋ. ಸ್ವಯಂಸೇವಕರು, ಕಾಲೇಜಿನ ವಿವಿಧ ವಿಭಾಗಗಳ ಅಧ್ಯಾಪಕರು/ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಆಗಸ್ಟ್ 25, 2019



ಎಸ್.ಬಿ.ಆರ್.ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ (ಸ್ವಾಯತ್ತ) ರಾಷ್ಟ್ರೀಯ ಸೇವಾ ಯೋಜನೆ ಮತ್ತು ಸಂಚಾರ ನಿಯಮ ವತಿಯಿಂದ ಶನಿವಾರ ರಸ್ತೆ ಸಂಚಾರ ನಿಯಮ ಮತ್ತು ಪಾಲನೆ ಕುರಿತು ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿತ್ತು. ವಿ.ವಿ.ಪುರಂ ಸಂಚಾರ ಪೊಲೀಸರು ವಿದ್ಯಾರ್ಥಿಗಳಿಗೆ ಸಂಚಾರ ನಿಯಮಗಳನ್ನು ವಿವರಿಸಿದರು

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಬುಧವಾರ 21 ಆಗಸ್ಟ್ 2019

ಅಭಿನಂದನೆಗಳು

ಮೈಸೂರಿನ ಯುವಕನಿಗೆ ಚೆನೈನಲ್ಲಿ ಗೌರವ ಡಾಕ್ಟರೇಟ್ ಪದವಿ



ಇಂಟರ್‌ನ್ಯಾಷನಲ್ ವರಿಚುಯಲ್ ಪೀಸ್ ಯೂನಿವರ್ಸಿಟಿ ವತಿಯಿಂದ ಕ್ರೀಡಾ ಕ್ಷೇತ್ರದ ಸಾಧನೆಗಾಗಿ ಮೈಸೂರಿನ ಮಹಾಜನ ಕಾಲೇಜಿನ ವಿದ್ಯಾರ್ಥಿಯಾದ ಎಂ. ವಿನಯ್ ರವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಚೆನೈನ ಮೂಸ್ಯಿಕ್ ಅಕಾಡೆಮಿಯಲ್ಲಿ ದಿನಾಂಕ 18-08-2019 ರಂದು ಪ್ರದಾನ ಮಾಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಕೆ. ವೆಂಕಟೇಶನ್ ನಿವೃತ್ತ ನ್ಯಾಯಾಧೀಶರು ತಮಿಳುನಾಡು, ಎಸ್. ಗಣಪತಿ ಐಪಿಎಸ್ ಪೊಲೀಸ್ ಮಹಾನಿರ್ದೇಶಕರು ತಮಿಳುನಾಡು, ಡಾ. ಟಿ.ಆರ್. ಭಾಸ್ಕರನ್, ಮ್ಯಾನ್ಯುಯಲ್, ನಿವೃತ್ತ ಐಎಎಸ್ ಅಧಿಕಾರಿ, ಅಶೋಕ್ ಕುಮಾರ್ ಮುಂತಾದವರು ಭಾಗವಹಿಸಿದ್ದರು.

STAR OF MYSORE

Friday 20th September 2019

Dasara Film workshop draws huge reponse from students





Film Director P. Sheshadri addressing participants at Vijnana Bhavan, Manasagangothri in city this morning.

Mysuru, Sept. 20 (MTY&VNS)- With the number of youngsters foraying into the glitzy and glamour world on the rise over past few years, the demand for quality technicians like story and screenplay writers is increasing every year. The Dasara Film Festival Sub Committee to provide an opportunity for the budding technicians is conducting a three-day workshop under the guidance of renowned film director and national award winner P. Sheshadri.

The workshop is being attended by over 200 students from various colleges across the State. Interestingly, about 60 students from Department of Studies in Kannada, Davanagere University and 10 students from Dharwad University are taking part in workshop. Also, students from various colleges in the city like Christ, JSS, Maharaja's, Yuvaraja's, Mahajana, Maharani's, Post Graduate Centre, Manasagangothri, Government First Grade Colleges have also showed keen interest in the art of film making.

The three-day workshop was inaugurated by District Minister V. Somanna at Vijnana Bhavan in Manasagangothri, here this morning. Earlier, to the inaugural speech, Workshop Director P. Sheshadri, in his introductory address, said that Karnataka, though producing more number of movies compared to other States in the country, was lagging behind in producing quality cinemas.

"Workshops like these, before creating technicians, will help in creating quality audience which in turn will force people from the industry to produce good quality movies," he added.

Sheshadri also suggested that Dasara Film Festival must be organised at the international level inviting artistes from across the world to Mysuru.

Later, in his address, District Minister V. Somanna said that if he continued to be the District Minister till next Dasara, the suggestion of organising Mysuru Dasara International Film Festival would be considered positively and he would work towards organising the same.

Stating that, everyone possessed one or the other talent within them, Somanna said that platforms like these would help identifying such talents and to encourage them.

Speaking to *Star of Mysore*, Dasara Film Festival Sub Committee Deputy Special Officer B.N. Girish said that the committee had received a over whelming response from the students across the State.

"With three national award winning technicians like P. Sheshadri, B. Suresh and B.S. Lingadevaru conducting the workshops, it was certain that the hall would be flooded with young and aspiring film makers," he added.

Kavya, a Kannada literature student, from Davanagere University, said that opportunities like these would help students like them to explore different fields other than teaching and other professions.

Mayor Pushpalatha Jagannath, MLC K.T. Srikantegowda, ZP President Parimala Shyam, Film Director B.S. Lingadevaru, Dasara Film Festival Sub Committee President Jaya Prakash, Working President B.G. Govindaraju, Secretary R. Raju, Assistant Prof. Govindaraju, Dr. S.G. Raghavendra were present .

ಆಂದೋಲನ
ದಿನ ಪತ್ರಿಕೆ
ಮಂಗಳವಾರ, ಸೆಪ್ಟೆಂಬರ್ ೨೪, ೨೦೧೯

ಹಿಂದಿ ದಿವಸ್ ಕಾರ್ಯಕ್ರಮ ಉದ್ಘಾಟನೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಹಿಂದಿ ದಿವಸ್ ಕಾರ್ಯಕ್ರಮವನ್ನು ನಿವೃತ್ತ ಹಿಂದಿ ಪ್ರಾಧ್ಯಾಪಕಿ ಡಾ.ನಿರ್ಮಲಾ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಹಿಂದಿ ವಿಭಾಗದ ಪ್ರಾಧ್ಯಾಪಕ ಪರಮೇಶ್ವರ್ ಹೆಗಡೆ, ರೇಷ್ಮಾ ಚಿತ್ರದಲ್ಲಿದ್ದಾರೆ.

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಶುಕ್ರವಾರ 20.9.2019

ಮಹಾಜನ ಕಾಲೇಜಿನಲ್ಲಿ ಹಿಂದಿ ದಿನಾಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿಂದಿ ದಿನಾಚರಣೆ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಮಹಾರಾಣಿ ವಿಜ್ಞಾನ ಕಾಲೇಜಿನ ನಿವೃತ್ತ ಹಿಂದಿ ಪ್ರಾಧ್ಯಾಪಕಿ ಡಾ. ನಿರ್ಮಲಾ ಮಾತನಾಡಿ, ಪ್ರೀತಿಗೆ ಕೇವಲ ಕಿರಣ ಬೇಕು, ಹಿಂದಿ ಬೆಳೆಸಲು ವಿದ್ಯಾಸಂಸ್ಥೆಗಳು ಬೇಕು. ವಿದೇಶದಲ್ಲಿ ಹಿಂದಿ ಭಾಷೆಯನ್ನು ಮೊದಲ ಬಾರಿಗೆ ಪರಿಚಯಿಸಿದವರು ಸ್ವಾಮಿ ವಿವೇಕಾನಂದರು. 18 ಸಂವಿಧಾನಿಕ ಭಾಷೆಗಳಿಗೆ ನೀಡುವ ಏಕರೀತಿಯ ಗೌರವವನ್ನು ಹಿಂದಿ ಭಾಷೆಗೂ ನೀಡಬೇಕು ಎಂದರು.

ವಿದ್ಯಾರ್ಥಿಗಳಿಗೆ ಜೀವನದಲ್ಲಿ ಸಮಯದ ಪ್ರಾಮುಖ್ಯತೆ ತಿಳಿದುಕೊಳ್ಳಬೇಕು. ಯಾವಾಗಲೂ ಆಶಾಭಾವನೆ ಹೊಂದಿರಬೇಕು, ಆಗ ಎಂತಹ ಸಾಧನೆಯನ್ನಾದರು ಮಾಡಬಹುದು ಎಂದು ಅವರು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟ ರಾಮು, ಹಿಂದಿ ವಿಭಾಗದ ಪ್ರಾಧ್ಯಾ ಪಕರಾದ ಪರಮೇಶ್ವರ ಹೆಗಡೆ, ರೇಷ್ಮಾ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಶನಿವಾರ 7 ಸೆಪ್ಟೆಂಬರ್ 2019

ಕಾನೂನುಗಳಿದ್ದರೂ ಕಡಿಮೆಯಾಗದ ಪರಿಸರ ನಾಶ

ಮೈಸೂರು, ಸೆ.6(ಆರ್‌ಕೆಬಿ)– ಪರಿಸರವನ್ನು ಸಂರಕ್ಷಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶೇಷ ಕಾನೂನುಗಳನ್ನು ರೂಪಿಸಿದ್ದರೂ ಪರಿಸರ ನಾಶ ಕಡಿಮೆಯಾಗುತ್ತಲೇ ಇಲ್ಲ ಎಂದು ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಸ್.ಕೆ.ವಂಟಿಗೋಡಿ ಇಂದಿಲ್ಲಿ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಜಯಲಕ್ಷ್ಮಿಪುರಂನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ವಿವಿ ಎನ್‌ಎಸ್‌ಎಸ್, ಮಹಾಜನ ಕಾಲೇಜು ಎನ್‌ಎಸ್‌ಎಸ್ ಪರಿಸರ ವಿಜ್ಞಾನ ವಿಭಾಗಗಳ ಜಂಟಿ ಆಶ್ರಯದಲ್ಲಿ ಮೈಸೂರಿನ ಜಯಲಕ್ಷ್ಮಿಪುರಂ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ 'ಪರಿಸರ ಸಂರಕ್ಷಣೆ ಕಾನೂನು ಮತ್ತು ಗ್ರಾಹಕರ ಸಂರಕ್ಷಣೆ ಕಾನೂನು ಕುರಿತ ಒಂದು ದಿನದ ಜಿಲ್ಲಾ ಮಟ್ಟದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮನುಷ್ಯನ ಸ್ವಾರ್ಥದಿಂದಾಗಿ ಇತ್ತೀಚೆಗೆ ಪ್ರಕೃತಿ ವಿಕೋಪಗಳು ಹೆಚ್ಚಾಗುತ್ತಿವೆ. ಪ್ರಕೃತಿದತ್ತವಾಗಿ ಬಂದಿರುವ ನೈಸರ್ಗಿಕ ಸಂಪತ್ತು ನಾಶಪಡಿಸಲಾಗುತ್ತಿದೆ. ಕಳೆದ ವರ್ಷ ಮತ್ತು ಇತ್ತೀಚೆಗೆ ಕರ್ನಾಟಕ, ಕೇರಳ, ಮಹಾರಾಷ್ಟ್ರ, ಅಸ್ಸಾಂ ರಾಜ್ಯಗಳು ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಲಕ್ಷಾಂತರ ಮಂದಿ ಸಂತ್ರಸ್ತರಾಗಿದ್ದನ್ನು ಗಮನಿಸುವುದು ಬಹು ಮುಖ್ಯವಾಗಿದೆ ಎಂದು ಹೇಳಿದರು.

ಬೆಟ್ಟಗುಡ್ಡಗಳನ್ನು ಉರುಳಿಸಿ ಸಮತಟ್ಟು ಮಾಡಿ, ಕೆರೆ ಹೊಂಡಾಗಳನ್ನು ಮುಚ್ಚಿ ಅದರ ಮೇಲೆ ಬಹು ಎತ್ತರದ ಬೃಹತ್ ಕಟ್ಟಡಗಳನ್ನು ನಿರ್ಮಿಸುತ್ತಿದ್ದೇವೆ. ಹೀಗಾಗಿ ಮಳೆಗಾಲದಲ್ಲಿ ಬಿದ್ದ ಧಾರಾಕಾರ ಮಳೆಯ ನೀರು ಸರಾಗವಾಗಿ ಹರಿಯಲಾಗದೆ ಅನಾಹುತಕ್ಕೆ ದಾರಿ ಮಾಡಿಕೊಳ್ಳುತ್ತಿದ್ದೇವೆ. ಪ್ರಕೃತಿದತ್ತ ಬಳುವಳಿಯಾದ ಪ್ರಕೃತಿ ಸಂಪತ್ತನ್ನು ಹೀಗೆ ನಾಶಗೊಳಿಸುತ್ತಾ ಹೋದರೆ ಭವಿಷ್ಯದಲ್ಲಿ ಆಪತ್ತು ಕಟ್ಟಿಟ್ಟ ಬುತ್ತಿ. ಆದ್ದರಿಂದ ಇಂದಿನಿಂದಲೇ ಈಗ ಲಭ್ಯವಿರುವ ಪ್ರಕೃತಿ ಸಂಪತ್ತನ್ನು ಉಳಿಸಿಕೊಳ್ಳಲು ಎಲ್ಲರೂ ಮುಂದಾಗಬೇಕಾದ ಅನಿವಾರ್ಯತೆ ಇದೆ ಎಂದು ಎಚ್ಚರಿಕೆ ನೀಡಿದರು.

ಗ್ರಾಹಕರು ಯಾವುದೇ ಪದಾರ್ಥ ಖರೀದಿಸಿದಾಗ ಅಂಗಡಿಯಿಂದ ಮರೆಯದೇ ರಸೀತಿ ಪಡೆದುಕೊಳ್ಳಬೇಕು. ಇದು ಗ್ರಾಹಕರ ಹಕ್ಕಾಗಿದೆ. ಖರೀದಿಸಿದ ಪದಾರ್ಥಗಳ ಗುಣಮಟ್ಟ ಸಮರ್ಪಕವಾಗಿ ಇಲ್ಲದಿದ್ದಲ್ಲಿ ಅಂಗಡಿ ಮಾಲೀಕರ ವಿರುದ್ಧ ಮೊಕದ್ದಮೆ ಹೂಡಲು ಅವಕಾಶ ವಿರುವುದರಿಂದ ಪ್ರತಿಯೊಬ್ಬರೂ ತಾವು ಏನೇ ಪದಾರ್ಥ ಖರೀದಿಸಿದ ಕೂಡಲೇ ರಶೀತಿ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ದೇವಮಾನೆ, ಮೈಸೂರು ಐಕ್ಯೂ ಪ್ಲಸ್ ಅಕಾಡೆಮಿ ಅಧ್ಯಕ್ಷ ಶ್ರೀಕಾಂತ ಭಟ್, ಕಾಲೇಜು ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾಲೇಜು ಸಿಇಓ ಡಾ.ಎಸ್.ಆರ್.ರಮೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಸ್.ಕೆ.ವಂಟಿಗೋಡಿ ಆತಂಕ



ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ವಿವಿ ಎನ್‌ಎಸ್‌ಎಸ್, ಮಹಾಜನ ಕಾಲೇಜು ಪರಿಸರ ವಿಜ್ಞಾನ ವಿಭಾಗ ಜಂಟಿ ಆಶ್ರಯದಲ್ಲಿ ನಡೆದ ಪರಿಸರ ಸಂರಕ್ಷಣೆ ಕಾನೂನು ಮತ್ತು ಗ್ರಾಹಕರ ಸಂರಕ್ಷಣೆ ಕಾನೂನು ಕುರಿತ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಸ್.ಕೆ.ವಂಟಿಗೋಡಿ ಉದ್ಘಾಟಿಸಿದರು. ಬಿ.ಪಿ.ದೇವಮಾನೆ, ಶ್ರೀಕಾಂತ ಭಟ್, ಡಾ.ಎಸ್.ವೆಂಕಟರಾಮು, ಡಾ.ಎಸ್.ಆರ್.ರಮೇಶ್ ಅವರನ್ನು ಕಾಣಬಹುದು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಶುಕ್ರವಾರ 6 ಸೆಪ್ಟೆಂಬರ್ 2019

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಎನ್ವಿರಾನ್‌ಮೆಂಟ್ ಪ್ರೊಟೆಕ್ಷನ್ ಲಾ ಅಂಡ್ ಕನ್ಸೂಮರ್ ಪ್ರೊಟೆಕ್ಷನ್ ಆಕ್ಟ್ ಕುರಿತು ಕಾರ್ಯಾಗಾರ, ಉದ್ಘಾಟನೆ: ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಕೆ. ಒಂಟಿಗೋಡಿ, ಅಧ್ಯಕ್ಷತೆ : ಮಹಾಜನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಎವಿಸಿ–2 ಸಭಾಂಗಣ, ಬೆಳಿಗ್ಗೆ 9.30ಕ್ಕೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 11.9.2019

ಪ್ಲಾಸ್ಟಿಕ್ ಬಳಕೆಯಿಂದ ಭೂಮಿಯ ಫಲವತ್ತತೆ ನಾಶ

• ಕನ್ನಡಪ್ರಭ ವಾರ್ತೆ ಮೈಸೂರು

ವಿದ್ಯಾರ್ಥಿ ಜೀವನದಲ್ಲೆ ಪರಿಸರದ ಕಾನೂನುಗಳ ಬಗ್ಗೆ ತಿಳಿದುಕೋಳ್ಳಲು ಸೂಕ್ತ ಸಮಯ ಎಂದು ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಸುರೇಶ್ ಲಕ್ಷಣ್ ಕೃಷ್ಣಪ್ಪ ವಂಟಿಗೋಡಿ ಅಭಿಪ್ರಾಯಪಟ್ಟರು.

ವಿಶ್ವವಿದ್ಯಾನಿಲಯದ 50ನೇ ವರ್ಷದ ರಾಷ್ಟ್ರೀಯಾ ಸೇವಾ ಯೋಜನೆ ಆಚರಣೆ ಅಂಗವಾಗಿ ನಿಮಿತ್ತ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು(ಸ್ವಾಯತ್ತ) ರಾಷ್ಟೀವಾ ಯೋಜನೆ ಘಟಕಗಳು, ಕಾನೂನು ಮತ್ತು ಪರಿಸರ ಜಾಗ ಭಾಗಗಳ ವತಿಯಿಂದ ಮತ್ತು ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯಾ ಸೇವಾ ಯೋಜನೆ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಆಶ್ರಯದಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಒಂದು ದಿನದ ಪರಿಸರ ಸಂರಕ್ಷಣೆ ಕಾನೂನು ಮತ್ತು ಗ್ರಾಹಕರ



ಕಾರ್ಯಾಗಾರವನ್ನು ಜಿಲ್ಲಾ ನ್ಯಾಯಾಧೀಶ ಸುರೇಶ್ ಲಕ್ಷಣ್ ಕೃಷ್ಣಪ್ಪ ವಂಟಿಗೋಡಿ ಉದ್ಘಾಟಿಸಿದರು.

ರಕ್ಷಣಾ ಕಾಯಿದೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೇರಳ, ಕೊಡಗು, ಚಿಕ್ಕಮಗಳೂರು ಮುಂತಾದ ಸ್ಥಳಗಳಲ್ಲಿ ಉಂಟಾಗುತ್ತಿರುವ ಪ್ರಕೃತಿ ಕೋಪದಿಂದ ಮನೆ, ಜಮೀನು ನಾಶವಾಗಿರುವುದರ ಬಗ್ಗೆ ತಿಳಿಸಿದ ಅವರು, ಬೆಟ್ಟ ಗುಡ್ಡಗಳ ನಾಶ, ಕೆರೆ, ಹೊಂಡ, ಸರೋವರಗಳ ನಾಶ ಮಾಡಿ ಬಡಾವಣೆಗಳನ್ನು ಸ್ಥಾಪಿಸುತ್ತಿರುವುದರಿಂದ ಇಳಿಜಾರಿನ ಪ್ರದೇಶದಲ್ಲಿ ಇಂತಹ ನೆರೆ ಕೋಪಕ್ಕೆ ಕಾರಣವಾಗಿದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಬಿ. ಪಿ. ದೇವಮಾನೆ, ಇಸ್ರೋದ ನಿವೃತ್ತ ವಿಜ್ಞಾನಿ ಜಗನ್ನಾಥ್, ವಕೀಲ ಪಣಚೇತನ್, ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಭಾನುಮೋಹನ್ ಮಾತನಾಡಿದರು.

ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾಲೇಜಿನ ಸಿಇಒ ಡಾ.ಎಸ್.ಆರ್.ರಮೇಶ್, ಉಪ ಪ್ರಾಂಶುಪಾಲೆ ಜಯಕುಮಾರಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಎ.ಜಿ. ಧರ್ಮೇಶ್, ಕೇಶವಮೂರ್ತಿ, ವಿವಿಧ ವಿಭಾಗಗಳ ಮುಖ್ಯಸ್ಥರಾದ ವಾಣಿ, ಸುನಿತಾ, ರೇಷ್ಮಾ, ಕೆ. ರಾಘವೇಂದ್ರ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ವಿಜಯ ಕರ್ನಾಟಕ

ಶುಕ್ರವಾರ, 6 ಸೆಪ್ಟೆಂಬರ್ 2019

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಪರಿಸರ ಸಂರಕ್ಷಣೆ ಕಾನೂನು ಮತ್ತು ಗ್ರಾಹಕ ರಕ್ಷಣೆ ಕಾಯಿದೆ ಕುರಿತ ಜಿಲ್ಲಾ ಮಟ್ಟದ ಕಾರ್ಯಾಗಾರ, ಉದ್ಘಾಟನೆ- ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎಸ್.ಕೆ. ವಂಟಿಗೋಡಿ, ಅಧ್ಯಕ್ಷತೆ- ಡಾ. ವಿಜಯಲಕ್ಷ್ಮಿ ಮುರಳೀಧರ್,ಕಾಲೇಜು ಸಭಾಂಗಣ ಬೆಳಗ್ಗೆ 9.30 ಕ್ಕೆ.

ಪ್ರಜಾವಾಣಿ

ಶುಕ್ರವಾರ • ಸೆಪ್ಟೆಂಬರ್ 6, 2019

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಪರಿಸರ ಸಂರಕ್ಷಣೆ ಕಾಯ್ದೆ ಮತ್ತು ಗ್ರಾಹಕ ಸಂರಕ್ಷಣೆ ಕಾಯ್ದೆ ಕುರಿತು ಜಿಲ್ಲಾಮಟ್ಟದ ಕಾರ್ಯಾಗಾರ. ಉದ್ಘಾಟನೆ- ಎಸ್.ಕೆ.ವಂಟಿಗೋಡಿ. ಅಧ್ಯಕ್ಷತೆ- ಡಾ.ವಿಜಯಲಕ್ಷ್ಮಿ ಮುರಳೀಧರ್. ಸ್ಥಳ: ಕಾಲೇಜಿನ ಸಭಾಂಗಣ. ಬೆಳಿಗ್ಗೆ 9.30

ಆಂದೋಲನ

ದಿನ ಪತ್ರಿಕೆ

ಶುಕ್ರವಾರ, ಸೆಪ್ಟೆಂಬರ್ ೬, ೨೦೧೯

■ **ಜಿಲ್ಲಾ ಮಟ್ಟದ ಕಾರ್ಯಾಗಾರ**

ಬೆಳಿಗ್ಗೆ 9.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿಷಯ- ಪರಿಸರ ಸಂರಕ್ಷಣಾ ಕಾನೂನು ಮತ್ತು ಗ್ರಾಹಕರ ರಕ್ಷಣಾ ಕಾಯ್ದೆ, ಉದ್ಘಾಟನೆ- ಜಿಲ್ಲಾ ನ್ಯಾಯಾಧೀಶ ಎಸ್. ಕೆ.ಒಂಟಿಗೋಡಿ, ಉಪಸ್ಥಿತರು- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ.ಬಿ.ಪಿ.ದೇವಮಾನೆ, ಡಾ.ಬಿ.ಚಂದ್ರಶೇಖರ್, ಶ್ರೀಕಾಂತ್ ಭಟ್, ಅಧ್ಯಕ್ಷತೆ- ಮಹಾಜನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ- ಕಾಲೇಜಿನ ಎವಿಸಿ-2, ಜಯಲಕ್ಷ್ಮೀಪುರಂ.

ವಿಶ್ವವಾಣಿ
ವಿಶ್ವಾಸವೇ ವಿಶ್ವ
06.09.2019 ಶುಕ್ರವಾರ

ಸಿನಿಮಾದಿಂದ ಸಮಾಜ ಒಡೆಯುವ ಕೆಲಸ

ವಿಶ್ವವಾಣಿ ಸುದ್ದಿಮನೆ ಮೈಸೂರು

ನಾಟಕಗಳು ಸಮಾಜವನ್ನು ಮತ್ತು ಸಂಬಂಧಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದರೆ, ಇಂದಿನ ಸಿನಿಮಾಗಳು ಅವುಗಳನ್ನು ಒಡೆಯುವ ಕೆಲಸ ಮಾಡುತ್ತಿವೆ ಎಂದು ಹಿರಿಯ ರಂಗಕರ್ಮಿ ಪಿ.ಗಂಗಾಧರಸ್ವಾಮಿ ವಿಷಾದ ವ್ಯಕ್ತಪಡಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡದವರಿಂದ ರಂಗ ಸವ್ಯಸಾಚಿ ಎಚ್.ಕೆ.ಯೋಗಾನರಸಿಂಹ ಸ್ಮರಣಾರ್ಥ ಏರ್ಪಡಿಸಿದ್ದ ರಂಗಗೀತೆಗಳ ಗಾಯನ ಸಮಾರಂಭದಲ್ಲಿ ಮಾತನಾಡಿದ ಅವರು, ಬಿ.ಆರ್.ಪಂತುಲು ನಿರ್ದೇಶನದ ಸ್ಕೂಲ್ ಮಾಸ್ಟರ್ ಹಿಂದಿ ಚಲನಚಿತ್ರದಲ್ಲಿ ವಿದ್ಯಾರ್ಥಿಗಳು ಒಂದು ಶಾಲೆಯನ್ನೆ ಕಟ್ಟುವ ಮೂಲಕ ವೀಕ್ಷಕರಿಗೆ ಸಮಾಜವನ್ನು ಕಟ್ಟುವ ಬಗ್ಗೆ ಪ್ರೇರಣೆ ನೀಡಲಾಗಿತ್ತು. ಆದರೆ, ಇಂದಿನ ಯಾವ ಚಿತ್ರಗಳೂ ಸಮಾಜವನ್ನಾಗಲಿ, ಸಂಬಂಧಗಳನ್ನಾಗಲಿ ಕಟ್ಟುವ ಕೆಲಸ ಮಾಡುತ್ತಿಲ್ಲ. ಬದಲಾಗಿ ಎಲ್ಲೆಲ್ಲೂ ಒಡೆಯುವ ಕೆಲಸಗಳೇ ನಡೆಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಹೊಸ ನೀರು ಬಂದಾಗ ಹಳೆಯ ನೀರು ಕೊಚ್ಚಿ ಹೋಗುವುದು ಸಹಜ. ಆದರೆ ಹೊಸ ಸವಕಲು ವಿಚಾರಗಳು ಹಳೆಯ ಸಾಮಾಜಿಕ ಕಳಕಳಿಯ ವಿಚಾರಗಳನ್ನೂ ಮುಸುಕುಗೊಳಿಸುತ್ತಿರುವುದು ಸರಿಯಲ್ಲ. ಇಂದಿನ ವಿದ್ಯಾರ್ಥಿಗಳು ಸಾಂಸ್ಕೃತಿಕವಾಗಿ ಗಟ್ಟಿಯಾಗಲು ಹಳೆಯ ವಿಚಾರಧಾರೆಗಳ ಪಾಲನೆ ಮತ್ತು ಪೋಷಣೆ ಮಾಡುವುದು ಅತ್ಯಾವಶ್ಯಕ. ತೀವ್ರ ಬಡತನದಿಂದ ಬೆಳೆದು ಬಂದ ಯೋಗಣ್ಣ ಅವರಿಗೆ ತಮ್ಮ ಅನುಭವಗಳೇ ನಾಟಕದ ಕಥಾ ವಸ್ತುಗಳಾದವು. ಇದರಿಂದ ಅವರು ರಂಗಭೂಮಿಯಲ್ಲಿ ಗಟ್ಟಿಯಾಗಿ ಉಳಿಯಲು ಸಾಧ್ಯವಾಯಿತು ಎಂದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ರಂಗಗೀತೆಗಳ ಗಾಯನ ಸಮಾರಂಭದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು ಮಾತನಾಡಿ, ವಿದ್ಯಾರ್ಥಿಗಳು ಸಾಂಸ್ಕೃತಿಕವಾಗಿ ಸದೃಢರಾದಾಗ ಮಾತ್ರ ಸಮಾಜದಲ್ಲಿ ಉತ್ತಮ ಬದುಕು ನಡೆಸಲು ಸಾಧ್ಯ. ವಿದ್ಯಾಭ್ಯಾಸದ ಜತೆ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ತಿಳಿಯುವುದು ಮತ್ತು ಅನುಭವಿಸುವುದರಿಂದ ಬದುಕು ಮತ್ತಷ್ಟು ಗಟ್ಟಿಯಾಗುತ್ತದೆ. ಮಹಾಜನ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸದಾ ಪೋಷಿಸುತ್ತಲೇ ಬಂದಿದೆ. ಮುಂದೆಯೂ ಈ ಸೇವೆ ಮುಂದುವರೆಯುತ್ತದೆ ಎಂದರು.

ಮಹಾಜನ ಕಾಲೇಜು ಆಡಳಿತಾಧಿಕಾರಿ ಎಸ್.ಆರ್.ರಮೇಶ್, ರಂಗಕರ್ಮಿಗಳಾದ ಪ್ರೊ.ಎಚ್.ಎಸ್.ಉಮೇಶ್, ಪ್ರಕಾಶ್ ಬೆಳಗಲ್, ಎಚ್.ಬಿ.ಯಶೋಧ, ಎಚ್.ವೈ.ಕಾತ್ಯಾಯಿನಿ, ರಾಮಚಂದ್ರು ಇದ್ದರು.

STAR OF MYSORE

Tuesday 3rd September 2019

Receives Dr. Radhakrishnan Shikshana Ratna Award



Mysuru, Sept.3- Dr. H. Sreedhara, Head, Department of History, SBRR Mahajana First Grade College, Jayalakshmipuram, Mysuru, has received *Dr. Radhakrishnan Shikshana Ratna Award - 2019* presented by 'Athmashri Kannada Samskrutika Prathistana,' Bengaluru, for his service in the field of Higher Education and Research. The award was presented to him on Aug. 25 at a function held at Kannada Bhavana in Bengaluru, according to a press release from the College.

ಆಂದೋಲನ
ದಿನ ಪತ್ರಿಕೆ
ಸೋಮವಾರ, ಸೆಪ್ಟೆಂಬರ್ ೨೩, ೨೦೧೯

ಬಾಸ್ಕೆಟ್‌ಬಾಲ್ ಪಂದ್ಯದಲ್ಲಿ ಮಹಾಜನ ಕಾಲೇಜಿಗೆ ದ್ವಿತೀಯ ಸ್ಥಾನ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ನಡೆದ ಚಾಮುಂಡಿ ವಲಯ ಮಟ್ಟದ ಪುರುಷರ ಅಂತರ ಕಾಲೇಜು ಬಾಸ್ಕೆಟ್‌ಬಾಲ್ ಪಂದ್ಯಾವಳಿಯ ಪುರುಷರ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿತು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಮಧುಸೂಧನ್, ಡಾ.ಎಚ್.ಎನ್.ಭಾಸ್ಕರ್, ಉಪ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ವಾಣಿ, ಡಾ.ಸೋಮಶೇಖರ್, ನಾಯಕ ವಿಷ್ಣು, ಕೆ.ಸೋಮಶೇಖರ್, ಕೆ.ರಾಬಿನ್, ಪ್ರಧಾನ್, ಸಚ್ಚಿನ್, ಹರ್ಷ, ಪುನೀತ್, ಯಶಸ್, ಸಾಗರ್, ಸುಹಾಸ್, ವಿನಯ್ ಕುಮಾರ್ ಮತ್ತು ಸಮ್‌ಯಕ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪಾಲಿನ
ಗುರುವಾರ, 19 ಸೆಪ್ಟೆಂಬರ್ 2019



ಮೈಸೂರು ವಿಶ್ವವಿದ್ಯಾಲಯವು ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಚಾಮುಂಡಿವಲಯ ಮಟ್ಟದ ಬ್ಯಾಸ್ಕೆಟ್‌ಬಾಲ್‌ನಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ದ್ವಿತೀಯ ಸ್ಥಾನಪಡೆದುಕೊಂಡಿದ್ದು, ಕಾಲೇಜು ಆಡಳಿತಮಂಡಳಿ ಅಭಿನಂದಿಸಿದೆ. ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು,ಉಪ ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಮಧುಸೂಧನ್, ಡಾ.ಎಚ್.ಎನ್.ಭಾಸ್ಕರ್, ವಾಣಿ, ಡಾ.ಸೋಮಶೇಖರ್ ಇತರರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 6.9.2019



ಎನ್‌ಐಇ ಕಾಲೇಜು ವತಿಯಿಂದ ನಡೆದ ಮೈಸೂರು ಅಂತರ ಕಾಲೇಜು ಅತ್ಯುತ್ತಮ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಮಿ. ಮೈಸೂರು ವಿಜೇತ ಹಾಗೂ ದ್ವಿತೀಯ ಸಮಗ್ರ ತಂಡ ಪ್ರಶಸ್ತಿ ಪಡೆದಿದ್ದಾರೆ. ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ಇದ್ದಾರೆ.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಭಾನುವಾರ, 8 ಸೆಪ್ಟೆಂಬರ್ 2019



ಮೈಸೂರಿನ ಎನ್‌ಐಇ ಕಾಲೇಜಿನಿಂದ ಇತ್ತೀಚಿಗೆ ನಡೆದ ಮೈಸೂರು ಅಂತರ ಕಾಲೇಜು ಅತ್ಯುತ್ತಮ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಜಯಲಕ್ಷ್ಮಿಪುರಂ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಮಿಸ್ಟರ್ ಮೈಸೂರು ಆಗಿ ವಿಜೇತರಾಗಿದ್ದು, ದ್ವಿತೀಯ ಸಮಗ್ರ ತಂಡ ಪ್ರಶಸ್ತಿ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳಾದ ಸೋಮಶೇಖರ್, ಶ್ರೇಯಸ್, ಹೇಮಂತ್, ಶೋಯಬ್ ಉದ್ದಿನ್, ರಾಜು .ಆರ್ (ಮಿ. ಮೈಸೂರು ವಿಜೇತ), ಶಿವಕುಮಾರ್, ಕಿರಣ್, ವೃಷಭ್ ಅವರನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.

ಆಂದೋಲನ
ದಿನ ಪತ್ರಿಕೆ
ಮಂಗಳವಾರ, ಸೆಪ್ಟೆಂಬರ್ ೨೪, ೨೦೧೯

ಹ್ಯಾಂಡ್‌ಬಾಲ್ ವಿಜೇತರಿಗೆ ಅಭಿನಂದನೆ



ಮೈಸೂರಿನ ಟೆರೇಷಿಯನ್ ಕಾಲೇಜು ವತಿಯಿಂದ ನಡೆದ ಮೈಸೂರು ನಗರ ಅಂತರ ಕಾಲೇಜು ಹ್ಯಾಂಡ್‌ಬಾಲ್ ಮಹಿಳೆಯರ ವಿಭಾಗದಲ್ಲಿ ಜಯ ಗಳಿಸಿದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿತು. ಮಹಾಜನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಸಿಇಒ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎಚ್.ಎನ್.ಭಾಸ್ಕರ್, ಪಿ.ಎಸ್.ಮಧುಸೂದನ್, ಡಾ.ಕೆ.ಕೆ.ಸೋಮಶೇಖರ್, ತಂಡದ ನಾಯಕಿ ಲಾವಣ್ಯ, ವಾಣಿ, ಸಂಗೀತ, ನಿಖಿತಾ, ಭಾವನಿ, ಅನಿತಾ, ಸುಪ್ರೀತಾ, ನಿಗಿಮೋಳೆ, ನಿಸಿಮೋಳೆ, ಶರಣ್ಯ, ಗೌತಮಿ, ಅರ್ಚನಾ, ಗಾನವಿ ಚಿತ್ರದಲ್ಲಿದ್ದಾರೆ.

STAR OF MYSORE

Wednesday 18th September 2019

Winners of Inter-Collegiate Handball Tournament



The Handball team of SBRR Mahajana First Grade College, Jayalakshmipuram, won the Mysore City Inter-Collegiate Handball Tournament conducted by Teresian College, Mysuru, recently. Seen are (sitting from left) Lavanya (Captain), Vani, B.R. Jayakumari, (Vice-Principal), Dr. S. Venkataramu, Principal, Dr. Vijayalakshmi Muralidhar, Secretary, Mahajana Education Society (MES), Dr. S.R. Ramesh, CEO, Dr. H.N. Bhaskar, PE Director, P.S. Madhusudhana, PE Director and Dr. K.K. Somashekar; (standing from left) Sangitha, Nikhitha, Bhavani, Anitha, Bhavana, Chowndamma, Supritha, Nigimole, Nisimole, Sharanya, Gowthami, Archana Rao, Ganavi and Sommashekar.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಗುರುವಾರ, 12 ಸೆಪ್ಟೆಂಬರ್ 2019



ಮೈಸೂರು ವಿಶ್ವವಿದ್ಯಾಲಯ, ಟೆರಿಷಿಯನ್ ಕಾಲೇಜು ವತಿಯಿಂದ ನಡೆಸಿದ ಅಂತರ ಕಾಲೇಜು ಹ್ಯಾಂಡ್‌ಬಾಲ್ ಟೂರ್ನ್‌ಮೆಂಟಿನಲ್ಲಿ ವಿಜೇತ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ಕಾಲೇಜಿನ ವಿದ್ಯಾರ್ಥಿನಿಯರ ತಂಡವನ್ನು ಆಡಳಿತ ಮಂಡಳಿ ಅಭಿನಂದಿಸಿದೆ. ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಪ್ರಭಾರ ಪ್ರಾಂಶುಪಾಲ ಬಿ.ಆರ್.ಜಯಕುಮಾರಿ, ವಿಜಯಲಕ್ಷ್ಮಿ ಮುರುಳೀಧರ್, ಡಾ.ಎಚ್.ಎನ್.ಭಾಸ್ಕರ್ ಇತರರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 24.9.2019

ಮಹಾಜನ ಕಾಲೇಜು ತಂಡಕ್ಕೆ ಪ್ರಥಮ

ಸಾಫ್ಟ್‌ಬಾಲ್‌ನಲ್ಲಿ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ಸಾಧನೆಗೆ ಶ್ಲಾಘನೆ



ಸಾಫ್ಟ್‌ಬಾಲ್‌ನಲ್ಲಿ ಸ್ಪರ್ಧೆಯಲ್ಲಿ ಮಹಾಜನ ಕಾಲೇಜು ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಚಾಮುಂಡಿ ವಲಯ ಮಟ್ಟದ ಸಾಫ್ಟ್‌ಬಾಲ್‌ನಲ್ಲಿ ಸ್ಪರ್ಧೆಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವು ಪ್ರಥಮ ಸ್ಥಾನ ಪಡೆದಿದೆ.

ಎಸ್. ಸತೀಶ್ ನಾಯಕತ್ವದ ತಂಡದಲ್ಲಿ ಕೆ. ಸೋಮಶೇಖರ್, ಮಿಥುನ್ ಜೈನ್, ಶಾದಿಕ್, ಸಿಬ್‌ಟೈನ್ ಅಲಿ, ಲಕ್ಷ್ಮೀಸಾಗರ್, ಎಸ್. ಸುಪ್ರೀತ್, ಡಿ. ಅಮೃತ್‌ರಾಜ್, ಆರ್. ಹೇಮಂತ್, ಅಮನ್ ಪೊನ್ನಪ್ಪ, ಜೆ. ಮಯೂರ್, ಎಸ್. ನಿಶಾಂತ್ ಮತ್ತು ಎಲ್. ಹೇಮಂತ್‌ಕುಮಾರ್ ಅವರು ಸ್ಪರ್ಧೆಯಲ್ಲಿ ಭಾಗವಹಿಸಿ ಜಯ ಗಳಿಸಿದ್ದಾರೆ.

ವಿಜೇತರನ್ನು ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಕೆ.ಕೆ. ಸೋಮಶೇಖರ್, ಮಧು ಸೂಧನ್, ಡಾ.ಎಚ್.ಎನ್. ಭಾಸ್ಕರ್, ಕ್ರೀಡಾ ಸಮಿತಿ ಸದಸ್ಯೆ ವಾಣಿ, ತರಬೇತುದಾರ ಕಾರ್ತಿಕ್ ಅಭಿನಂದಿಸಿದ್ದಾರೆ.

ವಿಜಯವಾಣಿ

ಕನ್ನಡಿಗರ ಧ್ವನಿ

ಮಂಗಳವಾರ, 24 ಸೆಪ್ಟೆಂಬರ್ 2019



ಮೈಸೂರು ವಿವಿ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಚಾಮುಂಡಿ ವಲಯ ಮಟ್ಟದ ಸಾಫ್ಟ್‌ಬಾಲ್‌ನಲ್ಲಿ ನಗರದ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇವರನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ. ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪಪ್ರಾಂಶುಪಾಲ ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎಚ್.ಎನ್.ಭಾಸ್ಕರ್, ಡಾ.ಸೋಮಶೇಖರ್, ಕೆ.ಮಧುಸೂದನ್ ಇತರರು ಇದ್ದರು.

ಆಂದೋಲನ
ದಿನ ಪತ್ರಿಕೆ
ಗುರುವಾರ, ಸೆಪ್ಟೆಂಬರ್ ೧೯, ೨೦೧೯

ಮಹಾಜನ ಕಾಲೇಜಿನಲ್ಲಿ ಶಿಕ್ಷಕರ ದಿನ ಆಚರಣೆ



ಮೈಸೂರಿನ ಪೂಜಾ ಭಾಗವತ್ ಮೆಮೋರಿಯಲ್ ಮಹಾಜನ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವೆಂಕಟರಾಮು, ಉಪಾಧ್ಯಕ್ಷ ಮುರಳೀಧರ್ ಭಾಗವತ್, ಡಾ.ಎಸ್.ಆರ್.ರಮೇಶ್, ಸಂಸ್ಥೆಯ ಅಧ್ಯಕ್ಷ ಆರ್.ವಾಸುದೇವಮೂರ್ತಿ, ಡಾ.ಡಿ.ಎಸ್.ಗುರು, ಡಾ.ಸಿ.ಕೆ. ರೇಣುಕಾರ್ಯ, ಡಾ.ವಿಜಯಲಕ್ಷ್ಮೀ ಇತರರು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 18.9.2019

ಮಹಾಜನ ವಿದ್ಯಾರ್ಥಿಗಳ ಗೋಡೆ ಪತ್ರಿಕೆ ಬಿಡುಗಡೆ

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ವಿದ್ಯಾರ್ಥಿಗಳ ಗೋಡೆ ಪತ್ರಿಕೆಗಳನ್ನು ಪತ್ರಕರ್ತ ಲೋಕೇಶ್ ಕಾರ್ಯಗ ಬಿಡುಗಡೆಗೊಳಿಸಿದರು. ನಂತರ ಲೋಕೇಶ್ ಕಾರ್ಯಗ ಮಾತನಾಡಿ, ವಿದ್ಯಾರ್ಥಿಗಳು ಮಾಡಿರುವ ಪೇಜ್ ಲೇಔಟ್, ಛಾಯಾಚಿತ್ರಗಳ ಪರಿಕಲ್ಪನೆ ಮತ್ತು **ಕೊಟ್ಟಿರುವ ಶೀರ್ಷಿಕೆ ಆಕರ್ಷಕವಾಗಿದ್ದು,** ಇದು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಾಕ್ಷಿಯಾಗಿದೆ ಎಂದರು. ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲೆ ಬಿ.ಆರ್. ಜಯ ಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಮನಃ



ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಹೃತ್ತಿಕ್ ಕಶ್ಯಪ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಲ್. ರವಿ, ಸಹಾಯಕ ಪ್ರಾಧ್ಯಾಪಕ ಕೇಶವಮೂರ್ತಿ ಇದ್ದರು.

ಆಂದೋಲನ
ದಿನ ಪತ್ರಿಕೆ
ಶುಕ್ರವಾರ, ಅಕ್ಟೋಬರ್ ೨೫, ೨೦೧೯

ಮಹಾಜನ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗಣಕ ವಿಜ್ಞಾನ ಅಧ್ಯಯನ ವಿಭಾಗದ ವತಿಯಿಂದ 'ಪ್ರೊಜೆಕ್ಟ್ ಬೇಸ್ಡ್ ಲರ್ನಿಂಗ್' ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಮಹಾವಿದ್ಯಾಲಯದ ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಆರ್.ಕೆ.ಭಾರತಿ ಅವರು ಉಪನ್ಯಾಸ ನೀಡಿದರು.

ಆಂದೋಲನ
ದಿನಪತ್ರಿಕೆ

ಬುಧವಾರ, ನವೆಂಬರ್ ೨೭, ೨೦೧೯



'ಒಂದು ದೇಶ ಒಂದು ಸಂವಿಧಾನ'

ಮೈಸೂರಿನ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಮಂಗಳವಾರ ಒಂದು ದೇಶ-ಒಂದು ಸಂವಿಧಾನ' ಅಭಿಯಾನದ ಅಡಿಯಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಕಾಲಾಜಿನ ಕಾನೂನು ವಿಭಾಗದ ಮುಖ್ಯಸ್ಥರಾದ ರಾಣಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನ ಬೋಧಿಸಿದರು. ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್ ಅಧ್ಯಾಪಕರು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 27.11.2019

ಒಂದು ದೇಶ, ಒಂದು ಸಂವಿಧಾನ ಅಭಿಯಾನ

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಒಂದು ದೇಶ ಒಂದು ಸಂವಿಧಾನ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಸಂವಿಧಾನದ ಪ್ರಾಮುಖ್ಯತೆಯ ಬಗ್ಗೆ ಕಾನೂನು ವಿಭಾಗದ ಮುಖ್ಯಸ್ಥೆ ವಾಣಿ ಮಾತನಾಡುತ್ತಾ, ಒಂದು ದೇಶ ಒಂದು ಸಂವಿಧಾನದ ಉದ್ದೇಶ ಮತ, ಭಾಷೆ, ಪ್ರದೇಶಗಳ ವ್ಯತ್ಯಾಸವಿಲ್ಲದೆ ಒಂದೇ ಸಂವಿಧಾನವನ್ನು ಅಳವಡಿಸಿಕೊಳ್ಳುವುದಾಗಿದೆ ಮತ್ತು ಅವರು ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನವನ್ನು ಬೋಧಿಸಿದರು. ಪ್ರಾಂಶುಪಾಲ ಡಾ.ಎಸ್. ವೆಂಕಟ ರಾಮು, ಕಾರ್ಯನಿರ್ವಾಹಣಾಧಿಕಾರಿ ಡಾ.ಎಸ್.ಆರ್. ರಮೇಶ್ ಇದ್ದರು.



MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಗುರುವಾರ, ನವೆಂಬರ್ ೭, ೨೦೧೯

ನಾಳೆಯಿಂದ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ



ಮೈಸೂರು,ನ.6- ಸ್ವದೇಶಿ ವಿಜ್ಞಾನ ಆಂದೋಲನ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ನ.7ರಿಂದ 9ರ ವರೆಗೆ 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಎಂ.ಎಸ್.ರಶ್ಮಿ ಅರಸ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಿನಗಳ ಕಾಲ ಕಾಲೇಜಿನ ಪಿಜಿ ಕ್ಯಾಂಪಸ್‌ನಲ್ಲಿ ಸಮ್ಮೇಳನ ನಡೆಯಲಿದ್ದು, ನ.7ರಂದು ಬೆಳಿಗ್ಗೆ 10 ಗಂಟೆಗೆ ಸಮ್ಮೇಳನವನ್ನು ನಿವೃತ್ತ ವಿಜ್ಞಾನಿ ಡಾ.ಇಂದಿರಾ ನಾರಾಯಣಸ್ವಾಮಿ ಉದ್ಘಾಟಿಸುವರು. ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಸಮ್ಮೇಳನದಲ್ಲಿ 165 ಪೇಪರ್ ಪ್ರಸೆಂಟೇಷನ್ ಇರಲಿದೆ. ಮುಂಬೈ, ಮದನಪಲ್ಲಿ, ಮಣಿಪಾಲ್, ಬೆಂಗಳೂರು, ಪುಣೆ ಸೇರಿದಂತೆ ಅನೇಕ ರಾಜ್ಯಗಳಿಂದ ಸಂಶೋಧಕರು, ವಿಜ್ಞಾನಿಗಳು ಆಗಮಿಸಲಿದ್ದಾರೆ. ನ.9ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಉತ್ತಮ ಪೇಪರ್ ಪ್ರಸೆಂಟೇಷನ್‌ಗೆ ಪ್ರಶಸ್ತಿ ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

> ಸಮ್ಮೇಳನದಲ್ಲಿ ಮೇರಿ ಕ್ಯೂರಿ ಜನ್ಮದಿನದ ಅಂಗವಾಗಿ ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪ್ರಶಸ್ತಿಯನ್ನು ಇಸ್ರೋದ ಚಂದ್ರಯಾನ-೨ ಯೋಜನಾ ನಿರ್ದೇಶಕಿ ಮುತ್ತಯ್ಯ ವನಿತಾ ಹಾಗೂ ಸಿ.ವಿ.ರಾಮನ್ ಮಹಿಳಾ ವಿಜ್ಞಾನ ಪ್ರಶಸ್ತಿಯನ್ನು ಕಾರೈಕುಡಿಯ ಸಿಎಸ್‌ಐಆರ್ ನಿರ್ದೇಶಕಿ ಡಾ.ಎನ್.ಕಲೈಸೆಲ್ವಿ ಅವರಿಗೆ ಪ್ರದಾನ ಮಾಡಲಾಗುವುದು.
>
> -ಎಂ.ಎಸ್.ರಶ್ಮಿ ಅರಸ್

ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಡಿ.ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಪ್ರಾಂಶುಪಾಲ ವೆಂಕಟರಾಮು, ಚಂದ್ರಕುಮಾರಿ, ಡಾ.ಸುಧಾಕರ್, ರವಿ ಅಯ್ಯರ್, ಪೂರ್ಣಿಮಾ, ಜಯಕುಮಾರಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಆಂದೋಲನ
ದಿನ ಪತ್ರಿಕೆ
ಶುಕ್ರವಾರ, ನವೆಂಬರ್ ೮, ೨೦೧೯

12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನಕ್ಕೆ ಚಾಲನೆ

ಮುತ್ತಯ್ಯ ವನಿತಾರವರಿಗೆ 'ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರ' ಮತ್ತು ಡಾ.ಎನ್.ಕಲೈಸೆಲ್ವಿರವರಿಗೆ 'ಸಿ.ವಿ.ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರ' ನೀಡಿ ಸನ್ಮಾನ

ಮೈಸೂರು,ನ.7- ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ(ಸ್ವಾಯತ್ತ) ಮಾತೃ ವೇದಿಕೆ ಹಾಗೂ ರಾಜ್ಯ ಸ್ವದೇಶಿ ವಿಜ್ಞಾನ ಆಂದೋಲನದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನಕ್ಕೆ ಗುರುವಾರ ಚಾಲನೆ ದೊರೆಯಿತು.

ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ವಿಭಾಗದ ಆವರಣದಲ್ಲಿ ಆಯೋಜಿಸಿರುವ ಸಮ್ಮೇಳನವನ್ನು ನಿವೃತ್ತ ವಿಜ್ಞಾನಿ ಡಾ.ಇಂದಿರಾ ನಾರಾಯಣಸ್ವಾಮಿ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.



ಕಾರ್ಯಕ್ರಮದಲ್ಲಿ ಇಸ್ರೋ ಚಂದ್ರಯಾನ-2ರ ಯೋಜನಾ ನಿರ್ದೇಶಕರಾದ ಮುತ್ತಯ್ಯ ವನಿತಾ ಅವರಿಗೆ 'ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರ' ಮತ್ತು ತಮಿಳುನಾಡಿನ ಕಾರೈಕುಡಿ ಕೇಂದ್ರ ಎಲೆಕ್ಟ್ರೋ ಕೆಮಿಕಲ್ ಸಂಶೋಧನಾ ಸಂಸ್ಥೆಯ(ಸಿಎಸ್‌ಐಆರ್) ನಿರ್ದೇಶಕರಾದ ಡಾ.ಎನ್.ಕಲೈಸೆಲ್ವಿ ಅವರಿಗೆ ಸಿ.ವಿ.ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಚಂದ್ರಯಾನ-2ರ ಯೋಜನಾ ನಿರ್ದೇಶಕಿ ಮುತ್ತಯ್ಯ ವನಿತಾ ಅವರು, ನಮಗೆ ಚಂದ್ರಯಾನ-2 ಆತ್ಯಂತ ಸವಾಲಿನ ಯೋಜನೆಯಾಗಿತ್ತು. ಕೆಲಸ ಶುರು ಮಾಡುವ ಮುಂಚೆ ಸಾಕಷ್ಟು ಪರೀಕ್ಷೆಗಳನ್ನು ಮಾಡಿ, ಬೇರೆ ಬೇರೆ ಸ್ಥಳಗಳಿಗೆ ಹೋಗಿ, ಎಲ್ಲಕ್ಕೂ ತಯಾರಾಗಿ ಯಾರೂ ತಲುಪದ ಜಾಗವನ್ನು ನಾವು ತಲುಪಬೇಕಾಗಿತ್ತು. ಅದಕ್ಕಾಗಿ ಬಹಳ ಶ್ರಮಪಟ್ಟಿದ್ದೇವೆ. ಅದರಿಂದ ಬಹಳ ಕಲಿತಿದ್ದೇವೆ ಎಂದು ಸ್ಮರಿಸಿದರು.

'ಸಿ.ವಿ.ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಸಿಎಸ್‌ಐಆರ್ ನಿರ್ದೇಶಕಿ ಡಾ.ಎನ್.ಕಲೈಸೆಲ್ವಿ ಅವರು, ನೊಬೆಲ್ ಪುರಸ್ಕಾರ ಪಡೆದಿದ್ದ ನಮ್ಮ ಸ್ವದೇಶಿ ವಿಜ್ಞಾನಿ ಸಿ.ವಿ.ರಾಮನ್ ಅವರ ಹೆಸರಿನಲ್ಲಿ ಪ್ರಶಸ್ತಿ ಪಡೆದಿರುವುದು ನನಗೂ ನೊಬೆಲ್ ಬಂದಷ್ಟೇ ಖುಷಿಯಾಗಿದೆ. ಇದರಿಂದ ನನ್ನ ಮೇಲಿನ ನಿರೀಕ್ಷೆ, ಜವಾಬ್ದಾರಿ ಎಲ್ಲವೂ ಹೆಚ್ಚಿದೆ. ಈ ಪ್ರಶಸ್ತಿಯನ್ನು ನಮ್ಮ ಸಂಸ್ಥೆ ಸಿಎಸ್‌ಐಆರ್‌ಗೆ ಅರ್ಪಿಸುತ್ತೇನೆ ಎಂದರು.

ಸಮ್ಮೇಳನದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಡಾ.ಎನ್.ಕಲೈಸೆಲ್ವಿ, ಮುತ್ತಯ್ಯ ವನಿತಾ ಹಾಗೂ ಡಾ.ಮಲ್ಲಿಕಾ ಕುಮಾರ್ ಉಪನ್ಯಾಸ ನೀಡಿದರು. ಮಾತೃ ವೇದಿಕೆಯ ಮುಖ್ಯಸ್ಥೆ ಡಾ.ವೈ.ಎಸ್.ಗಾಯತ್ರಿ, ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷರಾದ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಗಳ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಡಾ.ಬಿ.ಕವಿತಾ, ಪ್ರೊ. ಕೆ.ಐ.ವಾಸು, ಡಾ.ಎ.ಆರ್.ಉಪಾಧ್ಯ, ಸಿ.ಕೆ. ರೇಣುಕಾರ್ಯ, ಗಣೇಶ್ ಕಾರ್ತಿಕ್, ಸುಧೀರ್, ಎಂ.ಎಸ್.ರಶ್ಮಿ ಅರಸ್, ಎಸ್.ವೆಂಕಟರಾಮು, ಮತ್ತಿತರರು ಕಾರ್ಯಕ್ರಮದಲ್ಲಿ

ಎಲ್ಲಾ ಸರಿಯಾಗಿದ್ದ ಚಂದ್ರಯಾನ ದಲ್ಲಿ ಕೊನೇ ಕ್ಷಣದಲ್ಲಿ ಸಮಸ್ಯೆ ಕಾಣಿಸಿಕೊಂಡಿತು. ನಾವು ಗುರಿ ತಲುಪದಿದ್ದರೂ ಚಂದ್ರಯಾನ ಇಡೀ ದೇಶ ವನ್ನು ಒಂದು ಮಾಡಿತು. ಚಿಕ್ಕ ಮಕ್ಕಳೂ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಳ್ಳುವಂತಾಯಿತು.

-ಮುತ್ತಯ್ಯ ವನಿತಾ

ಸಿ.ವಿ.ರಾಮನ್ ಅವರಿಗೆ ಕಂಡ ನೀಲಿ ಆಕಾಶ ಇಂದು ನಮಗೆ ಕಾಣುತ್ತಿಲ್ಲ. ವಾತಾವರಣದಲ್ಲಿ ಹೆಚ್ಚಾಗಿರುವ ಕಾರ್ಬನ್ ನಿಂದ ಹೀಗಾಗಿದೆ. ಲಿಥಿಯಂ ಬಳಸಿ ಕಾರ್ಬನ್ ಉತ್ಪಾದನೆ ತಡೆಯುವುದು ಹೇಗೆ ಎಂದು ಸಂಶೋಧನೆ ಮಾಡುವ ಅಗತ್ಯತೆ, ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

-ಡಾ.ಎನ್.ಕಲೈಸೆಲ್ವಿ

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 8.11.2019

ಸೂಕ್ತ ಸಲಹೆ ಎಡಿಎ ತಾಂತ್ರಿಕ ನಿರ್ದೇಶಕಿ ಡಾ. ಇಂದಿರಾ ನಾರಾಯಣಸ್ವಾಮಿ | 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ ಉದ್ಘಾಟನೆ

ನಿಮ್ಮ ಆಸಕ್ತಿದಾಯಕ ಕ್ಷೇತ್ರದಲ್ಲೆ ಹೆಚ್ಚಿನ ಸಾಧನೆ ಮಾಡಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಮಗೆ ಯಾವ ಕ್ಷೇತ್ರದಲ್ಲಿ ಅಥವಾ ವಿಷಯದಲ್ಲಿ ಹಿಡಿತವಿದೆಯೋ ಅದನ್ನು ಗುರುತಿಸಿಕೊಂಡು ಅದರ ಮೇಲೆ ಹೆಚ್ಚಿನ ಪರಿಶ್ರಮ ಹಾಕಿದಾಗ ಏನಾದರು ಸಾಧಿಸಲು ಸಾಧ್ಯ. ಐನ್‌ಸ್ಟೈನ್ ಹೇಳುವಂತೆ ಎಲ್ಲರೂ ಬುದ್ಧಿವಂತರೇ ಆದರೆ ಅದನ್ನು ಸರಿಯಾದ ಸಮಯಕ್ಕೆ ಪೂರಕವಾದ ವಿಷಯದ ಮೇಲೆ ಬಳಸಬೇಕು ಎಂದು ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ) ತಾಂತ್ರಿಕ ನಿರ್ದೇಶಕಿ ಡಾ. ಇಂದಿರಾ ನಾರಾಯಣಸ್ವಾಮಿ ಪ್ರತಿಪಾದಿಸಿದರು.

ಮಹಿಳಾ ವಿಜ್ಞಾನ ಸಂಸ್ಥೆಯಾದ ಮಾತೃ ವೇದಿಕೆ, ಸ್ವದೇಶಿ ವಿಜ್ಞಾನ ಆಂದೋಲನ ವತಿಯಿಂದ ಗುರುವಾರ ಎಸ್‌ಬಿಆರ್‌ಆರ್ ಮಹಾಜನ ಶಿಕ್ಷಣ ಸಂಸ್ಥೆಯ ಸ್ನಾತಕ ಕೇಂದ್ರದಲ್ಲಿ ಆಯೋಜಿಸಿರುವ 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.



ವಿಜ್ಞಾನಿ ಡಾ.ಎನ್. ಕಲೈ ಸೆಲ್ವಿ ಮತ್ತು ಮುತ್ತಯ್ಯ ವನಿತಾರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಜ್ಞಾನ ಕ್ಷೇತ್ರದಲ್ಲಿ ಸೋಲು- ಗೆಲವು ಇದ್ದೆ ಇರುತ್ತದೆ. ಅವರೆಡೂ ಒಂದೇ ನಾಣ್ಯದ ಎರಡು ಮುಖವೆಂದು ತಿಳಿದು ಮುನ್ನಗ್ಗಬೇಕು. ನಾನು ಓದುತ್ತಿದ್ದ ಕಾಲದಲ್ಲಿ ಮಹಿಳೆಯರಿಗೆ ಅವಕಾಶ ಕಡಿಮೆಯಿದ್ದವು. ಬಹುತೇಕ ಮಂದಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹುದ್ದೆ ಪಡೆಯುತ್ತಿದ್ದರು. ಆದರೆ ನಾನು ವ್ಯಾಸಂಗ ಮಾಡಿದ ಕ್ಷೇತ್ರದಲ್ಲೇ ಉದ್ಯೋಗ ದೊರೆಯಿತು. ಆದ್ದರಿಂದಲೇ ಏರೋನಾಟಿಕ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಸ್ವದೇಶಿ ಲಘು ಯುದ್ಧ ವಿಮಾನ ತೇಜಸ್ (ಎಲ್‌ಸಿಎ) ವಿನ್ಯಾಸ ಗೊಳಿಸುವ ಕಾರ್ಯದಲ್ಲಿ ತೊಡಗಿದ್ದು ಖುಷಿ ನೀಡಿದೆ ಎಂದರು.

ಇದೇ ವೇಳೆ 'ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರ'ವನ್ನು ಚಂದ್ರಯಾನ-2 ಯೋಜನಾ ನಿರ್ದೇಶಕಿ ಮುತ್ತಯ್ಯ ವನಿತಾ ಮತ್ತು 'ಸಿ.ವಿ. ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರ'ವನ್ನು ಕರೈಕುಡಿಯ ಸಿಎಸ್ ಐಆರ್- ಸೆಂಟ್ರಲ್ ಎಲೆಕ್ಟ್ರೋ ಕೆಮಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕಿ ಡಾ. ಎನ್. ಕಲೈಸೆಲ್ವಿ ಅವರಿಗೆ ಪ್ರದಾನ ಮಾಡಲಾಯಿತು.

ಮಾತೃ ವೇದಿಕೆ ಅಧ್ಯಕ್ಷೆ ಡಾ.ವೈ.ಎಸ್. ಗಾಯಿತ್ರಿ, ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಡಿ. ವಿಜಯಲಕ್ಷ್ಮೀಮುರುಳಿಧರ್, ಆಡಳಿತಾಕಾರಿ ಪ್ರೊ.ಪಿ. ಸರೋಜಮ್ಮ, ಸಮ್ಮೇಳನದ ಸಂಯೋಜಕಿ ಎಂ.ಎಸ್. ರಶ್ಮಿ ಅರಸ್ ಇದ್ದರು.

> ಸಿ.ವಿ. ರಾಮನ್ ಅವರು ಆಕಾಶ ಯಾಕೆ ನೀಲಿಯಾಗಿದೆ ಎಂಬುದನ್ನು ಯೋಚಿಸಿ, ಸಂಶೋಧನೆ ಮಾಡಿ ನೊಬೆಲ್ ಪಡೆದುಕೊಂಡರು. ಇಂದು ಅದೇ ಆಕಾಶ ಯಾಕೆ ಕಪ್ಪಗಾಗುತ್ತಿದೆ ಎಂಬುದರ ಬಗ್ಗೆ ಚಿಂತಿಸುವಾಗಿದೆ
>
> • **ಡಾ.ಎನ್. ಕಲೈಸೆಲ್ವಿ** ಪ್ರಶಸ್ತಿ ಪುರಸ್ಕೃತರು

> ಚಂದ್ರಯಾನ-2 ಸರಿಯಾಗಿ ಲ್ಯಾಂಡಿಂಗ್ ಆಗದಿದ್ದಾಗ ನಾವು ದುಃಖಿತರಾದೆವು. ಅಂತಹ ಸಂದರ್ಭದಲ್ಲಿ ಮಕ್ಕಳು ನಮಗೆ ಪತ್ರ ಬರೆದು ಸಾಂತ್ವನ ಹೇಳಿದ್ದರು. ನಮ್ಮ ಸಿಬ್ಬಂದಿ ಹಗಲು-ರಾತ್ರಿ ಕೆಲಸ ಮಾಡಿದರೂ ಲ್ಯಾಂಡಿಂಗ್‌ನಲ್ಲಿ ಸ್ವಲ್ಪ ವ್ಯತ್ಯಾಸವಾಯಿತು.
>
> • **ಮುತ್ತಯ್ಯ ವನಿತಾ** ಪ್ರಶಸ್ತಿ ಪುರಸ್ಕೃತರು

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 7 ನವೆಂಬರ್ 2019

ಮೈಸೂರಲ್ಲಿ ಇಂದಿನಿಂದ ಮೂರು ದಿನ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ



ಮೈಸೂರು, ನ.6(ಆರ್‌ಕೆಬಿ)– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪಿಜಿ ಕ್ಯಾಂಪಸ್‌ನಲ್ಲಿ ನ.7ರಿಂದ 9ರವರೆಗೆ 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಹಾಯಕ ಪ್ರಾಧ್ಯಾಪಕಿ ಎಂ.ಎಸ್.ರಶ್ವಿ ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವದೇಶಿ ವಿಜ್ಞಾನ ಆಂದೋಲನ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ನಡೆಯಲಿರುವ ಸಮ್ಮೇಳನವನ್ನು ನ.7ರ ಬೆಳಿಗ್ಗೆ 10 ಗಂಟೆಗೆ ಆರ್‌ಯುಎಎಸ್‌ನ ಸಂಶೋಧಕ ಪ್ರಾಧ್ಯಾಪಕಿ, ನಿವೃತ್ತ ವಿಜ್ಞಾನಿ ಡಾ.ಇಂದಿರಾ ನಾರಾಯಣ ಉದ್ಘಾಟಿಸುವರು. ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಡಿ.ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಮೇರಿ ಕ್ಯೂರಿ ಜನ್ಮದಿನದ ಅಂಗವಾಗಿ ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಇಸ್ರೋದ ಚಂದ್ರಯಾನ–2 ಯೋಜನಾ ನಿರ್ದೇಶಕಿ ಮುತ್ತಯ್ಯ ವನಿತಾ ಹಾಗೂ ಸಿ.ವಿ. ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಕಾರೈಕುಡಿಯ ಸಿಎಸ್‌ಐಆರ್–ಸೆಂಟ್ರಲ್ ಎಲೆಕ್ಟ್ರೋ ಕೆಮಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನ ನಿರ್ದೇಶಕಿ ಡಾ.ಎನ್. ಕಲೈಸೆಲ್ವಿ ಅವರಿಗೆ ಪ್ರದಾನ ಮಾಡಲಾಗುವುದು ಎಂದರು.

ಸಮ್ಮೇಳನದಲ್ಲಿ 163 ಪ್ರಬಂಧಗಳು ಬಂದಿದ್ದು, ಉತ್ತಮ ಪ್ರಬಂಧಕ್ಕೆ ಪ್ರಶಸ್ತಿ ನೀಡಲಾಗುವುದು. ಮುಂಬೈ, ಪುಣೆ, ಮದನಪಲ್ಲಿ, ಮಣಿಪಾಲ್, ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಸಂಶೋಧಕರು, ವಿಜ್ಞಾನಿಗಳು ಸಮ್ಮೇಳನಕ್ಕೆ ಆಗಮಿಸಲಿದ್ದಾರೆ. ನ.9ರಂದು ಸಮ್ಮೇಳನದ ಸಮಾರೋಪ ನಡೆಯಲಿದೆ ಎಂದರು.

ಸಮ್ಮೇಳನದಲ್ಲಿ 165 ಪೇಪರ್ ಪ್ರೆಸೆಂಟೇಷನ್ ಇರಲಿದೆ. ಮುಂಬೈ, ಪುಣೆ, ಮದನಪಲ್ಲಿ, ಮಣಿಪಾಲ್, ಬೆಂಗಳೂರು ಸೇರಿದಂತೆ ವಿವಿದೆಡೆಗಳಿಂದ ಸಂಶೋಧಕರು, ವಿಜ್ಞಾನಿಗಳು ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಡಿ.ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಪ್ರಾಂಶುಪಾಲ ವೆಂಕಟರಾಮು, ಜಯ ಕುಮಾರಿ, ಡಾ.ಸುಧಾಕರ್, ಚಂದ್ರ ಕುಮಾರಿ, ರವಿ ಅಯ್ಯರ್, ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

MFGE In the Eyes of the Press.....

STAR OF MYSORE

Friday 8th November 2019

12th National Women's Science Congress to conclude tomorrow



Mysuru, Nov. 8 (RKB&US)- A three-day 12th National Women's Science Congress organised by Matru Vedike (Women Scientists Forum) and Swadeshi Vijnana Andolana, Karnataka, in association with Mahajana First Grade College began yesterday morning at Mahajana PG Centre on KRS Road here.

About 200 women Scientists and Researchers are participating in the event featuring lectures and discussions on various scientific and general topics.

Inaugurating the programme, Scientist Dr. Indira Narayan Swamy opined that a student should basically have an aptitude to learn with a positive attitude.

She asserted that there is no alternative to hard work to succeed in career. She suggested career-oriented women to update with recent developments in the relevant field failing which the person could be sidelined. She contended that everyone would be a genius in some aspect which should be properly channelised.

Marie Curie Mahila Vijnana Puraskara was conferred on Muthayya Vanitha, Project Director, Chandrayaan-2 of Indian Space Research Organisation (ISRO).

C.V. Raman Mahila Vijnana Puraskara was conferred on Dr. N. Kalaiselvi, Director, Central Electrochemical Research Institute, Karaikudi, Tamil Nadu.

Mahajana Education Society (MES) Hon. Secretary Dr. T. Vijayalakshmi Muralidhar presided. Matru Vedike Chairperson Dr. Y.S. Gayathri, MES Administrative Officer P. Sarojamma and others were present.

THE TIMES OF INDIA

FRIDAY, NOVEMBER 8, 2019

'Improving skills a prerequisite in today's tech-driven world'

TIMES NEWS NETWORK

Mysuru: Highlighting the need for professionals across the board to stay abreast of the latest advancements in their respective fields and acquire skills to meet the demands of the increasingly technology-driven market, former director of the Aeronautical Development Agency Indira Narayanaswamy on Thursday said, "If professionals are not constantly learning new things, they will, sooner than later, be confronted with the prospect of becoming irrelevant."

TOI



ALL SMILES: Marie Curie Mahila Vijnana Puraskara was awarded to Muthaya Vanitha, project director, Chandrayaan-2, and CV Raman Mahila Vijnana Puraskara to N Kalaiselvi, director, Central Electro Chemical Research Institute

NATIONAL WOMEN'S SCIENCE CONGRESS

Indira, who inaugurated the three-day 12th National Women's Science Congress organised by Women Scientists' Forum, Swadeshi Vijnana Andolana Karnataka along with SBRR Mahajana First-Grade College, said that passion for one's job must drive the engine of a professional's growth in his or her career. "If you are passionate about something, and work dedicatedly in that field, you will doubtless be successful. Furthermore, you will hone your skills based on your passions. Also, one must be proactive in order to make a mark in one's chosen field. The American scientist and visionary Thomas Alva Edison once said that success and failure were but the two sides of the same coin. Failure is just another chance to make a fresh beginning with more information," she added.

Women scientists who have left an indelible imprint in their chosen fields were feted on the occasion. Project director for Chandrayaan-2 Muthaya Vanitha was awarded the Marie Curie Mahila Vijnana Puraskara, while director of Council of Scientific and Industrial Research-Central Electro Chemical Research Institute, Karaikudi N Kalaiselvi took home the CV Raman Mahila Vijnana Puraskara honour.

Vanitha said that the backing of the entire country that the Indian Space Research Organisation (Isro) received and the unity of the country that was on display was the true triumph of Chandrayaan-2. "It was a challenging project. We worked day and night to ensure its success. We travelled to the South Pole to simulate the conditions on the moon, besides creating craters in Challakere, Chitradurga. But it was the knowledge of all of India being with us that gave us great satisfaction. A lot of children wrote to us about having inspired them," Vanitha added.

'Award named after Raman equivalent to Nobel for me'

A visibly elated Kalaiselvi, dedicating her award to the Central Electro Chemical Research Institute, said that she was as pleased at having received the CV Raman Mahila Vijnana Puraskara as she would have been had she received the Nobel Prize. "This recognition has only increased my sense of responsibility. Our institute is working on green and sustainable technology in a world where the content of carbon particles is increasing," Kalaiselvi said.

ವಿಜಯ ಕರ್ನಾಟಕ

ಸಮಸ್ತ ಕನ್ನಡಿಗರ ಹೆಮ್ಮೆ

ಶುಕ್ರವಾರ, 8 ನವೆಂಬರ್ 2019

ವಿಜ್ಞಾನದಲ್ಲಿ ಸೋಲೂ ಗೆಲ್ಲುವ ಅವಕಾಶ ಸೃಷ್ಟಿಸುತ್ತೆ ಎಂದ ವಿಜ್ಞಾನಿ

ವಿಕ ಸುದ್ದಿಲೋಕ ಮೈಸೂರು

ಸ್ವದೇಶಿ ನಿರ್ಮಿತ ಸೂಪರ್‌ಸಾನಿಕ್ ಏರ್ ಕ್ರಾಫ್ಟ್ ತೇಜಸ್ ಯುದ್ಧ ವಿಮಾನ ನಮ್ಮ ದೇಶದ ಹೆಮ್ಮೆ ಎಂದು ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ(ಎಡಿಎ)ಯ ನಿವೃತ್ತ ತಾಂತ್ರಿಕ ನಿರ್ದೇಶಕಿ ಡಾ.ಇಂದಿರಾ ನಾರಾಯಣಸ್ವಾಮಿ ಹೇಳಿದರು.

ಎಡಿಎ ನಿವೃತ್ತ ತಾಂತ್ರಿಕ ನಿರ್ದೇಶಕಿ ಡಾ.ಇಂದಿರಾ ನಾರಾಯಣಸ್ವಾಮಿ ಅಭಿಮತ

ಮಹಿಳಾ ವಿಜ್ಞಾನ ಸಂಸ್ಥೆಯಾದ ಮಾತೃ ವೇದಿಕೆ, ಸ್ವದೇಶಿ ವಿಜ್ಞಾನ ಆಂದೋಲನ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಮೇಟಗಳ್ಳಿಯ ಕಾಲೇಜಿನ ಆವರಣದಲ್ಲಿ ಆಯೋಜಿಸಿರುವ 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಎಡಿಎನಲ್ಲಿ ತಾಂತ್ರಿಕ ನಿರ್ದೇಶಕಿಯಾಗಿ ತೇಜಸ್ ಲಘು ಯುದ್ಧ ವಿಮಾನ ಸಿದ್ಧಪಡಿಸುವ ಯೋಜನೆಯಲ್ಲಿನ ತಮ್ಮ ಅನುಭವ ಹಂಚಿಕೊಂಡರು.

ಸ್ವದೇಶಿ ಲಘು ಯುದ್ಧ ವಿಮಾನ ತೇಜಸ್ ವಿನ್ಯಾಸಗೊಳಿಸುವ ಕಾರ್ಯದಲ್ಲಿ ಭಾಗಿಯಾಗಿದ್ದು ಬಹುದೊಡ್ಡ ಅನುಭವ. ಅಲ್ಲಿ ಹೊಸ ಸವಾಲು ಮತ್ತು ಸಮಸ್ಯೆಗಳು ಎದುರಾಗುತ್ತಿದ್ದವು. ತೇಜಸ್ ಮುಖ್ಯ ವಿನ್ಯಾಸಕ ಕೋಟಾ ಹರಿನಾರಾಯಣ ಅವರ ಸ್ಫೂರ್ತಿದಾಯಕ ಮಾತುಗಳಿಂದ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಯಿತು. ಅಂತಿಮವಾಗಿ 2016ರಲ್ಲಿ ಭಾರತೀಯ ಪಾಯು ಸೇನೆ ಪರೀಕ್ಷೆ ನಡೆಸಿ ಯಶಸ್ವಿಯಾಯಿತು. ಸೇನೆಗೆ 324 ತೇಜಸ್ ಯುದ್ಧ ವಿಮಾನವನ್ನು ಹಸ್ತಾಂತರಿಸಲಾಯಿತು ಎಂದು ತಮ್ಮ ಅನುಭವ ಬಿಚ್ಚಿಟ್ಟರು.

ನಮ್ಮ ಕಚೇರಿಯಲ್ಲಿ ಯಾವುದೇ ಲಿಂಗ ತಾರತಮ್ಯ ಇರಲಿಲ್ಲ. ವೃತ್ತಿ ಕೌಶಲ್ಯಕ್ಕೆ ಬೆಲೆ ನೀಡುತ್ತಿದ್ದರು. ಆದ್ದರಿಂದಲೇ ಸಾಧನೆ ಸಾಧ್ಯವಾಯಿತು. ನಮಗೆ ಯಾವ ಕ್ಷೇತ್ರದಲ್ಲಿ, ಅಥವಾ ವಿಷಯದಲ್ಲಿ ಹಿಡಿತವಿರುತ್ತದೆಯೋ ಅದರ ಮೇಲೆ ಹೆಚ್ಚಿನ ಪರಿಶ್ರಮ ಹಾಕಬೇಕು. ಯಶಸ್ಸು ಮತ್ತು ಸೋಲು ಒಂದೇ ನಾಣ್ಯದ ಎರಡೆ ಮುಖ. ವಿಜ್ಞಾನ ತಂತ್ರಜ್ಞಾನದಲ್ಲಿ ಸೋಲು ಗೆಲ್ಲುವ ಅವಕಾಶ ನೀಡುತ್ತದೆ. ಐನ್‌ಸ್ಟೀನ್ ಹೇಳುವಂತೆ ಎಲ್ಲರೂ ಬುದ್ಧಿವಂತರೇ.



ಮೈಸೂರಿನಲ್ಲಿ ಗುರುವಾರ ಆರಂಭವಾದ 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಇಸ್ರೋದ ಚಂದ್ರಯಾನ-2 ಯೋಜನಾ ನಿರ್ದೇಶಕಿ ಮುತ್ತಯ್ಯ ವನಿತಾ ಅವರಿಗೆ ಹಾಗೂ ಸಿ.ವಿ.ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಕರ್ನೂಕುಡಿಯ ಸಿಎಸ್‌ಐಆರ್-ಸೆಂಟ್ರಲ್ ಎಲೆಕ್ಟ್ರೋ ಕೆಮಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕಿ ಡಾ.ಎಸ್.ಕಲೈಸೆಲ್ವಿ ಅವರಿಗೆ ಪ್ರದಾನ ಮಾಡಲಾಯಿತು.

ಆದರೆ ಅದನ್ನು ಸರಿಯಾದ ಸಮಯಕ್ಕೆ ಬಳಸಬೇಕು ಎಂದರು.

ಪ್ರತಿಷ್ಠಿ ಪ್ರದಾನ: ಸರ್ ಸಿ.ವಿ.ರಾಮನ್ ಮತ್ತು ಮೇಡಂ ಮೇರಿ ಕ್ಯೂರಿ ಜನ್ಮ ದಿನದ ಅಂಗವಾಗಿ ಮೇರಿ ಕ್ಯೂರಿ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಇಸ್ರೋದ ಚಂದ್ರಯಾನ-2 ಯೋಜನಾ ನಿರ್ದೇಶಕಿ ಮುತ್ತಯ್ಯ ವನಿತಾ ಅವರಿಗೆ ಹಾಗೂ ಸಿ.ವಿ.ರಾಮನ್ ಮಹಿಳಾ ವಿಜ್ಞಾನ ಪುರಸ್ಕಾರವನ್ನು ಕರ್ನೂಕುಡಿಯ ಸಿಎಸ್‌ಐಆರ್-ಸೆಂಟ್ರಲ್ ಎಲೆಕ್ಟ್ರೋ ಕೆಮಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ನಿರ್ದೇಶಕಿ ಡಾ. ಎಸ್.ಕಲೈಸೆಲ್ವಿ ಅವರಿಗೆ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ಎಸ್. ಕಲೈಸೆಲ್ವಿ ''ರಾಮನ್ ಅವರು ಆಕಾಶ ಏಕೆ ನೀಲಿಯಾಗಿದೆ ಎಂಬ ಕುತೂಹಲದಿಂದ ಸಂಶೋಧನೆ ನಡೆಸಿದ್ದರಿಂದ ಅವರಿಗೆ ನೋಬೆಲ್ ಸಿಕ್ಕಿತು. ಆದರೆ, ಈಗ ನೀಲಿ ಆಕಾಶ ತನ್ನ ಮೂಲ ಬಣ್ಣ ಕಳೆದುಕೊಂಡು ಕಳೆಗುಂದುತ್ತಿದೆ. ಕಾರ್ಬನ್ ಡೈಆಕ್ಸೈಡ್, ಮೊನಾಕ್ಸೈಡ್ ಮತ್ತು ಕಾರ್ಬನ್ ಫುಟ್ ಪ್ರಿಂಟ್‌ನಿಂದ ಆಕಾಶ ಕಪ್ಪು ಬಣ್ಣಕ್ಕೆ ತಿರುಗಿದೆ. ವಾತಾವರಣದಲ್ಲಿ ಕಾರ್ಬನ್ ಕಡಿಮೆ ಮಾಡುವುದು ಸರಕಾರದ ಕೆಲಸವಷ್ಟೇ ಅಲ್ಲ ಪ್ರತಿಯೊಬ್ಬರ ಕರ್ತವ್ಯ. ಈ ನಿಟ್ಟಿನಲ್ಲಿ ನಾನು ಸಹ ಇದೇ ವಿಚಾರವಾಗಿ ಸಂಶೋಧನೆ ನಡೆಸುತ್ತಿದ್ದೇನೆ'' ಎಂದು ತಿಳಿಸಿದರು.

ಮುತ್ತಯ್ಯ ವನಿತಾ ಮಾತನಾಡಿ, ''ಚಂದ್ರಯಾನ-2, ಚಂದ್ರಯಾನ-1 ಗಿಂತಲೂ ಭಿನ್ನ. ಯಾರೂ ಹೋಗದ ಚಂದ್ರನ ದಕ್ಷಿಣ ಧ್ರುವ ಆಯ್ಕೆ ಮಾಡಿಕೊಂಡೆವು. ನಮ್ಮ ಸಬ್ಬಂದಿ ಹಗಲು-ರಾತ್ರಿ ಕೆಲಸ ಮಾಡಿದೆವು. ಯಶಸ್ವಿ ಲ್ಯಾಂಡಿಂಗ್‌ಗಾಗಿ ಚಿತ್ರದುರ್ಗದ ಇಸ್ರೋ ಕೇಂದ್ರದಲ್ಲಿ ಹಲವಾರು ಪ್ರಯೋಗ ನಡೆಸಿದವು. ಚಂದ್ರಯಾನ-2 ಕೊನೆಯವರೆಗೂ ನಮ್ಮ ಯೋಜನೆ ತಲುಪಿತು. ಆದರೆ, ಕೊನೆ ಕ್ಷಣದಲ್ಲಿ ಸಮಸ್ಯೆ ಉಂಟಾಯಿತು. ಇಡೀ ಭಾರತೀಯರನ್ನು ಒಗ್ಗೂಡಿಸಿದೆ. ಮಕ್ಕಳು ಸಹ ಪತ್ರ ಬರೆದು ಇಸ್ರೋಗೆ ಸಾಂತ್ವನ ಹೇಳಿದರು'' ಎಂದು ತಿಳಿಸಿದರು.

ಮೂರು ದಿನ ನಡೆಯುವ ಸಮ್ಮೇಳನದಲ್ಲಿ ದೇಶದ ನಾನಾ ಭಾಗದ ಮಹಿಳಾ ವಿಜ್ಞಾನಿಗಳು ಪ್ರಬಂಧ ಮಂಡಿಸಲಿದ್ದಾರೆ. ಮಾತೃ ವೇದಿಕೆ ಅಧ್ಯಕ್ಷೆ ಡಾ.ವೈ.ಎಸ್.ಗಾಯಿತ್ರಿ, ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಡಿ.ವಿಜಯಲಕ್ಷ್ಮಿ ಮುರುಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ನರೋಜಮ್ಮ ಸಮ್ಮೇಳನದ ಸಂಯೋಜಕಿ ಎಂ.ಎಸ್.ರಶ್ಮಿ ಆರ್ಸ್ ಇದ್ದರು.

DECCAN HERALD

Thursday
November 7, 2019

Matru Vedike and SBRR Mahajana First Grade College: 12th National Women's Science Congress, commemorating birth anniversary of Madam Marie Curie and Sir C V Raman, inauguration by former scientist Indira Narayanaswamy, T Vijayalakshmi Muralidhar, honorary secretary, Mahajana Education Society presides over the programme, Marie Curie Mahila Science Award to be presented to Muthayya Vanitha, project director, Chandrayaan-2 of ISRO, C V Raman Mahila Vijnana Award to be presented to N Kalaiselvi, director, CSIR-Central Electro Chemical Research Institute, Karaikudi, college premises, KRS Road, Metagalli, 10 am.

ವಿಜಯ ಕರ್ನಾಟಕ

ಗುರುವಾರ, 7 ನವೆಂಬರ್ 2019

ಮಾತೃ ವೇದಿಕೆ, ಸ್ವದೇಶಿ ವಿಜ್ಞಾನ ಆಂದೋಲನ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು : 12ನೇ ಮಹಿಳಾ ವಿಜ್ಞಾನ ಸಮ್ಮೇಳನ. ಉದ್ಘಾಟನೆ-ಆರ್‌ಯುಎಎಸ್‌ನ ಸಂಶೋಧಕ ಪ್ರಾಧ್ಯಾಪಕ ಡಾ.ಇಂದಿರಾ ನಾರಾಯಣಸ್ವಾಮಿ. ಅಧ್ಯಕ್ಷತೆ-ಮಹಾಜನ ಶಿಕ್ಷಣ ಸಂಸ್ಥೆಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿಮುರಳೀಧರ್. ಪ್ರಶಸ್ತಿ ಪುರಸ್ಕಾರ-ಇಸ್ರೋದ ಚಂದ್ರಯಾನ-2 ನಿರ್ದೇಶಕ ಮುತ್ತಯ್ಯ ವನಿತಾ, ಸಿಎಸ್‌ಐಆರ್-ಸೆಂಟ್ರಲ್ ಎಲೆಕ್ಟ್ರೊ ಕೆಮಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ನಿರ್ದೇಶಕಿ ಡಾ. ಎನ್. ಕಲೈ ಸೆಲ್ವಿ ಕಾಲೇಜು ಸಭಾಂಗಣ. ಕೆ.ಆರ್.ಎಸ್. ರಸ್ತೆ. ಮೇಟಗಳ್ಳಿ. ಬೆ. 10.

ಆಂದೋಲನ

ದಿನ ಪತ್ರಿಕೆ

ಶುಕ್ರವಾರ, ನವೆಂಬರ್ ೮, ೨೦೧೯

■ **ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ**
ಬೆಳಿಗ್ಗೆ 10.30ಕ್ಕೆ, ಸ್ವದೇಶಿ ವಿಜ್ಞಾನ ಆಂದೋಲನ, ಮಹಾಜನ ಪ್ರಥಮ ದರ್ಜೆ ಕಾಲೇಜು, ವುಮೆನ್ ವೆಲ್‌ನೆಸ್; ಮಿಥ್ಸ್ ಅಂಡ್ ರಿಯಾಲಿಟೀಸ್ ಕುರಿತು-ಸ್ತ್ರೀ ರೋಗ ತಜ್ಞೆ ಡಾ.ದೇವಿಕಾ ಜನಾರ್ಧನ್, ಸ್ಥಳ-ಮಹಾಜನ ಸ್ನಾತಕೋತ್ತರ ಕೇಂದ್ರದ ಆವರಣ, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 7 ನವೆಂಬರ್ 2019

■ **ಮಹಿಳಾ ವಿಜ್ಞಾನಿಗಳ ಒಕ್ಕೂಟ, ಸ್ವದೇಶಿ ವಿಜ್ಞಾನ ಆಂದೋಲನ-ಕರ್ನಾಟಕ, ಮಹಾಜನ ಪ್ರಥಮ ದರ್ಜೆ ಕಾಲೇಜು:** 12ನೇ ರಾಷ್ಟ್ರೀಯ ಮಹಿಳಾ ವಿಜ್ಞಾನ ಸಮ್ಮೇಳನ, ಉದ್ಘಾಟನೆ: ನಿವೃತ್ತ ವಿಜ್ಞಾನಿ ಡಾ. ಇಂದಿರಾ ನಾರಾಯಣಸ್ವಾಮಿ, ಅಧ್ಯಕ್ಷತೆ: ಮಹಾಜನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಮಹಾಜನ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಎಸ್. ರಸ್ತೆ ಮೇಟಗಳ್ಳಿ, ಬೆಳಿಗ್ಗೆ 10ಕ್ಕೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಶನಿವಾರ • ಡಿಸೆಂಬರ್ 28, 2019



ಮೈಸೂರಿನ ಜಿಎಸ್‌ಎಸ್‌ಎಸ್ ಪ್ರಥಮದರ್ಜೆ ಕಾಲೇಜಿನಲ್ಲಿ ಶುಕ್ರವಾರ ನಡೆದ ಸಂಶೋಧನಾ ವೇದಿಕೆಯ ಮಾಸಿಕ ಕಾರ್ಯಕ್ರಮದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಭಾಸ್ಕರ್ ಅವರು ಸಂಶೋಧನಾ ಪ್ರಬಂಧ ಮಂಡಿಸಿದರು

ಆಂದೋಲನ
ದಿನ ಪತ್ರಿಕೆ
ಭಾನುವಾರ, ಡಿಸೆಂಬರ್ ೧೫, ೨೦೧೯

ಸಾಂಸ್ಕೃತಿಕ ದಾಳಿಯಿಂದ ದೇಶ ಬಿಡುಗಡೆ ಆಗಿಲ್ಲ

ಡಾ.ಹಿ.ಶಿ.ರಾಮಚಂದ್ರೇಗೌಡರ 'ಭೂಮಿ ಮತ್ತು ಬೀಜ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಎಸ್.ಜಿ.ಸಿದ್ದರಾಮಯ್ಯ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರೇಗೌಡ ಅವರ 'ಭೂಮಿ ಮತ್ತು ಬೀಜ' ಕೃತಿ ಲೋಕಾರ್ಪಣೆಗೊಳಿಸಲಾಯಿತು. ಪೊ.ಎಸ್.ಜಿ.ಸಿದ್ದರಾಮಯ್ಯ, ಡಾ.ಹಿ.ಶಿ.ರಾಮಚಂದ್ರೇಗೌಡ, ಡಾ.ಧರಣೀದೇವಿ ಮಾಲಗತ್ತಿ, ಎಸ್.ಆರ್.ರಮೇಶ್, ಬಿ.ಆರ್.ಜಯಕುಮಾರಿ, ಡಾ.ಎಚ್.ಆರ್.ತಿಮ್ಮೇಗೌಡ, ಪ್ರಕಾಶ್, ವಿನೋದಮ್ಮ ಚಿತ್ರದಲ್ಲಿದ್ದಾರೆ.

ಕರಾವಳಿ ಭಾಗದಲ್ಲಿ ಪತ್ರಿಕೋದ್ಯಮದ ಮೂಲಕ ಛಾಪು ಮೂಡಿಸಿದ ವಡ್ಡರ್ಸೆ ರಘುರಾಂ ಶೆಟ್ಟರಿಗೆ 'ಭೂಮಿ ಮತ್ತು ಬೀಜ' ಕೃತಿಯನ್ನು ಅರ್ಪಿಸಿರುವುದು ಮೆಚ್ಚುವಂತ ಹದ್ದು. ಇಲ್ಲಿನ ಲೇಖನಗಳಲ್ಲಿ ಸುಮಾರು 50ಕ್ಕಿಂತ ಹೆಚ್ಚು ಸಂಶೋಧನೆ ಮಾಡಬಹುದಾದ ಕಚ್ಚಾ ಸರಕಿದೆ.

- ಡಾ.ಧರಣೀದೇವಿ ಮಾಲಗತ್ತಿ, ಲೇಖಕಿ

ಗ್ರಹಿಕೆ ಮತ್ತು ಹೋಲಿಕೆ, ವಿಜ್ಞಾನ ಹಾಗೂ ಸಮಾಜಕ್ಕೆ ಬಹಳ ಮುಖ್ಯ. ಇಂದಿನ ಯುವ ಸಮುದಾಯ ಜಾತಿಯಿಂದ ದೂರವಿರ ಬೇಕು. ನಮಗೆ ಬೇಕಾಗಿರುವುದು ಮತದಾ ರರಲ್ಲ. ಜ್ಞಾನಿಗಳು ಮತ್ತು ವಿಜ್ಞಾನಿಗಳು.

- ಡಾ.ಹಿ.ಶಿ.ರಾಮಚಂದ್ರೇಗೌಡ, ಜಾನಪದ ವಿದ್ವಾಂಸ

ಮೈಸೂರು,ಡಿ.14– ವಸಹಾತುಶಾಹಿಗಳನ್ನು ದೇಶದಿಂದ ಹೊರಗೆ ಓಡಿಸಿದ್ದೇವೆ. ಆದರೆ ಸಾಂಸ್ಕೃತಿಕ ಆಕ್ರಮಣಕಾರರಿಂದ ಬಿಡುಗಡೆ ಆಗಿಲ್ಲ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷಪೊ ಎಸ್.ಜಿ.ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಮೈಸೂರು ಭೂಮಿ ಬಳಗ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ನಡೆದ ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರೇಗೌಡ ಅವರ 'ಭೂಮಿ ಮತ್ತು ಬೀಜ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತವನ್ನು ಪೋರ್ಚುಗೀಸರು, ಫ್ರೆಂಚರು, ಡಚ್ಚರು, ಬ್ರಿಟಿಷರು ಆಳಿದರು. ಅವರ ವಿರುದ್ಧ ಹೋರಾಡಿ ಜಯಿಸಿದೆವು. ಆದರೆ ಪುರೋಹಿತಶಾಹಿ ವ್ಯವಸ್ಥೆ ಇನ್ನೂ ಜೀವಂತವಾಗಿದೆ. ಈ ಸಾಂಸ್ಕೃತಿಕ ವಸಹಾತುಶಾಹಿಯನ್ನು ಒಪ್ಪಿಕೊಂಡೇ ಬದುಕುತ್ತಿದ್ದೇವೆ ಎಂದರು.

ಪ್ರತಿಗಾಮಿ ವ್ಯವಸ್ಥೆಯ ವಿರುದ್ಧ ಕಾಲಕಾಲಕ್ಕೆ ದೇಶದಲ್ಲಿ ಬಂಡಾಯಗಳಾಗಿವೆ. ನಾಸ್ತಿಕರು, ಅಜೀವಿಕರು, ಬೌದ್ಧರು, ಜೈನರು, ಮಲೆಮಹದೇಶ್ವರ, ಮಂಟೇಸ್ವಾಮಿ– ಇವರೆಲ್ಲರೂ ಚಾತುರ್ವರ್ಣ ವ್ಯವಸ್ಥೆ ಖಂಡಿಸಿದ್ದಾರೆ. ಕುವೆಂಪು ಅವರು 'ಮೌಢ್ಯಕ್ಕೆ ಗುಂಡು ಹೊಡೆಯಿರಿ' ಎಂದಿದ್ದಾರೆ ಎಂದು ಸ್ಮರಿಸಿದರು. ಪ್ರತಿಗಾಮಿ ಶಕ್ತಿಯಿಂದ ಬಿಡುಗಡೆ ಹೊಂದಿ, ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಹಿ.ಶಿ.ರಾಮಚಂದ್ರೇಗೌಡ ಅವರ 'ಭೂಮಿ ಮತ್ತು ಬೀಜ' ಕೃತಿ ಪ್ರಮುಖ ಪಾತ್ರ ವಹಿಸಿದೆ. ಶ್ರಮಜೀವಿಗಳ ಸಂಕಟಗಳನ್ನು ಅಭಿವ್ಯಕ್ತಿಸಿರುವ ಹಿ.ಶಿ.ರಾಮಚಂದ್ರೇಗೌಡ ಅವರು ಬಂಡಾಯಗಾರರಾಗಿ ನಿಲ್ಲುತ್ತಾರೆ ಎಂದು ಅಭಿಪ್ರಾಯಪಟ್ಟರು.

ಈ ದೇಶದೊಳಗೆ ಮಹತ್ವವಾದದ್ದು ಕಳೆದುಹೋಗುತ್ತಿದೆ ಎಂಬುದು ಹಿ.ಶಿ.ರಾಮಚಂದ್ರೇಗೌಡ ಅವರಂತಹ ವ್ಯಕ್ತಿತ್ವಗಳ ಕಳವಳ. ಈ ಕೃತಿಯಲ್ಲಿನ 26 ಲೇಖನಗಳಲ್ಲಿಯೂ ಆ ಕಳವಳ, ಸಂಕಟ, ಭಯವನ್ನು ಹಿಶಿರಾ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಲೇಖಕಿ ಡಾ.ಧರಣೀದೇವಿ ಮಾಲಗತ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಹಾಜನ ಕಾಲೇಜಿನ ಸಿಇಒ ಎಸ್.ಆರ್.ರಮೇಶ್, ಪ್ರಭಾರ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸೆಹಾಯಕ ಪ್ರಾಧ್ಯಾಪಕರಾದ ಪ್ರಕಾಶ್, ವಿನೋದಮ್ಮ ಇತರರು ಹಾಜರಿದ್ದರು.

DECCAN HERALD
WWW.DECCANHERALD.COM

Tuesday
December 17, 2019



Writer Prof S G Siddaramaiah releases the book 'Bhoomi Mattu Beeja' written by Hi Shi Ramachandregowda at a programme at Mahajan First Grade College, in Mysuru. Police Training School Principal Dharani Devi Malagatti is seen. DH PHOTO

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 15.12.2019

ಬಹುತ್ವ ಭಾರತದಲ್ಲಿ ಆಕ್ರಮಣ ಸಂಸ್ಕೃತಿ ಸಲ್ಲದು

ಡಾ.ಹಿಶಿರಾ ಅವರ 'ಭೂಮಿ ಮತ್ತು ಬೀಜ' ಕೃತಿ ಲೋಕಾರ್ಪಣೆ | ಪ್ರೊ.ಎಸ್.ಜಿ. ಸಿದ್ದರಾಮಯ್ಯ

• **ಕನ್ನಡಪ್ರಭ ವಾರ್ತೆ** ಮೈಸೂರು

ಬಹುತ್ವ ಭಾರತದಲ್ಲಿ ಆಕ್ರಮಣ ಸಂಸ್ಕೃತಿ ಸಲ್ಲದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಹೇಳಿದರು.

ಭೂಮಿ ಬಳಗ ಹಾಗೂ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು ಶನಿವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಡಾ.ಹಿ.ಶಿ. ರಾಮಚಂದ್ರಗೌಡ ಅವರ 'ಭೂಮಿ ಮತ್ತು ಬೀಜ' ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪ್ರಸ್ತುತ ದೇಶದಲ್ಲಿ ನೆಲಮೂಲ, ಜೀವಪರ ಸಂಸ್ಕೃತಿಯನ್ನು ಆಕ್ರಮಣ ಸಂಸ್ಕೃತಿ ಅಧೀನಕ್ಕೆ ತೆಗೆದುಕೊಳ್ಳುವಂತೆ ತೋರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಚಾತುರ್ವಣ ಎಂಬುದು ದೇಶಕ್ಕೆ ಶಾಪ. ವೈದಿಕ ಶಕ್ತಿಗಳು ನಮ್ಮನ್ನು ಆಳುತ್ತಿವೆ. ದೇಶದಲ್ಲಿ ಮಹತ್ತರವಾದುದು ಕಳೆದು ಹೋಗುತ್ತಿದೆ, ಇದು ಪ್ರಜಾಸತ್ತಾತ್ಮಕವಾದ, ಬಹುತ್ವಭಾರದಲ್ಲಿ ಸರಿಯಲ್ಲ. ಯುವಕರು ಇಂತಹವುಗಳಿಂದ ಪ್ರೇರಣೆ, ಪ್ರಭಾವಕ್ಕೆ ಒಳಗಾಗಬಾರದು ಎಚ್ಚರವಹಿಸಬೇಕು ಎಂದು ಅವರು, ಮಡೆಸ್ನಾನ ಅಜ್ಞಾನದ ಆಚರಣೆ ಎಂದು ಟೀಕಿಸಿದರು.

ಜನಪದ ಪಳಯಳಿಕೆಯಲ್ಲ, ಜೀವಂತ ಬದುಕು. ಜನಪದ ಜೀವಪರ, ಕೃಷಿಯಲ್ಲೂ ಸಂಸ್ಕೃತಿ ಇದೆ. ಪ್ರೊ.ಹಿಶಿರಾ ಅವರು ಜನಪದ ಸಂಪತನ್ನು ನೆಲೆನಿಷ್ಠೆಯಿಂದ ವಿಶ್ಲೇಷಿಸುವ ಜಾನಪದ ವಿದ್ವಾಂಸರು. ಅವರ ವಿಶ್ಲೇಷಣೆಯಲ್ಲಿ ಪ್ರಾದೇಶಿಕ ಆಸ್ಮಿತೆ ಕಂಡುಬರುತ್ತದೆ. ಕೃತಿಯ ಶೀರ್ಷಿಕೆ ಭೂಮಿ ಮತ್ತು ಬೀಜ ಸಹ ಪ್ರಕೃತಿ ಮತ್ತು ಸಂಸ್ಕೃತಿ ಬಿಂಬಿಸುವಂಥದ್ದು ಎಂದರು.

ಅಧ್ಯಕ್ಷತೆ ವಹಿಸಿದ್ದ ಲೇಖಕಿ ಡಾ.ಧರಣಿದೇವಿ ಮಾಲಗತ್ತಿ ಮಾತನಾಡಿ, ಕೃತಿಯನ್ನು 'ಮುಂಗಾರು' ಪತ್ರಿಕೆಯ ಸಂಪಾದಕರಾಗಿದ್ದ ಮೇರು ವ್ಯಕ್ತಿತ್ವದ ವಡ್ಡರ್ಸೆ ರಘುರಾಮಶೆಟ್ಟಿಗೆ ಅರ್ಪಿಸಿರುವುದು ಶ್ಲಾಘನೀಯ ಎಂದರು. ಈ ಕೃತಿಯಲ್ಲಿ ರೈತರು, ಜನಪದ, ಜಾಗತೀಕರಣ, ಯಾಂತ್ರೀಕರಣ ಮತ್ತಿತರ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಮಹಿಳೆಯರ ವಿಷಯ ಬಂದಾಗ ಉತ್ಪಾದನೆ, ಪ್ರಜನನ, ಸಮೂದಾಯದ ಪ್ರಸ್ತಾಪ ವಿದೆ. ಇದರಲ್ಲಿ ಪುರುಷನ ಪಾಲೂ ಇದೆ. ಭೂಮಿ, ಪ್ರಕೃತಿ, ಹೆಣ್ಣಿನ ಜೊತೆ ಗಂಡನ್ನು ಸೇರಿಸಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಕೃತಿಯಕರ್ತೃ ಡಾ.ಹಿ.ಶಿ. ರಾಮಚಂದ್ರಗೌಡ ಮಾತನಾಡಿ, ಗಾಂಧಿ, ಲೋಹಿಯಾ, ಅಂಬೇಡ್ಕರ್, ಬುದ್ಧನ ನಾಡಿದು. ಯುವಕರಿಗೆ ಗೃಹಿಕೆ ಮತ್ತು ಹೋಲಿಕೆಮುಖ್ಯ. ಜಾತೀಯತೆಬೇಡ. ಜ್ಞಾನಿಗಳಾಗಿ, ವಿಜ್ಞಾನಿಗಳಾಗಿ ಎಂದ ಅವರು, ವಿದ್ಯಾರ್ಥಿಗಳು ಗಂಭೀರತೆ ಉಳಿಸಿಕೊಳ್ಳಬೇಕು. ಪುಸ್ತಕ ಓದಿ, ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಪುಸ್ತಕ ಓದುವುದಕ್ಕಿಂತ ಮತ್ತೊಂದು ಜ್ಞಾನ ಇಲ್ಲ ಎಂದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ ಮಾತನಾಡಿ, ಓದುವ ಸಂಸ್ಕೃತಿ ಮರೆಯಾಗುತ್ತಿದೆ ಎಂದು ವಿಷಾದಿಸಿದರು. ಯುವಕರು ಓದಿನ ಕಡೆ ಗಮನಹರಿಸಬೇಕು ಎಂದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಉಪನ್ಯಾಸಕ ಪ್ರಕಾಶ್ ನಿರೂಪಿಸಿದರು. ಭಾರತಿ ಹಾಗೂ ಮಾನವಿ ಭಾವಗೀತೆ ಹಾಡಿದರು. ಸಹಾಯಕ ಪ್ರಾಧ್ಯಾಪಕ ಸಿ.ಎಂ. ಕಿರಣ್‌ಕುಮಾರ್ ವಂದಿಸಿದರು. ಜಿಲ್ಲಾ ಕಸಾ ಪ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಡಾ.ಪಂಡಿತಾರಾಧ್ಯ, ಡಾ.ಹಾ.ತಿ. ಕೃಷ್ಣೇಗೌಡ. ವ.ನಂ. ಶಿವರಾಮು, ಟಿ. ಸತೀಶ್ ಜವರೇಗೌಡ, ಬಿ.ಎಸ್. ನಾಗರತ್ನ ಕುಮಾರಿ, ಅಮೆರಿಕಾದ ತಾಂತ್ರಿಕ ತಜ್ಞ ಸುಧಾಕರಶೆಟ್ಟಿ ಕಾಪು ಮೊದಲಾದವರು ಪಾಲ್ಗೊಂಡಿದ್ದರು.



ಡಾ.ಹಿ.ಶಿ. ರಾಮಚಂದ್ರಗೌಡ ಅವರ 'ಭೂಮಿ ಮತ್ತು ಬೀಜ' ಕೃತಿಯನ್ನು ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಶನಿವಾರ ಲೋಕಾರ್ಪಣೆ ಮಾಡಿದರು. ಡಾ.ಎಚ್.ಆರ್. ತಿಮ್ಮೇಗೌಡ, ಬಿ.ಆರ್. ಜಯಕುಮಾರಿ, ಡಾ.ಧರಣಿದೇವಿ ಮಾಲಗತ್ತಿ, ಪ್ರೊ.ರಮೇಶ್, ಪ್ರಕಾಶ್ ಇದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಭಾನುವಾರ • ಡಿಸೆಂಬರ್ 15, 2019

ಸಾಹಿತಿ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಹೇಳಿಕೆ

'ಮಡೆಸ್ನಾನ ಅಜ್ಞಾನದ ಆಚರಣೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮಡೆಸ್ನಾನ ಜನಪದ ಆಚರಣೆ ಅಲ್ಲ; ಅಜ್ಞಾನದ ಆಚರಣೆ' ಎಂದು ಸಾಹಿತಿ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಶನಿವಾರ ಇಲ್ಲಿ ಹೇಳಿದರು.

ಭೂಮಿ ಬಳಗ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರಗೌಡ ಅವರ 'ಭೂಮಿ ಮತ್ತು ಬೀಜ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕುಕ್ಕೆ ಸುಬ್ರಹ್ಮಣ್ಯ ಮಲೆ ಕುಡಿಯರ ಮನೆ ದೈವ. ಯಾವುದೋ ಕಾಲಘಟ್ಟದಲ್ಲಿ, ಪ್ರಭುತ್ವ ಮತ್ತು ಪುರೋಹಿತಶಾಹಿ ಸೇರಿಕೊಂಡು ಇವರನ್ನು ಹೈಜಾಕ್ ಮಾಡುತ್ತವೆ. ಅದನ್ನು ಪ್ರತಿರೋಧಿಸಿ ಮಲೆ ಕುಡಿಯರು ಹೋರಾಟ ಮಾಡುತ್ತಾರೆ. ಇದರಲ್ಲಿ ಸೋತ ಮಲೆ ಕುಡಿಯರಿಗೆ ಶಿಕ್ಷೆ, ಅವಮಾನದ ಪ್ರತಿರೂಪವಾಗಿ ಉಂಡಎಲೆಗಳ ಮೇಲೆ ಉರುಳಾಡುವಂತಹ ಆಚರಣೆಯನ್ನು ತರಲಾಗಿದೆ' ಎಂದು ಹೇಳಿದರು.



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಹಿ.ಶಿ.ರಾಮಚಂದ್ರಗೌಡ ಅವರ 'ಭೂಮಿ ಮತ್ತು ಬೀಜ' ಕೃತಿಯನ್ನು ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಬಿಡುಗಡೆ ಮಾಡಿದರು

'ವಿದೇಶಗಳಿಂದ ಬಂದು ಆಕ್ರಮಣ ಮಾಡಿ ಇಲ್ಲಿ ವಸಾಹತು ಸ್ಥಾಪಿಸಿದವರನ್ನೆಲ್ಲ ಓಡಿಸಿದ್ದೇವೆ. ಆದರೆ. ಈ ದೇಶದ ಧಾರ್ಮಿಕ, ಸಾಂಸ್ಕೃತಿಕವಾದ ವಸಾಹತು ಆಕ್ರಮಣವನ್ನು ಓಡಿಸಲು ಸಾಧ್ಯವಾಗಿಲ್ಲ. ಈಗಲೂ ಇದು ನಮ್ಮನ್ನು ಆಳುತ್ತಿದೆ. ಚಾತುರ್ವರ್ಣ ವ್ಯವಸ್ಥೆ, ವೈದಿಕ ಪ್ರಣೀತ ಧರ್ಮ ಈ ದೇಶಕ್ಕೆ ದೊಡ್ಡ ಶಾಪವಾಗಿದೆ' ಎಂದರು.

ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರಗೌಡ ಮಾತನಾಡಿ, 'ನಾನು 7ನೇ ವಯಸ್ಸಿನವರೆಗೂ ಕುರಿ ಮೇಯಿಸುತ್ತಿದ್ದೆ. ಯಾರೋ ಶಾಲೆಗೆ ಸೇರಿಸಿದರು. ಜಾತ್ಯತೀತವಾಗಿ ಎಲ್ಲ ಮೇಷ್ಟ್ರುಗಳು ನನ್ನನ್ನು ಬೆಳೆಸಿದರು' ಎಂದು ನೆನಪು ಮಾಡಿಕೊಂಡರು.

'ನನ್ನ ಬರವಣಿಗೆ ವಿಜ್ಞಾನ, ಗಣಿತದ ರೀತಿಯಲ್ಲಿ ಇರುತ್ತದೆ. ಪದಗಳನ್ನು ವ್ಯರ್ಥ ಮಾಡಲು ಇಷ್ಟವಿಲ್ಲ. ಗಣಿತದ ಪ್ರಮೇಯಗಳ ರೀತಿಯಲ್ಲಿ ಬರವಣಿಗೆ ಇರುತ್ತದೆ ಎಂದು ಕೆಲವರು ಹೇಳುತ್ತಾರೆ' ಎಂದು ತಿಳಿಸಿದರು.

ಲೇಖಕಿ ಡಾ.ಧರಣಿದೇವಿ ಮಾಲಗತ್ತಿ ಮಾತನಾಡಿ, 'ಕೊಡುವ ಸ್ಥಾನದಲ್ಲಿ ಕೃಷಿಕರನ್ನು ಇಟ್ಟು ನೋಡುತ್ತೇವೆ. ಕೃಷಿಕರು ಕೇಳಿಕೊಳ್ಳುವ ಸ್ಥಿತಿ ಬಂದರೆ ಆ ನಾಡಿಗೆ ದೌರ್ಬಲ್ಯದ ಕಾಲ ಬಂದಿದೆ ಎಂದರ್ಥ. ಕೃಷಿಯಂತ್ರೋಪಕರಣಗಳಿಂದಾಗಿ ಮಹಿಳೆಯರು ಸೇರಿದಂತೆ ಅನೇಕರು ಕೆಲಸ ಕಳೆದುಕೊಂಡಿದ್ದಾರೆ' ಎಂದು ಹೇಳಿದರು.

ಹಿ.ಶಿ.ರಾಮಚಂದ್ರಗೌಡ ಅವರ ಮಗಳು ಮಾನವಿ ರೈತರ ಕುರಿತ ಗೀತೆಯನ್ನು ಹಾಡಿದರು.

ಕಾಲೇಜಿನ ಸಿಎಂಒ ರಮೇಶ್, ಪ್ರಭಾರಿ ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.

ಮುಖ್ಯಾಂಶಗಳು

- 'ಭೂಮಿ ಮತ್ತು ಬೀಜ' ಕೃತಿ ಬಿಡುಗಡೆ
- ಕಳೆದುಹೋಗುತ್ತಿದೆ ನಿಸರ್ಗಕ್ಕೆ ಪೂರಕವಾದ ಸಂಸ್ಕೃತಿ
- ಚಾತುರ್ವರ್ಣ ವ್ಯವಸ್ಥೆ ಈ ದೇಶಕ್ಕೆ ದೊಡ್ಡ ಶಾಪ: ಸಿದ್ಧರಾಮಯ್ಯ

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪೆಮ್ಮೆ
ಭಾನುವಾರ, 15 ಡಿಸೆಂಬರ್ 2019

ಬಹುತ್ವ ಸಂಸ್ಕೃತಿ ಅಪಾಯಕಾರಿ

ಮಹಾಜನ ಕಾಲೇಜಿನಲ್ಲಿ ಡಾ.ಹಿ.ಶಿ.ರಾಮಚಂದ್ರಗೌಡರ ಭೂಮಿ ಮತ್ತು ಬೀಜ ಕೃತಿ ಬಿಡುಗಡೆ

■ **ವಿಕ ಸುದ್ದಿಲೋಕ** ಮೈಸೂರು

ಬಹುತ್ವ ಭಾರತಕ್ಕೆ ಆಕ್ರಮಕಾರಿ ಸಂಸ್ಕೃತಿ ಆವರಿಸಿಕೊಂಡು, ನಮ್ಮ ಜಾನಪದದ ಸೊಗಡಿನ ನಾಶದತ್ತ ಕೊಂಡೊಯ್ಯತ್ತಿದೆ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಮತ್ತು ಭೂಮಿ ಬಳಗದ ವತಿಯಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರಗೌಡ ಅವರ ಭೂಮಿ ಮತ್ತು ಬೀಜ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಭೂಮಿ ಪ್ರಕೃತಿ ಮತ್ತು ಬೀಜ ಸಂಸ್ಕೃತಿ ಇದ್ದಂತೆ, ಬೀಜ ನಾವು ಬಿತ್ತಿದಂತೆ ಬೆಳೆಯುತ್ತದೆ. ಬಿತ್ತನೆಯ ಬೀಜವೇ ಸಂಸ್ಕೃತಿ. ನಿಸರ್ಗಕ್ಕೆ ಪೂರಕವಾಗುವ ರೀತಿ ಕಲ್ಪಿಸಿಕೊಡುವುದೇ ಸಂಸ್ಕೃತಿ. ನಮ್ಮ ಬಹುತ್ವ ಭಾರತಕ್ಕೆ ಆಕ್ರಮಘೆಕಾರಿ ಸಂಸ್ಕೃತಿ ಆವರಿಸಿಕೊಂಡು, ನಮ್ಮ ಜಾನಪದದ ಸೊಗಡಿನ ನಾಶದತ್ತ ಕೊಂಡೊಯ್ಯತ್ತಿದೆ. ಇದು ಆಕ್ರಮಕಾರಿ ಬೆಳವಣಿಗೆ ಎಂದು ಆತಂಕ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಡಾ. ಹಿ.ಶಿ. ರಾಮಚಂದ್ರಗೌಡ ಅವರು ಜಾಗತಿಕ ವಿದ್ಯಾಮಾನಗಳ ನೆಲೆಯಲ್ಲಿ ತಮ್ಮ ಕೃತಿಯಲ್ಲಿ ಇಂದಿನ ಯುವ ಪೀಳಿಗೆಗೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ಕೃತಿಯಲ್ಲಿ 26 ಲೇಖನಗಳಿವೆ. ಎಲ್ಲಾ ಲೇಖನಗಳು ಜಾನಪದ ಬದುಕನ್ನು ಪರಿಭಾವಿಸಿ, ನಿಸರ್ಗಕ್ಕೆ ಹತ್ತಿರವಾಗುವಂತೆ ಇದೆ. ಇಂದು ಯುವ ಪೀಳಿಗೆಯ ಮನದಲ್ಲಿ ಆವರಿಸುತ್ತಿರುವ ಆಕ್ರಮ ಸಂಸ್ಕೃತಿಯ ಬಗ್ಗೆ ಕೃತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇಲ್ಲಿನ ಲೇಖನಗಳು ನಿರ್ದಿಷ್ಟವಾದ ಕಾಲಕ್ಕೆ ಸೀಮಿತವಾಗಿಲ್ಲ, ಎಲ್ಲಾ ಕಾಲಕ್ಕೂ ಅನ್ವಯ ವಾಗುತ್ತದೆ. ಜನಪದ ಜೀವಂತ ಬದುಕು, ಜೀವ ಪರ ಸಂಸ್ಕೃತಿಯು ಪುಸ್ತಕದ ಧಾತು ದ್ರವ್ಯವಾಗಿದೆ ಎಂದರು.

ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರಾದ ಕವಯತ್ರಿ ಡಾ. ಧರಣೀ ದೇವಿ ಮಾಲಗತ್ತಿ ಮಾತನಾಡಿ, ಯುವ ಪೀಳಿಗೆಗೆ ಐಕ್ಯತೆ ಬೇಕು, ಏಕಾಧಿಪತ್ಯ ಬೇಡ, ಬಹುತ್ವ ಬೇಕು, ಬೇಧ ಬೇಡ, ಜಾತಿವಾದ ಸಲ್ಲದು. ವಾದಿ, ವಿಚಾರವಾದಿ, ಸಂಪ್ರದಾಯವಾದಿ, ಸ್ತ್ರೀವಾದಿ ಯಾರಿಗೂ ಇಷ್ಟವಾಗುವುದಿಲ್ಲ. ಈ ನಿಟ್ಟಿನಲ್ಲಿ ಈ ಕೃತಿಯ ಲೇಖನಗಳು ಎಲ್ಲರ ಮನಸ್ಸನ್ನು ಗೆಲ್ಲುತ್ತದೆ ಹಾಗೂ ಸಂಶೋಧನ ಪ್ರಬಂಧಕ್ಕೆ ಅನುಕೂಲ ವಾಗಿದೆ ಎಂದರು.

ಕೃತಿ ಕರ್ತೃ, ಜಾನಪದ ವಿದ್ವಾಂಸ ಡಾ. ಹಿ.ಶಿ. ರಾಮಚಂದ್ರಗೌಡ, ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ, ಕಾಲೇಜಿ ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಎಸ್.ಆರ್. ರಮೇಶ್, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಕಸಾಪ ಜಿಲ್ಲಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಹಿ.ಶಿ. ರಾಮಚಂದ್ರಗೌಡರವರ ಪತ್ನಿ ನಾಗರತ್ವ ಕುಮಾರಿ, ತಾಂತ್ರಿಕ ತಜ್ಞ ಸುಧಾಕರ ಕಾಪು, ಮಾನವಿ ಸುಧಾಕರ ಕಾಪು, ಪತ್ರಕರ್ತ ಅಂಶಿಪ್ರಸನ್ನಕುಮಾರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಪಂಡಿತಾರಾಧ್ಯ, ಸತೀಶ್ ಜವರೇಗೌಡ ಇದ್ದರು.



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರಗೌಡ ಅವರ ಭೂಮಿ ಮತ್ತು ಬೀಜ ಕೃತಿಯನ್ನು ಸಾಹಿತಿ ಡಾ.ಎಸ್.ಜಿ.ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

> **ಬಿತ್ತನೆಯ ಬೀಜವೇ ಸಂಸ್ಕೃತಿ. ನಿಸರ್ಗಕ್ಕೆ ಪೂರಕವಾಗುವ ರೀತಿ ಕಲ್ಪಿಸಿಕೊಡುವುದೇ ಸಂಸ್ಕೃತಿ. ನಮ್ಮ ಬಹುತ್ವ ಭಾರತಕ್ಕೆ ಆಕ್ರಮಘೆಕಾರಿ ಸಂಸ್ಕೃತಿ ಆವರಿಸಿಕೊಂಡು, ನಮ್ಮ ಜಾನಪದದ ಸೊಗಡಿನ ನಾಶದತ್ತ ಕೊಂಡೊಯ್ಯತ್ತಿದೆ. ಇದು ಆಕ್ರಮಕಾರಿ ಬೆಳವಣಿಗೆ.**
>
> **– ಪ್ರೊ.ಎಸ್.ಜಿ. ಸಿದ್ದರಾಮಯ್ಯ**
> ಸಾಹಿತಿ

ಕೃತಿಯಲ್ಲಿ ಒಟ್ಟು 26 ಲೇಖನಗಳು

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 25.12.2019

ಅಧ್ಯಯನ ಮಾಡಿ | ಮಹಾಜನ ಕಾಲೇಜು ಉಪಪ್ರಾಂಶುಪಾಲರಾದ ಡಾ.ಬಿ. ಜಯಕುಮಾರಿ ಅಭಿಮತ

ಸೃಜನಶೀಲ ಚಟುವಟಿಕೆಗೆ ಪುಸ್ತಕಗಳು ಸಹಕಾರಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಪುಸ್ತಕ ಓದು ವಿದ್ಯಾರ್ಥಿಗಳಲ್ಲಿ ಸೃಜನಶೀಲ ಚಟುವಟಿಕೆಗಳನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಅಭಿರುಚಿಯನ್ನು ಅಧ್ಯಾಪಕರು ಹೆಚ್ಚುಹೆಚ್ಚು ಬೆಳೆಸಬೇಕು ಎಂದು ಮಹಾಜನ ಕಾಲೇಜು ಉಪ ಪ್ರಾಂಶುಪಾಲೆ ಮತ್ತು ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಬಿ. ಜಯಕುಮಾರಿ ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರವು ಮೈಸೂರಿನ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಾಹಿತ್ಯ ವೇದಿಕೆ ಮತ್ತು ಜಾಣ-ಜಾಣೆಯರ ಬಳಗ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ನನ್ನ ಮೆಚ್ಚಿನ ಪುಸ್ತಕ-ವಿದ್ಯಾರ್ಥಿನಿಯರ ಅಭಿಪ್ರಾಯ ಮಂಡನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವ್ಯಕ್ತಿತ್ವ ರೂಪಿಸಲು ಜ್ಞಾನ ಸಂಪಾದನೆ: ಪ್ರಸ್ತುತ ದಿನಗಳಲ್ಲಿ ಜ್ಞಾನ ಸಂಪಾದನೆಯನ್ನು ಮಾಡುವುದು ಹಣ ಸಂಪಾದನೆ ಮಾಡುವುದಕ್ಕಾಗಿ ಎಂಬ ವಾತಾವರಣ ನಿರ್ಮಾಣವಾಗಿದೆ. ಆದರೆ, ನಾವು ಜ್ಞಾನ ಸಂಪಾದಿಸುವುದು ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕಾಗಿ ಎಂಬ ಮನೋಭಾವನೆ ಬೆಳೆಯಬೇಕು. ಇಂದು ಜಗತ್ತಿನಲ್ಲಿ ವಿಪುಲ ಅವಕಾಶಗಳಿದ್ದು, ಅದನ್ನು ಸದುಪಯೋಗಪಡಿಸಿಕೊಂಡು ಪ್ರತಿಯೊಬ್ಬರು ಸಾಧಿಸಬೇಕು ಎಂದರು.



ಮೈಸೂರಿನ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ನನ್ನ ಮೆಚ್ಚಿನ ಪುಸ್ತಕ- ವಿದ್ಯಾರ್ಥಿನಿಯರ ಅಭಿಪ್ರಾಯ ಮಂಡನೆ ಕಾರ್ಯಕ್ರಮದಲ್ಲಿ ಪ್ರೊ.ಎಲ್.ಎಸ್. ಶೇಷಗಿರಿರಾವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಡಾ.ಬಿ. ಜಯಕುಮಾರಿ, ಡಾ.ಎಂ. ಶಾರದ, ಡಾ.ಜಿ. ಪ್ರಸಾದಮೂರ್ತಿ, ಎಂ.ಎಸ್. ಸಂಧ್ಯಾರಾಣಿ, ಎಚ್.ಬಿ. ಬಸಪ್ಪ ಇದ್ದರು.

ವಿದ್ಯಾರ್ಥಿನಿಯರು ತಮ್ಮನ್ನು ತಾವು ತಿಳಿದುಕೊಳ್ಳುವುದಕ್ಕಾಗಿ, ಅರಿವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ, ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವುದಕ್ಕಾಗಿ ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ, ಜೀವನ ಚರಿತ್ರೆ ಹಾಗೂ ಆತ್ಮ ಚರಿತ್ರೆಯಂತಹ ಅತ್ಯಮೂಲ್ಯವಾದ ಪುಸ್ತಕಗಳನ್ನು ಓದುವುದರಿಂದ ಸಮಸ್ಯೆಯನ್ನು ಪರಿಹರಿಸುವ ಮಾರ್ಗಗಳನ್ನು ಕಂಡುಕೊಳ್ಳಬಹುದು ಎಂದು ಅವರು ಕಿವಿಮಾತು ಹೇಳಿದರು.

ಪುಸ್ತಕವೆಂಬುದು ಹೃದಯವಿದ್ದಂತೆ: ಪುಸ್ತಕ ಎಂಬುದು ಹೃದಯವಿದ್ದಂತೆ, ನಮ್ಮ ವ್ಯಕ್ತಿತ್ವದ ನಿರ್ಮಾಣಕ್ಕೆ ದಾರಿದೀಪವಾಗುತ್ತದೆ. ಜ್ಞಾನವನ್ನು ನಮ್ಮ ಒಳಗೆ ಕಟ್ಟಿಕೊಳ್ಳುವ ಕಾಯಕದಲ್ಲಿ ನಿರತರಾಗಬೇಕು. ನಿಜವಾದ ವಿದ್ಯಾರ್ಥಿ ಎಲ್ಲ ಮಾನವೀಯ ಮೌಲ್ಯಗಳನ್ನು ತಾನೇ ರೂಪಿಸಿಕೊಂಡು ಜ್ಞಾನದೇಗುಲಗಳಾಗಬೇಕು. ಇದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಶಿಸ್ತು, ಶ್ರದ್ಧೆ, ಸಂಯಮ, ಶ್ರಮ ಮತ್ತು ಭಕ್ತಿಯಿಂದ ತನ್ನ ಜೀವನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ನಟರಾಜ ಕಾಲೇಜಿನ ಪ್ರಾಂಶುಪಾಲೆ ಡಾ. ಎಂ. ಶಾರದ ಅಧ್ಯಕ್ಷತೆ ವಹಿಸಿ ಮಾತ ನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯು ಓದುವ ಹವ್ಯಾಸರೂಢಿಸಿಕೊಂಡರೆ ತಮ್ಮ ಸಮಸ್ಯೆಗಳಿಗೆ ತಾವೇ ಉತ್ತರ ಕಂಡು ಕೊಳ್ಳಬಹುದು. ಓದುವ ಕ್ರಿಯೆ ಮನಸ್ಸಿಗೆ ಆತ್ಮ ಸಂತೋಷವನ್ನು ಕೊಡುತ್ತದೆ. ಆದ್ದರಿಂದ ಬಿಡುವಿನ ವೇಳೆಯಲ್ಲಿ ಪಠ್ಯೇತರ ಪುಸ್ತಕಗಳನ್ನು ಶ್ರದ್ಧೆಯಿಂದ ಓದಬೇಕು ಎಂದು ತಿಳಿಸಿದರು. ನನ್ನ ಮೆಚ್ಚಿನ ಪುಸ್ತಕ ಕುರಿತು 15 ವಿದ್ಯಾರ್ಥಿನಿಯರು ಹಲವು ಲೇಖಕರ ವಿವಿಧ ಪ್ರಕಾರದ ಕೃತಿಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ಸಮರ್ಥವಾಗಿ ಮಂಡಿಸಿದರು. ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಿಸಲಾಯಿತು. ಇದೇ ವೇಳೆ ಇತ್ತೀಚೆಗೆ ನಿಧನರಾದ ಪ್ರೊ. ಶೇಷ ಗಿರಿರಾವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾ ಯಿತು. ಜಾಣ- ಜಾಣೆಯರ ಬಳಗದ ಸಂಚಾ ಲಕ ಡಾ.ಪ್ರಸಾದಮೂರ್ತಿ, ಪ್ರಾಧ್ಯಾಪಕ ಎಂ.ಎಸ್. ಸಂಧ್ಯಾರಾಣಿ, ಎಚ್.ಬಿ. ಬಸಪ್ಪ ಇದ್ದರು. ನಿಖಿತ ಪ್ರಾರ್ಥಿಸಿದರು. ಭವಾನಿ ಸ್ವಾಗತಿಸಿ ದರು. ಎಂ. ರಕ್ಷಿತಾ ವಂದಿಸಿದರು. ಅಂಬಿಕಾ ನಿರೂಪಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಬುಧವಾರ, ಡಿಸೆಂಬರ್ ೨೫, ೨೦೧೯

ವ್ಯಕ್ತಿತ್ವ ರೂಪಿಸಿಕೊಳ್ಳಲು ಜ್ಞಾನ ಸಂಪಾದನೆ ಅಗತ್ಯ:ಡಾ.ಬಿ.ಜಯಕುಮಾರಿ

ನಟರಾಜ ಕಾಲೇಜಿನಲ್ಲಿ 'ನನ್ನ ಮೆಚ್ಚಿನ ಪುಸ್ತಕ- ವಿದ್ಯಾರ್ಥಿನಿಯರ ಅಭಿಪ್ರಾಯ ಮಂಡನೆ' ಕಾರ್ಯಕ್ರಮ



ನಾವು ಜ್ಞಾನ ಸಂಪಾದಿಸುವುದು ನಮ್ಮ ವ್ಯಕ್ತಿತ್ವವನ್ನು ರೂಪಿಸಿ ಕೊಳ್ಳುವುದಕ್ಕಾಗಿ ಎಂಬ ಮನೋಭಾವನೆ ಬೆಳೆಯಬೇಕು. ಪುಸ್ತಕ ನಮ್ಮ ವ್ಯಕ್ತಿತ್ವದ ನಿರ್ಮಾಣಕ್ಕೆ ದಾರಿದೀಪ ವಾಗುತ್ತದೆ.
- ಡಾ.ಬಿ.ಜಯಕುಮಾರಿ

ಮೈಸೂರಿನ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನರಾದ ಸಾಹಿತಿ ಪ್ರೊ.ಎಲ್.ಎಸ್.ಶೇಷಗಿರಿರಾವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಡಾ.ಬಿ.ಜಯಕುಮಾರಿ, ಡಾ.ಎಂ.ಶಾರದ, ಡಾ.ಜಿ.ಪ್ರಸಾದಮೂರ್ತಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.24- ಇತ್ತೀಚಿನ ದಿನಗಳಲ್ಲಿ ಜ್ಞಾನ ಸಂಪಾದನೆಯನ್ನು ಮಾಡುವುದು ಹಣ ಸಂಪಾದನೆ ಮಾಡುವುದಕ್ಕಾಗಿ ಎಂಬ ವಾತಾವರಣ ನಿರ್ಮಾಣವಾಗಿದೆ ಎಂದು ನಗರದ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ಬಿ.ಜಯಕುಮಾರಿ ಹೇಳಿದರು.

ನಗರದ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರ, ಕಾಲೇಜಿನ ಕನ್ನಡ ಸಾಹಿತ್ಯ ವೇದಿಕೆ ಮತ್ತು ಜಾಣ-ಜಾಣೆಯರ ಬಳಗದ ವತಿಯಿಂದ ಮಂಗಳವಾರ ನಡೆದ 'ನನ್ನ ಮೆಚ್ಚಿನ ಪುಸ್ತಕ- ವಿದ್ಯಾರ್ಥಿನಿಯರ ಅಭಿಪ್ರಾಯ ಮಂಡನೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಸ್ತು, ಶ್ರದ್ಧೆ, ಸಂಯಮ, ಶ್ರಮ ಮತ್ತು ಭಕ್ತಿಯಿಂದ ತನ್ನ ಜೀವನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನರಾದ ಪ್ರೊ.ಎಲ್.ಎಸ್.ಶೇಷಗಿರಿರಾವ್‌ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. 'ನನ್ನ ಮೆಚ್ಚಿನ ಪುಸ್ತಕ' ಕುರಿತು 15 ವಿದ್ಯಾರ್ಥಿನಿಯರು ಹಲವು ಲೇಖಕರ ವಿವಿಧ ಪ್ರಕಾರದ ಕೃತಿಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ನಂತರ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಶಾರದ, ಉಪಪ್ರಾಂಶುಪಾಲ ಹಾಗೂ ಜಾಣ-ಜಾಣೆಯರ ಬಳಗದ ಸಂಚಾಲಕ ಡಾ.ಜಿ. ಪ್ರಸಾದಮೂರ್ತಿ, ಸಂಧ್ಯಾರಾಣಿ, ಎಚ್.ಬಿ.ಬಸಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 20.12.2019

ಮಹಾಜನ ಫೆಸ್ಟ್ ಲಾಂಛನ ಬಿಡುಗಡೆ

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಫೆ.7 ರಿಂದ 9 ರವರೆಗೆ ನಡೆಯಲಿರುವ ರಾಷ್ಟ್ರ ಮಟ್ಟದ ಮಹಾಜನ ಫೆಸ್ಟ್ ಆಚರಣೆಯ ಅಂಗವಾಗಿ ಕಾಲೇಜಿನ ಆವರಣದಲ್ಲಿ ಲಾಂಛನವನ್ನು ಬಿಡುಗಡೆಗೊಳಿಸಲಾಯಿತು. ಕಾಲೇಜಿನ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್ ಅವರು ಲಾಂಛನ ಬಿಡುಗಡೆ ಮಾಡಿದರು. ರಾಷ್ಟ್ರೀಯ ಪಾರಂಪರಿಕ ಚಿಕಿತ್ಸಾ ವಿಜ್ಞಾನ ಸಂಸ್ಥೆಯ ಪ್ರಭಾರ ನಿರ್ದೇಶಕರಾದ ಡಾ.ಎಸ್.ಎಲ್. ಹೊಟ್ಟಿ, ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಮಹಂ ಫೆಸ್ಟ್‌ನ ಸಂಚಾಲಕ ಡಾ.ಎಚ್.ಆರ್. ತಿಮ್ಮೇಗೌಡ, ಸದಸ್ಯರು, ವಿದ್ಯಾರ್ಥಿಗಳು ಇದ್ದರು.



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಸೋಮವಾರ • ಡಿಸೆಂಬರ್ 30, 2019

ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಮುಖ್ಯಅತಿಥಿ- ಪ್ರೊ. ಲಿಂಗರಾಜಯ್ಯ. ಸ್ಥಳ: ಜಯಲಕ್ಷ್ಮೀಪುರಂ. ಮಧ್ಯಾಹ್ನ 2.30.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಮಂಗಳವಾರ, ಡಿಸೆಂಬರ್ ೩೧, ೨೦೧೯

ಅಕ್ಷರಗಳಿಗೆ ಸಮಾಜವನ್ನು ಮುನ್ನಡೆಸುವ ಶಕ್ತಿಯಿದೆ

'ಮಂದಾರ' ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿದ ಡಾ.ಗುಬ್ಬಿಗೂಡು ರಮೇಶ್ ಅಭಿಮತ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ 'ಮಂದಾರ' ವಾರ್ಷಿಕ ಸಂಚಿಕೆಯನ್ನು ಡಾ. ಗುಬ್ಬಿಗೂಡು ರಮೇಶ್ ಬಿಡುಗಡೆಗೊಳಿಸಿದರು. ಡಾ.ಲಿಂಗರಾಜಯ್ಯ, ಡಾ.ಸಿ.ಕೆ.ರೇಣುಕಾರ್ಯ, ಡಾ.ಎಸ್.ಆರ್.ರಮೇಶ್, ಬಿ.ಆರ್.ಜಯಕುಮಾರಿ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.30– ಅಕ್ಷರಗಳಿಗೆ ಮಹತ್ತರವಾದ ಶಕ್ತಿಯಿದ್ದು, ಸಮಾಜವನ್ನು ಸಮರ್ಥವಾಗಿ ಮುನ್ನಡೆಸುವ ಹಾಗೂ ಎಚ್ಚರಿಸುವ ಸಾಮರ್ಥ್ಯವಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಗುಬ್ಬಿಗೂಡು ರಮೇಶ್ ಅಭಿಪ್ರಾಯಪಟ್ಟರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಸೋಮವಾರ ಕಾಲೇಜು ಆವರಣದಲ್ಲಿ ನಡೆದ ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅಭಿಪ್ರಾಯ ಮತ್ತು ವಿಚಾರಗಳನ್ನು ಹಂಚಿಕೊಳ್ಳಲು ಕಾಲೇಜು ವಾರ್ಷಿಕ ಸಂಚಿಕೆ ಪ್ರಮುಖ ವೇದಿಕೆಯಾಗಿದೆ ಎಂದು ತಿಳಿಸಿದರು.

ಉತ್ತಮವಾದ ಸಮಾಜ ನಿರ್ಮಾಣ ಮಾಡಲು ಯುವ ಸಮೂಹದಿಂದ ಮಾತ್ರ ಸಾಧ್ಯ. ನಮ್ಮ ಬಹಳಷ್ಟು ವಿದ್ಯಾರ್ಥಿಗಳು ಬುದ್ಧಿವಂತಿಕೆ, ಕೌಶಲಾಭಿವೃದ್ಧಿ ಪಡೆದುಕೊಂಡು ಉನ್ನತ ಉದ್ಯೋಗ ಪಡೆದು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ನೈತಿಕ ಶಿಕ್ಷಣ ಅಗತ್ಯವಿದೆ ಎಂದು ಮಂಡಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು ಮಾತನಾಡಿದರು. ಬೆಂಗಳೂರು ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಲಿಂಗರಾಜಯ್ಯ, ಸಂಸ್ಥೆಯ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಉಪ ಪ್ರಾಂಶುಪಾರಾದ ಬಿ.ಆರ್.ಜಯಕುಮಾರಿ, ಡಾ.ದೊಡ್ಡರಸಯ್ಯ, ಡಾ.ಎಂ.ಆರ್.ತಿಮ್ಮೇಗೌಡ ಇತರರು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 31.12.2019

ಆರೋಗ್ಯಕರ ಸಮಾಜಕ್ಕೆ ಯುವಶಕ್ತಿ ಮುಖ್ಯ

ಡಾ. ಗುಬ್ಬಿಗೂಡು ರಮೇಶ್ ಅಭಿಮತ | ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಇಂದಿನ ಯುವಶಕ್ತಿ ಮುಖ್ಯ, ಹಾಗೆಯೇ ಇಂದಿನ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಅಗತ್ಯವಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಗುಬ್ಬಿಗೂಡು ರಮೇಶ್ ಅಭಿಪ್ರಾಯಪಟ್ಟರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆಗೊಳಿಸಿ, ಇಂದಿನ ಯುವ ಪೀಳಿಗೆ ನಡೆಯುತ್ತಿರುವ ದಾರಿ ಆತಂಕಕ್ಕೆ ಎಡೆ ಮಾಡಿದೆ. ಸಮಾಜ ಛಿದ್ರಛಿದ್ರ ಗೊಳಿಸುವಹುನ್ನಾರದಕ್ಕೆ ಗೊಂಬೆಗಳಾಗಿ ಯುವ ಜನರು ಮಾರ್ಪಾಡಾಗುತ್ತಿದ್ದಾರೆ. ವರ್ತಮಾನದ ತರ್ಕಗಳಿಗೆ ಉತ್ತರವನ್ನು ಹುಡುಕ ಬೇಕಾಗಿದೆ. ಇದನ್ನು ತಡೆಗಟ್ಟಬೇಕಾದರೆ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಜೊತೆ, ನವ ಆರೋಗ್ಯಕರ ಸಮಾಜನ ನಿರ್ಮಾಣ ಮಾಡುವ ಆತ್ಮವಿಶ್ವಾಸ, ನೈಪುಣ್ಯ ಹಾಗೂ ಕೌಶಲ್ಯಾಧಾರಿತ ತರಬೇತಿ ನೀಡಬೇಕಾಗುತ್ತದೆ ಎಂದರು.

ಈ 'ಮಂದಾರ' ವಾರ್ಷಿಕ ಸಂಚಿಕೆಯ ಲೇಖನಗಳನ್ನು ಓದಿದಾಗ ಇಂದಿನ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೇಮ, ದೇಶಪ್ರೇಮ ಹಾಗೂ ಮೌಲ್ಯಾಧಾರಿತ ಗುಣಮಟ್ಟವು ಹೆಚ್ಚಾಗಿ ಕಂಡುಬರುತ್ತಿದೆ ಎಂದು ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮಂದಾರ ವಾರ್ಷಿಕ ಸಂಚಿಕೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಗುಬ್ಬಿಗೂಡು ರಮೇಶ್ ಬಿಡುಗಡೆಗೊಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪೂಜಾ ಭಾಗವತ್ ಮಹಾಜನ ಸ್ನಾತಕೋತ್ತರ ಸಂಸ್ಥೆಯ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯಮಾತನಾಡಿ, ವಿದ್ಯಾರ್ಥಿಗಳಿಗೆ ಕೇವಲ ಪಠ್ಯಪುಸ್ತಕದಲ್ಲಿನ ಜ್ಞಾನಾರ್ಜನೆ ಸಾಲದು. ಅವರ ಜೀವನಕ್ಕೆ ಕೌಶಲ್ಯಾಧಾರಿತ ತರಬೇತಿ ಮತ್ತು ಜ್ಞಾನ ಮುಖ್ಯವಾಗುತ್ತದೆ. ಇಂದು ವಿದ್ಯಾಭ್ಯಾಸ ಎಂಬುದು ತೋರಿಕೆಯಾಗಿದೆ. ವಿದ್ಯಾರ್ಥಿಗಳಲ್ಲಿ ನೈಪುಣ್ಯತೆಯ ಕೊರತೆ ಎದ್ದು ಕಾಣುತ್ತಿದೆ. ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ಉದ್ದೀಪನಗೊಳಿಸಿ, ಜೀವನೋತ್ಸಾಹದ ಚಿಲುಮೆಯನ್ನು ಹೊಮ್ಮಿಸಬೇಕು. 'ಮಂದಾರ' ವಾರ್ಷಿಕ ಸಂಚಿಕೆಯು ಅತ್ಯುತ್ತಮ ಬರಹ, ಲೇಖನಗಳಿಂದ ಕೂಡಿದೆ ಎಂದು ಲೇಖಕರಿಗೆ, ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಬೆಂಗಳೂರಿನ ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಲಿಂಗರಾಜಯ್ಯ ಅಧ್ಯಕ್ಷತೆವಹಿಸಿ ಮಾತನಾಡಿ, ಈ ಕಾಲೇಜಿನ ಇತಿಹಾಸಕ್ಕೆ ಒಂದು ಪರಂಪರೆ ಮತ್ತು ಐತಿಹ್ಯವಿದೆ. ರಾಷ್ಟ್ರ ನಿರ್ಮಾಣ, ಆರೋಗ್ಯಕರ ಸಮಾಜ ಕಟ್ಟುವ ನಿಟ್ಟಿನಲ್ಲಿ ಈ ಕಾಲೇಜು ಪ್ರತಿಭಾವಂತ ವಿದ್ಯಾರ್ಥಿಗಳ ಕೊಡುಗೆ ಅಪಾರ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ಪ್ರಾಸ್ತಾವಿಕ ಭಾಷಣ ಮಾಡಿದರು. ಕಾಲೇಜಿನ ಸಿಇಒ ಡಾ.ಎಸ್.ಆರ್. ರಮೇಶ್ ಮತ್ತು ಉಪ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ ಇದ್ದರು. ಭಾರತಿ ಪ್ರಾರ್ಥಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಡಾ.ಜಿ. ದೊಡ್ಡರಸಯ್ಯ ವಂದಿಸಿದರು. ಸಿದ್ದಪ್ಪ ನಿರೂಪಿಸಿದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 31 ಡಿಸೆಂಬರ್ 2019
31 DECEBER 2019

ವಾರ್ಷಿಕ ಸಂಚಿಕೆ ಬಿಡುಗಡೆ



ವಿಜಯವಾಣಿ ಚಿತ್ರ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಸಂಚಿಕೆಯನ್ನು ಡಾ.ಗುಬ್ಬಿಗೂಡ ರಮೇಶ್ ಬಿಡುಗಡೆ ಮಾಡಿದರು. ಡಾ.ಎಸ್. ವೆಂಕಟರಾಮು, ಡಾ.ಲಿಂಗರಾಜಯ್ಯ, ಡಾ.ಸಿ.ಕೆ. ರೇಣುಕಾರ್ಯ ಇದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ವಿದ್ಯಾರ್ಥಿಗಳು ಅಭಿಪ್ರಾಯ ಮತ್ತು ವಿಚಾರಗಳನ್ನು ಹಂಚಿಕೊಳ್ಳಲು ಕಾಲೇಜು ವಾರ್ಷಿಕ ಸಂಚಿಕೆ ಉಪಯುಕ್ತ ವೇದಿಕೆಯಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಗುಬ್ಬಿಗೂಡು ರಮೇಶ್ ಅಭಿಪ್ರಾಯಪಟ್ಟರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಸೋಮವಾರ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಕ್ಷರ ಮತ್ತು ಪದ್ಯಗಳಿಗೆ ಮಹತ್ತರವಾದ ಶಕ್ತಿಯಿದೆ. ಒಂದು ಸಮೂಹ ಅಥವಾ ಸಮಾಜವನ್ನು ಸಮರ್ಥವಾಗಿ ಮುನ್ನಡೆಸುವ ಹಾಗೂ ಎಚ್ಚರಿಸುವ ಶಕ್ತಿ ಬರಹ ಹಾಗೂ ಪದ್ಯಗಳಿಗೆ ಇದೆ. ವಿದ್ಯಾರ್ಥಿಗಳು ಒಂದು ವಿಷಯವನ್ನಿಟ್ಟುಕೊಂಡು ಬರಹ ಆರಂಭಿಸುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು. ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಬೆಂಗಳೂರು ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಲಿಂಗರಾಜಯ್ಯ, ಸಂಸ್ಥೆಯ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 30 ಡಿಸೆಂಬರ್ 2019

■ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ, ಸಂಚಿಕೆ ಬಿಡುಗಡೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯ ಡಾ.ಗುಬ್ಬಿಗೂಡು ರಮೇಶ್, ಅಧ್ಯಕ್ಷತೆ: ವಿವೇಕಾನಂದ ಪ್ರಥಮ ದರ್ಜೆ ಕಾಲೇಜು ಕನ್ನಡ ಪ್ರಾಧ್ಯಾಪಕ ಡಾ. ಲಿಂಗರಾಜಯ್ಯ, ಸ್ಥಳ: ಕಾಲೇಜಿನ ಸಭಾಂಗಣ, ಜಯಲಕ್ಷ್ಮೀಪುರಂ, ಬೆಳಿಗ್ಗೆ 11ಕ್ಕೆ

ವಿಜಯ ಕರ್ನಾಟಕ

ಸೋಮವಾರ, 30 ಡಿಸೆಂಬರ್ 2019

ಎಸ್‌ಬಿಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ. ಸಂಚಿಕೆ ಬಿಡುಗಡೆ- ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯ ಡಾ.ಗುಬ್ಬಿಗೂಡು ರಮೇಶ್, ಅಧ್ಯಕ್ಷತೆ- ಕನ್ನಡ ಪ್ರಾಧ್ಯಾಪಕ ಡಾ.ಲಿಂಗರಾಜಯ್ಯ. ಕಾಲೇಜಿನ ಸಭಾಂಗಣ,ಜಯಲಕ್ಷ್ಮೀಪುರಂ. ಬೆ.11.

ಆಂದೋಲನ



ದಿನ ಪತ್ರಿಕೆ

ಸೋಮವಾರ, ಡಿಸೆಂಬರ್ ೩೦, ೨೦೧೯

■ ವಾರ್ಷಿಕ ಸಂಚಿಕೆ ಬಿಡುಗಡೆ

ಬೆಳಿಗ್ಗೆ 11ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಸಂಚಿಕೆ ಬಿಡುಗಡೆ-ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಗುಬ್ಬಿಗೂಡು ರಮೇಶ್, ಉಪಸ್ಥಿತರು-ಕಾಲೇಜಿನ ಪ್ರಾಂಶುಪಾಲರ ಡಾ.ಕೆ. ವೆಂಕಟರಾಮು, ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಅಧ್ಯಕ್ಷತೆ-ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಲಿಂಗರಾಜಯ್ಯ, ಸ್ಥಳ-ಕಾಲೇಜಿನ ಸಭಾಂಗಣ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಮವಾರ • ಡಿಸೆಂಬರ್ 30, 2019

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ-ಡಾ.ಗುಬ್ಬಿಗೂಡು ರಮೇಶ್, ಸ್ಥಳ-ಕಾಲೇಜು ಸಭಾಂಗಣ, ಜಯಲಕ್ಷ್ಮೀಪುರಂ. ಬೆಳಿಗ್ಗೆ 11.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 20.12.2019

ನೇತ್ರಧಾಮದಿಂದ ಕಣ್ಣಿನ ಉಚಿತ ತಪಾಸಣೆ



ಮೈಸೂರು ಮಹಾಜನ ಪ್ರಥಮ ದರ್ಜೆ ಕಾಲೇಜು ಎನ್‌ಎಸ್ ಎಸ್ ಮತ್ತು ಎನ್‌ಸಿಸಿ ಹಾಗೂ ನೇತ್ರಧಾಮ ಕಣ್ಣಿನ ಆಸ್ಪತ್ರೆ ಸಂಯುಕ್ತವಾಗಿ ಕಾಲೇಜಿನ ಆವರಣದಲ್ಲಿ ನೇತ್ರ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಿತ್ತು. ಕಾಲೇಜಿನ 200 ಹೆಚ್ಚು ವಿದ್ಯಾರ್ಥಿಗಳು, ಅಧ್ಯಾಪ ಕರು ಹಾಗೂ ಅಧ್ಯಾಪಕೇತರರು ಶಿಬಿರದ ಪ್ರಯೋಜನ ಪಡೆದು ಕೊಂಡರು. ನೇತ್ರಧಾಮ ಆಸ್ಪತ್ರೆಯ ಡಾ. ಶಂಕರ್, ಹೇಮ, ರಘು, ಮಹಾದೇವಯ್ಯ ಅವರು ಯಶಸ್ವಿಯಾಗಿ ಶಿಬಿರ ನಡೆಸಿಕೊಟ್ಟರು. ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಜಯಕುಮಾರಿ, ಎನ್‌ಎಸ್‌ಎಸ್ ಕಾರ್ಯಕ್ರಮಾ ಧಿಕಾರಿಗಳಾದ ಡಾ.ಎ.ಜಿ. ಧರ್ಮೇಶ ಕೇಶವಮೂರ್ತಿ, ಎನ್‌ಸಿಸಿ ಅಧಿಕಾರಿ ನಿಖಿಲ್ ಇದ್ದರು.

aÄºÁdÆ «ZÁj ¸ÁA¸Á¤ßÆgÄ.
aÄºÁdÆ ¥ÀæPÁgÀ zeÉÆ PÁ¯ÉÃdÄ, a¤ßÆgÄ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 20.12.2019



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜು ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಘಟಕಗಳ ಸ್ವಯಂ ಸೇವಕರು ಜಯಲಕ್ಷ್ಮೀಪುರಂ ರಸ್ತೆಗಳ ಬದಿಗಳಲ್ಲಿ ಇರುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸಂಗ್ರಹಿಸಿದರು.

ವಿಜಯ ಕರ್ನಾಟಕ

ಸಮಸ್ತ ಕನ್ನಡಿಗರ ಹೆಮ್ಮೆ

ಶುಕ್ರವಾರ, 20 ಡಿಸೆಂಬರ್ 2019



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ರಾಷ್ಟ್ರೀಯ ಸೇವಾ ಯೋಜನೆ ಮತ್ತು ಎನ್‌ಸಿಸಿ ಘಟಕಗಳ ಸಂಯುಕ್ತಾಶ್ರಯದೊಂದಿಗೆ ಜಯಲಕ್ಷ್ಮೀಪುರಂ ರಸ್ತೆಗಳ ಬದಿಗಳಲ್ಲಿ ಇರುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಿದರು.

ಆಂದೋಲನ
ದಿನ ಪತ್ರಿಕೆ

ಶನಿವಾರ, ಡಿಸೆಂಬರ್ ೧೪, ೨೦೧೯

ಸಂಸತ್ ಅಧಿವೇಶನಕ್ಕೆ ಮಹಾಜನ ಕಾಲೇಜು ವಿದ್ಯಾರ್ಥಿಗಳು



ಹೊಸದಿಲ್ಲಿಯಲ್ಲಿ ಡಿ.14ರಿಂದ 25ರವರೆಗೆ ನಡೆಯುವ ಸಂಸತ್ ಅಧಿವೇಶನದಲ್ಲಿ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಸಹಾಯಕ ಪ್ರಾಧ್ಯಾಪಕರಾದ ಡಾ.ಇಂದ್ರಾಣಿ. ರಮೇಶ್, ವಿಜಯಲಕ್ಷ್ಮಿ ಮುತಳಿಧರ್, ಡಾ.ಡಯಕುಮಾರಿ, ಅಂತಿಮ ವರ್ಷದ ಬಿಬಿಎ ವಿದ್ಯಾರ್ಥಿ ಕೆ. ಆರ್.ಮಂಜುನಾಥ್ ಮುಂತಾದವರು ಚಿತ್ರದಲ್ಲಿದ್ದಾರೆ.

ವಿಜಯ ಕರ್ನಾಟಕ

ಸಮಸ್ತ ಕನ್ನಡಿಗರ ಹೆಮ್ಮೆ

ಶುಕ್ರವಾರ, 13 ಡಿಸೆಂಬರ್ 2019,



ಕ್ಯಾಂಪಸ್ tour

ಅಧಿವೇಶನ ವೀಕ್ಷಣೆ

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ 46 ವಿದ್ಯಾರ್ಥಿ ಸಂಸತ್ತಿನ ಪ್ರತಿನಿಧಿಗಳು ನವದೆಹಲಿಯಲ್ಲಿ ನಡೆಯುತ್ತಿರುವ ಚಳಿಗಾಲದ ಸಂಸತ್ತಿನ ಅಧಿವೇಶನದಲ್ಲಿ ಭಾಗವಹಿಸಲು ತೆರಳಿದ್ದಾರೆ. ಸಹಾಯಕ ಪ್ರಾಧ್ಯಾಪಕರಾದ ಡಾ. ಲೆಫ್ಟಿನೆಂಟ್ ಇಂದ್ರಾಣಿ ಎಂ.ಆರ್., ಎನ್‌ಸಿಸಿ ಅಧಿಕಾರಿಗಳು, ಆಂಗ್ಲ ವಿಭಾಗ ಮತ್ತು ವಿದ್ಯಾರ್ಥಿ ಸಂಚಾಲಕರಾದ ಕು. ಮಂಜುನಾಥ್ ಕೆ.ಆರ್., ಅಂತಿಮ ಬಿಬಿಎ ವಿದ್ಯಾರ್ಥಿ ಜತೆ 46 ವಿದ್ಯಾರ್ಥಿಗಳು ತೆರಳಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮು ತಿಳಿಸಿದ್ದಾರೆ.

ಅಧಿವೇಶನಕ್ಕೆ ಮಹಾಜನ ವಿದ್ಯಾರ್ಥಿಗಳ ಪಯಣ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 22.12.2019

ಶೇಷಗಿರಿ ರಾವ್ ನಿಧನದಿಂದ ನಷ್ಟ

ಶ್ರದ್ಧಾಂಜಲಿ ಸಭೆಯಲ್ಲಿ ಪ್ರಾಂಶುಪಾಲೆ ಜಯಕುಮಾರಿ ಅಭಿಮತ



ಸಂತಾಪ

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿಕೊಂಡಿದ್ದ ವಿದ್ವಾಂಸ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ನಿಧನಕ್ಕೆ ಲೇಖಕ, ಪ್ರಕಾಶಕರ ವೇದಿಕೆಯ ಅಧ್ಯಕ್ಷ ಎಸ್. ಚನ್ನಪ್ಪ ಸಂತಾಪ ಸೂಚಿಸಿದ್ದಾರೆ.

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಪ್ರೊ. ಶೇಷಗಿರಿರಾವ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರಭಾರ ಪ್ರಾಂಶುಪಾಲರಾದ ಬಿ. ಆರ್. ಜಯಕುಮಾರಿ ಮಾತನಾಡಿ, ಪ್ರೊ. ಶೇಷಗಿರಿ ರಾವ್ ದೇಶ ಕಂಡ ಅಪ್ರತಿಮ ಸಾಹಿತಿಗಳು, ವಿಮರ್ಶಕರು ಹಾಗೂ ನಿಘಂಟು ತಜ್ಞ ಎಂದು ಹೇಳಿದರು. ಸಾಹಿತ್ಯ ಲೋಕದಲ್ಲಿ ಎಲ್.ಎಸ್.ಎಸ್. ಎಂದೇ ಪ್ರಖ್ಯಾತರಾಗಿದ್ದ ಶೇಷಗಿರಿ ರಾವ್ ಅವರು ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದರೂ ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಛಾಪು ಮೂಡಿಸಿದರು ಎಂದು ಶ್ಲಾಘಿಸಿದರು. ವಿವಿಧ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ವಿಭಾಗದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಕನ್ನಡ ಹಾಗೂ ಇಂಗ್ಲೀಷ್ ಎರಡು ಭಾಷೆಗಳಲ್ಲಿ ಅಪಾರ ಪ್ರಭುತ್ವವನ್ನು ಹೊಂದಿದ್ದ ಶೇಷಗಿರಿರಾವ್ ಅವರು ತಮ್ಮ ಸಾಹಿತ್ಯ ಕೃಷಿಯನ್ನು ಕನ್ನಡದಲ್ಲಿ ಕೈಗೊಂಡಿದ್ದರು. 'ಕಪ್ಪು ಹುಡುಗಿ' ಎಂಬ ಕಥೆಯ ಮೂಲಕ ಸಾಹಿತ್ಯ ಲೋಕಕ್ಕೆ ಕಾಲಿಟ್ಟ ಇವರು ತದನಂತರ ಕನ್ನಕ-ಕನ್ನಡ ನಿಘಂಟು, ಇಂಗ್ಲಿಷ್-ಕನ್ನಡ ನಿಘಂಟುಗಳನ್ನು ತರುವಲ್ಲಿ ಇವರ ಪಾತ್ರ, ಶ್ರದ್ಧೆ, ನಿಷ್ಠೆ ಹಾಗೂ ಪ್ರಾಮಾಣಿಕತೆಯನ್ನು ಕೊಂಡಾಡಿದರು.

ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲೆ ಡಾ. ಪ್ರಸಾದ್ ಮೂರ್ತಿ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಕೆ.ಆರ್. ಮಂಜುನಾಥ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 7.12.2019

ಡಾ.ಎಚ್. ಶ್ರೀಧರಗೆ ಕರುನಾಡ ರತ್ನ ಪ್ರಶಸ್ತಿ

ಮೈಸೂರು: ಕರ್ನಾಟಕ ಕಲಾ ಸಾಂಸ್ಕೃತಿಕ ಪ್ರತಿಷ್ಠಾನ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಯನ್ನು ಪರಿಗಣಿಸಿ ನೀಡುವ 2019ನೇ ಸಾಲಿನ



ಕರುನಾಡ ರತ್ನ ಪ್ರಶಸ್ತಿಗೆ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಅವರು ಭಾಜನರಾಗಿದ್ದಾರೆ. ಡಿ.7ರ ಬೆಳಗ್ಗೆ 10.30ಕ್ಕೆ ಜೆಎಸ್ ಎಸ್ ಆಸ್ಪತ್ರೆಯ ಆವರಣದಲ್ಲಿರುವ ಡಾ. ಶಿವ ರಾತ್ರಿ ರಾಜೇಂದ್ರ ಭವನದಲ್ಲಿ ನಡೆಯುವ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಶ್ರೀಧರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ತಿಳಿಸಿದ್ದಾರೆ.

STAR OF MYSORE

Saturday 14th December 2019

UoM's Best Physique and Weightlifting team for All India Championship



The Best Physique & Weightlifting team of University of Mysore (UoM) which will take part in the All India Inter-University Best Physique & Weightlifting Championship (2019-20) to be held at Chandigarh University, Mohali district, Punjab, from Dec.15 to 19. Seen are (standing from left) M. Vasu, K.B. Manoj, R. Raju, Faisal Khan and B.P. Sharath; (sitting from left) Coach & Manager N.A. Madhusudhana, UoM's Department of Physical Education Director (in-Charge) Dr. P. Krishnaiah and Association of Indian Universities (AIU) Observer Dr. Mahdhavan.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹಮ್ಮೆ

ಶುಕ್ರವಾರ, 20 ಡಿಸೆಂಬರ್ 2019

ಇನ್‌ಸ್ಟಾ corner





ಮಹಾಜನ ಕಾಲೇಜಿನಲ್ಲಿ ಬಿಎ ವ್ಯಾಸಂಗ ಮಾಡುತ್ತಿರುವ ವಿನಯ್ ಪುಟ್ಟಸ್ವಾಮಿ ಲಡಾಕ್‌ನ ರಸ್ತೆಯಲ್ಲಿ ಬೈಕ್ ರೈಡ್ ಹೋಗುವಾಗ ಸಿಕ್ಕ ಮಹಿಳೆ ಫೋಟೋವನ್ನು ಕ್ಲಿಕ್ಕಿಸಿ ಅದನ್ನು ತಮ್ಮ 7_vivin_7 ಎಂಬ ಇನ್‌ಸ್ಟಾಗ್ರಾಂ ಅಕೌಂಟ್‌ನಲ್ಲಿ ಶೇರ್ ಮಾಡಿದ್ದು, 168 ಲೈಕ್ಸ್ ಬಂದಿದೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 12.1.2020

ಅಶ್ರುತರ್ಪಣ | ಕನ್ನಡ ವಿಭಾಗದ ಪ್ರಾಧ್ಯಾಪಕ ಪ್ರಕಾಶ್ ನುಡಿನಮನ | ಮಹಾಜನ ಕಾಲೇಜಿನಲ್ಲಿ ಶ್ರದ್ಧಾಂಜಲಿ

ಡಾ.ಚಿಮೂ ಅಗಲಿಕೆ ನಾಡಿಗೆ ತುಂಬಲಾಗದ ನಷ್ಟ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಶೋಧಕ ಡಾ.ಎಂ. ಚಿದಾನಂದಮೂರ್ತಿ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹಲವರು ಉಪಸ್ಥಿತರಿದ್ದರು.

ಮೈಸೂರು: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಎಂ. ಚಿದಾನಂದಮೂರ್ತಿಯವರಿಗೆ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕನ್ನಡ ವಿಭಾಗದ ಪ್ರಾಧ್ಯಾಪಕ ಪ್ರಕಾಶ್ ನುಡಿನಮನ ಸಲ್ಲಿಸಿ, ಡಾ.ಎಂ. ಚಿದಾನಂದಮೂರ್ತಿಯವರು ನಾಡು ಕಂಡ ಅಪ್ರತಿಮ ಸಂಶೋಧಕರು, ಸಾಹಿತಿಗಳು, ಇತಿಹಾಸಜ್ಞ, ಕನ್ನಡಭಾಷೆ ಹಾಗೂ ಕರ್ನಾಟಕ ಇತಿಹಾಸ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಕನ್ನಡ ಚಳುವಳಿಯ ನೇತಾರ ಮತ್ತು ಹೋರಾಟಗಾರರು ಎಂದು ಸ್ಮರಿಸಿದರು.

ಕುವೆಂಪು, ಪುತಿನ, ರಾಘವಾಚಾರ್ ಅವರಂತಹ ಕನ್ನಡದ ಮಹಾ ಸಾಹಿತಿಗಳ ಪ್ರಭಾವಕ್ಕೆ ಒಳಗಾದವರು. ಪ್ರೊ.ಡಿ.ಎಲ್. ನರಸಿಂಹಾಚಾರ್ ಅವರ ಸೂಚನೆ ಮೇರೆಗೆ ಕನ್ನಡ ಶಾಸನಗಳ ಅಧ್ಯಯನವನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಆನಾವರಣಗೊಳಿಸಿದರು. ಪ್ರೊ.ತಿ.ನಂ. ಶ್ರೀಕಂಠಯ್ಯ ಮಾರ್ಗದರ್ಶನದಲ್ಲಿ ಪಿಎಚ್‌ಡಿ ಪಡೆದಿದ್ದ ಅವರು ಮೈಸೂರು ಮತ್ತು ಬೆಂಗಳೂರು ವಿವಿಯಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಕನ್ನಡ ಶಕ್ತಿಕೇಂದ್ರದ ನಿರ್ದೇಶಕರಾಗಿ ವಿಶ್ವದಾದ್ಯಂತ ಕನ್ನಡತನ ಮತ್ತು ಭಾಷಾವಿಜ್ಞಾನ ವಿಷಯವನ್ನು ಹೆಚ್ಚಾಗಿ ಪ್ರಚಾರಕ್ಕೆ ತಂದರು. ಇಂತಹ ಚಿಮೂ ಅವರು ನಮ್ಮನ್ನೆಲ್ಲ ಅಗಲಿರುವುದು ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವನ್ನುಂಟುಮಾಡಿದೆ ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಒಂದು ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು. ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಹಾಗೂ ಸಿಬ್ಬಂದಿ ಇದ್ದರು.

ಸದಾನಂದಯ್ಯ ಸಂತಾಪ

ಮೈಸೂರು: ನಾಡಿನ ಹಿರಿಯ ಸಂಶೋಧಕ ಡಾ.ಎಂ. ಚಿದಾನಂದ ಮೂರ್ತಿ ಅವರ ನಿಧನಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಮ.ಗು. ಸದಾನಂದಯ್ಯ ತೀವ್ರ ಸಂತಾಪ ಸೂಚಿಸಿದ್ದಾರೆ. ನನ್ನ ಗುರುಗಳಾಗಿದ್ದ ಚಿಮೂ ಅವರು ಕನ್ನಡ ಭಾಷೆ, ಸಂಸ್ಕೃತಿ ಬಗ್ಗೆ ಅಭಿಮಾನ ಮತ್ತು ಕಾಳಜಿವುಳ್ಳವರಾಗಿದ್ದರು. ಶ್ರೇಷ್ಠ ಸಂಶೋಧಕರಾಗಿದ್ದ ಅವರು ಶಿಸ್ತಿನ ಸಿಪಾಯಿಯೂ ಆಗಿದ್ದರು. ಅವರಂತಹ ಮತ್ತೊರ್ವ ಸಂಶೋಧಕ ಇರಲಿಲ್ಲ. ಚಿಮೂ ಅವರ ನಿಧನದಿಂದ ಕನ್ನಡ ನಾಡಿಗೆ ತುಂಬಾರದ ನಷ್ಟವಾಗಿದೆ ಎಂದು ಶೋಕ ವ್ಯಕ್ತಪಡಿಸಿದ್ದಾರೆ.

ಕುವೆಂಪು ಕನ್ನಡ ಸಂಸ್ಥೆಯಲ್ಲಿ ಚಿಮೂಗೆ ಸಂತಾಪ



ಮೈಸೂರು: ಮೈವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧಕ ಡಾ. ಚಿದಾನಂದಮೂರ್ತಿ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಸಾಹಿತಿ ಡಾ.ಹಾ.ತಿ. ಕೃಷ್ಣೇಗೌಡ ಮಾತನಾಡಿ, ಚಿಮೂ ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗದಿದ್ದದ್ದು ಕನ್ನಡಕ್ಕೆ ಅವಮಾನ. ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಸಾಕಷ್ಟು ಕೆಲಸ ಮಾಡಿದ್ದರು. ಕನ್ನಡನಾಡು-ನುಡಿಯ ಪ್ರಶ್ನೆ ಬಂದಾಗ ಉಗ್ರರಾಗಿ ಹಕ್ಕೋತ್ತಾಯ ಮಾಡುತ್ತಿದ್ದರು. ಇಂತಹ ಕನ್ನಡಿಗನಿಗೆ ಸಮ್ಮೇಳನಾಧ್ಯಕ್ಷರನ್ನಾಗಿಸದೆ ಸಾಹಿತ್ಯ ಪರಿಷತ್ತು ದ್ರೋಹ ಮಾಡಿತು. ಕನ್ನಡದ ಅನೇಕ ಹೋರಾಟದಲ್ಲಿ ಕನ್ನಡಕ್ಕೇನಾದರೂ ಚ್ಯುತಿ ಆದರೆ ತುಂಗಭದ್ರ ನದಿಗೆ ಆತ್ಮಾರ್ಪಣೆ ಮಾಡಿಕೊಳ್ಳುತ್ತೇನೆ ಎಂಬ ನಿಲುವನ್ನು ತಾಳುತ್ತಿದ್ದರು ಎಂದು ಸ್ಮರಿಸಿದರು. ಸಂಶೋಧಕ ಡಾ.ಭಾನುಮತಿ, ಡಾ.. ರವೀಂದ್ರನಾಥ, ಡಾ.ಶಕಿಕಲಾ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ತಾಯೂರು ಸಂತಾಪ: ಡಾ.ಎಂ. ಚಿದಾನಂದಮೂರ್ತಿ ಅವರ ನಿಧನಕ್ಕೆ ಕನ್ನಡ ಚಳವಳಿಗಾರ ತಾಯೂರು ವಿಠಲಮೂರ್ತಿ ತೀವ್ರ ಸಂತಾಪ ಸೂಚಿಸಿದ್ದಾರೆ.

ಚಿಮೂಗೆ ಮೈಕವೇಯಿಂದ ನುಡಿನಮನ



ಮೈಸೂರು: ಸಂಶೋಧಕ, ಹಿರಿಯ ಸಾಹಿತಿ ಡಾ.ಎಂ. ಚಿದಾನಂದಮೂರ್ತಿ ನಿಧನಕ್ಕೆ ಮೈಸೂರು ಕನ್ನಡ ವೇದಿಕೆಯಿಂದ ಸಂತಾಪ ಸೂಚಿಸಲಾಯಿತು.

ನಗರದ ಅಗ್ರಹಾರ ವೃತ್ತದಲ್ಲಿ ಚಿದಾನಂದಮೂರ್ತಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರ ಸಾಹಿತ್ಯ ಸಾಧನೆಯನ್ನು ಹಾಡಿ ಹೊಗಳಲಾಯಿತು. ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ ಮುಖಂಡರಾದ ನಾಲಾಬೀದಿ ಶಿವಿ, ಪ್ಯಾಲೇಸ್ ಬಾಬು, ಕಲಾವಿದ ರೇವಣ್ಣ, ಮಹದೇವಸ್ವಾಮಿ, ಡಾ. ರಾಜ್ ಕನ್ನಡ ಸೇನೆಯ ಬೋಗಾದಿ ಸಿದ್ದೇಗೌಡ, ಮಾದಪ್ಪ, ಆರವಿಂದ, ಗೋಪಿ, ಪ್ರಸನ್ನಕುಮಾರ್ ಇದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಜನವರಿ 12, 2020

ಸುತ್ತೂರು ಸಂಸ್ಥಾನದ ಹಾಸ್ಟೆಲ್‌ನಲ್ಲಿದ್ದ ಸಂಶೋಧಕ: ಸಾಧನೆಗಳ ಸ್ಮರಿಸಿದ ಗಣ್ಯರು

ಮೈಸೂರಲ್ಲೇ ಚಿಮೂ ಉನ್ನತ ವಿದ್ಯಾಭ್ಯಾಸ

• ಕೆ.ಓಂಕಾರ ಮೂರ್ತಿ

ಮೈಸೂರು: ಸಂಶೋಧಕ, ಸಾಹಿತಿ ಡಾ. ಎಂ.ಚಿದಾನಂದಮೂರ್ತಿ (ಚಿಮೂ) ಅವರ ಉನ್ನತ ಶಿಕ್ಷಣದ ಹಾದಿ ಸಾಗಿದ್ದೇ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ. ಸುತ್ತೂರು ಮಠದ ಉಚಿತ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಸ್ನಾತಂಗ ನಡೆಸಿದರು. ಬಳಿಕ ಅಧ್ಯಾಪಕರಾಗಿಯೂ ಇಲ್ಲೇ ಕೆಲಸ ಮಾಡಿದರು.

ದಾವಣಗೆರೆಯಲ್ಲಿ ಇಂಟರ್ ಪರೀಕ್ಷೆಯಲ್ಲಿ 10ನೇ ರ‍್ಯಾಂಕ್ ಪಡೆದಿದ್ದ ಅವರು, ಅಯ್ಕೆ ಮಾಡಿಕೊಂಡಿದ್ದು ಕನ್ನಡ ಸಾಹಿತ್ಯ. ಅದಕ್ಕಾಗಿ ಮೈಸೂರು ರೈಲು ಹತ್ತಿದರು. ಮಹಾರಾಜ ಕಾಲೇಜಿನಲ್ಲಿ 1953ರಲ್ಲಿ ಬಿ.ಎ ಆನರ್ಸ್‌ನಲ್ಲಿ ಸ್ವರ್ಣ ಪದಕ ಪಡೆದರು.

ಎರಡು ವರ್ಷ ವಿವಿಧೆಡೆ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿ ಮತ್ತೆ ಮೈಸೂರಿಗೆ ಬಂದರು. 1957ರಲ್ಲಿ ಪ್ರಥಮ ಸ್ಥಾನದೊಂದಿಗೆ ಕನ್ನಡ ಎಂ.ಎ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದರು.

1957ರಲ್ಲಿ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು. 1960ರ ಹೊತ್ತಿಗೆ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಾಪಕರಾದರು. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ತೀ.ನಂ. ಶ್ರೀಕಂಠಯ್ಯ ಮಾರ್ಗದರ್ಶನದಲ್ಲಿ 1964ರಲ್ಲಿ ಪಿ.ಎಚ್‌ಡಿ ಪದವಿ ಗಿಟ್ಟಿಸಿದರು. 1968ರವರೆಗೆ ಇಲ್ಲಿಯೇ ಅಧ್ಯಾಪಕರಾಗಿ, ಕನ್ನಡ ರೀಡರ್ ಆಗಿ ಕೆಲಸ ಮಾಡಿದರು. ಬಳಿಕ ಬೆಂಗಳೂರು ವಿಶ್ವವಿದ್ಯಾಲಯ ಸೇರಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಓದುವಾಗಲೇ ಕುವೆಂಪು, ಪುತಿನ



ಮಹಾಜನ ವೃಥಮದರ್ಜೆ ಕಾಲೇಜಿನ ವ್ಯಾಂಖ್ಯಾವಾಲರು, ಬೋಧಕರು ಹಾಗೂ ವಿದ್ಯಾರ್ಥಿಗಳು ಶ್ರದ್ಧಾಂಜಲಿ ಸಲ್ಲಿಸಿದರು



'ಕರ್ನಾಟಕ ರತ್ನ ನಾಡೋಜ ಡಾ.ದೇಜಗೌ ಪ್ರಶಸ್ತಿ' ಜೊತೆ ಚಿದಾನಂದಮೂರ್ತಿ ಹಾಗೂ ರಾಧವಾಚಾರ್ ಅವರಂಥ ಕನ್ನಡದ ಮೇರು ಸಾಹಿತಿಗಳ ಪ್ರಭಾವಕ್ಕೆ ಒಳಗಾದರು.



ನಾನು ಬಿ.ಎ ಆನರ್ಸ್ ಓದುವಾಗ ಅವರು ಎಂ.ಎ ಮಾಡುತ್ತಿದ್ದರು. ನನ್ನ ಪಾಲಿಗೆ ಗುರು ಸ್ಥರೂಪಿ. ಶಾಸ್ತ್ರೀಯ ಸ್ಥಾನಮಾನಕ್ಕಾಗಿ ಅವರೊಂದಿಗೆ ದೆಹಲಿಗೆ ಹೋಗಿ ಹೋರಾಟ ನಡೆಸಿದ್ದೆವು
ಪ್ರಧಾನ ಗುರುದರ್ಶಿ, ಪಂಪ

'ಮೈಸೂರು ವಿಶ್ವವಿದ್ಯಾಲಯದಲ್ಲಿ ನಮ್ಮ ತಂದೆ ಬಿ.ವೀರಭದ್ರಪ್ಪ ಅವರಿಗೆ ಚಿಮೂ ಮೇಷ್ಟ್ರಾಗಿದ್ದರು. ವಿದ್ಯಾರ್ಥಿಗಳ ಮೇಲೆ ಅಪಾರ ಪ್ರಭಾವ ಬೀರಿದರು. ಅವರ ವ್ಯಕ್ತಿತ್ವ ರೂಪಿಸಿದ್ದೇ ಮೈಸೂರು ವಿಶ್ವವಿದ್ಯಾಲಯ. ಎಂ.ಎ ಓದುವಾಗ ಡಿ.ಎಲ್.ನರಸಿಂಹಾಚಾರ್ ಮಾರ್ಗದರ್ಶನದಲ್ಲಿ ಪಂಪ ಕವಿ ಮತ್ತು ಮೌಲ್ಯ ಪ್ರಸಾರ ಎಂಬ ಪ್ರಬಂಧ ಮಂಡಿಸಿದ್ದರು. ಅದು ಪಠ್ಯವಾಯಿತು' ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ವಿ.ವಿ.ಮಸಂತಕುಮಾರ್ ಹೇಳಿದರು.

ಮೈಸೂರಿನ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಹಾಗೂ ದೇಜಗೌ ಟ್ರಸ್ಟ್ ವತಿಯಿಂದ 2018ರಲ್ಲಿ 'ಕರ್ನಾಟಕ ರತ್ನ ನಾಡೋಜ ಡಾ.ದೇಜಗೌ ಪ್ರಶಸ್ತಿ' ಪ್ರದಾನ ಮಾಡಲಾಗಿತ್ತು.

ಅಂದು ಮಾತನಾಡಿದ್ದ ಅವರು, 'ನಮ್ಮ ಇತಿಹಾಸ ಮರೆಯಕೂಡದು. ಇತಿಹಾಸ ಅರಿಯದವನು ಇಂದು ಬದುಕಲಾರ, ನಾಳೆಯನ್ನು ಕಟ್ಟಲಾರ' ಎಂದಿದ್ದರು. ಪ್ರಶಸ್ತಿ ಜೊತೆಗೆ ಬಂದಿರುವ ಹಣದಿಂದ, ತಾವು ರಚಿಸಿರುವ 'ಕನ್ನಡ ಸಂಸ್ಕೃತಿಯ ಹಿರಿಮೆ ಗರಿಮೆ' ಕೃತಿಯ 1 ಸಾವಿರ ಪ್ರತಿಗಳನ್ನು ಖರೀದಿಸಿ ಕುವೆಂಪು ವಿದ್ಯಾವರ್ಧಕ ಟ್ರಸ್ಟಿಗೆ ನೀಡುವುದಾಗಿ ಹೇಳಿದ್ದರು.

ಚಿಮೂ ನಿಧನಕ್ಕೆ ಕಂಬನಿ

ಡಾ.ಚಿದಾನಂದಮೂರ್ತಿ ಅವರ ನಿಧನಕ್ಕೆ ಸ್ವಾಮೀಜಿ, ಸಾಹಿತಿಗಳು ಹಾಗೂ ಜನಪ್ರತಿನಿಧಿಗಳು ಕಂಬನಿ ಮಿಡಿದಿದ್ದಾರೆ.

'ಚಿದಾನಂದಮೂರ್ತಿ ನಮ್ಮ ಮಠದ ವಿದ್ಯಾರ್ಥಿ ನಿಲಯದ ಹಿರಿಯ ವಿದ್ಯಾರ್ಥಿಯಾಗಿದ್ದರು. ಅದನ್ನು ಅವರು ಎಲ್ಲಾ ಕಡೆ ಹೇಳಿಕೊಳ್ಳುತ್ತಿದ್ದರು. ಇದೊಂದು ಅಭಿಮಾನದ ವಿಷಯ. ಹಂಪಿಯ ಸ್ಮಾರಕ ಸಂರಕ್ಷಣೆಗಾಗಿ ಅವರು ಮಾಡಿದ ಹೋರಾಟ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ನೆಲೆಯೂರುವಂಥದ್ದು. ತಮಗೆ ಸರಿ ಎನಿಸಿದ ವಿಚಾರಗಳನ್ನು ನೇರವಾಗಿ ಹೇಳಲು ಅವರು ಹಿಂಜರಿಯುತ್ತಿರಲಿಲ್ಲ' ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದ್ದಾರೆ.

'ಚಿಮೂ ತಮಗೆ ಸರಿ ಅನಿಸಿದ್ದನ್ನು ಗಟ್ಟಿ ಧ್ವನಿಯಲ್ಲಿ ವ್ಯಕ್ತಪಡಿಸುತ್ತಿದ್ದರು. ಕನ್ನಡದ ಅಭಿವೃದ್ಧಿಗೆ ಹೋರಾಟ ಮಾಡಿಕೊಂಡು ಬಂದಿದ್ದರು' ಎಂದು ಬೆಲ್ಲಾ ಉಸುವಾರಿ ಸಚಿವ ವಿ.ಸೋಮಣ್ಣ ಮಿಡಿದಿದ್ದಾರೆ.

'ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಲು ಪ್ರಮುಖ ಕಾರಣರಾದ ಚಿದಾನಂದಮೂರ್ತಿ. ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕೆಂದು ಹೋರಾಟ ನಡೆಸಿದವರ ಪೈಕಿ ಪ್ರಮುಖರು' ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದ್ದಾರೆ.



ಕನ್ನಡ ಸಾಹಿತ್ಯ ಅಕಾಡೆಮಿಯು ಕನ್ನಡ ಸಾಹಿತ್ಯದಲ್ಲಿ ಜೀವನಮೌಲ್ಯ ಮಾಲೆ ಎಂಬ ಸರಣಿ ಆರಂಭಿಸುತ್ತಿದೆ. ಇದಕ್ಕೆ ಮುಖ್ಯ ಪ್ರೇರಣೆ ಚಿಮೂ ಬರೆದ ಪಂಪ ಕವಿ ಮತ್ತು ಮೌಲ್ಯ ಪ್ರಸಾರ
ಡಾ.ವಿ.ವಿ.ಮಸಂತಕುಮಾರ್
ಅಧ್ಯಕ್ಷ, ಕನ್ನಡ ಸಾಹಿತ್ಯ ಅಕಾಡೆಮಿ

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಶನಿವಾರ, ಜನವರಿ ೨೫, ೨೦೨೦

ಗಮನ ಸೆಳೆದ ಅಪರೂಪದ ನಾಣ್ಯ, ನೋಟುಗಳ ಪ್ರದರ್ಶನ

ಎಂ.ಎನ್.ಮುರಳಿಕೃಷ್ಣ ಸಂಗ್ರಹದಲ್ಲಿ ನೂರಾರು ವರ್ಷಗಳ ಇತಿಹಾಸದ ನಾಣ್ಯ, ನೋಟುಗಳು

ಮೈಸೂರು,ಜ.24-ಸ್ವಾತಂತ್ರ್ಯ ಪೂರ್ವ ಸೇರಿದಂತೆ ನಾನಾ ಕಾಲಘಟ್ಟದ ದೇಶೀಯ ಹಾಗೂ ವಿದೇಶಗಳ ಅಪರೂಪದ ನಾಣ್ಯ ಹಾಗೂ ನೋಟುಗಳ ಪ್ರದರ್ಶನ ವಿದ್ಯಾರ್ಥಿಗಳನ್ನು ಆಕರ್ಷಿಸಿದವು.

ನಗರದ ಮಹಾಜನ ಪದವಿ ಪೂರ್ವ ಕಾಲೇಜಿನ ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಘಟಕದ ಸಹಯೋಗದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಆಯೋಜಿಸಿರುವ ಕೊಟಕ್ ಮಹಿಂದ್ರ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ಎನ್. ಮುರಳಿಕೃಷ್ಣ ಸಂಗ್ರಹಿಸಿರುವ ಅಪರೂಪದ ನೋಟು ಮತ್ತು ನೂರಾರು ಇತಿಹಾಸವುಳ್ಳ ನಾಣ್ಯಗಳು ವಿದ್ಯಾರ್ಥಿಗಳ ಗಮನ ಸೆಳೆದವು.

ಪ್ರದರ್ಶನದಲ್ಲಿ ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ಬಳಸುತ್ತಿದ್ದ ರಾಣಿ ವಿಕ್ಟೋರಿಯಾ, 7ನೇ ಎಡ್ವರ್ಡ್, ಕಿಂಗ್ ಜಾರ್ಜ್ ಮುಂತಾದ ಚಿತ್ರ ಮುದ್ರಿತ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಪ್ರಮುಖ ಆಕರ್ಷಣೆಯಾಗಿವೆ. ಇದರ ಜೊತೆಗೆ ಮೈಸೂರು ಸಂಸ್ಥಾನದ ರಾಜ-ಮಹಾರಾಜರು ಬಳಸುತ್ತಿದ್ದ ನಾಣ್ಯಗಳು ಗಮನ ಸೆಳೆಯುತ್ತಿವೆ. ರೋಮನ್, ಗುಪ್ತರ ನಾಣ್ಯಗಳು, ಶಾತವಾಹನರು, ಕದಂಬ, ಚೋಳ, ಪಾಂಡ್ಯರ ಕಾಲ ಮುಂತಾದ ಪ್ರಾಚೀನ ಭಾರತದ ನಾಣ್ಯಗಳು, ಮೊಘಲ್ ಸಾಮ್ರಾಜ್ಯದ ಅಕ್ಬರ್, ಜಹಂಗೀರ್, ಷಹಜಹಾನ್, ಔರಂಗಜೇಬ್ ಕಾಲದ ನಾಣ್ಯ, ವಿಜಯನಗರದ ಕೃಷ್ಣದೇವರಾಯ, ಅಚ್ಯುತರಾಯ, ಪ್ರತಾಪ ದೇವರಾಯರ ನಾಣ್ಯ, ಮೈಸೂರು, ಬಿಜಾಪುರ, ತಿರುವಾಂಕೂರು, ಹೈದರಾಬಾದ್, ಕಛ್, ಬರೋಡ, ಗ್ವಾಲಿಯರ್, ಮೇವಾರ ಮುಂತಾದ ಭಾರತೀಯ ಸಂಸ್ಥಾನಗಳ ಅಪರೂಪದ ನಾಣ್ಯಗಳು ಇತಿಹಾಸವನ್ನ ಕಣ್ಣು ಹಾಯಿಸುವಂತೆ ಮಾಡುತ್ತಿವೆ.

1 ಸಾವಿರ ಮೌಲ್ಯದ ಗಣೇಶನ ಚಿತ್ರವಿರುವ ಮಲೇಷ್ಯಾ ನೋಟು, ವಿಯೆಟ್ನಾಂ, ಜಿಂಬಾಬ್ವೆ, ಯುಗೋಸ್ಲಾವಿಯ, ಟರ್ಕಿ ದೇಶದ ಅಧಿಕ ಮೌಲ್ಯದ ನೋಟುಗಳನ್ನು ಪ್ರದರ್ಶಿಸಲಾಗುತ್ತಿದೆ. ಇದಕ್ಕೂ ಮುನ್ನ ಜ.25ರವರೆಗೆ ನಡೆಯುವ ಪ್ರದರ್ಶನಕ್ಕೆ



ಮೈಸೂರಿನ ಮಹಾಜನ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿರುವ ಅಪರೂಪದ ನೋಟು ಮತ್ತು ನಾಣ್ಯಗಳ ಪ್ರದರ್ಶನದಲ್ಲಿ ಭಾಗವಹಿಸಿದ್ದ ಗಣ್ಯರು ನಾಣ್ಯಗಳನ್ನು ವೀಕ್ಷಿಸಿದರು.

ಈ ರೀತಿ ಅಪರೂಪದ ನೋಟು ಹಾಗೂ ನಾಣ್ಯಗಳನ್ನು ನಾವು ಈವರೆಗೆ ನೋಡಿರಲಿಲ್ಲ. ಇವುಗಳನ್ನು ನೋಡಿ ಬಹಳ ಖುಷಿಯಾಗಿದೆ. ಇಂತಹ ಕಾರ್ಯಕ್ರಮಗಳು ಹೆಚ್ಚು ನಡೆಯಬೇಕು.

– ನಿತ್ಯಶ್ರೀ, ವಿದ್ಯಾರ್ಥಿನಿ

ಇತಿಹಾಸ ಸಾರುವ ಹಾಗೂ ಕಳೆದ ವರ್ಷಗಳ ಹಿಂದೆ ಸ್ಥಗಿತಗೊಂಡ ನೋಟುಗಳು ಕೂಡ ಪ್ರದರ್ಶನದಲ್ಲಿವೆ. ಇವುಗಳನ್ನು ನೋಡಿ ಸಂತಸವಾಗಿದೆ. ನಾಣ್ಯಗಳನ್ನು ಸಂಗ್ರಹಿಸುವ ಹಂಬಲ ಹೆಚ್ಚಿದೆ.

– ಅಕ್ಷತಾ, 5ನೇ ತರಗತಿ, ವಿದ್ಯಾರ್ಥಿನಿ

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಚಾಲನೆ ನೀಡಿದರು. ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ವೆಂಕಟರಾಮು, ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಉಪ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಇತಿಹಾಸ ವಿಭಾಗದ ಅಧ್ಯಾಪಕ ವರ್ಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್ ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 25.1.2020

ಮಹಾಜನ ಕಾಲೇಜಿನಲ್ಲಿ ವಿವಿಧ ನೋಟು, ನಾಣ್ಯಗಳ ಪ್ರದರ್ಶನ



ಮಹಾಜನ ಕಾಲೇಜಿನಲ್ಲಿ ನೋಟು, ನಾಣ್ಯಗಳ ಪ್ರದರ್ಶನ ಆಯೋಜಿಸಲಾಗಿತ್ತು.

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಘಟಕದ ಸಹಯೋಗದಲ್ಲಿ 71ನೇ ಗಣರಾಜ್ಯೋತ್ಸವದಅಂಗವಾಗಿಅಪರೂಪದ ನೋಟು ಮತ್ತು ನಾಣ್ಯಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಕೊಟಕ್ ಮಹೀಂದ್ರಬ್ಯಾಂಕ್‌ನ ನಿವೃತ್ತ ಹಿರಿಯ ವ್ಯವಸ್ಥಾಪಕ ಎಂ.ಎನ್. ಮುರಳೀ ಕೃಷ್ಣ ಅವರು ಈ ಪ್ರದರ್ಶನವನ್ನು ನಡೆಸಿಕೊಡಲಿದ್ದು, ಶುಕ್ರವಾರ ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಚಾಲನೆ ನೀಡಿದರು. ಈ ಪ್ರದರ್ಶನದಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಅಲ್ಯೂಮಿನಿಯಂ, ನಿಕ್ಕಲ್ ನಾಣ್ಯಗಳನ್ನು ವ್ಯವಹಾರಕ್ಕೆ ಬಳಸುವುದು ಸರ್ವೇ ಸಾಮಾನ್ಯವಾಯಿತು. ಇಂತಹ ಐತಿಹಾಸಿಕ ಮೌಲ್ಯದ ದೇಶೀಯ ಮತ್ತು ವಿದೇಶಿ ರಾಷ್ಟ್ರಗಳ ಅಪರೂಪದ ನೋಟು ಮತ್ತು ನಾಣ್ಯಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

200-300 ವರ್ಷಗಳ ಇತಿಹಾಸವುಳ್ಳ ವಿವಿಧ ಆಕಾರ ಹಾಗೂ ತೂಕದ ನಾಣ್ಯ ಗಳನ್ನು ನೋಡುವ ಅಪರೂಪದ ಅವಕಾಶ ಇದಾಗಿದ್ದು, ಪ್ರದರ್ಶನದಲ್ಲಿ ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ಬಳಸುತ್ತಿದ್ದ ರಾಣಿ ವಿಕ್ಟೋರಿಯಾ, 7ನೇ ಎಡ್ವರ್ಡ್, ಕಿಂಗ್ ಜಾರ್ಜ್ ಮುಂ ತಾದವರ ಚಿತ್ರ ಮುದ್ರಿತ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ನೋಡಬಹು ದಾಗಿದೆ.

ಇದರ ಜೊತೆಗೆ ಮೈಸೂರು ಸಂಸ್ಥಾನದ ರಾಜ-ಮಹಾ ರಾಜರುಗಳು ಬಳಸುತ್ತಿದ್ದ ನಾಣ್ಯಗಳನ್ನು ಕೂಡ ಪ್ರದರ್ಶಿಸಲಾಗುತ್ತಿದೆ. ಇದಲ್ಲದೆ, ವಿಶೇ ಷ ಎನ್ನಿಸುವ ವಿದೇಶಿ ನೋಟುಗಳನ್ನು ಕಾಣಬ ಹುದು. 1,00,000 ಮೌಲ್ಯದ ಗಣೇಶನ ಚಿತ್ರ ವಿರುವ ಮಲೇಷ್ಯಾ ದೇಶದ ನೋಟು, ವಿಯೆಟ್ನಾಂ, ಜಿಂಬಾಬ್ವೆ, ಯುಗೋ ಸ್ಲಾವಿಯ, ಟರ್ಕಿ ದೇಶದ ಅಧಿಕ ಮೌಲ್ಯದ ನೋಟುಗಳನ್ನು ಪ್ರದರ್ಶಿಸಲಾಗುತ್ತದೆ. ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಇದ್ದರು.ಡಿ

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 25 ಜನವರಿ 2020

ಮಹಾಜನ ಕಾಲೇಜಿನಲ್ಲಿ ಅಪೂರ್ವ ನೋಟು, ನಾಣ್ಯಗಳ ಪ್ರದರ್ಶನ



ಮೈಸೂರು,ಜ.24–71ನೇ ಗಣರಾಜ್ಯೋತ್ಸವದ ಅಂಗವಾಗಿ ಮೈಸೂರಿನ ಜಯಲಕ್ಷ್ಮೀಪುರಂನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಘಟಕದ ಸಹಯೋಗದಲ್ಲಿ ಅಪರೂಪದ ನೋಟು ಮತ್ತು ನಾಣ್ಯಗಳ ಪ್ರದರ್ಶನ ಆಯೋಜಿಸಲಾಗಿದೆ. ಕೊಟಕ್ ಮಹೀಂದ್ರ ಬ್ಯಾಂಕ್‌ನ ನಿವೃತ್ತ ಹಿರಿಯ ವ್ಯವಸ್ಥಾಪಕ ಎಂ.ಎನ್. ಮುರಳೀಕೃಷ್ಣ ಅವರು ಈ ಪ್ರದರ್ಶನವನ್ನು ನಡೆಸಿಕೊಡುತ್ತಿದ್ದಾರೆ. ಕಾಲೇಜಿನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಉಚಿತ ಪ್ರವೇಶದೊಂದಿಗೆ ಆಯೋಜಿಸಲಾಗಿದೆ. ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರು ಉದ್ಘಾಟನೆ ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ವೆಂಕಟರಾಮು ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಶ್ರೀಧರ ಮತ್ತಿತರರು ಹಾಜರಿದ್ದರು.

200–300 ವರ್ಷಗಳ ಇತಿಹಾಸವುಳ್ಳ ವಿವಿಧ ಆಕಾರ ಹಾಗೂ ತೂಕದ ನಾಣ್ಯಗಳನ್ನು ನೋಡುವ ಅಪರೂಪದ ಅವಕಾಶ ಇದಾಗಿದ್ದು, ಪ್ರದರ್ಶನದಲ್ಲಿ ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ಬಳಸುತ್ತಿದ್ದ ರಾಣಿ ವಿಕ್ಟೋರಿಯಾ, 7ನೇ ಎಡ್ವರ್ಡ್, ಕಿಂಗ್ ಜಾರ್ಜ್ ಮುಂತಾದವರ ಚಿತ್ರ ಮುದ್ರಿತ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ನೋಡಬಹುದಾಗಿದೆ. ಇದರ ಜೊತೆಗೆ ಮೈಸೂರು ಸಂಸ್ಥಾನದ ರಾಜ–ಮಹಾರಾಜರುಗಳು ಬಳಸುತ್ತಿದ್ದ ನಾಣ್ಯಗಳನ್ನು ಕೂಡ ಪ್ರದರ್ಶಿಸಲಾಗುತ್ತಿದೆ. ಇದಲ್ಲದೆ, ವಿಶೇಷ ಎನ್ನಿಸುವ ವಿದೇಶಿ ನೋಟುಗಳನ್ನು ಕಾಣಬಹುದು. 1 ಲಕ್ಷ ಮೌಲ್ಯದ ಗಣೇಶನ ಚಿತ್ರವಿರುವ ಮಲೇಷ್ಯಾ ದೇಶದ ನೋಟು, ವಿಯೆಟ್ನಾಂ, ಜಿಂಬಾಬ್ವೆ, ಯುಗೋಸ್ಲಾವಿಯ, ಟರ್ಕಿ ದೇಶಗಳ ನೋಟುಗಳನ್ನು ಪ್ರದರ್ಶಿಸಲಾಗಿದೆ.

ಪ್ರಜಾವಾಣಿ
ಆತ್ಮಜ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಜನವರಿ 25, 2020



ಮೈಸೂರಿನಲ್ಲಿ ಆಯೋಜಿಸಿರುವ ನೋಟು ಮತ್ತು ನಾಣ್ಯ ಪ್ರದರ್ಶನವನ್ನು ವಿದ್ಯಾರ್ಥಿನಿಯರು ವೀಕ್ಷಿಸಿದರು

ನೋಟು, ನಾಣ್ಯ ಪ್ರದರ್ಶನ

ಮೈಸೂರು: ಗಣರಾಜ್ಯೋತ್ಸವ ಅಂಗವಾಗಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಘಟಕ ವತಿಯಿಂದ ಅಪರೂಪದ ನೋಟು ಮತ್ತು ನಾಣ್ಯಗಳ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಕೊಟಕ್ ಮಹೀಂದ್ರ ಬ್ಯಾಂಕ್‌ನ ನಿವೃತ್ತ ಹಿರಿಯ ವ್ಯವಸ್ಥಾಪಕ ಎಂ.ಎನ್.ಮುರಳೀಕೃಷ್ಣ ಈ ಪ್ರದರ್ಶನ ನಡೆಸಿಕೊಡುತ್ತಿದ್ದಾರೆ.

200-300 ವರ್ಷಗಳ ಹಿಂದಿನ ವಿವಿಧ ಆಕಾರ ಹಾಗೂ ತೂಕದ ನಾಣ್ಯಗಳು ಇಲ್ಲಿವೆ. ಈಸ್ಟ್ ಇಂಡಿಯಾ ಕಂಪನಿ ಬಳಸುತ್ತಿದ್ದ ರಾಣಿ ವಿಕ್ಟೋರಿಯಾ, 7ನೇ ಎಡ್ವರ್ಡ್, ಕಿಂಗ್ ಜಾರ್ಜ್ ಮುಂತಾದವರ ಚಿತ್ರ ಮುದ್ರಿತ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಪ್ರದರ್ಶನಕ್ಕಿಡಲಾಗಿದೆ. ಮೈಸೂರು ಸಂಸ್ಥಾನದ ಮಹಾರಾಜರು ಬಳಸುತ್ತಿದ್ದ ನಾಣ್ಯಗಳೂ ಇವೆ.

ವಿದೇಶಿ ನೋಟುಗಳನ್ನು ಕಾಣಬಹುದು. ಗಣೇಶನ ಚಿತ್ರವಿರುವ ಮಲೇಷ್ಯಾ ದೇಶದ ನೋಟು, ವಿಯೆಟ್ನಾಂ, ಜಿಂಬಾಬ್ವೆ, ಯುಗೋಸ್ಲಾವಿಯ, ಟರ್ಕಿ ದೇಶದ ನೋಟುಗಳನ್ನು ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಪ್ರದರ್ಶಿಸಲಾಗುತ್ತಿದೆ.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಇದ್ದರು.

STAR OF MYSORE

Monday 27th January 2020

Rare Coins and Currency Expo



Mysuru, Jan. 27 - Marking 71st Republic Day celebrations, the History Department of SBRR Mahajana First Grade College, Jayalakshmipuram, in association with Expert Numismatist M.N. Muralikrishna, had recently organised a Numismatics expo at Dr. APJ Abdul Kalam auditorium, here at the college premises.

Coins dating back to 200-300 years, varying in size and weight, were displayed at the exhibition which also included rare silver and copper coins engraved with images of Queen Victoria, King Edward VII, King George and other famous historical personalities. Also on the display were coins used during the Wadiyar reign and rare currency notes from Vietnam, Zimbabwe, Yugoslavia, Turkey and one from Malaysia with an image of Lord Ganesha on it. The exhibition was inaugurated by Rangayana Director Addanda C. Cariappa. College Principal Dr. S. Venkataramu, History Dept. HoD Sridhar and others were present.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪತ್ರಿಕೆ

ಭಾನುವಾರ, 26 ಜನವರಿ 2020,

ಮಹಾಜನ ಕಾಲೇಜಿನಲ್ಲಿ ನಾಣ್ಯ ಪರಂಪರೆ ಅನಾವರಣ

■ **ವಿಕ ಸುದ್ದಿಲೋಕ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜು ಆವರಣದಲ್ಲಿ ನಾಣ್ಯ ಪರಂಪರೆಯ ವೈಭವ ಅನಾವರಣಗೊಂಡಿದೆ.

ಮೈಸೂರು ರಾಜ ಮನೆತನದ ಕಾಲ ಜಾರಿಯಾಗಿದ್ದ ಮೂಗತಿ ಅಳತೆಯ ಚಿನ್ನದ ನ್ಯಾಣ್ಯದಿಂದ ಹಿಡಿದು ಇತ್ತೀಚೆಗೆ ಕೇಂದ್ರ ಸರಕಾರ ಬಿಡುಗಡೆಗೊಳಿಸಿದ 100, 150 ರೂ. ಬೆಳ್ಳಿ ನಾಣ್ಯ ಹಾಗೂ ಚೋಳ, ಚಾಲಕ್ಯ, ಮೊಘಲರು ಹಾಗೂ ವಿದೇಶಗಳಲ್ಲಿ ಹಿಂದಿನ ಕಾಲ ಹಾಗೂ ಇಂದು ಚಾಲ್ತಿಯಲ್ಲಿರುವ ನಾಣ್ಯ-ನೋಟು ಪ್ರದರ್ಶನ ಪ್ರಪಂಚದಲ್ಲಿ ನಾಣ್ಯ ಬೆಳೆದ ತಂದ ಹಾದಿಯನ್ನು ಹಿಂತಿರುಗಿ ನೋಡುವಂತಿದೆ.

71ನೇ ಗಣರಾಜ್ಯೋತ್ಸವದ ಪ್ರಯುಕ್ತ ಜಯಲಕ್ಷ್ಮೀ ಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ವತಿಯಿಂದ ಶುಕ್ರವಾರ ಕಾಲೇಜು ಆವರಣದಲ್ಲಿ ಅಪೂರ್ವ ನಾಣ್ಯ-ನೋಟು ಪ್ರದರ್ಶನ ಗಮನ ಸೆಳೆಯುತ್ತಿದೆ. ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಎಂ.ಎನ್.ಮುರಳೀಕೃಷ್ಣ ಸಂಗ್ರಹಿಸಿರುವ ನೋಟು ಮತ್ತು ನಾಣ್ಯಗಳ ಪ್ರದರ್ಶನದಲ್ಲಿ ಸುಮಾರು 300 ವರ್ಷಗಳ ಇತಿಹಾಸವುಳ್ಳ ವಿವಿಧ ಆಕಾರ ಹಾಗೂ ತೂಕದ ನಾಣ್ಯಗಳು



ಮಹಾಜನ ಕಾಲೇಜು ಆವರಣದಲ್ಲಿ ಆಯೋಜಿಸಿರುವ ಅಪೂರ್ವ ನಾಣ್ಯ-ನೋಟು ಪ್ರದರ್ಶನಕ್ಕೆ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಚಾಲನೆ ನೀಡಿದರು.

ವಿದ್ಯಾರ್ಥಿಗಳ ಗಮನ ಸೆಳೆಯುತ್ತಿವೆ. 50ಕ್ಕೂ ಹೆಚ್ಚು ದೇಶದ ಸಾವಿರಾರು ನಾಣ್ಯಗಳನ್ನು ಪ್ರದರ್ಶಿಸಲಾಗಿದ್ದು, ಚಿನ್ನ, ಬೆಳ್ಳಿ, ತಾಮ್ರ, ಅಲ್ಯೂಮಿನಿಯಂ, ನಿಕ್ಕಲ್ ನಾಣ್ಯಗಳನ್ನು ವ್ಯವಹಾರಕ್ಕೆ ತಂದ ಐತಿಹಾಸಿಕ ಮೌಲ್ಯದ ದೇಶಿಯ ಮತ್ತು ವಿದೇಶಿ ಅಪರೂಪದ ನೋಟು ಮತ್ತು ನಾಣ್ಯಗಳ ಪ್ರದರ್ಶನದಲ್ಲಿವೆ.ವಿದೇಶಿ ನಾಣ್ಯ- ನೋಟುಗಳು ಸಹ ಗಮನ ಸೆಳೆಯುತ್ತಿದ್ದು, 1 ಸಾವಿರ ಮೌಲ್ಯದ ಗಣೇಶನ ಚಿತ್ರವಿರುವ ಮಲೇಷ್ಯಾ ದೇಶದ ನೋಟು, ಇಂಗ್ಲೆಂಡ್‌ನ ಫೌಂಡ್, ಸೌದಿ ಮತ್ತು ಮುಸ್ಲಿಂ ರಾಷ್ಟ್ರಗಳ ದಿನಾರ್, ರಿಯಲ್ ನೋಟು ಗಳು, ನಮ್ಮ ಸಮೀಪ ರಾಷ್ಟ್ರದ ಪಾಕಿಸ್ತಾನ್, ನೇಪಾಳ ಹಾಗೂ ವಿಯೆ ಟ್ನಾಂ, ಜಿಂಬಾಬ್ವೆ ಟರ್ಕಿ ಮುಂತಾದ ದೇಶದ ನೋಟುಗಳನ್ನು ಪ್ರದರ್ಶಿ ಸಲಾಗಿದೆ.ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಮಹಾ ಜನ ವಿದ್ಯಾ ಸಂಸ್ಥೆಯ ಕಾರ್ಯ ದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ಉಪಪ್ರಾಂಶು ಪಾಲರಾದ ಬಿ.ಆರ್. ಜಯ ಕುಮಾರಿ, ಡಾ. ಎಚ್.ಶ್ರೀಧರ್, ನಾಣ್ಯ ಸಂಗ್ರಹಕಾರ ಎಂ.ಎನ್.ಮುರಳೀ ಕೃಷ್ಣ ಇದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಸೋಮವಾರ 27 ಜನವರಿ 2020
27 JANUARY 2020

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಚಾಲನೆ ಗಮನ ಸೆಳೆದ ನೋಟುಗಳು

ಜನಾಕರ್ಷಿಸಿದ ಅಪರೂಪದ ನಾಣ್ಯಗಳು

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಮಹಾಜನ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿರುವ ಹಳೆಯ ನಾಣ್ಯಗಳು ಹಾಗೂ ನೋಟುಗಳ ಪ್ರದರ್ಶನದಲ್ಲಿ ಈಸ್ಟ್ ಇಂಡಿಯಾ ಕಂಪನಿ, ಮೈಸೂರು ಸಂಸ್ಥಾನ ಬಳಕೆ ಮಾಡುತ್ತಿದ್ದ ನಾಣ್ಯಗಳು ಸೇರಿದಂತೆ ಹಲವು ಅಪರೂಪದ ನಾಣ್ಯಗಳು, ನೋಟುಗಳು ಜನಾಕರ್ಷಿಸಿದವು.

» ಗಣರಾಜ್ಯೋತ್ಸವ ಅಂಗವಾಗಿ ಆಯೋಜನೆ

» ನೂರಾರು ಜನರು ಭೇಟಿ

ಮಹಾಜನ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಘಟಕ ವತಿಯಿಂದ ಗಣ ರಾಜ್ಯೋತ್ಸವದ ಅಂಗವಾಗಿ ಈ ಅಪರೂಪದ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ಕೊಟಕ್ ಮಹೇಂದ್ರ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ಎನ್. ಮುರಳಿಕೃಷ್ಣ ಸಂಗ್ರಹಿಸಿರುವ ಅಪರೂಪದ ನೋಟು ಮತ್ತು ನಾಣ್ಯಗಳನ್ನು ಪ್ರದರ್ಶನಕ್ಕೆ ಇರಿಸಲಾಗಿತ್ತು. ಪ್ರದರ್ಶನದಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಅಲ್ಯುಮಿನಿಯಂ, ನಿಕ್ಕಲ್ ನಾಣ್ಯಗಳು ಪ್ರೇಕ್ಷಕರ ಗಮ ಸೆಳೆದವು.



ವಿಜಯವಾಣಿ ಚಿತ್ರ

ಹಳೆಯ ನಾಣ್ಯಗಳು ಹಾಗೂ ನೋಟುಗಳ ಪ್ರದರ್ಶನವನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಉದ್ಘಾಟಿಸಿ ನಾಣ್ಯ, ನೋಟುಗಳನ್ನು ವೀಕ್ಷಿಸಿದರು. ಡಾ. ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್.ಆರ್.ರಮೇಶ್ ಇತರರು ಇದ್ದರು.

ಈಸ್ಟ್ ಇಂಡಿಯಾ ಕಂಪನಿಯ ಅಪರೂಪದ ನಾಣ್ಯಗಳು, ಮೈಸೂರು ಸಂಸ್ಥಾನದ ನಾಣ್ಯಗಳು, ಗುಪ್ತರು, ಶಾತವಾಹನರು, ಕದಂಬ, ಚೋಳ, ಪಾಂಡ್ಯ ಮುಂತಾದ ಸಂಸ್ಥಾನದ ನಾಣ್ಯಗಳು, ಮೊಘಲ್ ಸಾಮ್ರಾಜ್ಯದ ಅಕ್ಬರ್, ಜಹಂಗೀರ್, ಷಹಜಹಾನ್, ಔರಂಗಜೇಬ್‌ರ ಕಾಲದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳು. ವಿಜಯನಗರದ ಕೃಷ್ಣದೇವರಾಯ, ಪ್ರತಾಪ ದೇವರಾಯರ ಕಾಲದ ನಾಣ್ಯಗಳು, ವಿಜಯಪುರ, ತಿರುವಾಂಕೂರ್, ಹೈದರಾಬಾದ್, ಕಛ್, ಬರೋಡ, ಗ್ವಾಲಿಯರ್, ಮೇವಾರ ಸಂಸ್ಥಾನಗಳ ಅಪರೂಪದ ನಾಣ್ಯಗಳು ನೋಡುಗರನ್ನು ತಮ್ಮತ್ತ ಆಕರ್ಷಿಸಿದವು.

ಒಂದು ಸಾವಿರ ರೂ. ಮೌಲ್ಯದ ಗಣೇಶನ ಚಿತ್ರ ವಿರುವ ಮಲೇಷ್ಯಾ ನೋಟು, ವಿಯೆಟ್ನಾಂ, ಜಿಂಬಾಬ್ವೆ, ಟರ್ಕಿ ದೇಶದ ಅಧಿಕ ಮೌಲ್ಯದ ನೋಟುಗಳನ್ನು ಪ್ರದರ್ಶನದಲ್ಲಿ ಇದ್ದವು.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಮಹಾಜನ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜು ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಉಪ ಪ್ರಾಂಶುಪಾಲೆ ಬಿ. ಆರ್. ಜಯಕುಮಾರಿ, ಇತಿಹಾಸ ವಿಭಾಗದ ಅಧ್ಯಾಪಕ ವರ್ಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್ ಇತರರಿದ್ದರು.

ಅಪರೂಪದ ನಾಣ್ಯಗಳು, ನೋಟುಗಳ ಪ್ರದರ್ಶನ ಶನಿವಾರ ಮುಕ್ತಾಯಗೊಂಡಿತು.

MFGE In the Eyes of the Press.....







ಆಂದೋಲನ
ದಿನ ಪತ್ರಿಕೆ

ಶುಕ್ರವಾರ, ಜನವರಿ ೨೪, ೨೦೨೦

■ **ಅಪೂರ್ವ ನೋಟು ಮತ್ತು ನಾಣ್ಯಗಳ ಪ್ರದರ್ಶನ**

ಬೆಳಿಗ್ಗೆ 10ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಪ್ರದರ್ಶನಕಾರರು–ಕೊಟಕ್ ಮಹೀಂದ್ರ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ಎನ್.ಮುರಳೀಕೃಷ್ಣ, ಉದ್ಘಾಟನೆ–ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಅತಿಥಿಗಳು–ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಸ್ಥಳ–ಡಾ.ಎ.ಪಿ.ಜೆ.ಅಬ್ದುಲ್‌ಕಲಾಂ ಸಭಾಂಗಣ, ಕಾಲೇಜಿನ ಆವರಣ, ಜಯಲಕ್ಷ್ಮೀಪುರಂ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 24.1.2020

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಎಂ.ಎನ್. ಮುರಳೀ ಕೃಷ್ಣ ಅವರಿಂದ ಅಪೂರ್ವ ನೋಟು ಮತ್ತು ನಾಣ್ಯ ಗಳ ಪ್ರದರ್ಶನ, ಉ ದ್ಘಾಟನೆ– ಅಡ್ಡಂಡ ಸಿ. ಕಾರ್ಯಪ್ಪ, ಅತಿಥಿ– ಡಾ. ವಿಜಯಲಕ್ಷ್ಮಿ ಮುರ ಳೀಧರ್, ಡಾ.ಎಸ್. ವೆಂಕಟರಾಮು, ಡಾ.ಎಸ್.ಆರ್. ರಮೇಶ್, ಬಿ.ಆರ್. ಜಯಕುಮಾರಿ, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 24 ಜನವರಿ 2020

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ಗಣ ರಾಜ್ಯೋತ್ಸವದ ಅಂಗವಾಗಿ ಅಪೂರ್ವ ನೋಟು ಮತ್ತು ನಾಣ್ಯಗಳ ಪ್ರದರ್ಶನ, ಪ್ರದರ್ಶನಕಾರರು: ಕೊಟಕ್ ಮಹೀಂದ್ರ ಬ್ಯಾಂಕ್ ನಿವೃತ್ತ ಹಿರಿಯ ವ್ಯವಸ್ಥಾಪಕ ಎಂ.ಎನ್. ಮುರಳೀಕೃಷ್ಣ, ಉದ್ಘಾಟನೆ : ವಿಶ್ವ ವಿದ್ಯಾಲಯ ಕುಲಸಚಿವ ಪ್ರೊ. ಆರ್. ಶಿವಪ್ಪ, ಉಪಸ್ಥಿತರು : ಡಾ. ವಿಜಯಲಕ್ಷ್ಮಿ ಮುರಳೀಧರ್, ಡಾ. ಎಸ್. ವೆಂಕಟರಾಮು, ಡಾ.ಎಸ್.ಆರ್. ರಮೇಶ್, ಶ್ರೀಮತಿ ಬಿ.ಆರ್.ಜಯಕುಮಾರಿ, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಿಗ್ಗೆ 10ಕ್ಕೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 24 ಜನವರಿ 2020

ಇಂದು, ನಾಳೆ ಅಪೂರ್ವ ನೋಟು, ನಾಣ್ಯಗಳ ಪ್ರದರ್ಶನ

ಮೈಸೂರು, ಜ.23– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐಕ್ಯೂ ಎಸಿ ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ ಜ.24 ಮತ್ತು 25ರಂದು ಅಪೂರ್ವ ನೋಟು ಮತ್ತು ನಾಣ್ಯಗಳ ಪ್ರದರ್ಶನ ಏರ್ಪಡಿಸಲಾಗಿದೆ. ಜಯಲಕ್ಷ್ಮೀಪುರಂನಲ್ಲಿರುವ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣ ದಲ್ಲಿ ಜ.24ರಂದು ಬೆಳಿಗ್ಗೆ 10 ಗಂಟೆಗೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಿಇಓ ಡಾ.ಎಸ್.ಆರ್.ರಮೇಶ್ ಉಪಸ್ಥಿತರಿರುವರು. ಮೈಸೂರಿನ ಕೊಟಕ್ ಮಹೀಂದ್ರ ಬ್ಯಾಂಕ್‌ನ ನಿವೃತ್ತ ಹಿರಿಯ ವ್ಯವಸ್ಥಾಪಕ ಎಂ.ಎಸ್.ಮುರಳೀಕೃಷ್ಣ ಪ್ರದರ್ಶಿಸುತ್ತಿರುವ ಈ ಪ್ರದರ್ಶನದಲ್ಲಿ ವಿಶ್ವದ 57 ದೇಶಗಳ ಅಪೂರ್ವ ನೋಟುಗಳು ಮತ್ತು 34 ದೇಶಗಳ ನಾಣ್ಯಗಳನ್ನು ಪ್ರದರ್ಶನಕ್ಕಿಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ವಿಜಯ ಕರ್ನಾಟಕ

ಶುಕ್ರವಾರ, 24 ಜನವರಿ 2020

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: 71ನೇ ಗಣರಾಜ್ಯೋತ್ಸವದ



ಪ್ರಯುಕ್ತ ಅಪೂರ್ವ ನೋಟು ಮತ್ತು ನಾಣ್ಯಗಳ ಪ್ರದರ್ಶನ. ಉದ್ಘಾಟನೆ- ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ. ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮೀಪುರಂ. ಬೆ.10.

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 24 ಜನವರಿ 2020
24 JANUARY 2020

■ **ಪ್ರದರ್ಶನ:** 71ನೇ ಗಣರಾಜ್ಯೋತ್ಸವದ ಪ್ರಯುಕ್ತ



ಅಪೂರ್ವ ನೋಟು ಮತ್ತು ನಾಣ್ಯಗಳ ಪ್ರದರ್ಶನ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಅತಿಥಿಗಳು: ಪ್ರೊ.ಆರ್.ಶಿವಪ್ಪ, ಡಾ.ವಿಜಯಲಕ್ಷ್ಮೀ ಮುರಳೀಧರ್, ಸ್ಥಳ: ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮೀಪುರಂ, ಬೆ.10

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 24.1.2020

ಕವಿತೆ ಸಂತೋಷದ ಜೊತೆ ಸಂದೇಶವನ್ನೂ ಕೊಡಲಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಅಭಿಮತ | ಮಹಾಜನ ಕಾಲೇಜಿನಲ್ಲಿ ಯುವ ಕವಿಗೋಷ್ಠಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಕವಿತೆ ಬರೆಯುವುದು ಬಹಳ ಸುಲಭ. ಆದರೆ ಒಳ್ಳೆಯ ಕವಿತೆ ಬರೆಯುವುದು ಬಹಳ ಕಷ್ಟ. ಪ್ರಾಸವೇ ಕವಿತೆಯಲ್ಲ, ಪ್ರಾಸ ಅಧಿಕವಾದರೆ ಅದು ವಿಪರ್ಯಾಸವಾಗುತ್ತದೆ. ಕಾವ್ಯ ಕೇವಲ ಮನೋಲ್ಲಾಸ, ಸಂತೋಷದ ಜೊತೆಗೆ ಸಂದೇಶವನ್ನು ಕೊಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾಜನ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಜಯಲಕ್ಷ್ಮಿಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಯುವ ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲು ಮನೋಲ್ಲಾಸ ನೀಡುವಂತಹ ಕವಿತೆಗಳನ್ನೇ ಹೆಚ್ಚಾಗಿ ಬರೆಯಿರಿ. ನಂತರ ಮಾಗಿದ ಹಾಗೇ ಅಧ್ಯಯನ ನಿರಂತರವಾಗಿ ಮಾಡುವ ಹಾಗೆ, ಹಿರಿಯರ ಮಾರ್ಗ ದರ್ಶನದಲ್ಲಿ ಕವಿತೆಗಳ ಮೂಲಭೂತ ಗುಣಗಳ ಬಗ್ಗೆ ಅಧ್ಯಯನ ಮಾಡಬೇಕು. ಅಂತಹ ಕವಿತೆ ಮನ ವಿಕಾಸಕ್ಕೆ ಎಡೆಮಾಡಿಕೊಡುತ್ತದೆ. ಕವಿತೆಗೆ ಪ್ರಮಾಣ ಬೇಡ ಗುಣಮಟ್ಟಬೇಕು, ಕಾವ್ಯದ ಅಂಶಗಳು, ಪ್ರಾಸದ ಜೊತೆ ಧ್ವನಿ, ಲಯ, ಚಿಂತನೆ, ಚಮತ್ಕಾರ ಇರಬೇಕು.



ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿದರು.

ಇಂದು ಮನಸ್ಸು ಇಲ್ಲದೆ ಇರುವವರನ್ನು ಎಳೆ ತರುವ ಸ್ಥಿತಿಯಲ್ಲಿ ನಾವಿದ್ದೇವೆ. ಸಾವಿರ ಕವಿತೆಗಳನ್ನು ಬರೆಯಬೇಕು. ಅದರಲ್ಲಿ ಒಂದಾದರು ಸಾವಿಲ್ಲದ ಕವಿತೆಯಾಗಿರಬೇಕು. ಹಿಂದಿನ ಕವಿಗಳಿಗೆ ಸಿಗುತ್ತಿದ್ದ ಗೌರವ ಇಂದಿನ ಕವಿಗಳಿಗೆ ಸಿಗುತ್ತಿಲ್ಲ. ಏಕೆಂದರೆ ಕವಿತೆಯಲ್ಲಿ ಪಾಂಡಿತ್ಯ ಇರುತ್ತದೆ ಆದರೆ ಪ್ರಾಮಾಣಿಕತೆ ಇರುವುದಿಲ್ಲ. ಹಾಗಾಗಿ ಯುವಕವಿಗಳು ಪ್ರಾಮಾಣಿಕತೆಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಇದೇ ವೇಳೆ ಮುಖ್ಯ ಅಥಿತಿಗಳನ್ನು ಸನ್ಮಾನಿಸಲಾಯಿತು. ಇಲಾಖೆಯ ಸಹಾಯಕ ನಿರ್ದೇಶಕ ಎಚ್. ಚೆನ್ನಪ್ಪ, ಗಾಂಧೀ ಭವನ ನಿರ್ದೇಶಕ ಪ್ರೊ.ಎಂ.ಎಸ್. ಶೇಖರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಆರ್ಥಿಕ ಸಲಹೆಗಾರ ಕೆ. ಮಹದೇವ ನಾಯಕ್, ಡಾ.ಎಚ್.ಆರ್. ತಿಮ್ಮೇಗೌಡ, ಕಿಕ್ಕೇರಿ ನಾರಾಯಣ ಇದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಶುಕ್ರವಾರ • ಜನವರಿ 24, 2020



ಮಹಾಜನ ಪ್ರಥಮದರ್ಜೆ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಯುವಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ ಸಭಿಕರು

ಕನ್ನಡಪ್ರಭ
ಸೇರ.ಡಿಟ್ಟ.ವಿರಂತರ
ಬುಧವಾರ 22.1.2020

ಮಹಾಜನ ಕಾಲೇಜಲ್ಲಿ ನಾಳೆ ಯುವ ಕವಿಗೋಷ್ಠಿ

ಮೈಸೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜ.23ರ ಮಧ್ಯಾಹ್ನ 2ಕ್ಕೆ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಯುವ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದ್ದು, ಮೈಸೂರು ವಿವಿ ಗಾಂಧಿ ಭವನದ ನಿರ್ದೇಶಕ ಪ್ರೊ.ಎಂ.ಎಸ್. ಶೇಖರ್ ಅಧ್ಯಕ್ಷತೆ ವಹಿಸುವರು. ಕಸಾಪ ಜಿಲ್ಲಾಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಮೈಸೂರು ವೈದ್ಯಕೀಯ ಕಾಲೇಜು ಆರ್ಥಿಕ ಸಲಹೆಗಾರ ಕೆ. ಮಹದೇವ್ ನಾಯಕ್ ಅತಿಥಿಯಾಗುವರು. ಜಿಲ್ಲೆಯ 15 ಜನ ಯುವ ಕವಿಗಳು ತಮ್ಮ ಸ್ವರಚಿತ ಕವನಗಳನ್ನು ವಾಚಿಸಲಿದ್ದು, ಎಲ್ಲರಿಗೂ ಮುಕ್ತ ಪ್ರವೇಶವಿರುತ್ತದೆ.

ಆಂದೋಲನ
ದಿನ ಪತ್ರಿಕೆ
ಶುಕ್ರವಾರ, ಜನವರಿ ೨೪, ೨೦೨೦

'ಸರಿ ಕನ್ನಡಂ ಗೆಲ್ಗೆ ಕೂಡ ಮುಖ್ಯ'

ಮೂಲ ಸ್ವರೂಪ ಕಳೆದುಕೊಳ್ಳುತ್ತಿರುವ ಭಾಷೆ: ಡಾ.ಕಬ್ಬಿನಾಲೆ ವಸಂತ್ ಭಾರದ್ವಾಜ್

ಮೈಸೂರು,ಜ.23- ಭಾಷೆ ಇಂದು ತನ್ನ ಮೂಲ ಸ್ವರೂಪ ಕಳೆದುಕೊಳ್ಳುತ್ತಿದ್ದು, ಅದನ್ನು ದೋಷ ಪೂರ್ಣವಾಗಿ ಬಳಸಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಸರಿ ಕನ್ನಡಂ ಗೆಲ್ಗೆ ಎಂದು ಘೋಷಣೆ ಮಾಡುವ ನಾವು 'ಸರಿ ಕನ್ನಡಂ ಗೆಲ್ಗೆ' ಮಾಡುವುದು ಮುಖ್ಯವಾಗಿದೆ ಎಂದು ಸಾಹಿತಿ ಡಾ.ಕಬ್ಬಿನಾಲೆ ವಸಂತ್ ಭಾರದ್ವಾಜ್ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾಜನ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಜಯಲಕ್ಷ್ಮಿಪುರಂನ ಕಾಲೇಜು ಆವರಣದಲ್ಲಿ ಗುರುವಾರ ನಡೆದ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆಯನ್ನು ವ್ಯವಸ್ಥಿತವಾಗಿ ಬಳಸುವ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದ್ದು, ವಿದ್ವಾಂಸರಾದ ವೆಂಕಟಾಚಲ ಶಾಸ್ತ್ರಿಯವರು ಮಾರ್ಗದರ್ಶನ ಹೊಣೆ ಹೊರಬೇಕು ಎಂದು ಮನವಿ ಮಾಡಿದರು.

ಆಧುನಿಕ ಯುಗದಲ್ಲಿ ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸುವುದು, ಪೂರಕವಾದ ಸಾಹಿತ್ಯ ಸಾಮಗ್ರಿ ಸಂಗ್ರಹಣೆ, ಗಣಕೀಕರಣವನ್ನು ಕನ್ನಡ ಭಾಷೆಗೆ ಹೊಂದಿಸುವ ಉದ್ದೇಶದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವೆಂಕಟಾಚಲ ಶಾಸ್ತ್ರಿ ನೇತೃತ್ವದಲ್ಲಿ ಆಡಳಿತ ಕಮ್ಮಟ ನಡೆಸಿತ್ತು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು. ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ನೀಲಗಿರಿ ಎಂ.ತಳವಾರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್.ವೆಂಕಟರಾಮ್, ಡಾ.ಪಂಡಿತಾರಾಧ್ಯ, ಡಾ.ಎಚ್.ಆರ್.ತಿಮ್ಮೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೆನ್ನಪ್ಪ, ಕಿಕ್ಕೇರಿ ನಾರಾಯಣ ಶೆಟ್ಟಿ, ಎಚ್.ಎಂ.ನಾಗರಾಜರಾವ್, ಪ್ರೊ.ಶುಭಚಂದ್ರ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ಕಬ್ಬಿನಾಲೆ ವಸಂತ್ ಭಾರದ್ವಾಜ್ ಉದ್ಘಾಟಿಸಿದರು. ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ನೀಲಗಿರಿ ತಳವಾರ್, ಡಾ.ಎಸ್.ವೆಂಕಟರಾಮ್, ಡಾ.ಪಂಡಿತಾರಾಧ್ಯ, ಡಾ.ಎಚ್.ಆರ್.ತಿಮ್ಮೇಗೌಡ, ಕಿಕ್ಕೇರಿ ನಾರಾಯಣ ಶೆಟ್ಟಿ ಇನ್ನಿತರರು ಚಿತ್ರದಲ್ಲಿದ್ದಾರೆ.

ಪ್ರಸ್ತುತ ಕನ್ನಡ ಬಹುದೊಡ್ಡ ಸವಾಲು ಎದುರಿಸುತ್ತಿದ್ದು, ಮನಸ್ಸಿಲ್ಲದವರನ್ನು ಎಳೆ ತರುವ ಸ್ಥಿತಿಯಲ್ಲಿ ನಾವಿದ್ದೇವೆ. ಅನೇಕ ಪಾರಿಭಾಷಿಕ ಪದಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ತರುವ ಮತ್ತು ಗಣಕಕ್ಕೆ ಅದನ್ನು ಸೇರಿಸುವ ಸವಾಲುಗಳಿವೆ. ನಾಡಿನ ವಿವಿಧ ಕ್ಷೇತ್ರಗಳ ಹಿನ್ನೆಲೆಯಲ್ಲಿ ಕನ್ನಡವನ್ನು ಅನುಷ್ಠಾನ ಮಾಡುವಂತಹ ಸವಾಲುಗಳಿವೆ.
-ಕಬ್ಬಿನಾಲೆ ವಸಂತ್ ಭಾರದ್ವಾಜ್

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 24.1.2020

ಸರಿ ಕನ್ನಡಂ ಗೆಲ್ಗೆ ಎನ್ನುವುದು ಮುಖ್ಯ

ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅಭಿಮತ



ಕಾರ್ಯಕ್ರಮದಲ್ಲಿ ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಡಾ. ನೀಲಗಿರಿ ಎಂ. ತಳವಾರ್, ಡಾ.ಎಸ್. ವೆಂಕಟರಾಮ್, ಪಂಡಿತಾರಾಧ್ಯ, ಎನ್.ಎಸ್. ತಾರಾನಾಥ್ ಇತರರಿದ್ದರು.

ಮೈಸೂರು: ಕನ್ನಡ ಭಾಷೆ ಇಂದು ತನ್ನ ಮೂಲ ಸ್ವರೂಪ ಕಳೆದುಕೊಂಡು ದೋಷಪೂರ್ಣವಾಗಿ ಬಳಸಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಸಿರಿ ಕನ್ನಡ ಗೆಲ್ಗೆ ಎಂದು ಘೋಷಣೆ ಮಾಡುವ ನಾವು ಸರಿ ಕನ್ನಡಂ ಗೆಲ್ಗೆ ಎನ್ನುವುದು ಕೂಡ ಮುಖ್ಯವಾಗಿದೆ ಎಂದು ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಯಲಕ್ಷ್ಮಿಪುರಂನ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಭಾಷೆಯನ್ನು ವ್ಯವಸ್ಥಿತವಾಗಿ ಬಳಸುವ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದ್ದು, ವಿದ್ವಾಂಸ ವೆಂಕಟಾಚಲ ಶಾಸ್ತ್ರಿ ಅವರು ಅದರ ಮಾರ್ಗದರ್ಶನ ಹೊಣೆಯನ್ನು ಹೊರಬೇಕು. ಆಧುನಿಕ ಯುಗದಲ್ಲಿ ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸುವುದು, ಪೂರಕವಾದ ಸಾಹಿತ್ಯ ಸಾಮಾಗ್ರಿ ಸಂಗ್ರಹಣೆ, ಗಣಕೀಕರಣವನ್ನು ಕನ್ನಡ ಭಾಷೆಗೆ ಹೊಂದಿಸುವ ಹೊಸ ಚಿಂತನೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಆಡಳಿತ ಕಮ್ಮಟ ನಡೆಸಲಾಗಿತ್ತು. ಅದರ ನೇತೃತ್ವವನ್ನು ವೆಂಕಟಾಚಲ ಶಾಸ್ತ್ರಿ ಅವರು ವಹಿಸಿದ್ದರು ಎಂದು ಹೇಳಿದರು.

ಕನ್ನಡಕ್ಕೆ ಬಹುದೊಡ್ಡ ಸವಾಲು ಇದ್ದು, ಮನಸ್ಸು ಇಲ್ಲದೇ ಇದ್ದವರನ್ನು ಎಳೆ ತರುವ ಸ್ಥಿತಿಯಲ್ಲಿ ನಾವಿದ್ದೇವೆ. ಅನೇಕ ಪಾರಿಭಾಷಿಕ ಪದಗಳನ್ನು ಇಂಗ್ಲೀಷನ್ನು ಕನ್ನಡಕ್ಕೆ ಅವತರಿಸುವಂತಹ ಮತ್ತು ಗಣಕಕ್ಕೆ ಅದನ್ನು ಮಾಡು ವಂತಹ ಸವಾಲುಗಳಿವೆ. ನಾಡಿನ ಬೇರೆ ಬೇರೆ ಕ್ಷೇತ್ರಗಳ ಹಿನ್ನೆಲೆಯಲ್ಲಿ ಕನ್ನಡವನ್ನು ಅನುಷ್ಠಾನ ಗೊಳಿಸುವ ಸವಾಲಿದೆ ಎಂದರು.

ಕಮ್ಮಟದಲ್ಲಿ ಭಾಗವಹಿಸಿದ ಒಬ್ಬರು ಭಾಷೆ ಯನ್ನು ಸುಲಭವಾಗಿ, ಸರಳವಾಗಿ, ನಮಗೆ ಅನಿಸಿದ ರೀತಿಯಲ್ಲಿ ಮಾತನಾಡಿದರೆ ಅದನ್ನು ತಪ್ಪು ಎಂದು ಹೇಳುವುದು ಸರಿಯೇ? ಭಾಷೆ ಇಂದು ನಿನ್ನೆ ಹುಟ್ಟಿದ್ದಲ್ಲ. ಅದು ಶತಶತಮಾನಗಳ ಪರಿಶ್ರಮದ ಫಲ. ನಮ್ಮ ಹಿರಿಯರು ಪಂಡಿತರು, ವಿದ್ವಾಂಸರು, ಭಾಷೆಗೆ ಶಾಸ್ತ್ರಿಯ ಚೌಕಟ್ಟು ಏರ್ಪಡಿಸಿ ಭಾಷೆ ಎಂದರೆ ಹೀಗೆ ಇರಬೇಕು ಎಂಬುದನ್ನು ಗುರುತಿಸಿದ್ದು, ಅದನ್ನು ನಮ್ಮ ಜೀವಿತ ಅವಧಿಯಲ್ಲಿ ಹೀಗೆ ಬಳಸುತ್ತೇವೆ ಎನ್ನುವುದು ಭಾಷೆಗೆ ಮಾಡುವ ದ್ರೋಹವಾಗುತ್ತದೆ. ಆದ್ದರಿಂದ ಎಲ್ಲರೂ ಭಾಷೆಯನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಶಾಸ್ತ್ರೀಯವರು ಹೇಳಿದ್ದನ್ನು ಈ ವೇಳೆ ಅವರು ನೆನೆದರು. ಈ ವೇಳೆ ವಿದ್ವಾಂಸರಾದ ವೆಂಕಟಾಚಲ ಶಾಸ್ತ್ರೀ ಅವರನ್ನು ಸನ್ಮಾನಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ. ನೀಲಗಿರಿ ಎಂ. ತಳವಾರ್, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್. ವೆಂಕಟರಾಮ್, ಪಂಡಿತಾರಾಧ್ಯ, ಡಾ.ಎಚ್.ಆರ್. ತಿಮ್ಮೇಗೌಡ, ಕಿಕ್ಕೇರಿ ನಾರಾಯಣ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಶುಕ್ರವಾರ 24 ಜನವರಿ 2020

ಅಹಂಕಾರ, ಸೋಮಾರಿತನ ತ್ಯಜಿಸಿದರೆ ಸಾಧನೆ ಸುಲಭ

'ಸಾಧಕರೊಂದಿಗೆ ಸಂವಾದ'ದಲ್ಲಿ ವಿದ್ಯಾರ್ಥಿಗಳಿಗೆ ಡಾ.ಜಿ.ವಿ.ವೆಂಕಟಾಚಲ ಶಾಸ್ತ್ರಿ ಮಾರ್ಗದರ್ಶನ

ಮೈಸೂರು,ಜ.23(ಎಂಟವೈ)– ಅಹಂಕಾರ ಹಾಗೂ ಸೋಮಾರಿತನಕ್ಕೆ ಆಸ್ಪದ ನೀಡದೆ ಸಾಧನೆ ಮಾಡುವತ್ತ ಗಮನ ಕೇಂದ್ರೀಕರಿಸುವಂತೆ ವಿದ್ಯಾರ್ಥಿಗಳಿಗೆ ಹಿರಿಯ ವಿದ್ವಾಂಸ ಡಾ.ಜಿ.ವಿ.ವೆಂಕಟಾಚಲ ಶಾಸ್ತ್ರಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುರುವಾರ ಆಯೋಜಿಸಿದ್ದ 'ಸಾಧಕರೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದಿಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು. ಅಹಂಕಾರ ಹಾಗೂ ಸೋಮಾರಿತನಕ್ಕೆ ಅವಕಾಶ ನೀಡಬಾರದು. ಕಳೆದು ಹೋದ ದಿನಗಳ ಬಗ್ಗೆ ಚಿಂತಿಸದೆ, ಮುಂಬರುವ ದಿನದಲ್ಲಿ ಸಾಧನೆ ಮಾಡುವುದಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳು ನಾಡಿನ ಶ್ರೇಷ್ಠ ಸಾಹಿತಿ, ಕವಿಗಳು ಹಾಗೂ ಬರಹಗಾರರ ಕೃತಿಗಳನ್ನು ಓದಿಕೊಳ್ಳಬೇಕು. ಇದರಿಂದ ಸಂಸ್ಕಾರ ಲಭಿಸುತ್ತದೆ, ಪ್ರಭಾವಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದರು.

ಮಾಗಿದ ವಯಸ್ಸು ಮತ್ತು ಮಾಗಿದ ವರ್ಚಸ್ಸು ನನ್ನದಾಗಿದೆ. ದೈಹಿಕ ಮತ್ತು ಬೌದ್ಧಿಕ ವರ್ಚಸ್ಸು ಕಡಿಮೆಯಾಗುತ್ತಿದೆ. ಇದು ಸಹಜವಾದ ಪ್ರಕ್ರಿಯೆ. ನಾನು ಪದವಿ ವ್ಯಾಸಂಗಕ್ಕೆ ಐಚ್ಛಿಕ ಕನ್ನಡವನ್ನು ಆಯ್ಕೆ ಮಾಡಿಕೊಂಡಿದ್ದು ಆಕಸ್ಮಿಕವಲ್ಲ. ಮೊದಲಿನಿಂದಲೂ ಕನ್ನಡದ ಬಗ್ಗೆ ಆಸಕ್ತಿ ಮತ್ತು ಅಭಿರುಚಿ ಇತ್ತು. ನಾನು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವಾಗ ಸಿಕ್ಕ ಗುರುಗಳು ನನ್ನ ಆಸಕ್ತಿ ಮತ್ತು ಅಭಿರುಚಿಗೆ ನೀರೆರೆದರು. ನಂತರ ಸಿಕ್ಕ ಪ್ರಾಧ್ಯಾಪಕರಿಂದಾಗಿ ನನಗೆ ಉತ್ತಮ ಜೀವನ ಕಲ್ಪಿಸಿಕೊಳ್ಳಲು ಸಾಧ್ಯವಾಯಿತು ಎಂದು ತಮ್ಮ ಗುರು ಪರಂಪರೆಯನ್ನು ಸ್ಮರಿಸಿದರು.



ಮೈಸೂರು ಮಹಾಜನ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ 'ಸಾಧಕರೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಡಾ.ಜಿ.ವಿ. ವೆಂಕಟಾಚಲ ಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಉದ್ಘಾಟಿಸಿ ಮಾತನಾಡಿ, ಇಂದು ದೋಷಪೂರ್ಣ ಕನ್ನಡ ಬಳಕೆ ಸಾಮಾನ್ಯವಾಗಿದ್ದು, ವ್ಯಾಕರಣ ಬದ್ಧ ಪದ ಪ್ರಯೋಗಗಳು ಆಗಬೇಕು. ಆಡಳಿತದಲ್ಲಿ ಕನ್ನಡ ಅನುಷ್ಠಾನ ಮಾಡುವುದು ಸವಾಲಿನ ಕೆಲಸವಾಗಿದೆ. ಇದಕ್ಕೆ ಒಂದು ಚೌಕ್ಟು ರೂಪಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಹಿರಿಯ ಸಾಹಿತಿ ಡಾ.ಎನ್.ಎಸ್. ತಾರಾನಾಥ್ ಮಾತನಾಡಿ, ಮೈಸೂರಿನ ಪ್ರಸಿದ್ಧಿಗೆ ಪ್ರವಾಸಿ ತಾಣಗಳ ಜೊತೆಗೆ ವಿದ್ಯಾ ಕೇಂದ್ರಗಳು ಹಾಗೂ ವಿದ್ವಾಂಸರು ಕಾರಣರಾಗಿದ್ದಾರೆ. ಮೈಸೂರು ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಕೀರ್ತಿ ತಂದವರಲ್ಲಿ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿಯವರೂ ಒಬ್ಬರು. ಇವರಿಗೆ ಹಳೆಗನ್ನಡ ಎಂದರೆ ಕಡುವ್ಯಾಮೋಹ. ಒಂದು ರೀತಿ ಅಭಿನವ ಸಾಹಿತ್ಯ ತಪಸ್ವಿಯಂತಿದ್ದಾರೆ. ಸೃಜನಶೀಲ ಕ್ಷೇತ್ರವನ್ನು ಬಿಟ್ಟು ಸಂಶೋಧನಾ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಂಡ ಶಾಸ್ತ್ರಿಗಳು, ಸಂಶೋಧನೆಗಾಗಿ ಪ್ರಾಧ್ಯಾಪಕ ಹುದ್ದೆಯನ್ನೇ ತ್ಯಜಿಸಿದರು. ಬಳಿಕ 1980ರ ನಂತರ ಹಲವಾರು ಕೃತಿಗಳನ್ನು, ಹಳೆಗನ್ನಡ ಸಾಹಿತ್ಯ ಸಂಶೋಧನೆ ನಡೆಸಿ ಪ್ರಕಟಿಸಿದರು. ಇವರು ಹಳೆಗನ್ನಡಕಷ್ಟೇ ಸೀಮಿತರಾಗದೇ, ನಿಘಂಟು, ಜೈನಸಾಹಿತ್ಯದಲ್ಲೂ ಹೆಚ್ಚು ಕೆಲಸ ಮಾಡಿದ್ದಾರೆ. ಹೊಸಗನ್ನಡ ಸಾಹಿತ್ಯದಲ್ಲೂ ಕೃಷಿ ಮಾಡಿದ ಅಪೂರ್ವ ವ್ಯಕ್ತಿಯಾಗಿದ್ದಾರೆ. ಕನ್ನಡ ಪದಗಳ ದೋಷಗಳನ್ನು ವಿವರಣೆ ಸಹಿತ ತಿದ್ದುವ ಪ್ರಯತ್ನ ಮಾಡುವ ಮೂಲಕ ಹೊಸ ತಲೆಮಾರಿಗೆ 100 ಮೌಲ್ಯಿಕ ಕೃತಿಗಳನ್ನು ನೀಡಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮನಲ್ಲಿ ಡಾ.ಜಿ.ವಿ. ವೆಂಕಟಾಚಲ ಶಾಸ್ತ್ರಿ ಅವರಿಗೆ ಅಭಿನಂದಿಸಲಾಯಿತು. ಮಧ್ಯಾಹ್ನದ ನಂತರ 14 ವಿದ್ಯಾರ್ಥಿಗಳು ಕವನ ವಾಚನ ಮಾಡಿ ಗಮನ ಸೆಳೆದರು. ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ.ನೀಲಗಿರಿ ತಳವಾರ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ಮೆಹಬೂಬಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್.ಚೆನ್ನಪ್ಪ, ಸಾಹಿತಿಗಳಾದ ಹೆಚ್.ಎಂ.ನಾಗರಾಜರಾವ್, ಡಾ.ಜ್ಯೋತಿ ಶಂಕರ್, ಡಾ.ಪಂಡಿತಾರಾಧ್ಯ, ಡಾ.ಹೆಚ್. ಆರ್.ತಿಮ್ಮೇಗೌಡ ಇದ್ದರು.

MFGE In the Eyes of the Press.....

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಜನವರಿ 24, 2020

ವಿದ್ವಾಂಸ ವೆಂಕಟಾಚಲ ಶಾಸ್ತ್ರಿಗೆ ಅಭಿನಂದನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಆಗದಿರುವುದಕ್ಕೆ ಬೇಸರಿಸಿಕೊಳ್ಳಬೇಡಿ. ಸಾಧನೆ ಆಗಿದ್ದಕ್ಕೆ ಅಹಂಕಾರ ಪಡಬೇಡಿ. ಮುಂದಾಗುವುದಕ್ಕೆ ಸೋಮಾರಿತನ ಪ್ರದರ್ಶಿಸಬೇಡಿ' ಎಂದು ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಕಿವಿ ಮಾತು ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ 'ಸಾಧಕರೊಂದಿಗೆ ಸಂವಾದ'ದಲ್ಲಿ ಅಭಿನಂದನೆ ಸ್ವೀಕರಿಸಿ ತಮ್ಮ ಕನ್ನಡ ಪ್ರೇಮ, ಸಾಧನೆಯ ಬಗ್ಗೆ ಹೇಳಿಕೊಂಡರು.

'ಬಾಲ್ಯದಿಂದಲೇ ಇದ್ದ ಕನ್ನಡದ ಮೇಲಿನ ಆಸಕ್ತಿ ಹೆಚ್ಚುತ್ತಾ ಹೋಯಿತು. ಮನೆಯಲ್ಲೂ ಕನ್ನಡಮಯ ವಾತಾವರಣ. ಕಂದಯ ಬಳುವಳಿಯೂ ಸಾಕಷ್ಟು. ಆಗ ನನಗೆ ಪಾಠ ಮಾಡಿದ ಗುರುಗಳ ಪ್ರಭಾವವೂ ಪರಿಣಾಮಕಾರಿಯಾದುದು. ಸ್ವಂತ ಮಕ್ಕಳಂತೆ ಕಂಡ ಗುರುಗಳು ಸಾಕಷ್ಟು ಕಲಿಸಿದರು. ಆರಂಭದಿಂದಲೂ ಕನ್ನಡ ನನ್ನನ್ನು ಆವರಿಸಿದೆ. ಪ್ರಭಾವಿಸಿದೆ. ಆಶೀರ್ವದಿಸಿಯೂ ಇದೆ' ಎಂದರು.

ಗುರು ಪರಂಪರೆಯನ್ನು ಸ್ಮರಿಸಿಕೊಂಡ ಶಾಸ್ತ್ರಿ, 'ದೊಡ್ಡವರ ಮಾರ್ಗದರ್ಶನವಿರಬೇಕು. ಅವರ ನೆರಳಲ್ಲಿ ಬೆಳೆಯಬೇಕು. ಹಲವರು ಈಗಾಗಲೇ ಕಾಲವಾಗಿದ್ದಾರೆ. ಇಂತ ಹವರ ಆತ್ಮತೆ. ಜೀವನ ಚರಿತ್ರೆಯನ್ನು ಸವಿಸ್ತಾರವಾಗಿ ಓದಿಕೊಳ್ಳಬೇಕು. ಆ ಓದಿನಿಂದ ಸಂಸ್ಕಾರ ಪಡೆಯಬೇಕು. ಅದು ನಮ್ಮಲ್ಲಿ ಪ್ರಭಾವಶಾಲಿ ವ್ಯಕ್ತಿತ್ವ ರೂಪಿಸಲಿದೆ' ಎಂದು ಸಲಹೆ ನೀಡಿದರು.

ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಸಾಧನೆ ಕುರಿತಂತೆ ಮಾತನಾಡಿದ ಸಾಹಿತಿ ಡಾ.ಎನ್.ಎಸ್.ತಾರಾನಾಥ್, 'ಮೈಸೂರಿನ ಪ್ರಸಿದ್ಧ ದೇಶ-ವಿದೇಶಗಳಲ್ಲಿ ಪಸರಿಸಿರುವುದರಲ್ಲಿ ಈ ನೆಲದ ಸಾಹಿತಿಗಳು, ವಿದ್ವಾಂಸರ ಪಾಲು ಸಾಕಷ್ಟಿದೆ' ಎಂದರು.

'ಶಾಸ್ತ್ರಿಗಳು ಅಭಿಜಾತ ಸಾಹಿತ್ಯ ತಪಸ್ವಿ. ಹಳಗನ್ನಡ ವ್ಯಾಮೋಹಿ. ಹಳಗನ್ನಡ-ಕನ್ನಡದ ಸಂಶೋಧನೆಗಾಗಿ ಅಹರ್ನಿಶಿ ದುಡಿದವರು. ತಮ್ಮ ಸಂಶೋಧನೆಗೆ ಬ್ಯುತಿಬಾರದೆಂದು 1980ರಲ್ಲೇ ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಹುದ್ದೆಯನ್ನು ತಿರಸ್ಕರಿಸಿದವರು. ಇದರ ಬಳಿಕ ಹಲವು ಸಾಧನೆ ಮಾಡಿದರು. ಕನ್ನಡದ ವಿವಿಧ ಕ್ಷೇತ್ರಗಳಲ್ಲಿ ಅಪಾರ ಕೆಲಸ ಮಾಡಿದ್ದಾರೆ. 10 ಸಾವಿರ ಪುಟಗಳಿಗೂ ಹೆಚ್ಚಿನ ಬರವಣಿಗೆ ನಡೆಸಿದ್ದಾರೆ. 100ಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿದ ಪಾಂಡಿತ್ಯ ವೀರರಾಗಿದ್ದಾರೆ' ಎಂದು ಪ್ರಶಂಸಿಸಿದರು.

ಎಚ್.ಎಂ.ನಾಗರಾಜರಾವ್, ಡಾ.ಪಂಡಿತಾರಾಧ್ಯ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಡಾ.ಜ್ಯೋತಿ ಶಂಕರ್, ಡಾ.ಎಚ್.ಆರ್.ತಿಮ್ಮೇಗೌಡ ಅವರು ಡಾ.ಟಿ.ವಿ.ವೆಂಕಟಾ ಚಲಶಾಸ್ತ್ರಿ ಅವರೊಂದಿಗೆ ಸಂವಾದ ನಡೆಸಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ.ನೀಲಗಿರಿ ತಳವಾರ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಚ್.ಚೆನ್ನಪ್ಪ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಂಗಕರ್ಮಿ ಕಿಕ್ಕೇರಿ ನಾರಾಯಣಶೆಟ್ಟರು ನಿರೂಪಿಸಿದರು.

ರಷ್ಯಾ ಅಧ್ಯಕ್ಷ ತಮ್ಮ ತಾಯ್ನುಡಿ, ಸಂಸ್ಕೃತಿ ಬಗ್ಗೆ ಗಟ್ಟಿ ಧ್ವನಿಯಲ್ಲಿ ಮಾತನಾಡಿದ್ದಾರೆ. ಆ ಧೈರ್ಯ ನಮ್ಮಲ್ಲಿ ಯಾರಿಗಿದೆ ? ಕನ್ನಡದ ಅಸ್ಮಿತೆಯನ್ನು ಗಟ್ಟಿ ಧ್ವನಿಯಲ್ಲಿ ಹೇಳುವ ತಾಕತ್ತು ಮುಖ್ಯಮಂತ್ರಿಗಿದೆಯಾ?
ಡಾ.ಎಸ್.ವೆಂಕಟರಾಮು,
ಪ್ರಾಂಶುಪಾಲರು

ಮುಖ್ಯಾಂಶಗಳು

- ಶಾಸ್ತ್ರಿಗಳ ಸಾಧನೆ ಬಣ್ಣನೆ
- ಹೂ ಮಳೆಯ ಅಭಿನಂದನೆ
- ಸಾಧಕರ ಆಯ್ಕೆಗೆ ಪ್ರಶಂಸೆ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ 'ಸಾಧಕರೊಂದಿಗೆ ಸಂವಾದ'ದಲ್ಲಿ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರನ್ನು ಅಭಿನಂದಿಸಲಾಯಿತು

'ಕನ್ನಡದ ಆಡಳಿತಕ್ಕೆ ದೊಡ್ಡ ಸವಾಲಿದೆ'

'ಭಾಷೆ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಳ್ಳುತ್ತಿದೆ. ದೋಷಪೂರ್ಣ ಬಳಕೆಯೇ ಹೆಚ್ಚಿದೆ. ಇಂತಹ ಹೊತ್ತಲ್ಲಿ ಆಡಳಿತದಲ್ಲಿ ಕನ್ನಡ ಅನುಷ್ಠಾನವೂ ಸವಾಲಾಗಿದೆ. ಕನ್ನಡದ ಆಡಳಿತಕ್ಕೂ ದೊಡ್ಡ ಸವಾಲು ಎದುರಾಗಿದೆ. ಸರಿಗನ್ನಡಂ ಗೆಲ್ದೆ ಜತೆ ಸರಿಗನ್ನಡಂ ಗೆಲ್ದೆ ಘೋಷಣೆಯೂ ಮೊಳಗಬೇಕಿದೆ' ಎಂದು ಸಂವಾದ ಉದ್ಘಾಟಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಹೇಳಿದರು.

'ಆಧುನಿಕ ಯುಗಕ್ಕೆ ಭಾಷೆ ಬಗ್ಗಿಸುವ ರೀತಿಯ ಚೌಕಟ್ಟೊಂದು ಬೇಕಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರ ಕೆಲಸ ಮಾಡುತ್ತಿದೆ. ಭಾರತೀಯ ಶಾಸ್ತ್ರ ವಾಙ್ಮಯ ನಮಗೆ ಅಪರಿಚಿತವಾಗಿದೆ. ಇದನ್ನು ಕೊಡಾಡುವ ಬದಲು ಶಾಸ್ತ್ರೀಯ ವಾಙ್ಮಯ ಪ್ರಪಂಚಕ್ಕೆ ಬೆನ್ನು ತೋರುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

MFGE In the Eyes of the Press.....

STAR OF MYSORE

Wednesday 22nd January 2020

Sadhakarondige Samvada and 'Yuva Kavigoshti' on Jan. 23

Mysuru, Jan. 22 (SD) - The Department of Kannada and Culture has organised *'Sadhakarondige Samvada'* (Interaction with Achievers) at Mahajana First Grade College Auditorium here on Jan. 23 at 11 am. On this occasion, Scholar N.S. Taranath will speak about renowned Kannada writer, critic and lexicographer Dr. T.V. Venkatachala Sastry. ZP CEO K. Jyothi will inaugurate the programme. Kuvempu Institute of Kannada Studies Director Prof. N.M. Talwar will preside over the event. Rangayana Joint Director V.N. Mallikarjunaswamy and Mahajana First Grade College Principal Dr. S. Venkataramu will be present.

H.M. Nagarajarao, Dr. Kabbinale Vasantha Bharadwaj, Dr. Jyothi Shankar, Dr. Panditaradhya, Prof. Shubhachandra



Dr. T.V. Venkatachala Sastry

and Dr. H.R. Thimmegowda will participate in the interaction.

Later in the day, Department of Kannada and Culture has organised 'Yuva Kavigoshti' at 2 pm at the same venue. Director of Gandhi Bhavan, Manasagangothri, Prof. M.S. Shekhar will preside. President of District Kannada Sahitya Parishat Dr. Y.D. Rajanna and Financial Advisor of Mysore Medical College and Research Institute, K. Mahadevanayak will be the chief guests.

About Dr. T.V. Venkatachala Sastry: Recipient of the prestigious 'Kannada Sahitya Akademi Award' (honorary), T.V. Venkatachala Sastry is an authority on Kannada language grammar and its various facets ranging from the metre scale (Chandassu) to history of Kannada literature. Born in 1933 at Harohalli village in Kanakapura taluk of Bengaluru district, Dr. Venkatachala Sastry has served as Kannada Professor for over two decades at University of Mysore and additionally held the post of Director at "Kannada Adhyayana Samsthe" for several years before retiring in 1994. He has done extensive research on a number of Kannada classical poets including Pampa, Ranna, Harihara, Nemichandra, Raghavanka and Kumaravyasa.

ವಿಜಯವಾಣಿ

ಕನ್ನಡಿಗರ ಧ್ವನಿ

ಗುರುವಾರ 23 ಜನವರಿ 2020

23 JANUARY 2020



■ **ಸಂವಾದ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾಜನ ಪ್ರಥಮ ದರ್ಜೆ ಕಾಲೇಜು. ಸಾಧಕರೊಂದಿಗೆ ಸಂವಾದ. ಅತಿಥಿ: ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ. ಉದ್ಘಾಟನೆ: ಕೆ.ಜ್ಯೋತಿ. ಅಧ್ಯಕ್ಷತೆ: ಡಾ.ನೀಲಗಿರಿ ತಳವಾರ್. ಭಾಗವಹಿಸುವವರು: ಡಾ.ಎನ್.ಎಸ್.ತಾರಾನಾಥ್, ವಿ.ಎನ್.ಮಲ್ಲಿ ಕಾರ್ಜುನಸ್ವಾಮಿ, ಡಾ.ಎಸ್.ವೆಂಕಟ ರಾಮು. ಬೆಳಗ್ಗೆ 11. ಯುವ ಕವಿಗೋಷ್ಠಿ: ಅಧ್ಯಕ್ಷತೆ: ಪ್ರೊ.ಎಂ.ಎಸ್. ಶೇಖರ್. ಅತಿಥಿ: ಡಾ.ವೈ.ಡಿ. ರಾಜಣ್ಣ, ಕೆ. ಮಹದೇವನಾಯಕ್. ಸ್ಥಳ: ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ. ಮ.2

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 23.1.2020

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಸಾಧಕರೊಂದಿಗೆ ಸಂವಾದ, ಅತಿಥಿ- ಟಿ.ವಿ. ವೆಂಕಟಾಚಲಶಾಸ್ತ್ರೀ, ಅಧ್ಯಕ್ಷತೆ- ಕೆ. ಜ್ಯೋತಿ, ಬೆಳಗ್ಗೆ 11. ಯುವ ಕವಿಗೋಷ್ಠಿ, ಅತಿಥಿ- ಪ್ರೊ. ಎಂ.ಎಸ್. ಶೇಖರ್, ಡಾ. ವೈ.ಡಿ. ರಾಜಣ್ಣ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮಧ್ಯಾಹ್ನ 2.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಜಿಲ್ಲೆಗಳ ಸ್ವಾದೇಶಿಕ ದಿನಪತ್ರಿಕೆ

ಗುರುವಾರ 23 ಜನವರಿ 2020

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಾಧಕರೊಂದಿಗೆ ಸಂವಾದ, ಸಾಧಕರು : ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, ಉದ್ಘಾಟನೆ: ಜಿ.ಪಂ ಸಿಇಓ ಕೆ.ಜ್ಯೋತಿ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ನೀಲಗಿರಿ ತಳವಾರ್, ಸಾಧಕರನ್ನು ಕುರಿತು ಮಾತನಾಡುವವರು : ಸಾಹಿತಿ ಡಾ.ಎನ್.ಎಸ್.ತಾರಾನಾಥ್, ಸ್ಥಳ: ಮಹಾಜನ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ಜಯಲಕ್ಷ್ಮೀಪುರಂ. ಬೆಳಿಗ್ಗೆ 11ಕ್ಕೆ, ಮಧ್ಯಾಹ್ನ 2ಕ್ಕೆ ಯುವ ಕವಿಗೋಷ್ಠಿ, ಅಧ್ಯಕ್ಷತೆ: ಕವಿ ಡಾ.ಎಂ.ಎಸ್.ಶೇಖರ್, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಆರ್ಥಿಕ ಸಲಹೆಗಾರ ಕೆ.ಮಹದೇವನಾಯಕ್.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪಮ್ಮೆ
ಭಾನುವಾರ, 19 ಜನವರಿ 2020

ಸಾಧಕರೇ ಜೀವಂತ ಗ್ರಂಥಾಲಯ

ನಾಗರಿಕ ಸೇವಾ ಪರೀಕ್ಷೆ ಉಪನ್ಯಾಸದಲ್ಲಿ ಕೆಂಪಹೊನ್ನಯ್ಯ ಅಭಿಮತ

■ **ವಿಕ ಸುದ್ದಿಲೋಕ** ಮೈಸೂರು

ಸಾಧಕರೊಂದಿಗೆ ಬೆರೆತು ವಿಚಾರ ವಿನಿಮಯ ಮಾಡಿಕೊಳ್ಳುವು ದೊರಂದಿಗೆ ಅವರ ಅನುಭವಗಳನ್ನು ಪಡೆದುಕೊಳ್ಳಬೇಕು ಎಂದು ಪಶ್ಚಿಮ ಬಂಗಾಳದ ಒಎಸ್‌ಡಿ ಆಡಳಿತ ತರಬೇತಿ ಸಂಸ್ಥೆಯ ಅಸಿಸ್ಟೆಂಟ್ ಮ್ಯಾಜಿಸ್ಟ್ರೆಟ್ ಮತ್ತು ಅಸಿಸ್ಟೆಂಟ್ ಕಲೆಕ್ಟರ್ ಕೆಂಪಹೊನ್ನಯ್ಯ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಎಂಟ್ರಿಟು ಸರ್ವೀಸ್ ಐಕ್ಯೂಎಸಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಶನಿವಾರ ಆಯೋಜಿಸಿದ್ದ ವಿವೇಕಾನಂದ ಜಯಂತಿ, ವಿಶೇಷ ಉಪನ್ಯಾಸ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾಧಕರು ಒಂದು ಜೀವಂತ ಗ್ರಂಥಾಲಯ ವಿದ್ದಂತೆ. ಆಳವಾದ ಅಧ್ಯಯನದಿಂದ ಮಾತ್ರ ಗೆಲುವು ಸಾಧ್ಯ ಎಂದು ಹೇಳಿದರು.

ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ನಾಗರೀಕ ಸೇವಾ ಪರೀಕ್ಷೆ ಗಳ ಸುತ್ತೋಲೆ ಹೊರಡಿಸಲಾಗುತ್ತದೆ. ಈ ಪೂರ್ವಭಾವಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ, ರಾಜಕೀಯ, ಆರ್ಥಿಕ, ಸಾಮಾಜಿಕ,

ಪರೀಕ್ಷೆಯಲ್ಲಿ ಹೆಚ್ಚಾಗಿ ತೌಲನಿಕ ವಿಶ್ಲೇಷಣೆ ಮಾಡುವ ಪ್ರಶ್ನೆಗಳು ಇರುತ್ತದೆ. ವಿಷಯದ ಆಳವಾದ ಜ್ಞಾನ, ಸಾಮಾನ್ಯ ತಿಳುವಳಿಕೆ, ನೈತಿಕತೆ, ಬರೆಯುವ ಹಾಗೂ ಓದುವ ಕೌಶಲ್ಯ ಮುಖ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಆಯ್ಕೆ ಮಾಡಿಕೊಂಡ ವಿಷಯವನ್ನು ಆಸಕ್ತಿಯಿಂದ ಮನಸಿಟ್ಟು ಓದುವುದು, ಸುದ್ದಿ ಪತ್ರಿಕೆಗಳಲ್ಲಿ ಬರುವ ಸಂಪಾದಕೀಯ, ಅಂಕಣ ಮತ್ತು ಇತರ ಪ್ರಚಲಿತ ವಿದ್ಯಮಾನಗಳನ್ನು ಕುರಿತ ಲೇಖನಗಳನ್ನು ದಿನನಿತ್ಯ ಓದುವುದು ಹಾಗೂ ವಿಶ್ಲೇಷಣೆ ಮಾಡುವುದು ಅಗತ್ಯ ಎಂದು ಹೇಳಿದರು.

ಸಂದರ್ಶನದಲ್ಲಿ ಅಭ್ಯರ್ಥಿಯ ಪ್ರಾಮಾಣಿಕತೆ, ಸಹನೆ, ಸಮಾಜದ ಚಿಂತನೆ, ಏಕತೆ, ಸ್ವ-ಗೌರವ, ಶ್ರದ್ಧೆ ಮತ್ತು ಏಕಾಗ್ರತೆಗಳನ್ನು ಓರೆಗಲ್ಲಿಗೆ ಹಚ್ಚಲಾಗುತ್ತದೆ. ಆದ್ದರಿಂದ ಆಸಕ್ತ ವಿದ್ಯಾರ್ಥಿಗಳು ಇಂದಿನಿಂದಲೇ ನೀವು ಪರಿಶ್ರಮ, ಸಿದ್ಧತೆ, ಆತ್ಮವಿಶ್ವಾಸ, ವಿಶಾಲ ಮನೋಭಾವನೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾಗರೀಕ ಸೇವಾ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆಂಪಹೊನ್ನಯ್ಯ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಶ್ರೀಧರ ಎಚ್, ರಾಷ್ಟ್ರೀಯ ಸೇವಾಯೋಜನೆಯ ಕಾರ್ಯಕ್ರಮಾಧಿಕಾರಿ ಡಾ. ಧರ್ಮೇಶ್ ಎ.ಜಿ., ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಜಯಲಕ್ಷ್ಮೀ ಪುರಂನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಐಎಎಸ್ ಅಧಿಕಾರಿ ಕೆಂಪಹೊನ್ನಯ್ಯ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 18 ಜನವರಿ 2020

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ವಿವೇಕಾನಂದ ಜಯಂತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳ ಕುರಿತು ಉಪನ್ಯಾಸ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ, ಸಂಪನ್ಮೂಲ ವ್ಯಕ್ತಿ: ಪಶ್ಚಿಮ ಬಂಗಾಳ ಆಡಳಿತ ತರಬೇತಿ ಸಂಸ್ಥೆ ಅಸಿಸ್ಟೆಂಟ್ ಕಲೆಕ್ಟರ್ ಕೆಂಪಹೊನ್ನಯ್ಯ, ಸ್ಥಳ : ಎವಿಸಿ –II, ಕಾಲೇಜು ಜಯಲಕ್ಷ್ಮೀಪುರಂ. ಬೆಳಿಗ್ಗೆ 11.15ಕ್ಕೆ.

ವಿಜಯ ಕರ್ನಾಟಕ

ಶನಿವಾರ, 18 ಜನವರಿ 2020

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: 157ನೇ ವಿವೇಕಾನಂದರ ಜಯಂತಿ ಹಾಗೂ ವಿಶೇಷ ಉಪನ್ಯಾಸ. ನಾಗರಿಕ ಸೇವಾ ಪರೀಕ್ಷೆಗಳ ಕುರಿತು ಉಪನ್ಯಾಸ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ. ಸಂಪನ್ಮೂಲ ವ್ಯಕ್ತಿ- ದೃಷ್ಟಿವಿಶೇಷಚೇತನ ಐಎಎಸ್ ಅಧಿಕಾರಿ ಕೆಂಪಹೊನ್ನಯ್ಯ. ಕಾಲೇಜಿನ ಎವಿಸಿ-2, ಜಯಲಕ್ಷ್ಮೀಪುರಂ. ಬೆ.11.15.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶನಿವಾರ 18.1.2020

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** 157ನೇ ವಿವೇಕಾನಂದ ಜಯಂತಿ ಹಾಗೂ ವಿಶೇಷ ಉಪನ್ಯಾಸ, ಅತಿಥಿ- ಕೆಂಪಹೊನ್ನಯ್ಯ, ಎವಿಸಿ-2, ಜಯಲಕ್ಷ್ಮೀಪುರಂ, ಬೆಳಗ್ಗೆ 11.15.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 29.1.2020

ಮನುಷ್ಯ ಆರೋಗ್ಯವಂತನಾಗಿರಲು ನಗುವೇ ಮೂಲೌಷಧ

ಹಾಸ್ಯ ಕಾರಂಜಿ ಮಿಮಿಕ್ರಿ, ಸಂವಾದ ಕಾರ್ಯಕ್ರಮದಲ್ಲಿ ಕಲಾವಿದ ಮಿಮಿಕ್ರಿ ಗೋಪಿ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಮನುಷ್ಯ ಆರೋಗ್ಯವಂತನಾಗಿರಲು ನಗುವೇ ಮೂಲೌಷಧ ಎಂದು ಕಲಾವಿದ ಮಿಮಿಕ್ರಿ ಗೋಪಿ ತಿಳಿಸಿದರು. ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಹಾಸ್ಯ ಕಾರಂಜಿ ಮಿಮಿಕ್ರಿ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ಮಿಮಿಕ್ರಿ ಮೂಲಕ ಸೃಜನಶೀಲ ಮತ್ತು ಸಾಂದರ್ಭಿಕವಾದ ವಸ್ತು ವಿಷಯಗಳನ್ನು ಹಲವು ಸಂದೇಶಗಳ ಮೂಲಕ ಹಾಸ್ಯವಾಗಿ ಪ್ರತಿಬಿಂಬಿಸಿದರು.

ಜೀವನದಲ್ಲಿ ನಗುವನ್ನು ಮರೆತು ಮಾನಸಿಕ ಒತ್ತಡಗಳಿಗೆ ಒಳಗಾಗುತ್ತಿರುವ ಇಂದಿನ ದಿನಮಾನಗಳಲ್ಲಿ ನಗು ಮುಖ್ಯ. ಮನುಷ್ಯ ಆರೋಗ್ಯವಂತನಾಗಿರಲು ನಗುವೇ ಮೂಲೌಷಧ. ನಗುವುದನ್ನು ಕಳೆದುಕೊಳ್ಳಬಾರದು ಎಂದರು.

ಇದೇ ವೇಳೆ ವಿದ್ಯಾರ್ಥಿಗಳ ಹಲವಾರು ಪ್ರಶ್ನೆಗಳಿಗೆ ತಮ್ಮದೇ ಶೈಲಿಯಲ್ಲಿ ಕಲಾತ್ಮಕವಾಗಿ ಗೋಪಿ ಉತ್ತರಿಸಿದರು. ಬಳಿಕ ಮಿಮಿಕ್ರಿ ಗೋಪಿ ಅವರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಹಾಸ್ಯ ಕಾರಂಜಿ, ಸಂವಾದ ಕಾರ್ಯಕ್ರಮದಲ್ಲಿ ಮಿಮಿಕ್ರಿ ಗೋಪಿ ಅವರನ್ನು ಸನ್ಮಾನಿಸಲಾಯಿತು. ಡಾ.ಎಸ್. ವೆಂಕಟರಾಮು ಇತರರು ಇದ್ದರು.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪಕ್ಷ
ಬುಧವಾರ, 29 ಜನವರಿ 2020

ಮಹಾಜನ ಕಾಲೇಜಿನಲ್ಲಿ ಹಾಸ್ಯ ಕಾರಂಜಿ

■ **ವಿಕ ಸುದ್ದಿಲೋಕ** ಮೈಸೂರು

ಮನುಷ್ಯ ಆರೋಗ್ಯವಂತನಾಗಿರಲು ನಗುವೇ ಮೂಲೌಷಧ ಎಂದು ಕಲಾವಿದ ಮಿಮಿಕ್ರಿ ಗೋಪಿ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಹಾಸ್ಯ ಕಾರಂಜಿ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾಡಿನ ಪ್ರಸಿದ್ಧ ಕಲಾವಿದರ ಹಾಗೂ ರಾಜಕಾರಣಿಗಳ ಧ್ವನಿಯನ್ನು ಅನುಕರಿಸಿ ತಮ್ಮದೇ ಆದ ವಿಶಿಷ್ಟ ಪ್ರತಿಭೆಯನ್ನು ಪ್ರಕಾಶಿಸಿದ ಗೋಪಿಯವರಿಗೆ ಎಲ್ಲಾ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಮೆಚ್ಚುಗೆ ಅಭಿವ್ಯಕ್ತಿಸಿದರು. ತಮ್ಮ ಮಿಮಿಕ್ರಿ ಮೂಲಕ ಸೃಜನಶೀಲ ಮತ್ತು ಸಾಂದರ್ಭಿಕವಾದ ವಸ್ತು ವಿಷಯಗಳನ್ನು ಹಲವು ಸಂದೇಶಗಳ ಮೂಲಕ ಹಾಸ್ಯವಾಗಿ ಪ್ರತಿಬಿಂಬಿಸಿದರು. ಜೀವನದಲ್ಲಿ ನಗುವನ್ನು ಮರೆತು ಮಾನಸಿಕ ಒತ್ತಡಗಳಿಗೆ ಒಳಗಾಗುತ್ತಿರುವ ಇಂದಿನ ದಿನಮಾನಗಳಲ್ಲಿ ನಗುವಿನ ಮಹತ್ವವನ್ನು ತಿಳಿಸುತ್ತಾ, ಮನುಷ್ಯ ಆರೋಗ್ಯವಂತನಾಗಿರಲು ನಗುವೇ ಮೂಲೌಷಧ ಎಂತಹ ಸಂದರ್ಭದಲ್ಲೂ ನಗುವುದನ್ನು ಕಳೆದುಕೊಳ್ಳಬಾರದೆಂಬ ಸಂದೇಶ ಸಾರಿದರು.

ವಿದ್ಯಾರ್ಥಿಗಳ ಹಲವಾರು ಪ್ರಶ್ನೆಗಳಿಗೆ ತಮ್ಮದೇ ಶೈಲಿಯಲ್ಲಿ ಕಲಾತ್ಮಕವಾಗಿ ಉತ್ತರಿಸಿದ ಗೋಪಿ ಅವರಿಗೆ ಹೃದಯ ತುಂಬಿದ ಗೌರವಗಳೊಂದಿಗೆ ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ವೆಂಕಟರಾಮು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್. ತಿಮ್ಮೇಗೌಡ ಹಾಗೂ ಉಪ ಪ್ರಾಂಶುಪಾಲರಾದ ಜಯಕುಮಾರಿ ಬಿ.ಆರ್. ಹಾಜರಿದ್ದರು.

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಮಂಗಳವಾರ 7.1.2020

ಹಳ್ಳಿ ಏಳಿಗೆಗೆ ಸರ್ಕಾರದಿಂದ ಯೋಜನೆ ಅಗತ್ಯ

ಎನ್ನೆಸ್ಸೆಸ್ ವಾರ್ಷಿಕ ಶಿಬಿರದಲ್ಲಿ ಜಾನಪದ ಗಾಯಕ ಎಚ್. ಜನಾರ್ದನ್ ಸಲಹೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಇಂದಿನ ಜಾಗತೀಕರಣ ಹಾಗೂ ಕಂಪ್ಯೂಟರೀಕರಣ ಯುಗದಲ್ಲಿ ಹಳ್ಳಿಗಳ ಏಳಿಗೆಗಾಗಿ ಸರ್ಕಾರ ಯೋಜನೆ ರೂಪಿಸಬೇಕಾಗಿದೆ ಎಂದು ರಂಗಾಯಣದ ಮಾಜಿ ನಿರ್ದೇಶಕ ಹಾಗೂ ಜಾನಪದ ಗಾಯಕ ಎಚ್. ಜನಾರ್ದನ್ ತಿಳಿಸಿದರು. ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈಸೂರು ತಾಲೂಕು ಬರಡನಪುರದಲ್ಲಿ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವದೆಡೆಗೆ ಯುವಜನತೆ ಎಂಬ ಶೀರ್ಷಿಕೆಯಲ್ಲಿ ಆಯೋಜಿಸಿರುವ ಒಂದು ವಾರದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರವನ್ನು ಅವರು ರಾಗಿ ಬೀಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಸರ್ಕಾರವು ಈಗಿರುವ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಇದಕ್ಕಾಗಿ ಯುವಜನತೆ ಗ್ರಾಮ ವಾಸ್ತವ್ಯದ ಮೂಲಕ ಹಳ್ಳಿ ಜನತೆಯ ಕಷ್ಟ, ಕಾರ್ಪಣ್ಯ ಹಾಗೂ ಬದುಕನ್ನು ಅರಿತು, ಗ್ರಾಮಗಳ ನವ ನಿರ್ಮಾಣ ಕಟ್ಟುವ ಕನಸನ್ನು ನನಸಾಗಬೇಕಾಗಿದೆ ಎಂದರು.

ವಿದ್ಯಾರ್ಥಿಗಳು ಗ್ರಾಮೀಣ ದಿನ



ಮೈಸೂರು ತಾಲೂಕು ಬರಡನಪುರದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಆಯೋಜಿಸಿರುವ ಎನ್ನೆಸ್ಸೆಸ್ ವಾರ್ಷಿಕ ಶಿಬಿರವನ್ನು ಜಾನಪದ ಗಾಯಕ ಎಚ್. ಜನಾರ್ದನ್ ರಾಗಿ ಬೀಸುವ ಮೂಲಕ ಉದ್ಘಾಟಿಸಿದರು.

ನಿತ್ಯದ ಬದುಕಿನ ಆಗು- ಹೋಗುಗಳನ್ನು, ಅವರ ಜನಪದ ತತ್ತ್ವ, ಹಬ್ಬ, ಜಾತ್ರೆ, ಆಚಾರ, ವಿಚಾರ ಮತ್ತು ನಂಬಿಕೆಗಳನ್ನು ರೂಢಿಸಿಕೊಂಡಿರುವ ಜೀವನ ಶೈಲಿಯನ್ನು ತಿಳಿಯಲು ಗ್ರಾಮ ಸ್ಥರ ಜೊತೆಯಲ್ಲಿ ಒಡನಾಟ ಅಗತ್ಯ. ಈ ಶಿಬಿರದಿಂದ ಗ್ರಾಮಗಳ ಮೌಢ್ಯವನ್ನು ತೊಲಗಿಸಲು, ಗ್ರಾಮ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಅಗತ್ಯ ಎಂದು ಅವರು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು ಅಧ್ಯಕ್ಷತೆ ವಹಿಸಿದ್ದರು. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಲ್. ರವಿ, ಸಹಾಯಕ ಪ್ರಾಧ್ಯಾಪಕ ದೊಡ್ಡ ಅರಸಯ್ಯ, ಸಹ ಶಿಬಿರಾಧಿಕಾರಿಗಳಾದ ರೇಷ್ಮಾ, ರಾಘವೇಂದ್ರ, ನಿರಂಜನ್, ನಂಜಪ್ಪ, ದೇವಪ್ಪ ಇದ್ದರು. ಡಾ. ಧರ್ಮೇಶ ಸ್ವಾಗತಿಸಿದರು. ಕೇಶವಮೂರ್ತಿ ವಂದಿಸಿದರು. ದಿವ್ಯ ನಿರೂಪಿಸಿದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಂಗಳವಾರ 7 ಜನವರಿ 2020

ವಿದ್ಯಾರ್ಥಿಗಳು ಗ್ರಾಮೀಣ ಜೀವನ ಅರ್ಥೈಸಿಕೊಳ್ಳಬೇಕಿದೆ

ರಾಷ್ಟ್ರೀಯ ಸೇವಾ ಯೋಜನೆ ಶಿಬಿರದ ಉದ್ಘಾಟನೆ



ಮೈಸೂರು, ಜ. 6– "ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವದೆಡೆಗೆ ಯುವಜನತೆ" ಎಂಬ ಶೀರ್ಷಿಕೆಯಡಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈಸೂರು ತಾಲೂಕು ಬರಡನಪುರ ಗ್ರಾಮದಲ್ಲಿ ಒಂದು ವಾರದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರವನ್ನು ಆಯೋಜಿಸಿದ್ದು, ಶಿಬಿರದ ಉದ್ಘಾಟನೆಯನ್ನು ಮಾಜಿ ರಂಗಾಯಣದ ನಿರ್ದೇಶಕ ಹೆಚ್. ಜನಾರ್ದನ (ಜನ್ನಿ)., ರಾಗಿ ಬೀಸುವ ಮುಖಾಂತರ ವಿನೂತನವಾಗಿ ಶಿಬಿರವನ್ನು ಉದ್ಘಾಟಿಸಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಶಿಬಿರವು ಗಾಂಧೀಜಿ ಕಂಡ ಕನಸು, ಹಳ್ಳಿಗಳ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳುವುದು, ಹಳ್ಳಿಗರಿಗೆ ತಿಳುವಳಿಕೆ ಹಾಗೂ ಅರಿವು ಮೂಡಿಸುವ ಮಾರ್ಗಸೂತ್ರವನ್ನು ವಿದ್ಯಾರ್ಥಿಗಳು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಮಹಾಜನ ಕಾಲೇಜು ಹಮ್ಮಿಕೊಂಡಿರುವ ಶಿಬಿರವು ಉಪಯುಕ್ತವಾಗಿದೆ. ಶಿಬಿರಾರ್ಥಿಗಳು ಗ್ರಾಮದ ಏಳಿಗೆಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿದೆ. ಹಾಗೆಯೇ ಇಂದಿನ ಜಾಗತೀಕರಣ ಹಾಗೂ ಕಂಪ್ಯೂಟರೀಕರಣ ಯುಗದಲ್ಲಿ ಹಳ್ಳಿಗಳ ಏಳಿಗೆಗಾಗಿ ಸರ್ಕಾರ ಯೋಜನೆಗಳನ್ನು ರೂಪಿಸಬೇಕಾಗಿದೆ. ಈಗಿರುವ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸಬೇಕಾಗಿದೆ, ಇದಕ್ಕಾಗಿ ಯುವಜನತೆ ಗ್ರಾಮವಾಸ್ತವ್ಯದ ಮೂಲಕ ಹಳ್ಳಿ ಜನತೆಯ ಕಷ್ಟ, ಕಾರ್ಪಣ್ಯ ಹಾಗೂ ಬದುಕನ್ನು ಅರಿತು, ಗ್ರಾಮಗಳ ನವ ನಿರ್ಮಾಣ ಕಟ್ಟುವ ಕನಸನ್ನು ನನಸಾಗಬೇಕಾಗಿದೆ ಎಂದರು.

ವಿದ್ಯಾರ್ಥಿಗಳು ಗ್ರಾಮೀಣ ದಿನನಿತ್ಯದ ಬದುಕಿನ ಆಗು-ಹೋಗುಗಳನ್ನು ಅವರ ಜನಪದ ತತ್ತ್ವ, ಹಬ್ಬ ಜಾತ್ರೆ, ಆಚಾರ, ವಿಚಾರ ಮತ್ತು ನಂಬಿಕೆಗಳನ್ನು ರೂಢಿಸಿಕೊಂಡಿರುವ ಜೀವನ ಶೈಲಿಯನ್ನು ತಿಳಿಯಲು ಗ್ರಾಮಸ್ಥರ ಜೊತೆಯಲ್ಲಿ ಒಡನಾಟ ಅಗತ್ಯ ಎಂದರಲ್ಲದೆ, ದೇಶ ಕಟ್ಟುವ ನಿಟ್ಟಿನಲ್ಲಿ ಗ್ರಾಮಗಳ ಪಾತ್ರವನ್ನು ತಿಳಿಸುತ್ತಾ, ವಿದ್ಯಾರ್ಥಿಗಳು ಎನ್.ಎಸ್.ಎಸ್‌ನ ಶಿಬಿರದಿಂದ ಗ್ರಾಮಗಳ ಮೌಢ್ಯವನ್ನು ತೊಲಗಿಸಲು, ಗ್ರಾಮ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಅಲ್ಲಮ ಪ್ರಭು ಹೇಳಿದಂತೆ 'ಅರಿವೇ ಗುರು' ಎಂದು ಅರಿವು ಮೂಡಿಸಲು ಈ ಪ್ರಯೋತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅತ್ಯಗತ್ಯವಾದುದೆಂದು ಕಿವಿಮಾತು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮು ಮಾತನಾಡಿ, ಎನ್‌ಎಸ್‌ಎಸ್ ಎಂಬುದು ಸೇವಾ ಮನೋಭಾವ ಹೊಂದಿರುವ ಘಟಕ ಇದಕ್ಕೆ ವಿದ್ಯಾರ್ಥಿಗಳು ಸ್ವಇಚ್ಛೆಯಿಂದ ಸೇರಿ, ಶಿಬಿರದಲ್ಲಿ ಪಾಲ್ಗೊಂಡು, ಗ್ರಾಮಸ್ಥರಿಗೆ, ಅನಕ್ಷರಸ್ಥರನ್ನು ತಿಳಿಹೇಳಿ, ಅರಿವು ಮೂಡಿಸುವ ಮುಖೇನ ಅಕ್ಷರಸ್ಥರನ್ನಾಗಿ ಮಾಡುವ ಹೊಣೆ ಯುವಪೀಳಿಗೆಯ ಮೇಲಿದೆ ಎಂದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಲ್. ರವಿ, ಗ್ರಾಮದ ಮುಖಂಡರಾದ ನಂಜಪ್ಪ, ದೇವಪ್ಪ, ಕಾಲೇಜಿನ ದೊಡ್ಡ ಅರಸಯ್ಯ, ರೇಷ್ಮಾ, ರಾಘವೇಂದ್ರ ನಿರಂಜನ್ ಉಪಸ್ಥಿತರಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 8 ಜನವರಿ 2020

ಎನ್ ಎಸ್ ಎಸ್ ಶಿಬಿರಕ್ಕೆ ಚಾಲನೆ



ಬರಡನಪುರದಲ್ಲಿ ಆಯೋಜಿಸಿರುವ ಎನ್‌ಎಸ್‌ಎಸ್ ಶಿಬಿರಕ್ಕೆ ರಂಗಾಯಣದ ಮಾಜಿ ನಿರ್ದೇಶಕ ಎಚ್.ಜನಾರ್ದನ ರಾಗಿ ಬೀಸುವ ಮೂಲಕ ಚಾಲನೆ ನೀಡಿದರು. ಡಾ.ಎಸ್. ವೆಂಕಟರಾಮು, ಎಲ್. ರವಿ ಇತರರಿದ್ದರು.

■ **ವಿಜಯವಾಣಿ ಸುದ್ದಿಜಾಲ ಮೈಸೂರು**

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಿಂದ ತಾಲೂಕಿನ ಬರಡನಪುರದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರಕ್ಕೆ ರಂಗಾಯಣದ ಮಾಜಿ ನಿರ್ದೇಶಕ ಎಚ್.ಜನಾರ್ದನ (ಜನ್ನಿ) ರಾಗಿ ಬೀಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಹಳ್ಳಿಗಳ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಲು ಮತ್ತು ಹಳ್ಳಿಗರಿಗೆ ತಿಳಿವಳಿಕೆ ಮೂಡಿಸುವ ಮಾರ್ಗಸೂತ್ರವನ್ನು ವಿದ್ಯಾರ್ಥಿಗಳು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಮಹಾಜನ ಕಾಲೇಜು ಹಮ್ಮಿಕೊಂಡಿರುವ ಶಿಬಿರವು ಉಪಯುಕ್ತವಾಗಿದೆ ಎಂದರು. ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಲ್. ರವಿ ಮಾತನಾಡಿದರು. ಗ್ರಾಮದ ಮುಖಂಡರಾದ ನಂಜಪ್ಪ, ದೇವಪ್ಪ ಪ್ರಾಧ್ಯಾಪಕ ದೊಡ್ಡ ಅರಸಯ್ಯ, ಕಾರ್ಯಕ್ರಮಾಧಿಕಾರಿ ಡಾ.ಎ.ಜಿ. ಧರ್ಮೇಶ, ಸಹ ಶಿಬಿರಾಧಿಕಾರಿಗಳಾದ ರೇಷ್ಮಾ, ರಾಘವೇಂದ್ರ ಮತ್ತು ನಿರಂಜನ್ ಹಾಜರಿದ್ದರು.

ಆಂದೋಲನ
ದಿನ ಪತ್ರಿಕೆ

ಮಂಗಳವಾರ, ಜನವರಿ ೨೮, ೨೦೨೦

ವಿವಿಧೆಡೆ ಗಣರಾಜ್ಯ ದಿನ ಆಚರಣೆ



ಮಹಾಜನ ಕಾಲೇಜು: ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕೆ.ಎಸ್.ಸುರೇಶ್ ಬಾಬು ಧ್ವಜಾರೋಹಣ ನೇರವೇರಿಸಿದರು. ಇದೇ ವೇಳೆ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿಗಳು ರಾಜ್ಯದಲ್ಲೇ ಮೊದಲಬಾರಿಗೆ ಹೌರ್ಟ್ಸ್‌ಜರ್ ಇ2 ಇಂಡಿಯನ್ ಮೌಂಟೇನ್ ಫಿರಂಗಿಯನ್ನು ಪ್ರದರ್ಶಿಸಿದರು. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಭಾಗವತ್, ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಎಂ.ಆರ್.ಇಂದ್ರಾಣಿ, ಕಾಲೇಜು ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಸಿಇಒ ಡಾ.ಎಸ್.ಆರ್.ರಮೇಶ್, ರಣಜಿತ್‌ಸಿಂಗ್, ಪಿ.ಮಹೇಶ್, ರಾಜೇಶ್ ಕುಮಾರ್, ಸುರೀಂದ್ರ ಸಿಂಗ್, ಬಿ.ಆರ್.ಜಯಕುಮಾರಿ, ಡಾ.ಎಸ್.ವೆಂಕಟರಾಮು, ರಾಜೇಶ್ವರಿ ಅಯ್ಯರ್, ಹೇಮಾವತಿ, ಸುಮನಾ ಉಪಸ್ಥಿತರಿದ್ದರು.

ಆಂದೋಲನ
ದಿನ ಪತ್ರಿಕೆ

ಭಾನುವಾರ, ಜನವರಿ ೨೬, ೨೦೨೦

■ ಗಣರಾಜ್ಯೋತ್ಸವ

ಬೆಳಿಗ್ಗೆ 9ಕ್ಕೆ, ಮಹಾಜನ ವಿದ್ಯಾಸಂಸ್ಥೆ, ಅತಿಥಿಗಳು-ಮೈಸೂರು ಪೊಲೀಸ್ ಇಲಾಖೆ (ನಿವೃತ್ತ) ಹೆಚ್ಚುವರಿ ನಿರ್ದೇಶಕ ಕೆ.ಎಸ್.ಸುರೇಶ್ ಬಾಬು, ಸ್ಥಳ-ಜಗದೀಶ್ ಪ್ರಸಾದ್ ಸ್ಟೇಡಿಯಂ, ಮಹಾಜನ ವಿದ್ಯಾ ಸಂಸ್ಥೆ ಆವರಣ, ಜಯಲಕ್ಷ್ಮಿಪುರಂ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಸೋಮವಾರ 27.1.2020



ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದೇಶದ ಸಂವಿಧಾನಾತ್ಮಕ'71ನೇ ಗಣರಾಜ್ಯೋತ್ಸವ' ವನ್ನು ಆಚರಿಸಲಾಯಿತು. ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಭಾಗವತ್ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಐಪಿಎಸ್ ಅಧಿಕಾರಿ ಕೆ.ಎಸ್. ಸುರೇಶ್ ಬಾಬು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 4.1.2020

ಮಹಾಜನ ಕಾಲೇಜಿಗೆ ಟ್ರೋಫಿ

ಮೈವಿವಿ ಅಂತರ ಕಾಲೇಜು ಪುರುಷರ ಕಬಡ್ಡಿ ಪಂದ್ಯಾವಳಿ

ಮೈಸೂರು: 2019-20ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಕಬಡ್ಡಿ ಪಂದ್ಯಾವಳಿಯು ಮುಕ್ತಾಯವಾಯಿತು. ತೆಲುಗು ಟೈಟಾನ್ಸ್‌ನ ಪ್ರೊ. ಕಬಡ್ಡಿ ಆಟಗಾರ ಹಾಗೂ ಅಂತರ ರಾಷ್ಟ್ರೀಯ ಕಬಡ್ಡಿ ಆಟಗಾರ ರಕ್ಷೀತ್ ಪೂಜಾರಿ ಅತಿಥಿಗಳಾಗಿ ಆಗಮಿಸಿದ್ದರು. ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿ.ವಿ. ಅಂತರಕಾಲೇಜು ಕಬಡ್ಡಿ ಪ್ರಶಸ್ತಿಯನ್ನು ಗೆದ್ದು, ಟ್ರೋಫಿಯನ್ನುತನ್ನದಾಗಿಸಿಕೊಂಡಿತು. ರನ್ನರ್ ಅಫ್ 2ನೇ ಸ್ಥಾನವನ್ನು ಮೈಸೂರಿನ ವಿದ್ಯಾವಿಕಾಸ ಪ್ರಥ ಮ ದರ್ಜೆ ಕಾಲೇಜು, ಮೂರನೇ ಸ್ಥಾನವನ್ನು ಚನ್ನಪಟ್ಟಣದ ಆದಿಚುಂಚನಗಿರಿ ಕಾಲೇಜು, ಹಾಗೂ ನಾಲ್ಕನೇ ಸ್ಥಾನವನ್ನು ಸರ್ಕಾರಿ ಕಾಲೇಜು, ಮಂಡ್ಯ ಈ ತಂಡಗಳು ಪಡೆಯಿತು. ವೇದಿಕೆಯಲ್ಲಿದ್ದ ಗಣ್ಯರು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಭಾನುವಾರ, ಜನವರಿ ೫, ೨೦೨೦

ಕಬಡ್ಡಿ ಪಂದ್ಯಾವಳಿ: ಮಹಾಜನ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು,ಜ.4- ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಮೈಸೂರು ವಿವಿ ಅಂತರ ಕಾಲೇಜು ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡ ಪ್ರಥಮ ಸ್ಥಾನ ಪಡೆದುಕೊಂಡಿತು.

ಉಳಿದಂತೆ ಮೈಸೂರಿನ ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜು ತಂಡ(ದ್ವಿ), ಚನ್ನಪಟ್ಟಣದ ಶ್ರೀ ಆದಿಚುಂಚನಗಿರಿ ಕಾಲೇಜು ತಂಡ(ತೃ), ಮಂಡ್ಯ ಸರ್ಕಾರಿ ಕಾಲೇಜು ತಂಡ 4ನೇ ಸ್ಥಾನ ತಮ್ಮದಾಗಿಸಿ ಕೊಂಡವು. ಅಂತಾರಾಷ್ಟ್ರೀಯ ಕಬಡ್ಡಿ ಆಟಗಾರ ರಕ್ಷಿತ್ ಪೂಜಾರಿ ವಿಜೇತರಿಗೆ ಬಹುಮಾನ ವಿತರಿಸಿದರು.

ಕಾಲೇಜು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಎಚ್.ಎನ್.ಭಾಸ್ಕರ್, ಪಿ.ಎಸ್.ಮಧುಸೂದನ್, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ತಿಮ್ಮೇಗೌಡ, ಪ್ರೊ. ರವಿಕುಮಾರ್, ಕಾಲೇಜು ಸಿಇಒ ಡಾ.ಎಚ್.ಆರ್. ರಮೇಶ್, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪಪ್ರಾಂಶುಪಾಲ ಬಿ.ಆರ್.ಜಯಕುಮಾರಿ ಇತರರು ಹಾಜರಿದ್ದರು.

ವಿಜಯವಾಣಿ

ಕನ್ನಡಿಗರ ಧ್ವನಿ

ಗುರುವಾರ 2 ಜನವರಿ 2020

2 JANUARY 2020



■ **ಪಂದ್ಯಾವಳಿ ಉದ್ಘಾಟನೆ:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ಪುರುಷರ ಕಬಡ್ಡಿ ಪಂದ್ಯಾವಳಿ. ಅತಿಥಿಗಳು: ಎ.ಆರ್. ಅವಿನಾಶ್, ಡಾ. ವಿಜಯಲಕ್ಷ್ಮೀ ಮುರಳೀಧರ್. ಸ್ಥಳ: ಜಗದೀಶ್ ಪ್ರಸಾದ್ ಕ್ರೀಡಾಂಗಣ, ಕಾಲೇಜು ಆವರಣ, ಜಯಲಕ್ಷ್ಮೀಪುರಂ, ಬೆ.9.30

ಪ್ರಜಾವಾಣಿ

ಆತ್ಮಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಜನವರಿ 2, 2020

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ: ಮೈಸೂರು ವಿ.ವಿ ಅಂತರ ಕಾಲೇಜು ಮಟ್ಟದ ಪುರುಷರ ಕಬಡ್ಡಿ ಪಂದ್ಯಾವಳಿ. ಉದ್ಘಾಟನೆ- ರಾಷ್ಟ್ರೀಯ ಕಬಡ್ಡಿ ಪಟು ಎ.ಆರ್.ಅವಿನಾಶ್. ಅಧ್ಯಕ್ಷತೆ- ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ವಿಜಯಲಕ್ಷ್ಮೀ ಮುರಳೀಧರ. ಸ್ಥಳ: ಜಗದೀಶ್ ಪ್ರಸಾದ್ ಕ್ರೀಡಾಂಗಣ, ಬೆಳಿಗ್ಗೆ 9.30

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 17.1.2020

ಮಹಾಜನ ಕಾಲೇಜಿನಲ್ಲಿ ಬೇಸ್ ಬಾಲ್ ತರಬೇತಿ ಕಾರ್ಯಕ್ರಮ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಆಸ್ಟ್ರೇಲಿಯಾದ ಅಂತಾರಾಷ್ಟ್ರೀಯ ಬೇಸ್‌ಬಾಲ್ ತರಬೇತಿದಾರರಾದ ನರೆಲ್ಲ್ ಗೊಸ್ಟ್ರೆಲ ಭೇಟಿ ನೀಡಿ ಮಾತನಾಡಿದರು.

ಮೈಸೂರು: ಆಸ್ಟ್ರೇಲಿಯಾದ ಅಂತಾರಾಷ್ಟ್ರೀಯ ಬೇಸ್‌ಬಾಲ್ ತರಬೇತಿದಾರರಾದ ನರೆಲ್ಲ್ ಗೊಸ್ಟ್ರೆಲ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ಆಸಕ್ತ ಕ್ರೀಡಾ ವಿದ್ಯಾರ್ಥಿಗಳಿಗೆ ಬೇಸ್ ಬಾಲ್ ತರಬೇತಿ ಮತ್ತು ಅರಿವು ಮೂಡಿಸಿದರು.

ಅಮೆರಿಕ ಮುಂತಾದ ರಾಷ್ಟ್ರಗಳಲ್ಲಿ ಕ್ರಿಕೆಟ್ ಮಾದರಿಯಲ್ಲಿ ಬೇಸ್ ಬಾಲ್ ಕ್ರೀಡೆಯನ್ನು ಆಡಲಾಗುತ್ತಿದೆ. ಭಾರತದಲ್ಲಿ ಈ ಕ್ರೀಡೆಯು ಬಹುಬೇಗ ಜನಪ್ರಿಯತೆ ಹೊಂದುತ್ತಿದ್ದು, ಶಾಲಾ- ಕಾಲೇಜುಗಳಲ್ಲಿ ಈ ಕ್ರೀಡೆಯನ್ನು ದೈಹಿಕ ಶಿಕ್ಷಣದೊಡನೆ ಸೇರಿಸಿಕೊಳ್ಳುತ್ತಿದ್ದಾರೆ. ಈ ಕ್ರೀಡೆಯಲ್ಲಿ ಗುರುತಿಸಿಕೊಂಡವರಿಗೆ ಉದ್ಯೋಗದಲ್ಲಿಯೂ ಮೀಸಲಾತಿ ದೊರೆಯುವ ಅವಕಾಶವಿದೆ. ಬೇಸ್ ಬಾಲ್ ಫೆಡರೇಷನ್ ಆಫ್ ಇಂಡಿಯಾವು ದೇಶದಲ್ಲಿ ಈ ಕ್ರೀಡೆಯನ್ನು ಉತ್ತೇಜಿಸಲು ಮುಂದಾಗಿದೆ ಎಂದರು.

ಈ ವೇಳೆ ಪ್ರಾಂಶುಪಾಲ ಡಾ. ವೆಂಕಟರಾಮು, ಉಪಪ್ರಾಂಶುಪಾಲೆ ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕಿ ಡಾ.ಎಚ್.ಎನ್. ಭಾಸ್ಕರ್, ಮಹಾಜನ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ರಾಜೇಶ್ವರಿ ಅಯ್ಯರ್, ಎಟಿಎಂಇನ ದೈಹಿಕ ಶಿಕ್ಷಣ ನಿರ್ದೇಶಕ ಮುರಳಿ, ವಿಟಿಯುನ ರಘುನಾತ್, ಭಾರತದ ಬ್ಯಾಸ್ಕೆಟ್‌ಬಾಲ್ ಆಟಗಾರ ಹರ್ಷ ಇದ್ದರು.

MFGE In the Eyes of the Press.....

ವಿಜಯ ಕರ್ನಾಟಕ

ಕನ್ನಡಿಗರ ಧ್ವನಿ

ಶುಕ್ರವಾರ, 17 ಜನವರಿ 2020



ಅಂತಾರಾಷ್ಟ್ರೀಯ ಬೇಸ್‌ಬಾಲ್ ತರಬೇತುದಾರರಾದ ಅಂತಾರಾಷ್ಟ್ರೀಯ ಖ್ಯಾತಿಯ ನರೇಲ್ ಗೋಸ್ಟಾರ್ಟಿ ಅವರು ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಬೇಸ್ ಬಾಲ್ ಬಗ್ಗೆ ತರಬೇತಿ ನೀಡಿದರು.

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 31 ಜನವರಿ 2020
31 JANUARY 2019

■ **ಕಾರ್ಯಾಗಾರ:** ಮೈಸೂರು ವಿಶ್ವವಿದ್ಯಾಲಯ. ವಿಷಯ: ಮಾನವ ಹಕ್ಕು. ಅತಿಥಿಗಳು: ಬಿ.ಟಿ. ಕವಿತಾ, ಪ್ರೊ.ಆರ್.ಶಿವಪ್ಪ. ಸ್ಥಳ: ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಬೆ.10.15



MFGE In the Eyes of the Press.....

ಆಂದೋಲನ

ದಿನ ಪತ್ರಿಕೆ



ಶುಕ್ರವಾರ, ಜನವರಿ ೩೧, ೨೦೨೦

■ **ಮಾನವ ಹಕ್ಕುಗಳು ಕುರಿತು ಕಾರ್ಯಾಗಾರ**

ಬೆಳಿಗ್ಗೆ 10.15ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು, ಅತಿಥಿ- ಡಿಸಿಪಿ ಬಿ.ಟಿ.ಕವಿತಾ, ಮುಖ್ಯ ಭಾಷಣ- ಮೈಸೂರು ವಿವಿ ಕುಲಸಚಿವ ಪ್ರೊ.ಆರ್. ಶಿವಪ್ಪ ಅಧ್ಯಕ್ಷತೆ- ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಸ್ಥಳ- ಕಾಲೇಜು ಆವರಣ, ಜಯಲಕ್ಷ್ಮಿಪುರಂ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 31 ಜನವರಿ 2020

■ **ಮೈಸೂರು ವಿಶ್ವವಿದ್ಯಾನಿಲಯ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಹೊರಗುಳಿಯುವಿಕೆ ನೀತಿ ಅಧ್ಯಯನ ಕೇಂದ್ರ :** ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಧನಸಹಾಯದಿಂದ ಮಾನವ ಹಕ್ಕುಗಳ ಕುರಿತು ತರಬೇತಿ ಕಾರ್ಯಾಗಾರ, ಮುಖ್ಯ ಅತಿಥಿಗಳು : ಡಿಸಿಪಿ (ಅಪರಾಧ ಮತ್ತು ಸಂಚಾರ) ಬಿ.ಟಿ.ಕವಿತಾ, ಪ್ರಾಸ್ತಾವಿಕ ಭಾಷಣ: ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ, ಅಧ್ಯಕ್ಷತೆ: ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ವೆಂಕಟರಾಮು, ಸ್ಥಳ: ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಬೆಳಿಗ್ಗೆ 10.15ಕ್ಕೆ.

ಪ್ರಜಾವಾಣಿ

ಶುಕ್ರವಾರ • ಜನವರಿ 31, 2020

ಮೈಸೂರು ವಿಶ್ವವಿದ್ಯಾಲಯ, ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ:
ಮಾನವ ಹಕ್ಕುಗಳ ಕುರಿತು ತರಬೇತಿ ಕಾರ್ಯಾಗಾರ. ಮುಖ್ಯ ಅತಿಥಿ-ಬಿ.ಟಿ. ಕವಿತಾ. ಪ್ರಧಾನ ಭಾಷಣ-ಪ್ರೊ.ಆರ್. ಶಿವಪ್ಪ. ಉಪಸ್ಥಿತಿ-ಡಾ.ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್.ಆರ್. ರಮೇಶ್. ಅಧ್ಯಕ್ಷತೆ-ಡಾ.ಎಸ್. ವೆಂಕಟರಾಮು. ಸ್ಥಳ: ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಬೆಳಿಗ್ಗೆ 10.15

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 31.1.2020

- **ಮೈಸೂರು ವಿವಿ, ಮಹಾಜನ ಪ್ರಥಮ ದರ್ಜೆ ಕಾಲೇಜು ಮಾನವ ಹಕ್ಕುಗಳು ಕುರಿತು ತರಬೇತಿ ಕಾರ್ಯಾಗಾರ,** ಉದ್ಘಾಟನೆ- ಬಿ.ಟಿ. ಕವಿತಾ, ಅತಿಥಿ- ಪ್ರೊ.ಆರ್. ಶಿವಪ್ಪ, ಡಾ. ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್.ಆರ್. ರಮೇಶ್, ಅಧ್ಯಕ್ಷತೆ- ಡಾ.ಎಸ್. ವೆಂಕಟರಾಮು, ಜಯ ಲಕ್ಷ್ಮೀಪುರಂ, ಬೆಳಗ್ಗೆ 10.15.

ಆಂದೋಲನ
ದಿನಪತ್ರಿಕೆ

ಗುರುವಾರ, ಫೆಬ್ರವರಿ ೬, ೨೦೨೦

ಮಹಾಜನ ಕಾಲೇಜಿನಲ್ಲಿ ನೂತನ ಕೋರ್ಸ್ ಉದ್ಘಾಟನೆ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಆರಂಭಗೊಂಡ ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟಲಿಜೆನ್ಸ್) ಮತ್ತು ಯಂತ್ರ ಕಲಿಕೆ (ಮೆಷಿನ್ ಲರ್ನಿಂಗ್) ಕೋರ್ಸ್‌ಗೆ ಬುಧವಾರ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್ ಚಾಲನೆ ನೀಡಿದರು. ಕೋರ್ಸ್ ಮಾರ್ಗದರ್ಶಕ ಡಾ.ಸಿ.ಎನ್.ರವಿಕುಮಾರ್, ಬಿ.ಜಿ.ಮೋಹನ್ ಕೃಷ್ಣ, ಕೆ.ಆರ್.ರವಿ, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಸಿಇಒ ಡಾ.ಎಸ್.ಆರ್.ರಮೇಶ್, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರುತಿ ಪೂಣಚ್ಚ, ಬಿಸಿಎ ವಿಭಾಗದ ಮುಖ್ಯಸ್ಥ ಕೆ.ಎಸ್.ಮಂಜುನಾಥ್, ಸಹಾಯಕ ಪ್ರಾಧ್ಯಾಪಕ ರಾಧೇಶ್, ರಾಧಿಕ ರಾಣಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 6 ಫೆಬ್ರವರಿ 2020

ಮಹಾಜನ ಕಾಲೇಜಿನಲ್ಲಿ 'ಕೃತಕ ಬುದ್ಧಿಮತ್ತೆ-ಯಂತ್ರ ಕಲಿಕೆ' ಶಿಕ್ಷಣ

ಮೈಸೂರು, ಫೆ.5(ಪಿಎಂ)– ಮೈಸೂರಿನ ಜಯಲಕ್ಷ್ಮಿಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ' ಸರ್ಟಿಫಿಕೇಟ್ ಕೋರ್ಸ್‌ಗೆ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ ಭಾಗವತ್ ಕಾಲೇಜಿನ ಸಭಾಂಗಣದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್(ಕೃತಕ ಬುದ್ಧಿಮತ್ತೆ) ಬಳಕೆ ಮೂಲಕ ಉದ್ಯಮ ಲೋಕದಲ್ಲಿ ಹತ್ತಾರು ಅನುಕೂಲಗಳನ್ನು ಪಡೆಯಲು ಸಾಧ್ಯವಿದೆ ಎಂದರು. ಹೊಸ ಕೋರ್ಸ್‌ನ ಮಾರ್ಗ ದರ್ಶಕ ಸಿ.ಎನ್.ರವಿಕುಮಾರ್, ಇನ್‌ಫೋಸಿಸ್ ಮೈಸೂರು ಘಟಕದ ಮಾಜಿ ಬೋಧಕ ರಾದ ಬಿ.ಜಿ.ಮೋಹನ್‌ಕೃಷ್ಣ, ಕೆ.ಆರ್.ರವಿ ಅವರು, ಭವಿಷ್ಯದಲ್ಲಿ ಕೃತಕ ಬುದ್ಧಿಮತ್ತೆಯ ಬೇಡಿಕೆ, ಆ ಕ್ಷೇತ್ರದಲ್ಲಿನ ಸಂಶೋಧನೆ ಮತ್ತು ಉದ್ಯೋಗಾವಕಾಶ ಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.



'ಕೃತಕ ಬುದ್ಧಿಮತ್ತೆ-ಯಂತ್ರ ಕಲಿಕೆ' ಸರ್ಟಿಫಿಕೇಟ್ ಕೋರ್ಸ್ ಅನ್ನು ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಆರಂಭಿಸಲಾಯಿತು.

ವಿದ್ಯಾರ್ಥಿಗಳ ಕೌಶಲ ಹೆಚ್ಚಿಸುವುದರಲ್ಲಿ ಇಂದು ಮೊದಲ ಹೆಜ್ಜೆ ಇಡಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಎಸ್. ವೆಂಕಟರಾಮು ಹರ್ಷ ವ್ಯಕ್ತಪಡಿಸಿದರು. ಶೈಕ್ಷಣಿಕ ಸಲಹೆಗಾರ ಎಸ್.ಆರ್.ರಮೇಶ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಶೃತಿ ಪೂಣಚ್ಚ, ಸಹಾಯಕ ಪ್ರಾಧ್ಯಾಪಕಿ ರಾಧಿಕಾ ರಾಣಿ, ಬಿಸಿಎ ವಿಭಾಗದ ಮುಖ್ಯಸ್ಥ ಕೆ.ಎಸ್.ಮಂಜುನಾಥ್, ಸಹಾಯಕ ಪ್ರಾಧ್ಯಾಪಕ ರಾಧೇಶ್ ಮತ್ತಿತರರಿದ್ದರು.

STAR OF MYSORE

Thursday 6th February 2020

"Job-seekers with AI degrees in great demand"

Artificial Intelligence and Machine Learning Certificate Courses launched



T. Muralidhar Bhagavat, President, Mahajana Education Society, launching the new courses by lighting the lamp along with other dignitaries.

Mysuru, Feb. 6- Realising the growing demand for Artificial Intelligence (AI) and Machine Learning (ML) and its significance in the near future, SBRR Mahajana First Grade College is introducing Certificate courses with specialisations in AI and ML from this academic year, specially designed for working professionals and open to all students.

Dr. C.N. Ravikumar, former Dean (Academics) and HoD of Computer Science and Engineering, SJCE and Mentor, AI and ML course, Mahajana First Grade College, in his inaugural address, said, "the new course is a platform to introduce 'AI for everyone,' even for non-technical streams to navigate the rise of AI and Machine Learning." He opined that the programme is designed for technology professionals who wish to advance their career as a specialist in the field of AI and ML.

B.G. Mohan Krishna, former Senior Lead Principal, Education and Research, Infosys, Mysuru & Faculty, AI and ML, Mahajana College, in his keynote address, said that there is an increasing need for intelligent and accurate decision-making across industries. This has led to an exponential growth in the adoption of AI and ML technologies and they are expected to remain relevant in years to come. The course modules have been carefully designed to cover mathematical and algorithmic foundations, AI fundamentals and several modules on statistical and ML methods.

He further added, "Artificial Intelligence made headlines recently when people started reporting that Alexa's unexpected laughter notwithstanding. AI has been a sound career choice for a while now because of the growing adoption of the technology across industries and the need for trained professionals to do the jobs created by this growth. AI is used in almost every industry, yet we have a massive need for qualified, skilled professionals."

K.R. Ravi, former Technology Lead, Education and Research, Infosys, Mysuru and Faculty, AI and ML, Mahajana First Grade College, said, "As per the statistical report, around 22,000 freshers were added to analytics workforce in India; hiring freshers has increased by 37% and cited an example of 344% increase in job postings in the last few years."

"AI is the need of the hour; most industries are looking for graduates who have some knowledge of AI. Job-seekers with AI degrees are well-paid and in high demand," he added.

T. Muralidhar Bhagavat, President, Mahajana Education Society, presided. Pranamya Bhat rendered the invocation. Shruthy Poonacha welcomed. K.S. Manjunath, Convenor, AI and ML Course, introduced the guests. A. Radhesh, Assistant Professor, Department of Computer Science, proposed a vote of thanks. Radhika Rani compered. Dr. S. Venkataramu, Principal, Dr. S. Ramesh, Chief Executive Officer, students and staff were present.

ಆಂದೋಲನ
ದಿನಪತ್ರಿಕೆ

ಸೋಮವಾರ, ಫೆಬ್ರವರಿ ೩, ೨೦೨೦

ಮಹಾಜನ: ಇಂಡಿಯಾ-ಜಪಾನ್ ಸ್ನೇಹ ದಿನಾಚರಣೆ

ಮೈಸೂರು,ಫೆ.2- ಭಾರತ ಮತ್ತು ಜಪಾನಿನ ಪ್ರೀತಿ-ಬಾಂಧವ್ಯವನ್ನು ಹೆಚ್ಚಿಸಲು ಇಂತಹ ಕಾರ್ಯಕ್ರಮಗಳು ಪೂರಕ ಎಂದು ಬೆಂಗಳೂರಿನ ಜಪಾನ್ ದೂತಾವಾಸದ ಉಪರಾಯಭಾರಿ ಮಿಟಸುಹಿರೋ ಅಮೋ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಇಂಡಿಯಾ-ಜಪಾನ್ ಸ್ನೇಹ ದಿನಾಚರಣೆ-ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಮತ್ತು ಜಪಾನ್ ಮೊದಲಿನಿಂದಲೂ ಸ್ನೇಹದಿಂದಿವೆ. ಸ್ನೇಹವನ್ನು ಹೆಚ್ಚುಮಾಡಲು ಈ ರೀತಿಯ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎರಡೂ ದೇಶಗಳ ನಡುವೆ ಒಳ್ಳೆಯ ಸಂಬಂಧ ಬೆಳೆಸಲು ನಾವೆಲ್ಲರೂ ಪ್ರಯತ್ನಿಸಬೇಕು ಎಂದು ಹೇಳಿದರು.

ಟೋಕಿಯೋ ಹಿನಸಿ ಪ್ರಧಾನ ಕಾರ್ಯದರ್ಶಿ ಹಿರೊಯುಕಿ ಹಿಸಿದ ಮಾತನಾಡಿ, ಭಾರತದ ಸಂಸ್ಕೃತಿ ನಮ್ಮ ಸಂಸ್ಕೃತಿಗಿಂತ ಭಿನ್ನವಾಗಿದೆ. ಈ ಸುಂದರ ಕ್ಷಣಗಳನ್ನು ಭಾರತೀಯರ ಜೊತೆ ಸವಿಯುವುದೇ ನಮ್ಮ ಅದೃಷ್ಟ. ಸಂಪ್ರದಾಯ ಸಂಸ್ಕೃತಿಯಲ್ಲಿ ಭಾರತ ಮುಂದಿದೆ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಇಂಡಿಯಾ ಜಪಾನ್ ಸ್ನೇಹ ದಿನಾಚರಣೆಯನ್ನು ಮಿಟಸುಹಿರೋ ಅಮೋ ಉದ್ಘಾಟಿಸಿದರು. ಡಾ.ಮುರಳಿಧರ್ ಭಾಗವತ್, ಡಾ.ಎಸ್.ವೆಂಕಟರಾಮು, ಹಿರೊಯುಕಿ ಹಿಸಿದ ಮತ್ತಿತರರು ಚಿತ್ರದಲ್ಲಿದ್ದಾರೆ.

ಮಹಾಜನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮುರಳಿಧರ್ ಭಾಗವತ್, ಕಾರ್ಯದರ್ಶಿ ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಡಾ.ಎಸ್.ಆರ್.ರಮೇಶ್, ಡಾ.ಲೆಫ್ಟಿನೆಂಟ್ ಇಂದ್ರಾಣಿ ಕಾರ್ಯಕ್ರಮದಲ್ಲಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 3.2.2020

ಮಹಾಜನ ಪ್ರ.ದ. ಕಾಲೇಜಿನಲ್ಲಿ ಇಂಡಿಯಾ ಜಪಾನ್ ಸ್ನೇಹ ದಿನ

ಮೈಸೂರು: ನಗರದ ಜಯಲಕ್ಷ್ಮೀಪುರಂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಇಂಡಿಯಾ ಜಪಾನ್ ಸ್ನೇಹ ದಿನಾಚರಣೆ- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಜಪಾನ್ ದೂತವಾಸ ಕಚೇರಿಯ ಸಾಮಾನ್ಯ ವ್ಯವಹಾರಗಳ ರಾಜಕೀಯ/ಆರ್ಥಿಕ ಮತ್ತು ಸಾಂಸ್ಕೃತಿಕ ಭದ್ರತೆಯ ಉಪ ರಾಯಭಾರಿ ಮಿಟಸುಹಿರೊ ಅಮೋ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ, ಭಾರತ ಮತ್ತು ಜಪಾನಿನ ಪ್ರೀತಿ- ಭಾಂದವ್ಯವನ್ನು ಇನ್ನಷ್ಟು ಹೆಚ್ಚಿಸಲು ಈ ಕಾರ್ಯಕ್ರಮ ಪೂರಕವಾಯಿತು. ನಮ್ಮ, ನಿಮ್ಮ ಸ್ನೇಹ ಹೀಗೆಯೇ ಇರಲಿ ಎಂದ ಅವರು ಮೈಸೂರಿನ ಕುರಿತು ಅಭಿಮಾನ ವ್ಯಕ್ತಪಡಿಸಿದರು.

ಟೋಕಿಯೋ ಎಜೆಂಟ್ ಹಿನಸಿಯ ಪ್ರಧಾನ ವ್ಯವಸ್ಥಾಪಕ ಹಿರೊಯುಕಿ ಹಿಸಿದ ಮಾತನಾಡಿ, ಭಾರತದ ಸಂಸ್ಕೃತಿ ನಮ್ಮ ಸಂಸ್ಕೃತಿಗಿಂತ ಭಿನ್ನವಾಗಿದೆ. ಈ ಸುಂದರ ಕ್ಷಣಗಳನ್ನು ಭಾರತೀಯರ ಜೊತೆ ಸವಿಯುವುದೇ ನಮ್ಮ ಅದೃಷ್ಟ, ಸಂಪ್ರದಾಯ ಸಂಸ್ಕೃತಿಯಲ್ಲಿ ಭಾರತ ಮುಂದಿದೆ ಎಂದು ಅಭಿಪ್ರಾಯ ಪಟ್ಟರು. ಪ್ರಮೋದ್ ವೆದುರ ಮೂದಿ, ಕಾಲೇಜಿನ ಗೌರವ ಕಾರ್ಯದರ್ಶಿ ಡಾ. ಮುರಳಿಧರ್ ಭಾಗವತ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಿರೋಶಿಮ - ನಾಗಸಾಕಿಯಲ್ಲಿ ಉಂಟಾದ ಅಣ್ವಸ್ತ್ರ ದುರಂತಸಾಕ್ಷಾಚಿತ್ರಗಳಪ್ರದರ್ಶನವನ್ನು ಏರ್ಪಡಿಸಿದ್ದು ಬಹಳ ಮೆಚ್ಚುಗೆಗೆ ಪಾತ್ರವಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಕಾರ್ಯನಿರ್ವಾಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಡಾ.ಲೇಪ್ಟಿನೆಂಟ್ ಇಂದ್ರಾಣಿ, ಕಾಲೇಜಿನ ಅಧ್ಯಾಪಕರು ಹಾಗೂ ಅಧ್ಯಾಪಕೇತರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಇಂಡಿಯಾ ಜಪಾನ್ ಸ್ನೇಹ ದಿನಾಚರಣೆ ಕಾರ್ಯಕ್ರಮವನ್ನು ಜಪಾನ್ ದೂತವಾಸ ಕಚೇರಿಯ ಉಪ ರಾಯಭಾರಿ ಮಿಟಸುಹಿರೊ ಅಮೋ ಉದ್ಘಾಟಿಸಿದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 3 ಫೆಬ್ರವರಿ 2020

ಮಹಾಜನದಲ್ಲಿ 'ಇಂಡಿಯಾ-ಜಪಾನ್ ಸ್ನೇಹ ದಿನ'



ಟೋಕಿಯೋದ ಹಿರೊಯುಕಿ ಹಿಶಿದಾ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವುದು.

ಮೈಸೂರು,ಫೆ.2(ವೈಡಿಎಸ್)–ಸಂಪ್ರದಾಯ, ಸಂಸ್ಕೃತಿ, ಆಚರಣೆಯಲ್ಲಿ ಜಪಾನ್‌ಗಿಂತ ಭಾರತ ಮುಂದಿದೆ ಎಂದು ಟೋಕಿಯೋದ ಹಿರೊಯುಕಿ ಹಿಶಿದಾ ಅಭಿಪ್ರಾಯಪಟ್ಟರು.

ಜಯಲಕ್ಷ್ಮಿಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ 'ಇಂಡಿಯಾ–ಜಪಾನ್ ಸ್ನೇಹ ದಿನ' ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಕೃತಿಗಿಂತ ಭಾರತದ ಸಂಸ್ಕೃತಿ ಬಹಳ ಭಿನ್ನ. ಈ ಸುಂದರ ಕ್ಷಣಗಳನ್ನು ಭಾರತೀಯರೊಂದಿಗೆ ಸವಿಯುವುದೇ ನಮ್ಮ ಅದೃಷ್ಟ ಎಂದರು.

ಪ್ರಮೋದ್ ಮೂದಿ ಅವರು ಮಾತನಾಡಿ, ಭಾರತ ಮತ್ತು ಜಪಾನ್‌ನ ಬಹುತೇಕ ಕ್ಷೇತ್ರಗಳು ಒಂದೇ ರೀತಿ ಇವೆ. ಕೆಲವು ಕ್ಷೇತ್ರಗಳಷ್ಟೇ ಭಿನ್ನವಾಗಿವೆ. ಈ ವಿಭಿನ್ನ ಪ್ರಕಾರಗಳನ್ನು ಅರಿಯಲು ನೀವೆಲ್ಲರೂ ಜಪಾನ್‌ಗೆ ಭೇಟಿ ನೀಡಿ, ನಮ್ಮ ವ್ಯವಹಾರ ಕ್ಷೇತ್ರಗಳ ಕುರಿತು ತಿಳಿಯಬಹುದು ಎಂದು ಹೇಳಿದರು.

ಇದೇ ಸಂದರ್ಭ ಹಿರೋಶಿಮ–ನಾಗಸಾಕಿ ಅಣ್ವಸ್ತ್ರ ದುರಂತ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಕಾಲೇಜಿನ ಗೌರವ ಕಾರ್ಯದರ್ಶಿ ಮುರಳೀಧರ್ ಭಾಗವತ್, ಪ್ರಾಂಶುಪಾಲ ಎಸ್.ವೆಂಕಟರಾಮು, ಕಾರ್ಯನಿರ್ವಾಹಣಾಧಿಕಾರಿ ಎಸ್.ಆರ್.ರಮೇಶ್, ಇಂದ್ರಾಣಿ, ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಆಂದೋಲನ

ದಿನ ಪತ್ರಿಕೆ

ಶನಿವಾರ, ಫೆಬ್ರವರಿ ೧, ೨೦೨೦

■ **ವಿಚಾರಸಂಕಿರಣ**

ಮಧ್ಯಾಹ್ನ 3.30ಕ್ಕೆ, ಮಹಾಜನ ಶಿಕ್ಷಣ ಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ವಿಷಯ-ಭಾರತ-ಜಪಾನ್ ಸ್ನೇಹ ದಿನ: ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ, ಅತಿಥಿಗಳು-ಬೆಂಗಳೂರಿನ ಕಾನ್ಸುಲೇಟ್ ಜನರಲ್ ಆಫ್ ಜಪಾನ್‌ನ ಮಿತ್ಸುಹಿರೊ ಅಮಾವೋ, ಅಧ್ಯಕ್ಷತೆ-ಮಹಾಜನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಸ್ಥಳ-ಕಾಲೇಜಿನ ಆವರಣ, ಜಯಲಕ್ಷ್ಮಿಪುರಂ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶನಿವಾರ 1.2.2020

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ಇಂಡಿಯಾ-ಜಪಾನ್ ಫ್ರೆಂಡ್ಸ್‌ಶಿಪ್ ಡೇ- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ, ಅತಿಥಿ-ಮಿತ್ಸುಹಿರೋ ಅಮೊ, ಹಿರೊಯುಕಿ ಐಷಿದ, ಅಧ್ಯಕ್ಷತೆ- ಮುರಳೀಧರ್ ಭಾಗವತ್, ಬಿ.ಎಸ್. ರವಿಕುಮಾರ್, ಡಾ. ವಿಜಯಲಕ್ಷ್ಮೀ ಮುರಳೀಧರ್, ಎವಿಸಿ-3, ಮಧ್ಯಾಹ್ನ 3.30.

ವಿಜಯವಾಣಿ

ಕನ್ನಡಿಗರ ಧ್ವನಿ

ಶನಿವಾರ 1 ಫೆಬ್ರವರಿ 2020
1 FEBRUARY 2020

■ **ಫ್ರೆಂಡ್‌ಶಿಪ್ ಡೇ:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ಇಂಡಿಯಾ-ಜಪಾನ್ ಫ್ರೆಂಡ್‌ಶಿಪ್ ಡೇ. ಅತಿಥಿಗಳು: ಮಿಸ್ಟು ಹೀರೋ ಅಮಾವೋ, ಹಿರೋ ಯೋಕಿ ಇಶಿದಾ. ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮೀಪುರಂ, ಮ.3.30





ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 1 ಫೆಬ್ರವರಿ 2020

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ಇಂಡಿಯಾ –ಜಪಾನ್ ಫ್ರೆಂಡ್‌ಷಿಪ್ ಡೇ: ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಜಪಾನ್‌ನ ಮಿತ್ಸುಹಿರೊ ಅಮೊ, ಟೋಕಿಯೋದ ಹಿರೊಯುಕಿ ಇಶಿಡಾ, ಅಧ್ಯಕ್ಷತೆ : ಮಹಾಜನ ಎಜುಕೇಷನ್ ಸೊಸೈಟಿ ಅಧ್ಯಕ್ಷ ಮುರಳೀಧರ ಭಾಗವತ್, ಸ್ಥಳ: ಎವಿಸಿ III & ಕಾಲೇಜು ಕ್ವಾಡ್ರ್ಯಾಂಗಲ್, ಜಯಲಕ್ಷ್ಮಿಪುರಂ. ಮಧ್ಯಾಹ್ನ 3.30ಕ್ಕೆ.

ಪ್ರಜಾವಾಣಿ

ಶನಿವಾರ • ಫೆಬ್ರುವರಿ 1, 2020

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು, ಶಾಂತಿ ಮತ್ತು ಅರ್ಥಮಾಡಿಕೊಳ್ಳುವಿಕೆಯ ವೇದಿಕೆ: ಭಾರತ ಮತ್ತು ಜಪಾನ್ ಸ್ನೇಹ ದಿನಾಚರಣೆ. ಜಪಾನಿನ ಉಪರಾಜತಾಂತ್ರಿಕ ಅಧಿಕಾರಿ ಮಿಟ್‌ಸುಹಿರೋ ಅಮಾವೊ. ಅಧ್ಯಕ್ಷತೆ- ಮಹಾಜನ ಎಜುಕೇಷನ್ ಸೊಸೈಟಿಯ ಅಧ್ಯಕ್ಷ ಮುರಳೀಧರ್ ಭಾಗವತ್. ಸ್ಥಳ: ಕಾಲೇಜಿನ ಸಭಾಂಗಣ, ಮಧ್ಯಾಹ್ನ 3.30

ವಿಜಯ ಕರ್ನಾಟಕ

ಶನಿವಾರ,1 ಫೆಬ್ರವರಿ 2020

ಮಹಾಜನ ಎಜುಕೇಷನ್ ಸೊಸೈಟಿ, ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು : ಭಾರತ ಜಪಾನ್ ಸ್ನೇಹ ದಿನ : ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ. ಅತಿಥಿ–ಸಾಮಾನ್ಯ ವ್ಯವಹಾರಗಳು, ರಾಜಕೀಯ ಆರ್ಥಿಕತೆ ಮತ್ತು ಸಂಸ್ಕೃತಿ, ಭದ್ರತೆ ಕಾನ್ಸುಲೇಟ್ ಜನರಲ್ ಮಿತ್ಸುಹಿರೊ ಅಮೊ, ಟೋಕಿಯೊ ಐಎನ್‌ಸಿಇ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಹಿರೊಯುಕಿ ಇಶಿದ, ಅಧ್ಯಕ್ಷತೆ–ಮಹಾಜನ ಎಜುಕೇಷನ್ ಸೋಸೈಟಿ ಅಧ್ಯಕ್ಷ ಮುರುಳೀಧರ ಭಾಗವತ್. ಕಾಲೇಜು ಸಭಾಂಗಣ. ಮ.3.30.

ಆಂದೋಲನ
ದಿನ ಪತ್ರಿಕೆ
ಶುಕ್ರವಾರ, ಫೆಬ್ರವರಿ ೭, ೨೦೨೦

ಇಂದಿನಿಂದ ಮಹಾಮ್ 2020

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಫೆ.7ರಿಂದ 9ರವರೆಗೆ 'ಮಹಾಮ್ 2020' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಅಧ್ಯಾಪಕ ಸಂಯೋಜಕ ಡಾ.ಎಚ್. ಆರ್.ತಿಮ್ಮೇಗೌಡ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ರಾಜ್ಯದ ವಿವಿಧ ಜಿಲ್ಲೆಗಳ ಕಾಲೇಜುಗಳಿಂದ ವಿದ್ಯಾರ್ಥಿಗಳು ಆಗಮಿಸಲಿದ್ದಾರೆ. ಫೆ.7ರಂದು ಬೆಳಿಗ್ಗೆ 9.30ಕ್ಕೆ ಕಾರ್ಯಕ್ರಮವನ್ನು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದ್ದಾರೆ. ಶಾಸಕ ಎಲ್.ನಾಗೇಂದ್ರ, ಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರೊ.ಪಿ.ಸರೋಜಮ್ಮ ಹಾಗೂ ಪ್ರೊ.ಸಿ.ಕೆ.ರೇಣುಕಾರ್ಯ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು ಎಂದರು.

ಸಮಾರೋಪ ಸಮಾರಂಭ ಫೆ.9ರಂದು ಸಂಜೆ 3 ಗಂಟೆಗೆ ನಡೆಯಲಿದ್ದು, ನಟ ಮುಖ್ಯಮಂತ್ರಿ ಚಂದ್ರು ಸಮಾರೋಪ ಭಾಷಣವನ್ನು ಮಾಡಲಿದ್ದಾರೆ. ಮುಖ್ಯ ಅಥಿತಿಯಾಗಿ ಸಂಸದ ಪ್ರಜ್ವಲ್ ರೇವಣ್ಣ ಭಾಗವಹಿಸುವರು ಎಂದು ತಿಳಿಸಿದರು. ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ರವಿಶಂಕರ್, ಬಿ.ಆರ್. ಕಯಕುಮಾರ್, ವೆಂಕಟರಾಮು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

■ **ರಾಷ್ಟ್ರ ಮಟ್ಟದ ಅಂತರ ಕಾಲೇಜು ಉತ್ಸವ 'ಮೆಹಮ್-2020'**

ಬೆಳಿಗ್ಗೆ 9.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ-ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಅತಿಥಿಗಳು-ಶಾಸಕ ಎಲ್.ನಾಗೇಂದ್ರ, ಅತಿಥಿಗಳು-ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ, ಅಧ್ಯಕ್ಷತೆ-ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮರಳೀಧರ್ ಭಾಗವತ್, ಸ್ಥಳ-ವಿವೇಕಾನಂದ ಸಭಾಂಗಣ, ಕಾಲೇಜಿನ ಆವರಣ, ಜಯಲಕ್ಷ್ಮಿಪುರಂ.

ಆಂದೋಲನ
ದಿನ ಪತ್ರಿಕೆ

ಶನಿವಾರ, ಫೆಬ್ರವರಿ ೮, ೨೦೨೦

ರಾಷ್ಟ್ರ ಮಟ್ಟದ ಅಂತರ ಕಾಲೇಜು ಹಬ್ಬ 'ಮಹಮ್' ಕಾರ್ಯಕ್ರಮದಲ್ಲಿ ಅಭಿಮತ

ನಮ್ಮ ಪ್ರತಿಭೆಗೆ ನಾವೇ ರೂವಾರಿಗಳು: ಕೃಷ್ಣೇಗೌಡ

ಮೈಸೂರು: ಪ್ರತಿಭೆ ಎಂಬುದು ನಮ್ಮೊಳಗೆ ಕಲ್ಲಿನಂತೆ ಅಡಗಿರುತ್ತದೆ. ಆದರ ಕೆತ್ತನೆ ಮಾಡಿದರೆ ಪರಿಪೂರ್ಣ ಶಿಲೆಯಾಗುತ್ತದೆ. ಹಾಗಾಗಿ. ಆ ಕೆತ್ತನೆಯ ಕೆಲಸವನ್ನು ನಾವೇ ಮಾಡಬೇಕು ಎಂದು ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಹಬ್ಬ 'ಮಹಮ್' ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮಾಹಿತಿಯೇ ಜ್ಞಾನ ಎಂದುಕೊಳ್ಳಬಾರದು. ಜ್ಞಾನವಂತ ನಾಗಲು ಬೇಕಾದ ಮಾಹಿತಿಯನ್ನು ಹೇಗೆ, ಎಷ್ಟು ಬಳಸಿಕೊಳ್ಳಬೇಕು ಎಂಬುದು ಜ್ಞಾನ ಮತ್ತು ಬುದ್ಧಿವಂತಿಕೆ ಎಂದ ಅವರು, ಸುತ್ತ ಪ್ರತಿಭೆಗಳ ಅನಾವರಣಕ್ಕೆ ಸೂಕ್ತ ವೇದಿಕೆಗಳನ್ನು ಬಳಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಆಡಳಿತಾಧಿಕಾರಿ ಸರೋಜಮ್ಮ, ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ, ಸಂಸ್ಥೆಯ ಸಿಇಒ ರಮೇಶ್, ಪ್ರಾಧ್ಯಾಪಕರಿತ್ಮೇಗೌಡಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಶುಕ್ರವಾರದಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಹಬ್ಬ 'ಮಹಮ್' ಕಾರ್ಯಕ್ರಮಕ್ಕೆ ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಚಾಲನೆ ನೀಡಿದರು.



ಹಬ್ಬದಲ್ಲಿ ಹಲವು ರಾಜ್ಯಗಳು ಭಾಗಿ

ಮೂರು ದಿನಗಳ 'ಮಹಾ' ಹಬ್ಬಕ್ಕೆ ಹೊರ ರಾಜ್ಯಗಳಾದ ಕೇರಳ, ಪುಣೆ, ಚೆನ್ನೈ ತಂಡಗಳು, ರಾಜ್ಯದ ವಿಜಯಪುರ, ಮಂಗಳೂರು, ಹಾಸನ, ಮಂಡ್ಯ ಹಾಗೂ ಬೆಂಗಳೂರು ಸೇರಿದಂತೆ 150 ತಂಡಗಳು ಭಾಗವಹಿಸಿದ್ದವು.

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 7 ಫೆಬ್ರವರಿ 2020
7 FEBRUARY 2020



■ **ಅಂತರ ಕಾಲೇಜು ಉತ್ಸವ:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ಅತಿಥಿಗಳು: ಪ್ರೊ.ಎಂ. ಕೃಷ್ಣೇಗೌಡ, ಎಲ್. ನಾಗೇಂದ್ರ. ಸ್ಥಳ: ಕಾಲೇಜಿನ ವಿವೇಕಾನಂದ ಸಭಾಂಗಣ, ಜಯಲಕ್ಷ್ಮೀಪುರಂ, ಬೆ.9.30

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಸೋಮವಾರ, ಫೆಬ್ರವರಿ ೧೦, ೨೦೨೦

ನಾಡು, ನುಡಿ ಗೌರವಿಸಿ: ಮುಖ್ಯಮಂತ್ರಿ ಚಂದ್ರು

ಮೆಹಮ್ ರಾಷ್ಟ್ರಮಟ್ಟದ ಅಂತರ ಕಾಲೇಜು ಉತ್ಸವದ ಸಮಾರೋಪ ಸಮಾರಂಭ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ 'ಮೆಹಮ್' ರಾಷ್ಟ್ರಮಟ್ಟದ ಅಂತರ ಕಾಲೇಜು ಉತ್ಸವದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಚಂದ್ರು ಮಾತನಾಡಿದರು.

ಮೈಸೂರು: ನಾವು ಬದುಕುತ್ತಿರುವ ನೆಲದ ಭಾಷೆ, ಜಲ, ಸಂಸ್ಕೃತಿಯನ್ನು ಉಳಿಸುವ ಮತ್ತು ಬೆಳೆಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಬೇಕು ಎಂದು ಚಲನಚಿತ್ರ ನಟ ಮುಖ್ಯಮಂತ್ರಿ ಚಂದ್ರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ 'ಮೆಹಮ್' ರಾಷ್ಟ್ರಮಟ್ಟದ ಅಂತರ ಕಾಲೇಜು ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಾಷೆ, ಸಂಸ್ಕೃತಿ, ಆಹಾರ ಹೀಗೆ ವಿಭಿನ್ನತೆಯಲ್ಲಿ ಏಕತೆಯನ್ನು ಹೊಂದಿರುವ ವಿಶ್ವದ ಏಕೈಕ ದೇಶ ಎಂದರೆ ಭಾರತ ಎಂದು ಬಣ್ಣಿಸಿದರು.

ಸಾಹಿತಿ ರಾ.ನಂ.ಚಂದ್ರಶೇಖರ್ ಮಾತನಾಡಿ, ಯಾವುದೇ ಬದಲಾವಣೆಗಳು ಸಾಧ್ಯವಾಗುವುದು ವಿದ್ಯಾರ್ಥಿಗಳಿಂದ ಮಾತ್ರ ಸಾಧ್ಯ. ತಮ್ಮ ಬದುಕಿನ ಜತೆಗೆ ನಾಡಿನ ಸಂಸ್ಕೃತಿಯನ್ನು ಕಟ್ಟಿಕೊಡುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲೆ ಇದೆ. ಪ್ರಾಮಾಣಿಕತೆಯಿಂದ ಶ್ರಮವಹಿಸಿ ದುಡಿದಾಗ ಮಾತ್ರ ಯಶಸ್ಸು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಜಯ ಸಾಧಿಸಿದ ಕಾಲೇಜಿನ ತಂಡ ಮತ್ತು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಧ್ಯಾಪಕ ಡಾ.ಎಚ್.ಆರ್.ತಿಮ್ಮೇಗೌಡ, ಡಾ.ಶ್ರೀಧರ್, ವಿದ್ಯಾರ್ಥಿ ಸಂಚಾಲಕ ರವಿಶಂಕರ್ ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 7.2.2020

ಇಂದಿನಿಂದ ಮಹಮ್ 2020 ಅಂತರ ಕಾಲೇಜು ಉತ್ಸವ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿ ಯಿಂದ ಮಹಮ್ 2020- ರಾಷ್ಟ್ರ ಮಟ್ಟದ ಅಂತರ ಕಾಲೇಜು ಉತ್ಸವವನ್ನು ಫೆ.7 ರಿಂದ 9 ರವರೆಗೆ ವಿವೇಕಾನಂದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಉತ್ಸವ ಅಧ್ಯಾಪಕ ಸಂಯೋಜಕ ಡಾ.ಎಚ್.ಆರ್. ತಿಮ್ಮೇ ಗೌಡ ತಿಳಿಸಿದರು.



ಈ ಉತ್ಸವನ್ನು ಫೆ.7ರ ಬೆಳಗ್ಗೆ 9.30ಕ್ಕೆ ಸಂಸ್ಕೃತಿ ಚಿಂ ತಕ, ವಾಗ್ಮಿ ಪ್ರೊ.ಎಂ. ಕೃಷ್ಣೇ ಗೌಡ ಉದ್ಘಾಟಿಸು ವರು. ಶಾಸಕ ಎಲ್. ನಾಗೇಂದ್ರ ಅತಿಥಿಯಾಗುವರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸುವರು ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಫೆ.9ರ ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಚಲನಚಿತ್ರ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಸಮರೋಪ ಭಾಷಣ ಮಾಡುವರು. ಸಂಸದ ಪ್ರಜ್ವಲ್ ರೇವಣ್ಣ ಅತಿಥಿಯಾಗುವರು ಎಂದರು.

ವಿದ್ಯಾರ್ಥಿ ಸಂಯೋಜಕ ಎಸ್. ರವಿಶಂಕರ್ ಮಾತನಾಡಿ, ಈ ಉತ್ಸವದಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡೆಯ 22 ಕಾರ್ಯಕ್ರಮ ಆಯೋಜಿಸಲಾಗಿದ್ದು, ಕರ್ನಾಟಕ, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಮುಂಬೈ, ತಮಿಳುನಾಡಿನಿಂದ ವಿದ್ಯಾರ್ಥಿಗಳು ಆಗಮಿಸಲಿದ್ದಾರೆ ಎಂದು ಹೇಳಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರುಳೀಧರ್, ಕಾಲೇಜಿನ ಪ್ರಾಂಶು ಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ರವಿ ಅಯ್ಯರ್ ಇದ್ದರು.

ಸಾಂಸ್ಕೃತಿಕ ಕಾರ್ಯಕ್ರಮ

ಮೂರು ದಿನಗಳ ಉತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಜೆ 7.30ಕ್ಕೆ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ನಡೆಯಲಿವೆ. ಫೆ.7 ರಂದು ಕನ್ನಡ ರಿಯಾಲಿಟಿ ಶೋ ಕನ್ನಡ ಕೋಗಿಲೆಯಲ್ಲಿ ಭಾಗವಹಿಸಿದ್ದ ರಕ್ಷಿತ್ ಪಾಣತ್ತಲೆ ಅವರಿಂದ ಮೈಸೂರು ಎಕ್ಸ್‌ಪ್ರೆಸ್ ಬ್ಯಾಂಡ್, ಫೆ.8 ರಂದು ಹಿನ್ನೆಲೆ ಗಾಯಕ ಸಂಜಿತ್ ಹೆಗ್ಡೆ ಹಾಗೂ ಫೆ. 9 ರಂದು ಖ್ಯಾತ ಭಾರತೀಯ ಡಿಜೆಗಳಾದ ಮುಂಬೈನ ಡಿಜೆ ಶಾನ್ ಮತ್ತು ಡಿಜೆ ಪ್ರೀತಿ ಚೌಹಾಣ್ ಕಾರ್ಯಕ್ರಮ ನೀಡಲಿದ್ದಾರೆ ಎಂದು ಅವರು ವಿವರಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 8.2.2020

ಉತ್ತಮವಾಗಿ ಮಾತನಾಡುವ ಕಲೆ ರೂಪಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಸಂಸ್ಕೃತಿ ಚಿಂತಕ ಪ್ರೊ.ಎಂ. ಕೃಷ್ಣೇಗೌಡ ಸಲಹೆ | ಮಹಮ್-2020 ರಾಷ್ಟ್ರೀಯ ಕಾಲೇಜು ಉತ್ಸವ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಮೈಸೂರು

ಭವಿಷ್ಯ ರೂಪಿಸಿಕೊಳ್ಳಲು ಮಾತನಾಡುವ ಕಲೆ ರೂಪಿಸಿಕೊಳ್ಳಿ ಎಂದು ಸಂಸ್ಕೃತಿ ಚಿಂತಕ, ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ಶುಕ್ರವಾರ ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಿರುವ 3 ದಿನಗಳ ಮಹಮ್- 2020 ರಾಷ್ಟ್ರೀಯ ಕಾಲೇಜು ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಪಂಚದಲ್ಲಿ ಮನುಷ್ಯನ ಸೃಷ್ಟಿ ವಿಕಾಸ ಮತ್ತು ಉಗಮ ಒಂದು ಅದ್ಭುತ ಪ್ರಕ್ರಿಯೆ. ಪ್ರಕೃತಿಯಿಂದ ಮನುಷ್ಯ ಬಹಳಷ್ಟು ಪಾಠಗಳನ್ನು ಕಲಿಯುತ್ತಾನೆ. ಮನುಷ್ಯನಿಗೆ ಮಾತು ಬಹಳ ದೊಡ್ಡ ವಿಸ್ಮಯ. ಮಾತಿನಿಂದ ಅವನಸಂಸ್ಕೃತಿ ತಿಳಿಯುತ್ತದೆ. ಅವನು ತನ್ನ ಕಂಠವನ್ನು ಹೇಗೆ ಬಳಸುತ್ತಾನೆ ಎಂಬುದು ಮುಖ್ಯವಾಗುತ್ತದೆ ಎಂದರು.



ಮೈಸೂರಿನ ಮಹಾಜನ ಕಾಲೇಜು ವಿವೇಕಾನಂದ ಸಭಾಂಗಣದಲ್ಲಿ ಶುಕ್ರವಾರ ನಡೆದ ಮಹಮ್- 2020 ರಾಷ್ಟ್ರೀಯ ಕಾಲೇಜು ಉತ್ಸವವನ್ನು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಉದ್ಘಾಟಿಸಿದರು. ಟಿ. ಮುರಳೀಧರ್ ಭಾಗವತ್, ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರೊ.ಪಿ. ಸರೋಜಮ್ಮ, ಪ್ರೊ.ಸಿ.ಕೆ. ರೇಣುಕಾರ್ಯ ಇತರರು ಇದ್ದರು.

ಇಷ್ಟವಾಗುವಂತೆ ಮಾತನಾಡಿ: ನಮ್ಮ ಮಾತು ಇನ್ನೊಬ್ಬರಿಗೆ ಆಸಕ್ತಿ ಮತ್ತು ಇಷ್ಟವಾಗಬೇಕು. ಹೇಗೆ, ಎಲ್ಲಿ, ಯಾವ ರೀತಿ ನಾವು ಮಾತ ನಾಡಬೇಕು ಎಂಬುದನ್ನು ಮೊದಲು ಕಲಿಯಬೇಕು. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕಲಿತ ಪಾಠ ನಿಮ್ಮ ನೆನಪಿನಲ್ಲಿ ಬಹಳ ಕಾಲ ಉಳಿಯುವುದಿಲ್ಲ, ಆದರೆ, ಕೌಶಲ್ಯ ಜ್ಞಾನ ಎಂದಿಗೂ ನೀವು ಮರೆಯುವುದಿಲ್ಲ ಎಂದು ಅವರು ತಿಳಿಸಿದರು.

ಮಾಹಿತಿ ಯುಗ: ಇಂದು ನಾವು ಮಾಹಿತಿ ಯುಗವನ್ನು ಕಾಣುತ್ತಿದ್ದೇವೆ. ಬಹಳಷ್ಟು ಮಾಹಿತಿ ನಿಮ್ಮ ಕೈಯಲ್ಲೇ ಇದೆ. ನಿಮಿಷ ನಿಮಿಷಕ್ಕೂ ನಾವು ಓದುಬಹುದು ಹಾಗೂ ಕಾಣಬಹುದಾಗಿದೆ. ಆದರೆ, ಆ ಮಾಹಿತಿಯನ್ನು ಹೇಗೆ ಉಪಯೋಗಿಸಬೇಕು ಎಂಬುದು ನಮಗೆ ಕಷ್ಟವಾಗುತ್ತಿದೆ. ಎಲ್ಲದಕ್ಕೂ ನಾವು ತಂತ್ರಜ್ಞಾನದ ಮೊರೆ ಹೋಗುತ್ತಿದ್ದೇವೆ. ಇದರಿಂದ ನಮ್ಮಲ್ಲಿ ಬರೆಯುವ ಕೌಶಲ್ಯ ಹಾಗೂ ಯೋಚನಾ ಶಕ್ತಿ ಕುಂಠಿತವಾಗುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಯಶಸ್ಸು ಸರಿಯಾದ ಮಾಹಿತಿ ಪಡೆದುಕೊಳ್ಳುವುದರ ಮೇಲೆ ಅವಲಂಬಿತವಾಗಿದೆ. ನಮ್ಮಲ್ಲಿ ವ್ಯಕ್ತಿತ್ವ ವಿಕಸನ ಆಗತ್ಯ. ಕಲೆ ಎಂಬುದು ಸಂಸ್ಕೃತಿಯ ಪ್ರತಿರೂಪ. ಕಲೆ ಪ್ರತಿಭೆಯ ಸಂಕೇತ. ಅನುಭವಗಳು ನಮಗೆ ಸೃಜನಶೀಲ ಶಕ್ತಿ, ಮಾನವೀಯ ಮೌಲ್ಯ ಮತ್ತು ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕೆಂದು ಕಲಿಸುತ್ತದೆ. ಇದರಿಂದ ನಾವು ನಮ್ಮ ಜೀವನದಲ್ಲಿ ಪ್ರಗತಿಯನ್ನು ಕಾಣಬಹುದು ಎಂದರು.

ಎಲ್ಲರಲ್ಲೂ ಪ್ರತಿಭೆ ಇದೆ: ಪ್ರತಿಭೆ ಎಲ್ಲರಲ್ಲೂ ಇದೆ, ಆದರೆ ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ದಾರಿಯ ಕೊರತೆ ಇದೆ. ಮನುಷ್ಯನ ಕುತೂಹಲ ಕೆರಳಿಸಿ, ತನ್ಮೂಲಕ ಉತ್ತರ ಪಡೆಯುವುದೇ ಶಿಕ್ಷಣ. ಮನುಷ್ಯ ತನ್ನ ಅರಿವನ್ನು ಹೆಚ್ಚಿಸಿ, ಬೌದ್ಧಿಕ ಡಿವಿಕಾಸವಾಗುವುದೇ ಶಿಕ್ಷಣ. ಅನುಭವದ ಕಲಿಕೆಗೆ ವಿದ್ಯಾರ್ಥಿಗಳು ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಇದರಿಂದ ಕೌಶಲ್ಯ ಅಭಿವೃದ್ಧಿಯಾಗುತ್ತದೆ. ಮತ್ತು ಬದುಕನ್ನು ಹೇಗೆ ರೂಪಿಸಿ ಕೊಳ್ಳಬೇಕು ಎಂಬುದನ್ನು ಕಲಿಸುತ್ತದೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಪೂಜಾ ಭಾಗವತ್ ಸ್ಕಾರಕಮಹಾಜನಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಕಾಲೇಜಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಬಿ.ಎಸ್.ಜಯಕುಮಾರಿ,ಮಹಮ್ ಸಂಯೋಜನಾಧಿಕಾರಿ ಡಾ.ಎಚ್.ಆರ್.ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕ ರವಿಶಂಕರ್ ಇದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 10.2.2020

ಮಾರ್ಗದರ್ಶನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅಭಿಮತ

ಇಂದಿನ ದಿನಗಳಲ್ಲಿ ಇಂಗ್ಲಿಷ್ ಬಳಕೆ ಅನಿವಾರ್ಯ

• ಕನ್ನಡಪ್ರಭ ವಾರ್ತೆ ಮೈಸೂರು

ವಿಭಿನ್ನ ಭಾಷೆ, ಸಂಸ್ಕೃತಿ ಮತ್ತು ಬುದಕನ್ನು ಹೊಂದಿದ್ದರೂ ಏಕತೆಯನ್ನು ಕಾಪಾಡಿಕೊಂಡಿರುವ ಭಾರತದಲ್ಲಿ ಇಂಗ್ಲಿಷ್ ಬಳಕೆ ಅನಿವಾರ್ಯವಾಗಿ ಬೇಕಿದೆ. ಆದರೆ ಅದನ್ನು ಅಡುಗೆ ಮನೆವರೆಗೂ ಕೊಂಡೊಯ್ಯಬೇಕಾದ ಅಗತ್ಯವಿಲ್ಲ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅಭಿಪ್ರಾಯಪಟ್ಟರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ನಡೆದ ರಾಷ್ಟ್ರ ಮಟ್ಟದ ಅಂತರ ಕಾಲೇಜು ಮಹಮ್ 2020ನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತವು ವಿಭಿನ್ನ ಸಂಸ್ಕೃತಿ, ಭಾಷೆ, ಬದುಕು ಏಕತೆ ಕಾಪಾಡಿಕೊಂಡು ಬಂದಿದೆ. ನಾನಾ ಭಾಷಿಕರು, ಸಂಸ್ಕೃತಿಗರು ಇಲ್ಲಿಗೆ ಬರುತ್ತಾರೆ. ಆದ್ದರಿಂದ ಅನಿವಾರ್ಯವಾಗಿ ಇಂಗ್ಲಿಷ್ ಬಳಕೆ ಬೇಕಿದೆ ಎಂದರು.



ಸಮಾರಂಭದಲ್ಲಿ ಮುಖ್ಯಮಂತ್ರಿ ಚಂದ್ರು, ಟಿ. ಮುರಳೀಧರ್ ಭಾಗವತ್ ಇತರರು ಇದ್ದರು.

ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಯಾವುದಾದರೂ ಭಾಷೆ ಇದೆಯಾ ಎಂದರೆ ಅದು ಇಂಗ್ಲಿಷ್ ಮಾತ್ರ. ಯಾವ ಭಾಷೆಯನ್ನು ದ್ವೇಷಿಸಬಾರದು. ಈ ಕಾರ್ಯಕ್ರಮದ ವೇದಿಕೆಯ ಮೇಲೆ ಇರುವ ಬಹಳ ಮಂದಿ ಡಾಕ್ಟರೇಟ್ ಪಡೆದಿದ್ದಾರೆ. ಕನ್ನಡದಲ್ಲಿ ಯೋಗ ಮತ್ತು ಯೋಗ್ಯತೆ ಎರಡು ಪದಗಳಿವೆ. ವೇದಿಕೆ ಮೇಲೆ ಕುಳಿತವರು ಯೋಗ್ಯತೆ ಮೇಲೆ ಕುಳಿತಿದ್ದಾರೆ. ಯೋಗದಲ್ಲಿ ನಿಂತು ನಾನು ಮಾತನಾಡುತ್ತಿದ್ದೇನೆ ಅಷ್ಟೆ. ವಿದ್ಯಾರ್ಥಿಗಳಾದ ನೀವು ಯೋಗ್ಯತೆಯ ಮೇಲೆ ಕುಳಿತುಕೊಳ್ಳುವಂತೆ ನೀವಾಗಬೇಕು. ಅನೇಕರು ಓದಿ, ಬರೆದು ಡಾಕ್ಟರೇಟ್ ಪಡೆದಿದ್ದಾರೆ. ನಾನು ಬಡ್ಡೊಂಡು (ಮಾತನಾಡಿ, ಮಾತನಾಡಿ) ಪಡೆದುಕೊಂಡಿದ್ದೇನೆ. ಅವರೂ ನನ್ನೊಂದಿಗೆ ಕುಳಿತಿದ್ದಾರೆ ಎಂದು ಅವರು ಹಾಸ್ಯ ಚಟಾಕಿ ಹಾರಿಸಿದರು.

ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ಹಿನ್ನೆಲೆಯಲ್ಲಿ ಇಂಗ್ಲಿಷ್ ಅನಿವಾರ್ಯ. ಹಾಗೆಂದು ಇಂಗ್ಲಿಷ್ ಅತಿ ಮುಖ್ಯವಲ್ಲ. ಮನೆಯ ಒಳಗೆ ಅಡುಗೆ ಮನೆ, ಬಚ್ಚಲು ಮನೆ, ದೇವರ ಮನೆ, ವರಾಂಡ ಇರುತ್ತದೆ. ಇವುಗಳಲ್ಲಿ ಇಂಗ್ಲಿಷ್ ಎಲ್ಲಿರಿಸಬೇಕು ಎಂಬುದನ್ನು ಯೋಚಿಸಬೇಕು. ರಾಜ್ಯ ಭಾಷೆಯಲ್ಲಿಯೇ ಮಾತನಾಡಿ ಎಂದು ಅವರು ಕಿವಿಮಾತು ಹೇಳಿದರು.

ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಸಾಹಿತಿ ರಾ.ನಂ. ಚಂದ್ರಶೇಖರ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಡಾ.ಎಚ್. ಶ್ರೀಧರ್ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 7 ಫೆಬ್ರವರಿ 2020

ಇಂದಿನಿಂದ 'ಮಹಾಜನ'ದಲ್ಲಿ ಅಂತರ ಕಾಲೇಜು ಸ್ಪರ್ಧೆ 'ಮಹಮ್'

ಮೈಸೂರು,ಫೆ.6(ಪಿಎಂ)– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಫೆ.7 ರಿಂದ 9ರವರೆಗೆ ಕಾಲೇಜಿನ ಆವರಣದಲ್ಲಿ ರಾಷ್ಟ್ರ ಮಟ್ಟದ ಅಂತರ ಕಾಲೇಜು 'ಮಹಮ್-2020' ಉತ್ಸವ ಏರ್ಪಡಿಸಲಾಗಿದೆ. ಈ ಬಗ್ಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಉತ್ಸವದ ಅಧ್ಯಾಪಕ ಸಂಯೋಜಕ ಡಾ.ಹೆಚ್.ಆರ್.ತಿಮ್ಮೇಗೌಡ, ಕಾಲೇಜಿನ ಇತಿಹಾಸದಲ್ಲೇ ಇಂಥ ಉತ್ಸವ ಇದೇ ಪ್ರಥಮ. 22 ಬಗೆಯ ಸ್ಪರ್ಧೆಗಳು ನಡೆಯಲಿವೆ. ಫೆ.7ರ ಬೆಳಿಗ್ಗೆ 9.30ಕ್ಕೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಉತ್ಸವಕ್ಕೆ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಚಾಲನೆ ನೀಡಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅತಿಥಿಯಾಗಿದ್ದರೆ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 7ಕ್ಕೆ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ರಿಯಾಲಿಟಿ ಶೋದಲ್ಲಿ 'ಕನ್ನಡ ಕೋಗಿಲೆ' ಖ್ಯಾತಿಯ ರಕ್ಷಿತ್ ಪಾಣತ್ತಲೆ ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ. ನಂತರ 'ಮೈಸೂರು ಎಕ್ಸ್‌ಪ್ರೆಸ್ ಬ್ಯಾಂಡ್'ನಿಂದ ಬ್ಯಾಂಡ್ ಕಾರ್ಯಕ್ರಮ ನಡೆಯಲಿದೆ. ಫೆ.8ರ ಸಂಜೆ 7ಕ್ಕೆ ಕನ್ನಡ ಚಲನಚಿತ್ರದ ಹಿನ್ನೆಲೆ ಗಾಯಕ ಸಂಜಿತ್ ಹೆಗ್ಡೆ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದರು.



ರಸಪ್ರಶ್ನೆ, ಚರ್ಚಾಸ್ಪರ್ಧೆ, ಅಪರಾಧ ಪತ್ತೆ ಹಚ್ಚುವಿಕೆ, ಅತ್ಯುತ್ತಮ ವ್ಯವಸ್ಥಾಪಕ, ಮಾನವ ಸಂಪನ್ಮೂಲ, ಮಾರ್ಕೆಟಿಂಗ್, ಹಣಕಾಸು ಹಾಗೂ ಉದ್ಯಮ ಪರಿಣತಿ ವಿಭಾಗ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿವೆ. ಕೇರಳ, ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳ 50ಕ್ಕೂ ಹೆಚ್ಚು ಕಾಲೇಜುಗಳು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ಹಲವು ಕಾಲೇಜುಗಳು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿವೆ. ವಿಜೇತ ವಿದ್ಯಾರ್ಥಿ ಹಾಗೂ ತಂಡಗಳಿಗೆ ಪಾರಿತೋಷಕ, ಪ್ರಮಾಣಪತ್ರ ನಗದು ಬಹುಮಾನ ನೀಡಲಾಗುವುದು ಎಂದರು.

ಫೆ.9ರ ಮಧ್ಯಾಹ್ನ 3ಕ್ಕೆ ವಿವೇಕಾನಂದ ಸಭಾಂಗಣದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಹಿರಿಯ ನಟ 'ಮುಖ್ಯಮಂತ್ರಿ' ಚಂದ್ರು ಸಮಾರೋಪ ಭಾಷಣ ಮಾಡಲಿದ್ದಾರೆ. ಸಂಸದ ಪ್ರಜ್ವಲ್ ರೇವಣ್ಣ ಅತಿಥಿಯಾಗಿರುವರು. ಸಂಜೆ 7ಕ್ಕೆ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಮುಂಬೈನ ಡಿಜೆ ಶಾನ್ ಹಾಗೂ ಡಿಜೆ ಪ್ರಾಚ್ ಎಂದೇ ಖ್ಯಾತರಾಗಿರುವ ಪ್ರೀತಿ ಚೌಹಾಣ್ ಪಾಪ್ ಹಾಗೂ ಸಂಗೀತ ರಸ ಸಂಜೆ ಕಾರ್ಯಕ್ರಮವಿದೆ ಎಂದು ಪ್ರಾಂಶುಪಾಲ ಎಸ್.ವೆಂಕಟರಾಮು ತಿಳಿಸಿದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರುಳೀಧರ್, ಉಪ ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ರವಿ ಅಯ್ಯರ್ ಗೋಷ್ಠಿಯಲ್ಲಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 8 ಫೆಬ್ರವರಿ 2020

ರಾಷ್ಟ್ರೀಯ ಕಾಲೇಜು ಉತ್ಸವ 'ಮಹಮ್-2020' ಚಾಲನೆ



ಮೈಸೂರು, ಫೆ.7–ಮೈಸೂರಿನ ಪ್ರತಿಷ್ಠಿತ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಕಾಲೇಜು ಉತ್ಸವ 'ಮಹಮ್-2020' ಉದ್ಘಾಟನೆಯನ್ನು ಮೈಸೂರಿನ ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಮಹಾಜನ ವಿದ್ಯಾಸಂಸ್ಥೆ ಇಡೀ ಮೈಸೂರಿನಲ್ಲೇ ತುಂಬಾ ಹಳೆಯದಾದ ಪ್ರತಿಷ್ಠಿತ ಸಂಸ್ಥೆ. ಈ ಸಮಾರಂಭಕ್ಕೆ ಆಗಮಿಸಿರುವುದು ನನಗೆ ಹೆಮ್ಮೆಯಾಗುತ್ತದೆ. ಪ್ರಪಂಚದಲ್ಲಿ ಮನುಷ್ಯನ ಸೃಷ್ಠಿ ವಿಕಾಸ ಮತ್ತು ಉಗಮ ಒಂದು ಅದ್ಭುತ. ಪ್ರಕೃತಿಯಿಂದ ಮನುಷ್ಯ ಬಹಳಷ್ಟು ಪಾಠಗಳನ್ನು ಕಲಿಯುತ್ತಾನೆ. ಮನುಷ್ಯನಿಗೆ ಮಾತು ಬಹಳ ದೊಡ್ಡ ವಿಸ್ಮಯ. ಮಾತಿನಿಂದ ಅವನ ಸಂಸ್ಕೃತಿ ತಿಳಿಯುತ್ತದೆ. ಅವನು ತನ್ನ ಕಂಠವನ್ನು ಹೇಗೆ ಬಳಸುತ್ತಾನೆ ಎಂಬುದು ಮುಖ್ಯವಾಗುತ್ತದೆ, ನಮ್ಮ ಮಾತು ಇನ್ನೊಬ್ಬರಿಗೆ ಆಸಕ್ತಿ ಮತ್ತು ಇಷ್ಟವಾಗಬೇಕು. ಹೇಗೆ, ಎಲ್ಲಿ, ಯಾವ ರೀತಿ ನಾವು ಮಾತನಾಡಬೇಕು ಎಂಬುದನ್ನು ಮೊದಲು ಕಲಿಯಬೇಕು ಎಂದರು.

> **"ಇಂದು ನಾವು ಮಾಹಿತಿ ಯುಗವನ್ನು ಕಾಣುತ್ತಿದ್ದೇವೆ. ಬಹಳಷ್ಟು ಮಾಹಿತಿ ನಿಮ್ಮ ಕೈಯಲ್ಲೇ ಇದೆ. ನಿಮಿಷ ನಿಮಿಷಕ್ಕೂ ನಾವು ಓದಬಹುದಾಗಿದೆ ಹಾಗೂ ಕಾಣಬಹುದಾಗಿದೆ. ಆದರೆ ಆ ಮಾಹಿತಿಯನ್ನು ಹೇಗೆ ಉಪಯೋಗಿಸಬೇಕು ಎಂಬುದು ನಮಗೆ ಕಷ್ಟವಾಗುತ್ತಿದೆ. ಎಲ್ಲದಕ್ಕೂ ನಾವು ತಂತ್ರಜ್ಞಾನದ ಮೊರೆ ಹೋಗುತ್ತಿದ್ದೇವೆ. ಇದರಿಂದ ನಮ್ಮಲ್ಲಿ ಬರೆಯುವ ಕೌಶಲ್ಯ ಹಾಗೂ ಯೋಚನಾ ಶಕ್ತಿ ಕುಂಠಿತವಾಗುತ್ತಿದೆ.** –ಪ್ರೊ. ಕೃಷ್ಣೇಗೌಡ

ಅಧ್ಯಕ್ಷತೆ ವಹಿಸಿದ್ದ ಭಾಷಣದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಟಿ. ಮುರಳೀಧರ್ ಭಾಗವತ್ ಮಾತನಾಡುತ್ತಾ, ಇಂದಿನ ಜಾಗತಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಮಾನಸಿಕ ಮತ್ತು ಆತ್ಮಸ್ಥೈರ್ಯ ಮುಖ್ಯ. ಕೀಳರಿಮೆಯನ್ನು ಬಿಟ್ಟು, ಸೇವಾ ಮನೋಭಾವದಿಂದ ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡುವಂತೆ ಸಲಹೆ ನೀಡಿದರು.

ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿದರು. ವೇದಿಕೆಯಲ್ಲಿ ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ.ರೇಣುಕಾರ್ಯ, ಕಾಲೇಜಿನ ಮುಖ್ಯಕಾರ್ಯ ನಿರ್ವಹಣಾ ಅಧಿಕಾರಿ ಡಾ. ಎಸ್.ಆರ್.ರಮೇಶ್, ಕಾಲೇಜಿನ ಪ್ರಾಚಾರ್ಯ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಬಿ.ಎಸ್.ಜಯಕುಮಾರಿ, ಮಹಮ್-2020 ಸಂಯೋಜನಾಧಿಕಾರಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಮಹಮ್-2020ನ ವಿದ್ಯಾರ್ಥಿ ಸಂಯೋಜಕರಾದ ರವಿಶಂಕರ್ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಭಾರತಿ ಹಾಗೂ ಬಿಂಬ ಪ್ರಾರ್ಥಿಸಿದರು. ಪ್ರಾಚಾರ್ಯ ಡಾ.ಎಸ್. ವೆಂಕಟರಾಮು ಸ್ವಾಗತಿಸಿದರೆ, ಡಾ.ಎಚ್.ಆರ್.ತಿಮ್ಮೇಗೌಡ ವಂದಿಸಿದರು. ರವಿಶಂಕರ್ ಮಹಮ್-2020 ಕಾರ್ಯಕ್ರಮ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ದೇಶದ ಹಾಗೂ ರಾಜ್ಯದ ವಿವಿಧ ಕಾಲೇಜುಗಳಿಂದ ಆಗಮಿಸಿದ ವಿದ್ಯಾರ್ಥಿಗಳು, ಕಾಲೇಜಿನ ಬೋಧಕ ಹಾಗೂ ಬೋಧಕೇತರ ವೃಂದದವರು, ಇತರೆ ಗಣ್ಯರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 10 ಫೆಬ್ರವರಿ 2020

ಆಂಗ್ಲ ಅನಿವಾರ್ಯವೇ ಇದ್ದರೂ ಮನೆಯಲ್ಲಿ ಮಾತೃಭಾಷೆ ಮಾತನಾಡಿ

ಮಹಾಜನ ಕಾಲೇಜು 'ಮಹಮ್' ಸಮಾರೋಪದಲ್ಲಿ ನಟ 'ಮುಖ್ಯಮಂತ್ರಿ' ಚಂದ್ರು 'ಪಾಠ'

ಮೈಸೂರು,ಫೆ.9(ವೈಡಿಎಸ್)–ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ಹಿನ್ನೆಲೆಯಲ್ಲಿ ನಮಗೆ ಇಷ್ಟವಿರಲಿ, ಇಲ್ಲದಿರಲಿ ಆಂಗ್ಲಭಾಷೆ ಅನಿವಾರ್ಯವಾಗಿದೆ. ಹಾಗೆಂದು ಆ ಭಾಷೆಯನ್ನು ಅಡುಗೆ ಮನೆವರೆಗೂ ಕೊಂಡೊಯ್ಯುವುದಾಗಲಿ ಮನೆಯಲ್ಲಿ ಮಾತೃಭಾಷೆಯಲ್ಲೇ ಮಾತನಾಡಿ ಎಂದು ನಟ ಮುಖ್ಯಮಂತ್ರಿ ಚಂದ್ರು ಕಿವಿಮಾತು ಹೇಳಿದರು.

ಜಯಲಕ್ಷ್ಮಿಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ರಾಷ್ಟ್ರಮಟ್ಟದ ಅಂತರ ಕಾಲೇಜು ಉತ್ಸವ 'ಮಹಮ್ 2020'ರ ಸಮಾರೋಪದಲ್ಲಿ ಭಾನುವಾರ ಮಾತನಾಡಿದ ಅವರು, ಆಂಗ್ಲಭಾಷೆ ಅನಿವಾರ್ಯ ಎಂದರೆ ಅದೇ ಮುಖ್ಯವಲ್ಲ. ಮನೆಯೊಳಗೆ ಅಡುಗೆ ಮನೆ, ಬಚ್ಚಲುಮನೆ, ದೇವರ ಮನೆ, ವರಾಂಡ, ಕಾಂಪೌಂಡ್ ಇವೆ ಇಂಗ್ಲಿಷ್ ಎಲ್ಲಿಡಬೇಕು ಎಂಬುದನ್ನು ಯೋಚಿಸಬೇಕು ಎಂದು ಸಲಹೆ ನೀಡಿದರು.

ಭಾರತ ವಿಭಿನ್ನ ಸಂಸ್ಕೃತಿ, ಭಾಷೆ, ಬದುಕಿನ ಜತೆಗೂ ಏಕತೆ ಕಾಪಾಡಿಕೊಂಡು ಬಂದಿದೆ. ನಾನಾ ಭಾಷಿಕರು, ಸಂಸ್ಕೃತಿಯವರು ಇಲ್ಲಿ ಬರುತ್ತಾರೆ. ಹಾಗಾಗಿ ಇಂಗ್ಲಿಷ್ ಬಳಕೆ ಅನಿವಾರ್ಯ. ಭಾಷೆಗಳಲ್ಲಿ ಶ್ರೇಷ್ಠ, ಕನಿಷ್ಠ ಎಂಬುದಿಲ್ಲ. ಯಾವ ಭಾಷೆಯನ್ನೂ ದ್ವೇಷಿಸಬಾರದು ಎಂದು 'ಪಾಠ' ಮಾಡಿದರು.

ಇಂಗ್ಲಿಷ್ ಬಂದವರು ಶ್ರೇಷ್ಠರಲ್ಲ. ಇಂಗ್ಲಿಷ್ ಶುದ್ಧವಾಗಿ, ವ್ಯಾಕರಣಬದ್ಧವಾಗಿ, ಸರಳವಾಗಿ, ಸುಲಭವಾಗಿ ಮಾತನಾಡುವ ಸಾಮರ್ಥ್ಯ ಬೆಳೆಸಿಕೊಳ್ಳಿ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ರಾಷ್ಟ್ರಮಟ್ಟದ ಅಂತರ ಕಾಲೇಜು ಉತ್ಸವ–ಮಹಮ್ 2020'ರ ಸಮಾರೋಪದಲ್ಲಿ ನಟ ಮುಖ್ಯಮಂತ್ರಿ ಚಂದ್ರು ಮತ್ತಿತರರು ಚಿತ್ರದಲ್ಲಿದ್ದಾರೆ.

ಜ್ಞಾನಾರ್ಜನೆಗೆ ಆಯಾ ರಾಜ್ಯದ ಭಾಷೆಯಲ್ಲೇ ಮಾತನಾಡಬೇಕು. ಆ ಮೂಲಕ ನಾವಿರುವ ನೆಲದ ಭಾಷೆ, ಸಂಸ್ಕೃತಿಯನ್ನು ಕಲಿತು ಅನುಸರಿಸಬೇಕು ಎಂದು ಕಿವಿಮಾತು ಹೇಳಿದರು.

ಡಾಕ್ಟರೇಟ್ ಪಡೆದೆ: ವೇದಿಕೆ ಮೇಲೆ ಡಾಕ್ಟರೇಟ್ ಪಡೆದವರಿದ್ದಾರೆ. ಆದರೆ, ಇಲ್ಲಿ 'ಯೋಗ'–'ಯೋಗ್ಯತೆ' ಎಂಬ 2 ಪದಗಳಿವೆ. ವೇದಿಕೆ ಮೇಲಿರುವ ಇವರೆಲ್ಲಾ 'ಯೋಗ್ಯತೆ' ಮೇಲೆ ಕುಳಿತಿದ್ದಾರೆ, ನಾನು 'ಯೋಗ'ದ ದೆಸೆಯಿಂದ ಇಲ್ಲಿ ನಿಂತಿದ್ದೇನೆ ಇವರೆಲ್ಲಾ ಓದಿ, ಬರೆದು ಡಾಕ್ಟರೇಟ್ ಪಡೆದಿದ್ದಾರೆ ನಾನು ಮಾತನಾಡಿ ಮಾತನಾಡಿ ಡಾಕ್ಟರೇಟ್ ಪಡೆದಿದ್ದೇನೆ ಎಂದು ಚುಟುಕು ಹಾರಿಸಿದರು.

ಟಿಪಣಿ ಕೇಳಿದ್ದರು: ನಮ್ಮ ಮನೆ ಕಾಂಪೌಂಡ್‌ಗೆ 'ಡಾ'ಮುಖ್ಯಮಂತ್ರಿ ಚಂದ್ರು ಎಂಬ ಬೋರ್ಡ್ ಹಾಕಿಸಿದ್ದರಿಂದ ಯಡವಟ್ಟಾಯಿತು. ಕೆಲವರು 'ಡಾಕ್ಟರ್' ಎಂದುಕೊಂಡು 'ಹೊಟ್ಟೆ ನೋಯುತ್ತಿದೆ ಔಷಧ ಕೊಡಿ' ಎಂದು ಬಂದಿದ್ದರು. ನನಗೀಗ 67 ವರ್ಷ. ಈವರೆಗೆ ನೂರಾರು ಸಿನಿಮಾ, ಟಿವಿ ಸೀರಿಯಲ್‌ನಲ್ಲಿ ನಟಿಸಿದ್ದೇನೆ. ನಾಟಕಗಳನ್ನೂ ಮಾಡುತ್ತಿದ್ದೇನೆ. ಜತೆಗೆ ಸಂಸಾರವನ್ನೂ ಸಂಬಾಳಿಸಿಕೊಂಡು ಬಂದಿದ್ದೇನೆ. ಇದಕ್ಕೆ ದಿಟ್ಟತನ, ಛಲಬಿಡದ ಧೈರ್ಯ ಬೇಕು. ಸಾಧಿಸುವ ಛಲಬೇಕು ಎಂದರು.

ಪಾಠ ಪ್ರವಚನವೇ ಮುಖ್ಯವಲ್ಲ. ರಂಗಭೂಮಿ, ಸಿನಿಮಾ, ಸಂಗೀತ, ನಾಟಕವನ್ನು ಪ್ರವೃತ್ತಿಯಾಗಿಸಿಕೊಳ್ಳಿ ರಂಗಭೂಮಿಯಲ್ಲಿ ಲಿಂಗ ಭೇದ, ಜಾತಿ ಭೇದ ವಿಲ್ಲ. ಎಲ್ಲರೂ ಒಟ್ಟಾಗಿರುತ್ತೇವೆ. ಈ ಕಾಲೇಜಿಗೆ ಬೇರೆ ರಾಜ್ಯಗಳ ವಿದ್ಯಾರ್ಥಿಗಳು ಬಂದಿದ್ದು, ಎಲ್ಲಾದರೂ ಹೇಗಾದರೂ ಇರಿ. ಆದರೆ, ಎಲ್ಲಿ ಭವಿಷ್ಯ ರೂಪಿಸಿಕೊಳ್ಳುತ್ತೀರೋ ಆ ರಾಜ್ಯದ ಗೌರವ ಕಾಪಾಡುವುದು ನಿಮ್ಮ ಕರ್ತವ್ಯ ಅಲ್ಲಿನ ಸಂಪ್ರದಾಯ, ಸಂಸ್ಕೃತಿ, ಪದ್ಧತಿ, ಭಾಷೆಗೆ ಅದ್ಯತೆ ನೀಡಬೇಕು. ಶಿಕ್ಷಕರೂ ಕನ್ನಡ ಕಲಿಸಬೇಕು. ಎಲ್ಲಾದರೂ ಎಂತಾದರೂ ಇರಿ ಎಂದೆಂದಿಗೂ ಕನ್ನಡಿಗರಾಗಿರಿ, ಆರೋಗ್ಯವಾಗಿರಿ ಎಂದು ಹಾರೈಸಿದರು. ಬಳಿಕ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಾಹಿತಿ ರಾ.ನಂ.ಚಂದ್ರಶೇಖರ್, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ ಭಾಗವತ, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರುಳೀಧರ, ಪ್ರಾಧ್ಯಾಪಕ ಹೆಚ್.ಆರ್.ತಿಮ್ಮೇಗೌಡ, ಶ್ರೀಧರ್, ವಿದ್ಯಾರ್ಥಿ ಸಂಚಾಲಕ ರವಿಶಂಕರ್ ಮತ್ತಿತರರಿದ್ದರು.

> ವಿದ್ಯಾವಂತ ಬೇರೆ, ಬುದ್ಧಿವಂತ ಬೇರೆ. ರ‍್ಯಾಂಕ್ ಪಡೆದವರೆಲ್ಲ ಬುದ್ಧಿವಂತರಲ್ಲ. ಆದರೆ, ಅನಕ್ಷರಸ್ಥರು ಕೂಡ ವಿದ್ಯಾವಂತರಿಗಿಂತ ಬುದ್ಧಿವಂತರಾಗಿರುತ್ತಾರೆ. ರ‍್ಯಾಂಕ್ ನಿಮಿತ್ತ ಮಾತ್ರ. ಇಂದು ರ‍್ಯಾಂಕ್ ಪಡೆಯದವರೇ ದೇಶದ ಮುಖಂಡರು. ಹಾಗಾಗಿ, ನಾನು ರ‍್ಯಾಂಕ್ ಪಡೆಯದವರ ಪರ ಎಂದು ಓದು–ಜೀವನಾನುಭವದ ಪಾಠ ಮಾಡಿದರು. ಯಾವುದೇ ಸನ್ನಿವೇಶ ಸೋಲಿಗೆ ಕುಗ್ಗದಿರಿ. ಬದುಕಲು ರ‍್ಯಾಂಕ್ ಬೇಕಿಲ್ಲ, ಧೈರ್ಯ, ಪಾಠ, ಛಲ ಇರಬೇಕು. ಆಗ ಮಾತ್ರ ಬೆಳೆಯಲು ಸಾಧ್ಯ
> –ಮುಖ್ಯಮಂತ್ರಿ ಚಂದ್ರು, ಹಿರಿಯ ನಟ

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಫೆಬ್ರುವರಿ 7, 2020

ಮಹಾಜನ ಕಾಲೇಜಿನಲ್ಲಿ 'ಮಹಮ್ 2020'

ಮೈಸೂರು: ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ರಾಷ್ಟ್ರ ಮಟ್ಟದ ಅಂತರಕಾಲೇಜು ಉತ್ಸವ `ಮಹಮ್-2020'ನ್ನು ಫೆ.7ರಿಂದ 9ರವರೆಗೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಅಧ್ಯಾಪಕ ಸಂಯೋಜಕ ಡಾ.ಎಚ್.ಆರ್.ತಿಮ್ಮೇಗೌಡ ತಿಳಿಸಿದರು.

ಉತ್ಸವನ್ನು ಫೆ.7ರ ಬೆಳಿಗ್ಗೆ 9.30ಕ್ಕೆ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಭಾಗವಹಿಸುವರು. ಮಹಾಜನ ವಿದ್ಯಾಸಂಸ್ಥೆ ಟಿ. ಮುರಳೀಧರ್ ಭಾಗವತ್ ವಹಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ಫೆ.9ರಂದು ಸಂಜೆ 3 ಗಂಟೆಗೆ ಚಲನಚಿತ್ರ ನಟ ಮುಖ್ಯಮಂತ್ರಿ ಚಂದ್ರು ಸಮರೋಪ ಭಾಷಣ ಮಾಡಲಿದ್ದಾರೆ. ಸಂಸದ ಪ್ರಜ್ವಲ್ ರೇವಣ್ಣ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿ ಸಂಯೋಜಕ ರವಿ ಶಂಕರ್ ಎಸ್ ಮಾತನಾಡಿ, ಉತ್ಸವದಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡೆಯ 22 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಉತ್ಸವದಲ್ಲಿ ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಮುಂಬೈ, ತಮಿಳುನಾಡಿನಿಂದ ವಿದ್ಯಾರ್ಥಿಗಳು ಆಗಮಿಸಲಿದ್ದಾರೆ ಎಂದರು.

ಸಂಜೆ 7.30ಕ್ಕೆ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಫೆ. 7ರಂದು ಕನ್ನಡ ರಿಯಾಲಿಟಿ ಶೋ ಕನ್ನಡ ಕೋಗಿಲೆಯಲ್ಲಿ ಭಾಗವಹಿಸಿದ್ದ ರಕ್ಷಿತ್ ಪಾಣತ್ತಲೆ ಅವರ ಮೈಸೂರು ಎಕ್ಸ್‌ಪ್ರೆಸ್ ಬ್ಯಾಂಡ್, ಫೆ.8ರಂದು ಹಿನ್ನೆಲೆ ಗಾಯಕ ಸಂಜಿತ್ ಹೆಗ್ಡೆ ಹಾಗೂ ಫೆ.9 ರಂದು ಖ್ಯಾತ ಭಾರತೀಯ ಡಿಜೆಗಳಾದ ಮುಂಬೈನ ಡಿಜೆ ಶಾನ್ ಮತ್ತು ಡಿಜೆ ಪ್ರೀತಿ ಚೌಹಾಣ್ ಕಾರ್ಯಕ್ರಮ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ರವಿ ಅಯ್ಯರ್ ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಮವಾರ • ಫೆಬ್ರುವರಿ 10, 2020

ಆಂಗ್ಲಭಾಷೆ ಅನಿವಾರ್ಯ: 'ಮುಖ್ಯಮಂತ್ರಿ'

ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ನಡೆದ 'ಮಹಮ್–2020'ಗೆ ತೆರೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಕಾಲಘಟ್ಟದಲ್ಲಿ ಆಂಗ್ಲ ಭಾಷೆ ಅನಿವಾರ್ಯವಾಗಿದೆ' ಎಂದು 'ಮುಖ್ಯಮಂತ್ರಿ' ಚಂದ್ರು ಅಭಿಪ್ರಾಯಪಟ್ಟರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾನುವಾರ ಸಮಾರೋಪಗೊಂಡ ಮೂರು ದಿನದ ಮಹಮ್–2020ಯಲ್ಲಿ ಮಾತನಾಡಿ, 'ಯಾವ ಭಾಷೆಯೂ ಕನಿಷ್ಠವಲ್ಲ. ಶ್ರೇಷ್ಠವೂ ಅಲ್ಲ. ತಾಯ್ನುಡಿ ಜ್ಞಾನಾರ್ಜನೆಗಿರಲಿ. ಪರಭಾಷೆ ಕಾಂಪೌಂಡಿನಲ್ಲಿರಲಿ. ಸಂವಹನಕ್ಕೆ ಮಾತ್ರ ಬಳಕೆಯಾಗಲಿ' ಎಂದರು.

'ಭಾಷೆ-ಭಾಷಿಕರನ್ನು ಕನಿಷ್ಠವಾಗಿ ಕಾಣಬೇಡಿ. 10ರಿಂದ 15 ಕಿ.ಮೀ.ಗೆ ಭಾಷೆಯ ಉಚ್ಚಾರ, ಬಳಕೆ ಬದಲಿರುತ್ತದೆ. ನಾವು ಯಾವ ನೆಲದಲ್ಲಿ ರುತ್ತೇವೆ, ಆ ನೆಲದ ಭಾಷೆ, ಸಂಸ್ಕೃತಿ, ಆಚಾರ-ವಿಚಾರ, ಸಂಪ್ರದಾಯ, ಪದ್ಧತಿಯನ್ನು ಗೌರವಿಸಬೇಕು. ಕಲಿತು ಬಳಸಲು ಮುಂದಾಗಬೇಕು' ಎಂದು ಕಿವಿಮಾತು ಹೇಳಿದರು.

'ಕನ್ನಡ ಸೊಗಡಿನ ಭಾಷೆ. ಬಳಕೆಯೂ ಸೊಗಸಾದುದು. ಈ ಸೊಗಸು ಆಂಗ್ಲ ಭಾಷೆಯಲ್ಲಿ ಸಿಗಲ್ಲ. ನೀವೂ ಎಲ್ಲಾದರೂ ಇರಿ. ಎಂತಾದರೂ ಇರಿ. ಮೊದಲು ರಾಷ್ಟ್ರಪ್ರೇಮಿಗಳಾಗಿರಿ. ಕನ್ನಡಿಗರಾಗಿರಿ. ಆರೋಗ್ಯವಂತರಾಗಿರಿ' ಎಂದು ಸಲಹೆ ನೀಡಿದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಭಾನುವಾರ ನಡೆದ ರಾಷ್ಟ್ರಮಟ್ಟದ ಅಂತರಕಾಲೇಜು ಉತ್ಸವ ಮಹಮ್‌ನ ಸಮಾರೋಪ ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲ ವೆಂಕಟರಾಮು ಕಲಾವಿದ 'ಮುಖ್ಯಮಂತ್ರಿ' ಚಂದ್ರು ಆವರ ಜತೆ ಮಾತನಾಡಿದ ಕ್ಷಣ

'ಬದುಕಿಗೆ ರ‍್ಯಾಂಕ್ ಮುಖ್ಯವಲ್ಲ. ಆದರೆ, ಭವಿಷ್ಯಕ್ಕೆ ಪ್ರಸ್ತುತ ದಿನ ಮಾನದಲ್ಲಿ ಓದು ಮುಖ್ಯ. ಯಾವುದೇ ಸ್ಪರ್ಧೆಯಲ್ಲಿ ಸೋಲು-ಗೆಲುವು ಮುಖ್ಯವಲ್ಲ. ಸೋತವರು ಕಂಗಾಲಾಗುವುದು ಬೇಕಿಲ್ಲ. ಸ್ಪರ್ಧೆಯಲ್ಲಿ ಭಾಗಿಯಾಗುವುದೇ ಮುಖ್ಯವಾದುದು' ಎಂದರು.

'ಎಲ್ಲರೂ ಒಳ್ಳೆಯ ವಿದ್ಯಾರ್ಥಿಗಳಾಗಿ. ಪಾಠ-ಪ್ರವಚನವೇ ಮುಖ್ಯವಾಗಲ್ಲ. ಹವ್ಯಾಸಗಳಲ್ಲಿ ತಲ್ಲೀನರಾಗಿ. ನಿಮ್ಮ ಬದುಕನ್ನು ಹಸನುಗೊಳಿಸಿಕೊಳ್ಳಿ. ಸೋಮಾರಿತನ ಬಿಟ್ಟುಬಿಡಿ. ಪ್ರಯತ್ನ ಎಂಬುದು ಸದಾ ನಿಮ್ಮಲ್ಲಿರಲಿ. ಬದುಕಿನಲ್ಲಿ ಬಂದಿದ್ದನ್ನು ಸ್ವೀಕರಿಸಿ. ಸದಾ ನದಿಯ ಹರಿವಿನಂತೆ ಚಲನಶೀಲತೆಯಿರಲಿ. ದಿಟ್ಟತನ, ಧೈರ್ಯ, ಛಲ ಇರಲಿ' ಎಂದು 'ಮುಖ್ಯಮಂತ್ರಿ' ಚಂದ್ರು ಹೇಳಿದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪ ಪ್ರಾಂಶುಪಾಲರಾದ ಬಿ.ಆರ್.ಜಯ ಕುಮಾರಿ, ವಿದ್ಯಾರ್ಥಿ ಪ್ರತಿನಿಧಿ ರವಿಶಂಕರ್ ಇದ್ದರು. ಉಪನ್ಯಾಸಕ ತಿಮ್ಮೇಗೌಡ ಸ್ವಾಗತಿಸಿದರು.

> ವಿದ್ಯಾರ್ಥಿ ಸಮೂಹಕ್ಕೆ ಸಂಸ್ಕೃತಿ ಉಳಿಸುವ ಮಹತ್ವದ ಜವಾಬ್ದಾರಿಯ ಜತೆ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯ ಎದುರಾಗಿದೆ
> **ರಾ.ನಂ.ಚಂದ್ರಶೇಖರ್**
> ಕನ್ನಡ ಹೋರಾಟಗಾರ

> ರಂಗಭೂಮಿಯಲ್ಲಿ ಜಾತಿಯಿಲ್ಲ. ವಿಭಿನ್ನತೆಯಲ್ಲಿ ಏಕತೆ ಕಾಪಾಡಿಕೊಂಡಿರುವ ಜಗತ್ತಿನ ಏಕೈಕ ಪ್ರಜಾಪ್ರಭುತ್ವ ರಾಷ್ಟ್ರ ಭಾರತ
> 'ಮುಖ್ಯಮಂತ್ರಿ' ಚಂದ್ರು
> ಬಲನಚಿತ್ರ ನಟ

ಮುಖ್ಯಾಂಶಗಳು

- ಇಂಗ್ಲಿಷ್ ಮನೆಯ ಕಾಂಪೌಂಡಿನಲ್ಲಿರಲಿ
- ಜ್ಞಾನಾರ್ಜನೆ ತಾಯ್ನುಡಿಯಲ್ಲಿ ನಡೆಯಲಿ
- ಯಾವ ಭಾಷೆಯೂ ಶ್ರೇಷ್ಠವಲ್ಲ

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಜೆಮ್ಮೆ
ಶನಿವಾರ, 8 ಫೆಬ್ರವರಿ 2020

ಅನುಭವದ ಕಲಿಕೆಗೆ ಪ್ರಾಧಾನ್ಯತೆ ಕೊಡಿ

ಮೈಸೂರು : ಅನುಭವದ ಕಲಿಕೆಗೆ ವಿದ್ಯಾರ್ಥಿಗಳು ಹೆಚ್ಚಿನ ಪ್ರಾಧಾನ್ಯತೆಕೊಡಬೇಕು. ಇದರಿಂದ ಕೌಶಲ್ಯ, ಸೃಜನಶೀಲ ಶಕ್ತಿ ಹೆಚ್ಚುತ್ತದೆ. ಮಾನವೀಯ ಮೌಲ್ಯ ಮತ್ತು ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ಕಲಿಸುತ್ತದೆ ಎಂದು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಹೇಳಿದರು.

ಜಯಲಕ್ಷ್ಮೀ ಪುರಂನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಕಾಲೇಜು ಉತ್ಸವ ಮಹಮ್-2020' ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ಅನುಭವಗಳು ನಮಗೆ ಸೃಜನಶೀಲ ಶಕ್ತಿ, ಮಾನವೀಯ ಮೌಲ್ಯ ಮತ್ತು ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕೆಂದು ಕಲಿಸುತ್ತದೆ. ಪ್ರತಿಭೆ ಎಲ್ಲರಲೂ ಇದೆ, ಆದರೆ ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ದಾರಿಯ ಕೊರತೆ ಇದೆ. ಅನುಭವದ ಕಲಿಕೆಗೆ ವಿದ್ಯಾರ್ಥಿಗಳು ಹೆಚ್ಚಿನ ಆದ್ಯತೆಕೊಡಬೇಕು ಎಂದರು.

ಎಲ್ಲದಕ್ಕೂ ನಾವು ತಂತ್ರಜ್ಞಾನದ ಮೊರೆ ಹೋಗುತ್ತಿದ್ದೇವೆ. ಇದರಿಂದ ನಮ್ಮಲ್ಲಿ ಬರೆಯುವ ಕೌಶಲ್ಯ ಹಾಗೂ ಯೋಚನಾ ಶಕ್ತಿ ಕುಂಠಿತವಾಗುತ್ತಿದೆ ಎಂದರು.

ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿಗಳಾದ ಪ್ರೊ.ಪಿ.ಸರೋಜಮ್ಮ, ಪೂಜಾಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ, ಕಾಲೇಜಿನ ಮುಖ್ಯಕಾರ್ಯ ನಿರ್ವಹಣಾ ಅಧಿಕಾರಿ ಡಾ. ಎಸ್.ಆರ್. ರಮೇಶ್, ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಬಿ.ಎಸ್. ಜಯಕುಮಾರಿ, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಎಚ್. ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕ ರವಿಶಂಕರ್ ಉಪಸ್ಥಿತರಿದ್ದರು.



ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಕಾಲೇಜು ಉತ್ಸವ ಮಹಮ್-2020' ಕಾರ್ಯಕ್ರಮದಲ್ಲಿ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಗುರುವಾರ 13 ಫೆಬ್ರವರಿ 2020
13 FEBRUARY 2020

ಇಂಗ್ಲಿಷ್ ಅನಿವಾರ್ಯವೇ ಹೊರತು ಮುಖ್ಯವಲ್ಲ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ನಮಗೆ ಇಷ್ಟವಿರಲಿ, ಇಲ್ಲದಿರಲಿ ಆಂಗ್ಲಭಾಷೆ ಅನಿವಾರ್ಯವಿದೆ. ಆದರೆ ಅದನ್ನು ಅಡುಗೆ ಮನೆವರೆಗೂ ಕೊಂಡೊಯ್ಯುವ ಅಗತ್ಯವಿಲ್ಲ ಎಂದು ಹಿರಿಯ ಹಾಸ್ಯನಟ ಮುಖ್ಯಮಂತ್ರಿ ಚಂದ್ರು ಅಭಿಪ್ರಾಯಪಟ್ಟರು.

» ಹಿರಿಯ ಹಾಸ್ಯನಟ ಮುಖ್ಯಮಂತ್ರಿ ಚಂದ್ರು ಅಭಿಮತ



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಅಂತರ ಕಾಲೇಜು ಉತ್ಸವ 'ಮಹಮ್- 2020' ಸಮಾರೋಪದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಆಂಗ್ಲಭಾಷೆ ಅನಿವಾರ್ಯವಾದರೂ ಅದೇ ಮುಖ್ಯವಲ್ಲ. ಮನೆಯಲ್ಲಿ ಅಡುಗೆ ಮನೆ, ಸ್ನಾನದ ಮನೆ, ದೇವರ ಮನೆ, ಹೊರಾಂಡ, ಕಾಂಪೌಂಡ್ ಎಂದು ವಿಭಾಗ ಮಾಡಿಕೊಂಡಿರುತ್ತೇವೆ. ಹಾಗೆಯೇ ಇಂಗ್ಲಿಷ್ ಅನ್ನು ಕಾಂಪೌಂಡ್, ಕಿಟಕಿವರೆಗೆ ತನ್ನಿ. ಆದರೆ ಅದನ್ನು ಅಡುಗೆ ಮನೆವರೆಗೂ ಕೊಂಡೊಯ್ಯಬೇಕಾದ ಅಗತ್ಯವಿಲ್ಲ. ಮನೆಯಲ್ಲಿ ಮಾತೃಭಾಷೆಯಲ್ಲೇ ಮಾತನಾಡಿ ಎಂದು ಸಲಹೆ ನೀಡಿದರು.

ಹಲವರಿಗೆ ಯೋಗ ಮತ್ತು ಯೋಗ್ಯತೆ ಮೇಲೆ ಸ್ಥಾನಮಾನ ದೊರೆಯುತ್ತದೆ. ಹಲವರಿಗೆ ಯೋಗ್ಯತೆ ಇದ್ದರೆ ನನಗೆ ಯೋಗವಿದೆ. ಅನೇಕರು ಓದಿ, ಬರೆದು ಡಾಕ್ಟರೇಟ್ ಪಡೆದಿದ್ದಾರೆ. ನಾನು ಮಾತನಾಡಿ, ಮಾತನಾಡಿ ಡಾಕ್ಟರೇಟ್ ಪಡೆದಿದ್ದೇನೆ. ಅವರೂ ನನ್ನೊಂದಿಗೆ ಕುಳಿತಿದ್ದಾರೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಸಾಹಿತಿ ರಾ.ನಂ.ಚಂದ್ರಶೇಖರ್, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರುಳೀಧರ್, ಪ್ರಾಧ್ಯಾಪಕರಾದ ಡಾ.ಎಚ್.ಆರ್.ತಿಮ್ಮೇಗೌಡ, ಡಾ.ಶ್ರೀಧರ್, ವಿದ್ಯಾರ್ಥಿ ಸಂಚಾಲಕ ರವಿಶಂಕರ್ ಇತರರು ಇದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ವಿಜಯವಾಣಿ ಚಿತ್ರ



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಉತ್ಸವ-ಮಹಮ್ ಸಮಾರೋಪದಲ್ಲಿ ರಾ.ನಂ.ಚಂದ್ರಶೇಖರ್, ಟಿ.ಮುರಳೀಧರ್ ಭಾಗವತ್, ಡಾ.ಟಿ.ವಿಜಯಲಕ್ಷ್ಮಿ ಮುರುಳೀಧರ್, ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.

ಆಂದೋಲನ
ದಿನಪತ್ರಿಕೆ

ಶನಿವಾರ, ಫೆಬ್ರುವರಿ ೨೯, ೨೦೨೦

ದೇಶದಲ್ಲಿ ಸಂಶೋಧನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ

ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ

ಮೈಸೂರು: ಭಾರತದಲ್ಲಿ ಸಂಶೋಧನೆಗೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು ಎಂದು ಗ್ರೂಪ್ ವರ್ಟಿಕಲ್ ಹೆಡ್ ಐ.ಟಿ.ಮುಖ್ಯಸ್ಥ ರಾಘವ ಲಿಂಗೇಗೌಡ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ ನೊಬೆಲ್ ಪ್ರಶಸ್ತಿ ಪುರಸ್ಕೃತ ಸರ್ ಸಿ.ವಿ.ರಾಮನ್ ಅವರ 'ರಾಮನ್ ಪರಿಣಾಮ' ವರ್ಷಾಚರಣೆ ಅಂಗವಾಗಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ವಿಜ್ಞಾನದಲ್ಲಿ ಆಸಕ್ತಿಯನ್ನು ಹಿಮ್ಮಡಿಗೊಳಿಸಿ, ಅವರನ್ನು ಮುಂದಿನ ಅಧ್ಯಯನಕ್ಕೆ ಸಜ್ಜಾಗುವಂತೆ ಮಾಡಲು ಇಂತಹ ಕಾರ್ಯಕ್ರಮಗಳು ಅವಶ್ಯ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮುಂದಿನ ತೊಡರುಗಳ ಬಗ್ಗೆ, ದೇಶದ ಬೆಳವಣಿಗೆಗೆ ನೆರವಾಗುವ ಮಾರ್ಗಗಳ ಬಗ್ಗೆ ಅವರು ತಿಳಿಸಿದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ.ಎಸ್.ವೆಂಕಟ ರಾಮು ಹಾಗೂ ವಿಜ್ಞಾನ ವಿಭಾಗದ ಆಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರ್ ಸಿ.ವಿ.ರಾಮನ್ ಅವರ 'ರಾಮನ್ ಪರಿಣಾಮ' ವರ್ಷಾಚರಣೆ ಅಂಗವಾಗಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು. ರಾಘವ ಲಿಂಗೇಗೌಡ, ಡಾ.ಎಸ್.ಆರ್.ರಮೇಶ್, ಡಾ.ಎಸ್.ವೆಂಕಟರಾಮು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 29.2.2020

ವಿವಿಧೆಡೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಎಸ್‌ಬಿಆರ್‌ಆರ್ ಮಹಾಜನ ಕಾಲೇಜು

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ ನೊಬೆಲ್ ಪಾರಿತೋಷಕ ವಿಜೇತ ಸರ್ ಸಿ.ವಿ. ರಾಮನ್ ಅವರ ರಾಮನ್ ಪರಿಣಾಮ ವರ್ಷಾಚರಣೆಯ ಅಂಗವಾಗಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ನಿಮಿತ್ತ ವಿಜ್ಞಾನ ಉಪನ್ಯಾಸ ಸರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಥಿರಂ ಇಂಡಿಯಾ ಪ್ರೈ.ಲಿ.ನ ಮುಖ್ಯಸ್ಥ ರಾಘವ ಲಿಂಗೇಗೌಡ ಮಾತನಾಡಿ,

ಭಾರತವು ಸಂಶೋಧನೆಯಲ್ಲಿ ಪ್ರಪಂಚದಲ್ಲಿ ಇನ್ನೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಬೇಕು ಎಂದರು. ಕಾರ್ಯಕ್ರಮವನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ವಿಜ್ಞಾನದಲ್ಲಿ ಆಸಗಎಎಕ್ತಿಯನ್ನು ಹಿಮ್ಮಡಿಗೊಳಿಸಿ ಅವರನ್ನು ಮುಂದಿನ ಅಧ್ಯಾಯನಕ್ಕೆ ಸಜ್ಜಾಗುವಂತೆ ಮಾಡಲು ಇಂತಹ ಕಾರ್ಯಕ್ರಮ ಅವಶ್ಯಕ ವೆಂದು ಶ್ಲಾಘೀಸಿದರು. ಸಹಾಯಕ ಆರೋಗ್ಯಾಧಿಕಾರಿ ಡಾ. ಎಂ.ಎಸ್. ಬಸವ ರಾಜು, ಡಾ. ಪದ್ಮಾವತಮ್ಮ, ಪ್ರೊ.ಬಿ.ವಿ. ಶ್ಯಾಮಲ, ಶ್ಯಾಮ್‌ಸುಂದರ್ ಸುಬ್ಬ ರಾವ್, ಪ್ರೊ.ಎಚ್.ಎನ್. ಯಜುರ್‌ವೇದಿ, ಡಾ. ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ. ವೆಂಕಟರಾಮು ಹಾಜರಿದ್ದರು.



MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶನಿವಾರ, ಫೆಬ್ರುವರಿ ೨೯, ೨೦೨೦

ದೇಶದಲ್ಲಿ ಸಂಶೋಧನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ

ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ

ಮೈಸೂರು: ಭಾರತದಲ್ಲಿ ಸಂಶೋಧನೆಗೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು ಎಂದು ಗ್ರೂಪ್ ವರ್ಟಿಕಲ್ ಹೆಡ್ ಐ.ಟಿ.ಮುಖ್ಯಸ್ಥ ರಾಘವ ಲಿಂಗೇಗೌಡ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ ನೊಬೆಲ್ ಪ್ರಶಸ್ತಿ ಪುರಸ್ಕೃತ ಸರ್ ಸಿ.ವಿ.ರಾಮನ್ ಅವರ 'ರಾಮನ್ ಪರಿಣಾಮ' ವರ್ಷಾಚರಣೆ ಅಂಗವಾಗಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ವಿಜ್ಞಾನದಲ್ಲಿ ಆಸಕ್ತಿಯನ್ನು ಹಿಮ್ಮಡಿಗೊಳಿಸಿ, ಅವರನ್ನು ಮುಂದಿನ ಅಧ್ಯಯನಕ್ಕೆ ಸಜ್ಜಾಗುವಂತೆ ಮಾಡಲು ಇಂತಹ ಕಾರ್ಯಕ್ರಮಗಳು ಅವಶ್ಯ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಮುಂದಿನ ತೊಡರುಗಳ ಬಗ್ಗೆ, ದೇಶದ ಬೆಳವಣಿಗೆಗೆ ನೆರವಾಗುವ ಮಾರ್ಗಗಳ ಬಗ್ಗೆ ಅವರು ತಿಳಿಸಿದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ.ಎಸ್.ವೆಂಕಟ ರಾಮು ಹಾಗೂ ವಿಜ್ಞಾನ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರ್ ಸಿ.ವಿ.ರಾಮನ್ ಅವರ 'ರಾಮನ್ ಪರಿಣಾಮ' ವರ್ಷಾಚರಣೆ ಅಂಗವಾಗಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು. ರಾಘವ ಲಿಂಗೇಗೌಡ, ಡಾ.ಎಸ್.ಆರ್.ರಮೇಶ್, ಡಾ.ಎಸ್.ವೆಂಕಟರಾಮು ಚಿತ್ರದಲ್ಲಿದ್ದಾರೆ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 25.2.2020

ಮಹಾಜನದಲ್ಲಿ ಪ್ರತಿಭಾ ಪುರಸ್ಕಾರ



ಮೈಸೂರಿನ ಮಹಾಜನ ಕಾಲೇಜಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ ಬಹುಮಾನ ವಿತರಿಸಿದರು.

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ 2019-20ನೇ ಶೈಕ್ಷಣಿಕಸಾಲಿನಪ್ರತಿಭಾನ್ವಿತವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಬಹುಮಾನ ವಿತರಿಸಿದ ಗಾಯಕಿ ಮತ್ತು ನಟಿ ದಿಶಾ ರಮೇಶ್, ಕಾಲೇಜಿನ ದಿನಗಳನ್ನು ಮೆಲಕು ಹಾಕಿ, ವಿದ್ಯಾರ್ಥಿಗಳು ತಮ್ಮೊಳಗಿನ ಪ್ರತಿಭೆ ಗುರುತಿಸಿಕೊಂಡು ಬೆಳವಣಿಗೆ ಹೊಂದಬೇಕು. ವಿದ್ಯಾರ್ಥಿ ದಿಸೆಯಲ್ಲಿನ ಯಾವುದೇ ರೀತಿಯ ಸೋಲನ್ನು ಸೋಲು ಎಂದು ಪರಿಗಣಿಸದೇ ಸವಾಲಾಗಿ ಸ್ವೀಕರಿಸಿ ಮುನ್ನಡೆಯಬೇಕು ಎಂದು ಕಿವಿಮಾತು ಹೇಳಿದರು.

ತಮ್ಮ ಬೆಳವಣಿಗೆಗೆ ಕಾರಣರಾದ ಗುರು ಹಿರಿಯರು, ಸಮಾಜ, ದೇಶ ಎಲ್ಲದರ ಬಗೆಗೆ ಕೃತಜ್ಞತಾ ಮನೋಭಾವದಿಂದ ನಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಮನನವಾಗುವಂತೆ ನಿರೂಪಿಸಿದರು. ರಂಗಗೀತೆ ಹಾಡುವುದರ ಮೂಲಕ ವಿದ್ಯಾರ್ಥಿಗಳನ್ನು ರಂಜಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಅತ್ಯಂತ ಕಿರಿಯ ವಯಸ್ಸಿನಲ್ಲಿ ಎತ್ತರದ ಸಾಧನೆ ಮಾಡಿದ ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ದಿಶಾ ರಮೇಶ್ ಅವರಂತೆ ತಾವುಗಳು ತಮ್ಮಲ್ಲಿರುವ ಶಕ್ತಿಯನ್ನು ಗುರುತಿಸಿಕೊಂಡು ಮುನ್ನಡೆಯಬೇಕು ಎಂದು ತಿಳಿಸಿದರು. ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್ ಇದ್ದರು. ಅಂತಿಮ ವರ್ಷದ ಬಿಎಸ್ಸಿ ವಿದ್ಯಾರ್ಥಿನಿ ಆರ್. ವಿಭುದಾ ಪ್ರಾರ್ಥಿಸಿ ದರು. ಪ್ರತಿಭಾ ವೇದಿಕೆಯ ಸಂಚಾಲಕಿ ಮತ್ತು ಉಪ ಪ್ರಾಂಶುಪಾಲೆ ಬಿ.ಆರ್. ಜಯ ಕುಮಾರಿ ಸ್ವಾಗತಿಸಿದರು, ಬಿಸಿಎ ವಿಭಾಗದ ಸಹಾಯಕ ಪ್ರಾಧ್ಯಾಪಕ ರಾಧೇಶ್ ವಂದಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಂಗಳವಾರ 25 ಫೆಬ್ರವರಿ 2020

ಮಹಾಜನ ಕಾಲೇಜಿನಲ್ಲಿ ಪ್ರತಿಭಾ ಪುರಸ್ಕಾರ

ಮೈಸೂರು, ಫೆ.24–ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ 2019–20ನೇ ಶೈಕ್ಷಣಿಕ ಸಾಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಬಹುಮಾನ ವಿತರಿಸಿ ಮಾತನಾಡಿದ ಪ್ರತಿಭಾನ್ವಿತ ರಂಗ ಕಲಾವಿದೆ, ಗಾಯಕಿ ಹಾಗೂ ನಟಿ ಕುಮಾರಿ ದಿಶಾ ರಮೇಶ್, ತಮ್ಮ ಕಾಲೇಜಿನ ಹಿಂದಿನ ಸುಂದರ ದಿನಗಳನ್ನು ಮೆಲಕು ಹಾಕುತ್ತಾ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮೊಳಗಿರುವ ಪ್ರತಿಭೆಯನ್ನು ಬೆಳೆಸಿಕೊಳ್ಳುವೆಡೆಗೆ ಮನಸ್ಸು ಮಾಡಬೇಕು. ವಿದ್ಯಾರ್ಥಿ ದೆಸೆಯಲ್ಲಿನ ಯಾವುದೇ ರೀತಿಯ ಸೋಲನ್ನು ಸೋಲು ಎಂದು ಪರಿಗಣಿಸದೆ ಸವಾಲಾಗಿ ಸ್ವೀಕರಿಸಿ ಮುನ್ನಡೆಯಬೇಕೆಂದು ಕಿವಿಮಾತು ಹೇಳಿದರಲ್ಲದೆ ರಂಗಗೀತೆಗಳ ಹಾಡಿ ರಂಜಿಸಿದರು.



ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಅತ್ಯಂತ ಕಿರಿಯ ವಯಸ್ಸಿನಲ್ಲಿ ಎತ್ತರದ ಸಾಧನೆ ಮಾಡಿದ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ದಿಶಾ ರಮೇಶ್ ಅವರಂತೆ ತಾವುಗಳು ತಮ್ಮಲ್ಲಿರುವ ಶಕ್ತಿಯನ್ನು ಗುರುತಿಸಿಕೊಂಡು ಮುನ್ನಡೆಯಬೇಕೆಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಅಂತಿಮ ವರ್ಷದ ಬಿಎಸ್ಸಿ ವಿದ್ಯಾರ್ಥಿನಿ ವಿಭುದಾ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರತಿಭಾ ವೇದಿಕೆಯ ಸಂಚಾಲಕರು ಹಾಗೂ ಉಪಪ್ರಾಂಶುಪಾಲರಾದ ಬಿ.ಆರ್.ಜಯ ಕುಮಾರಿ ಸ್ವಾಗತಿಸಿದರು.

ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್ ಉಪಸ್ಥಿತರಿದ್ದರು. ಬಿಸಿಎ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ರಾಧೇಶ್ ವಂದಿಸಿದರು. ಕಾರ್ಯಕ್ರಮವನ್ನು ಬಿಎ ವಿದ್ಯಾರ್ಥಿನಿಯರಾದ ಏಕತಾ ಭಟ್ ಹಾಗೂ ದಿವ್ಯಶ್ರೀ ನಿರೂಪಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಫೆಬ್ರುವರಿ 14, 2020



ಮಹಾಜನ ಕಾಲೇಜಿನ ವಾರ್ಷಿಕ ಕ್ರೀಡಾಕೂಟವನ್ನು ವಾಲಿಬಾಲ್ ತರಬೇತುದಾರ ಎನ್.ಬಿ.ಸುರೇಶ್ ಉದ್ಘಾಟಿಸಿದರು. ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲ ಎಸ್.ವೆಂಕಟರಾಮು, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಭಾಸ್ಕರ್, ಉಪಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ಶಿಕ್ಷಕ ಪ್ರೊ.ಮಧುಸೂದನ್ ಮತ್ತಿತರರು ಪಾಲ್ಗೊಂಡಿದ್ದರು

ಆಂದೋಲನ
ದಿನ ಪತ್ರಿಕೆ
ಶುಕ್ರವಾರ, ಫೆಬ್ರವರಿ ೧೪, ೨೦೨೦

■ ಕ್ರೀಡಾಕೂಟ ಸಮಾರೋಪ

ಸಂ.4ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು- ಅಧ್ಯಕ್ಷತೆ -ಮಹಾಜನ ವಿದ್ಯಾಸಂಸ್ಥೆ ಗೌ.ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ- ಕಾಲೇಜು ಆವರಣ, ಜಯಲಕ್ಷ್ಮಿಪುರಂ.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಹಾಜನ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು ವಿವಿ ನಡೆಸಿದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿತು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಕೆ.ಸೋಮಶೇಖರ್, ಡಾ.ಎಚ್.ಎನ್.ಭಾಸ್ಕರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪ ಪ್ರಾಂಶುಪಾಲ ಪಿ.ಎಸ್.ಮಧುಸೂದನ್, ತಂಡದ ನಾಯಕ ಎಸ್.ಸತೀಶ್, ಸೋಮಶೇಖರ್, ಎಂ.ಆರ್.ಶಶಾಂಕ್, ಎ.ಎನ್.ಸೂರ್ಯ, ಎಂ.ಚೇತನ, ಎಂ.ಎಸ್.ಮಿಥುನ್, ಸಿಬ್ಟ್‌ನ್ ಅಲಿ, ಅಮೃತ್ ರಾಜ್, ಸುಪ್ರಿತ್, ದೀಪಕ್, ಎಸ್.ನಿಶಾಂತ್, ಹೇಮಂತ್ ಕುಮಾರ್, ಎಸ್.ಸುಹಾಸ್, ಎಲ್.ಹೇಮಂತ್ ಕುಮಾರ್ ಚಿತ್ರದಲ್ಲಿದ್ದಾರೆ.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪತ್ರಿಕೆ

ಭಾನುವಾರ, 2 ಫೆಬ್ರವರಿ 2020



ಮೈಸೂರು ವಿಶ್ವವಿದ್ಯಾಲಯದಿಂದ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಕ್ರಿಕೆಟ್ ತಂಡ ಪ್ರಥಮ ಸ್ಥಾನ ಗಳಿಸಿದೆ. ವಿಜೇತ ವಿದ್ಯಾರ್ಥಿಗಳನ್ನು ಕಾಲೇಜು ಆಡಳಿತ ಮಂಡಳಿ, ಬೋಧಕ ವರ್ಗ ಮತ್ತು ಬೋಧಕೇತರ ವರ್ಗ ಅಭಿನಂದಿಸಿದೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 20.2.2020

ಮಹಾಜನ ಕಾಲೇಜಿಗೆ ಪ್ರಥಮ



ಮೈಸೂರು: ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮಹಿಳೆಯರ ಹ್ಯಾಂಡ್‌ಬಾಲ್ ತಂಡವು ಮೈಸೂರು ವಿವಿ ವ್ಯಾಪ್ತಿಯ ಮಂಡ್ಯ ಜಿಲ್ಲೆ ಕೆಎಂ ದೊಡ್ಡಿ ಭಾರತಿ ಕಾಲೇಜು ವತಿಯಿಂದ ನಡೆದ ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ತಂಡದ ನಾಯಕಿ ಲಾವಣ್ಯ, ಆಟಗಾರರಾದ ಆ್ಯಗ್ನ್ಸ್, ಅರ್ಚನಾ ರಾವ್, ಅನ್ವಿತ ರಾವ್, ನಿತ್ಯ, ನಿಜಿ, ನಿಸಿ, ಸೀತಲ್, ಶರಣ್ಯ, ಗೌತಮಿ, ಗಾನವಿ, ಸಂಗೀತ, ಪ್ರಿಯಾಂಕ, ನಿಖಿತ ಮತ್ತು ಭಾವನ. ತರಬೇತುದಾರ ಸೋಮಶೇಖರ್ ಅವರನ್ನು ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಟರಾಮು, ಉಪ ಪ್ರಾಂಶುಪಾಲೆ ಜಯ ಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್, ಡಾ.ಕೆ.ಕೆ. ಸೋಮಶೇಖರ್, ವಾಣಿ ಅಭಿನಂದಿಸಿದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಶುಕ್ರವಾರ 14 ಫೆಬ್ರವರಿ 2020

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಸಾಫ್ಟ್‌ಬಾಲ್‌ನಲ್ಲಿ ಪ್ರಥಮ ಸ್ಥಾನ



ಮಂಡ್ಯ ಜಿಲ್ಲೆ ಭಾರತಿನಗರ ಕೆ.ಎಂ.ದೊಡ್ಡಿ ಭಾರತಿ ಕಾಲೇಜು, ಮಂಡ್ಯ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಸಂಯೋಜನೆಯಲ್ಲಿ ಆಯೋಜಿಸಿದ್ದ, ಮಹಿಳೆಯರ ಅಂತರ ಕಾಲೇಜು, ಅಂತರ ವಲಯ ಮಟ್ಟದ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದಿದೆ. ಚಿತ್ರದಲ್ಲಿ (ಕುಳಿತಿರುವವರು) ಕು.ಅನ್ವಿತಾ, ಮಧುಸೂಧನ್, ದೈಹಿಕ ಶಿಕ್ಷಣ ನಿರ್ದೇಶಕರು, ಡಾ. ಎಸ್.ಆರ್.ರಮೇಶ್, ಶೈಕ್ಷಣಿಕ ಮತ್ತು ಆಡಳಿತಾಧಿಕಾರಿಗಳು, ಡಾ. ವಿಜಯಲಕ್ಷ್ಮೀ ಮುರಳೀಧರ್, ಗೌ. ಕಾರ್ಯದರ್ಶಿಗಳು, ಮಹಾಜನ ವಿದ್ಯಾಸಂಸ್ಥೆ, ಮೈಸೂರು. ಪ್ರಾಂಶುಪಾಲರು, ಡಾ. ಎಸ್. ವೆಂಕಟರಾಮು, ಉಪ ಪ್ರಾಂಶುಪಾಲರಾದ ಶ್ರೀಮತಿ ಬಿ.ಆರ್. ಜಯಕುಮಾರಿ, ಡಾ. ಭಾಸ್ಕರ್ ಹೆಚ್.ಎನ್., ದೈಹಿಕ ಶಿಕ್ಷಣ ನಿರ್ದೇಶಕರು, ಕಾರ್ತಿಕ್ ತರಬೇತುದಾರರು. (ನಿಂತಿರುವವರು) ಶ್ರೀ ಸೋಮಶೇಖರ್ ಕೆ, ನೇಹಾ, ಆಗ್ನೇಸ್, ಭವಾನಿ, ನಿಖಿತ, ಅರ್ಚನ, ಛಾಯಾ, ಮಧುಮುತ್ತಮ್ಮ, ತೇಜಸ್ವಿನಿ, ಸುಪ್ರಿತ, ನಿಜಿ, ಕವನ, ಐಶ್ವರ್ಯ, ಭಾವನಾ, ವೈಷ್ಣವಿ, ಪ್ರಿಯಾಂಕ, ಶೀತಲ್.

STAR OF MYSORE

Thursday 13th February 2020

Winners of Inter-Zonal Women's Softball Tourney



The women's softball team of SBRR Mahajana First Grade College emerged winners of Mysore University Inter-Collegiate and Inter-Zonal Women's Softball Tournament held at Bharathi College in Bharathi Nagar, K.M. Doddi, Mandya, recently, by defeating Post-Graduation and Sports Council (PGSC), Manasagangothri. Seen are (from left) Captain Anvitha Rao, P.S. Madhusudhana, Physical Director, Dr. S.R. Ramesh, Chief Executive Officer, Vijayalakshmi Muralidhar, Secretary, Mahajana Education Trust, Dr. Venkataramu, Principal, Jayakumari, Vice-Principal, Dr. H.N. Bhaskar, Physical Director and Karthik; (standing from left) Somashekhar, Sports Assistant, Neha, Agness, Bhavani, Nikhita, Archana, Chaya, Madhu Muttamma, Tejaswini, Supreetha, Nizi, Kavana Choudamma, Aishwarya, Bhavana, Vyshanavi, Priyanka and Sheetalare.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪತ್ರಿಕೆ
ಗುರುವಾರ, 13 ಫೆಬ್ರವರಿ 2020



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಮಂಡ್ಯ ಕೆ.ಎಂ.ದೊಡ್ಡಿ ಭಾರತಿ ಕಾಲೇಜಿನಲ್ಲಿ ನಡೆದ ಮೈಸೂರು ವಿವಿ ಅಂತರ ಕಾಲೇಜು ಮತ್ತು ಅಂತರ ವಲಯ ಮಹಿಳಾ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನಗಳಿಸಿ ಚಿನ್ನದ ಪದಕ ಹಾಗೂ ವಿಜೇತರ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದೆ. ಮಹಾಜನ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ವಿಜಯಲಕ್ಷ್ಮಿ ಮುರುಳೀಧರ್, ಪ್ರಾಂಶುಪಾಲ ಡಾ.ವೆಂಕಟರಾಮು, ಜಯಕುಮಾರಿ, ಉಪಪ್ರಾಂಶುಪಾಲ ಡಾ.ಎಚ್.ಎನ್.ಭಾಸ್ಕರ್, ಕ್ರೀಡಾ ಸಹಾಯಕ ಸೋಮಶೇಖರ್, ದೈಹಿಕ ನಿರ್ದೇಶಕ ಪಿ.ಎಸ್.ಮಧುಸೂದನ್, ಮುಖ್ಯಸ್ಥ ಡಾ.ಎಸ್.ಆರ್.ರಮೇಶ್, ತಂಡದ ನಾಯಕಿ ಅನ್ವಿತಾ ರಾವ್, ದೈಹಿಕ ನಿರ್ದೇಶಕ ಕಾರ್ತಿಕ್ ಇನ್ನಿತರರು ಇದ್ದರು.

ವಿಜಯವಾಣಿ

ಕನ್ನಡಿಗರ ಧ್ವನಿ

ಗುರುವಾರ 13 ಫೆಬ್ರವರಿ 2020
13 FEBRUARY 2020

- **ಉದ್ಘಾಟನೆ:** ಎಸ್‌ಬಿಆರ್‌ಆರ್ ಮಹಾ ಜನ ಪ್ರಥಮ ದರ್ಜೆ ಕಾಲೇಜು. ಅತಿಥಿಗಳು: ಎನ್.ಬಿ.ಸುರೇಶ್, ಡಾ.ವಿಜಯಲಕ್ಷ್ಮಿ ಮುರಳೀಧರ್. ಸ್ಥಳ: ಕಾಲೇಜು ಆವರಣ, ಬೆ.9.30

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 13.2.2020

- **ಮಹಾಜನ ಪ್ರಥಮ ದರ್ಜೆ ಕಾಲೇಜು:** ಥ್ರೋಬಾಲ್ ಪಂದ್ಯಾವಳಿ, ಚಾಲನೆ- ಎನ್.ಬಿ. ಸುರೇಶ್, ಡಾ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜು ಮೈದಾನ, ಜಯಲಕ್ಷ್ಮೀಪುರಂ, ಬೆಳಗ್ಗೆ 9.30.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 14.2.2020

- **ಮಹಾಜನ ಪ್ರಥಮ ದರ್ಜೆ ಕಾಲೇಜು:** ಥ್ರೋಬಾಲ್ ಪಂದ್ಯಾವಳಿ ಸಮಾರೋಪ, ಅತಿಥಿ- ಡಾ. ವಿಜಯಲಕ್ಷ್ಮೀ, ಕಾಲೇಜು ಮೈದಾನ, ಜಯಲಕ್ಷ್ಮೀಪುರಂ, ಸಂಜೆ 4.30.

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 14 ಫೆಬ್ರವರಿ 2020
14 FEBRUARY 2020

■ **ವಾಲಿವಾಲ್:** ಶ್ರೀ ಆರ್.ವಿ.ಗಣೇಶ್ ಸ್ಮಾರಕ ಆಹ್ವಾನಿತ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ವಾಲಿಬಾಲ್ ಪಂದ್ಯಾವಳಿ ಸಮಾರೋಪ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಅತಿಥಿಗಳು: ಡಾ.ವಿಜಯಲಕ್ಷ್ಮೀ ಮುರಳೀಧರ್, ಎವಿಸಿ 2, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಸಂ.4

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 14 ಫೆಬ್ರವರಿ 2020

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಆರ್.ವಿ.ಗಣೇಶ್ ಸ್ಮಾರಕ ಆಹ್ವಾನಿತ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ವಾಲಿಬಾಲ್ ಪಂದ್ಯಾವಳಿ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್. ವೆಂಕಟರಾಮು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಕಾಲೇಜು ಉಪಪ್ರಾಂಶುಪಾಲರಾದ ಶ್ರೀಮತಿ ಬಿ.ಆರ್. ಜಯಕುಮಾರಿ, ಸ್ಥಳ:ಎವಿಸಿ-2 ಸಭಾಂಗಣ, ಸಂಜೆ 4ಕ್ಕೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 13 ಫೆಬ್ರವರಿ 2020

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು :** ಆರ್.ವಿ. ಗಣೇಶ್ ಸ್ಮಾರಕ ಆಹ್ವಾನಿತ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ವಾಲಿಬಾಲ್ ಪಂದ್ಯಾವಳಿ ಮತ್ತು ಭಾಗ್ಯಲಕ್ಷ್ಮಮ್ಮರಟ್ಟೇಹಳ್ಳಿ ರಾಮಪ್ಪ ಸ್ಮಾರಕ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿ ಮತ್ತು ಕ್ರೀಡಾಕೂಟ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ನಿವೃತ್ತ ವಾಲಿಬಾಲ್ ತರಬೇತುದಾರ ಎನ್.ಬಿ.ಸುರೇಶ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್, ಸ್ಥಳ : ಜಗದೀಶ್ ಪ್ರಸಾದ್ ಸ್ಟೇಡಿಯಂ, ಮಹಾಜನ ವಿದ್ಯಾಸಂಸ್ಥೆ, ಜಯಲಕ್ಷ್ಮೀಪುರಂ. ಬೆಳಿಗ್ಗೆ 9.30ಕ್ಕೆ.





ಗುರುವಾರ, ಫೆಬ್ರವರಿ ೧೩, ೨೦೨೦

■ ವಾಲಿಬಾಲ್ ಪಂದ್ಯಾವಳಿ

ಬೆಳಿಗ್ಗೆ 9.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಅತಿಥಿಗಳು-ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತವಾಲಿಬಾಲ್ ತರಬೇತುದಾರಎನ್.ಬಿ.ಸುರೇಶ್, ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಅಧ್ಯಕ್ಷತೆ-ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ವಿಜಯ ಲಕ್ಷ್ಮಿ ಮುರಳೀಧರ್, ಸ್ಥಳ-ಜಗದೀಶ್ ಪ್ರಸಾದ್ ಸ್ಟೇಡಿಯಂ, ಕಾಲೇಜಿನ ಆವರಣ, ಜಯಲಕ್ಷ್ಮಿಪುರಂ.



ಗುರುವಾರ, 13 ಫೆಬ್ರವರಿ 2020

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು

ದೈಹಿಕ ಶಿಕ್ಷಣ ವಿಭಾಗ : ಆರ್.ವಿ.ಗಣೇಶ್ ಸ್ಮಾರಕ ಆಹ್ವಾನಿತ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ವಾಲಿಬಾಲ್ ಪಂದ್ಯಾವಳಿ ಉದ್ಘಾಟನೆ. ಅತಿಥಿ-ಮೈಸೂರು ವಿವಿ ನಿವೃತ್ತ ವಾಲಿಬಾಲ್ ತರಬೇತುದಾರ ಎನ್.ಬಿ.ಸುರೇಶ್, ಅಧ್ಯಕ್ಷತೆ-ಮಹಾಜನ ವಿದ್ಯಾಸಂಸ್ಥೆ ಗೌ.ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರುಳೀಧರ್. ಜಗದೀಶ್ ಪ್ರಸಾದ್ ಸ್ಟೇಡಿಯಂ, ಮಹಾಜನ ವಿದ್ಯಾಸಂಸ್ಥೆ. ಬೆ.9.30.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ.26.2.2020

ಘನತೆ ಕಳೆದುಕೊಳ್ಳುತ್ತಿರುವ ಮಾತು

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ವಿಷಾದ | ವಿದ್ಯಾರ್ಥಿ ಸಂಸತ್ ಸಮಾರೋಪ



ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪದಲ್ಲಿ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ನಮ್ಮ ಸಮಾಜದಲ್ಲಿ ಮಾತು ಘನತೆಯನ್ನು ಕಳೆದುಕೊಂಡಿದೆ. ಇಂದಿನ ಯುವ ಸಮೂಹಕ್ಕೆ ಮಾತು ಮುಖ್ಯವಾಗುತ್ತದೆ. ಕೇಳಿಸಿಕೊಳ್ಳುವಂತಹ ಗುಣ ನಿಮ್ಮದಾಗಬೇಕು, ಕೇಳುವ ತಾಳ್ಮೆ ಇರಬೇಕು, ಇದು ಒಂದು ಕಲೆ. ಸಮಾಜವನ್ನು ಬೆಳೆಸುವ, ಪೋಷಿಸುವ ಕೆಲಸ ನಿಮ್ಮ ಕೈಯಲ್ಲೇ ಇದೆ. ಇಂದಿನ ಯುವ ಜನಾಂಗ ದೇಶದ ಪ್ರಗತಿಯ ಪ್ರತೀಕ ಎಂದು ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ (ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ) ದ ಸಮಾರೋಪ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪ್ರೀತಿ ಅವಶ್ಯಕತೆ ಇದೆ: ನಾಡಿನ ಭವಿಷ್ಯ ಬದಲಾಯಿಸಿ, ಉನ್ನತ ಮಟ್ಟಕ್ಕೆ ಕೊಂಡೊಯ್ಯವ ಜವಾಬ್ದಾರಿ ನಿಮ್ಮ ಮೇಲಿದೆ. ಇಂದಿನ ಸಮಾಜಕ್ಕೆ ಪ್ರೀತಿಯ ಅವಶ್ಯಕತೆಯಿದೆ. ಪ್ರೀತಿಯಿಂದ ಏನನ್ನಾದರೂ ಸಾಧಿಸಬಹುದು. ಪ್ರೀತಿ ಎಂಬುದು ನಿಮ್ಮ ಯುವ ಸಮೂಹದ ಲವ್ ಅಲ್ಲ. ಪ್ರೀತಿ, ಮಮತೆ, ಅಕ್ಕರೆ ಹೀಗೆ ನಾನಾ ವೈವಿಧ್ಯದಲ್ಲಿ ನಾವು ಸಮಾಜದಲ್ಲಿ ಬೆರೆತು, ಗೌರವದಿಂದ ಮುನ್ನಡೆಯಬೇಕು. ಹೆತ್ತ ತಂದೆತಾಯಿಯನ್ನು, ಬೆಳೆಸಿದ ಪೋಷಕರನ್ನು, ವ್ಯಕ್ತಿತ್ವ ರೂಪಿಸಿದ ಗುರುಗಳನ್ನು ಪ್ರೀತಿಸಬೇಕು ಎಂದರು.

ಇಂದು ನಾವು ಕನಸು ಕಾಣುವುದನ್ನೇ ಮರೆತಿದ್ದೇವೆ. ದೊಡ್ಡ, ದೊಡ್ಡ ಕನಸುಗಳನ್ನು ಕಾಣಬೇಕು. ಕನಸು ನನಸಾಗಲು ಸಾಧನೆ ಮುಖ್ಯವಾಗುತ್ತದೆ. ಅದಕ್ಕಾಗಿ ನಿಮ್ಮಲ್ಲಿ ಶಕ್ತಿ ಹಾಗೂ ಗುರಿ ಮುಖ್ಯವಾಗುತ್ತದೆ. ಗುರಿ ಕನಸಾಗಬಾರದು. ಖಚಿತವಾದಕನಸುಗುರಿಯಾಗುತ್ತದೆ. ಖಚಿತವಲ್ಲದ ಕನಸು ಬರೀ ಕನಸಾಗಿಯೇ ಉಳಿಯುತ್ತದೆ. ಬದುಕಿನಲ್ಲಿ ಹವ್ಯಾಸ, ಕೌಶಲ ಬೆಳೆಸಿಕೊಳ್ಳಿ. ಓದು ನಿರಂತರವಾಗಬೇಕು ಎಂದವರು ಹೇಳಿದರು.

ಯಶಸ್ಸು ಗಳಿಸಲು ಬದುಕಿನಲ್ಲಿ ನಾಲ್ಕು ಕಂಬಗಳಾದ ಜ್ಞಾನ, ಕೌಶಲ, ಮನೋಭಾವ, ಆತ್ಮವಿಶ್ವಾಸ ಮತ್ತು ಕಲಿಕೆಯ ಅವಶ್ಯಕತೆ ಇದೆ ಎಂದರು.

ರಾಷ್ಟ್ರೀಯ ಯೋಜನೆಯ ಜಂಟಿ ನಿರ್ದೇಶಕ ಜಿ.ಎಸ್. ಜಯಸಿಂಹ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಇದು ಮಾದರಿಯಾಗಿದೆ ಎಂದರು. ವಿದ್ಯಾರ್ಥಿ ಸಂಸತ್ ಸಂಸದರಾದ ರವಿಶಂಕರ್ ಎಸ್ ಅವರು ಈ ವೇದಿಕೆಯ ಅಧ್ಯಕ್ಷತೆ ವಹಿಸಿರುವುದು, ಕಾಲೇಜು ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಪ್ರಾಮುಖ್ಯತೆ ಮತ್ತು ಪಠ್ಯೇತರ ಚಟು ವಟಿಕೆಯ ಮಹತ್ವ ಸೂಚಿಸುತ್ತದೆ ಎಂದು ಹೇಳಿದರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಅಂತಿಮ ಬಿ.ಎ. ವಿದ್ಯಾರ್ಥಿ ಎಸ್. ರವಿ ಶಂಕರ್, ಗೌ. ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ವಿದ್ಯಾರ್ಥಿ ಸಂಸತ್‌ನ ಸಂಚಾಲಕ ಡಾ.ಎಂ.ಆರ್. ಇಂದ್ರಾಣಿ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 26 ಫೆಬ್ರವರಿ 2020

ವಿದ್ಯಾರ್ಥಿಗಳಲ್ಲಿ ಕೇಳಿಸಿಕೊಳ್ಳುವ ಗುಣ, ತಾಳ್ಮೆ ಅಗತ್ಯ: ಡಾ.ನರಹಳ್ಳಿ ಸಲಹೆ

ಮೈಸೂರು, ಫೆ. 25(ಆರ್‌ಕೆಬಿ)– ಇಂದಿನ ಸಮಾಜಕ್ಕೆ ಪ್ರೀತಿಯ ಅವಶ್ಯಕತೆ ಇದೆ. ಪ್ರೀತಿ ಎಂಬುದು ಯುವ ಸಮೂಹದ ಲವ್ ಅಲ್ಲ. ಪ್ರೀತಿ, ಮಮತೆ, ಅಕ್ಕರೆಯ ಭಾವಗಳೊಂದಿಗೆ ಸಮಾಜದಲ್ಲಿ ಬೆರೆತು, ಗೌರವದಿಂದ ಮುನ್ನಡೆಯಬೇಕು. ತಂದೆ–ತಾಯಿಯರನ್ನು, ಬೆಳೆಸಿದವರನ್ನು, ವ್ಯಕ್ತಿತ್ವ ರೂಪಿಸಿದ ಗುರುಗಳನ್ನು ಪ್ರೀತಿಸಬೇಕು ಎಂದು ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಯಲಕ್ಷ್ಮಿಪುರಂ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಮಂಗಳವಾರ ವಿದ್ಯಾರ್ಥಿ ಸಂಸತ್ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಸಮಾಜದಲ್ಲಿ ಮಾತು ಘನತೆ ಕಳೆದುಕೊಂಡಿದೆ. ಯುವಸಮೂಹಕ್ಕೆ ಮಾತೇ ಮುಖ್ಯವಾಗುತ್ತದೆ. ಜತೆಗೆ ಕೇಳಿಸಿಕೊಳ್ಳುವ ಗುಣ, ತಾಳ್ಮೆಯೂ ಇರಬೇಕು. ಬದುಕಿನಲ್ಲಿ ಯಶಸ್ಸು ಗಳಿಸಲು ಜ್ಞಾನ, ಕೌಶಲ, ಮನೋಭಾವ, ಆತ್ಮವಿಶ್ವಾಸ, ಕಲಿಕೆ ಅವಶ್ಯಕ. ಸಮಾಜಕ್ಕೆ ನಾವೇನು ಕೊಟ್ಟಿದ್ದೇವೆ? ಸತ್ತ ಮೇಲೆ ಸಮಾಜ ನನ್ನನ್ನು ನೆನೆಯುತ್ತದೆಯೇ? ಎಂಬ ಪ್ರಶ್ನೆ ಹಾಕಿಕೊಳ್ಳಬೇಕು. ಇದು ಬದುಕಿನ, ಶಿಕ್ಷಣದ ಮತ್ತು ವ್ಯಕ್ತಿತ್ವದ ನಿಜಸ್ಥಿತಿ ಎಂದರು.

ವಿದ್ಯಾರ್ಥಿ ಸಂಸದ ಎಸ್.ರವಿಶಂಕರ್ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆಯ ನಗರ ಯೋಜನಾಧಿಕಾರಿ ಜಿ.ಎಸ್.ಜಯಸಿಂಹ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌ.ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರಳೀಧರ್, ಸಿಇಒ ಎಸ್.ಆರ್. ರಮೇಶ್, ಪ್ರಾಂಶುಪಾಲ ಎಸ್.ವೆಂಕಟರಾಮು, ಉಪ ಪ್ರಾಂಶುಪಾಲ ಬಿ.ಆರ್.ಜಯ ಕುಮಾರಿ, ಸಂಸತ್ ಸಂಚಾಲಕಿ ಎಂ.ಆರ್.ಇಂದ್ರಾಣಿ ಇನ್ನಿತರರಿದ್ದರು.

ಆಂದೋಲನ

ದಿನ ಪತ್ರಿಕೆ

ಮಂಗಳವಾರ, ಫೆಬ್ರವರಿ ೨೫, ೨೦೨೦

■ **ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ**

ಬೆಳಿಗ್ಗೆ 11.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಸಮಾರೋಪ ಭಾಷಣ-ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿಗಳು-ರಾಷ್ಟ್ರೀಯ ಯೋಜನೆಯ ಜಂಟಿ ನಿರ್ದೇಶಕ ಜಿ.ಎಸ್.ಜಯಸಿಂಹ, ಅಧ್ಯಕ್ಷತೆ-ವಿದ್ಯಾರ್ಥಿ ಸಂಸದ ಎಸ್.ರವಿಶಂಕರ್, ಸ್ಥಳ-ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಕಾಲೇಜಿನ ಆವರಣ.

DECCAN HERALD

Tuesday
February 25, 2020

SBRR Mahajana First Grade College: Valedictory of student parliament, talent forum, writer Narahalli Balasunramanya to address, Jayalakshmipuram, 12.30 pm.

ವಿಜಯ ಕರ್ನಾಟಕ

ಮಂಗಳವಾರ, 25 ಫೆಬ್ರವರಿ 2020,

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು : ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ. ಸಮಾರೋಪ ಭಾಷಣ-ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ-ನಗರ ಮತ್ತು ರಾಷ್ಟ್ರೀಯ ಯೋಜನೆ ಹಾಗೂ ನಗರ ಯೋಜನಾಧಿಕಾರಿ ಜಂಟಿ ನಿರ್ದೇಶಕ ಜಿ. ಎಸ್.ಜಯಸಿಂಹ, ಅಧ್ಯಕ್ಷತೆ-ವಿದ್ಯಾರ್ಥಿ ಸಂಸದ ಎಸ್. ರವಿಶಂಕರ್. ಡಾ.ಎಪಿಜೆ ಅಬ್ದುಲ್ ಕಲಾಂ. ಬೆ.11.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 25 ಫೆಬ್ರವರಿ 2020

■ **ಎಸ್‌ಬಿಆರ್‌ಆರ್ ಮಹಾಜನ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ, ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ, ಸಮಾರೋಪ ಭಾಷಣ : ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಮುಖ್ಯ ಅತಿಥಿಗಳು: ನಗರಪಾಲಿಕೆ ನಗರ ಯೋಜನಾಧಿಕಾರಿ ಜಿ.ಎಸ್. ಜಯಸಿಂಹ, ಅಧ್ಯಕ್ಷತೆ : ಎಸ್.ರವಿಶಂಕರ್, ಸ್ಥಳ : ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮಿಪುರಂ. ಬೆಳಿಗ್ಗೆ 11.30ಕ್ಕೆ

ಪ್ರಜಾವಾಣಿ

ಮಂಗಳವಾರ • ಫೆಬ್ರುವರಿ 25, 2020

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ-ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ-ಜಿ.ಎಸ್.ಜಯಸಿಂಹ, ಅಧ್ಯಕ್ಷತೆ-ವಿದ್ಯಾರ್ಥಿ ಸಂಸದ ಎಸ್.ರವಿಶಂಕರ್, ಸ್ಥಳ-ಕಾಲೇಜಿನ ಆವರಣ, ಬೆಳಿಗ್ಗೆ 11

ಆಂದೋಲನ
ದಿನ ಪತ್ರಿಕೆ

ಶನಿವಾರ, ಫೆಬ್ರವರಿ ೧, ೨೦೨೦

ಮಾನವನಿಗೆ ಅಂಗಾಂಗಗಳಷ್ಟೆ ಹಕ್ಕುಗಳೂ ಮುಖ್ಯ

ಮಾನವ ಹಕ್ಕುಗಳ ಕುರಿತು ಮೂಲಭೂತ ತರಬೇತಿ ಕಾರ್ಯಾಗಾರದಲ್ಲಿ ಕೆ.ಸುರೇಶ್ ಅಭಿಮತ

ಮೈಸೂರು.ಜ.31- ಮಾನವನಿಗೆ ತನ್ನ ಅಂಗಾಂಗಗಳು ಎಷ್ಟು ಮುಖ್ಯವೋ ಹಕ್ಕುಗಳೂ ಅಷ್ಟೇ ಮುಖ್ಯ ಎಂದು ಜೆಎಸ್ ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲ ಕೆ.ಸುರೇಶ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ ಹಾಗೂ ಮಹಾಜನ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಕಾಲೇ ಜಿನ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಧನಸಹಾಯದ ಮಾನವ ಹಕ್ಕುಗಳು ಕುರಿತ ಮೂಲಭೂತ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾನವನ ಹಕ್ಕುಗಳು ಒಬ್ಬ ವ್ಯಕ್ತಿ ಹುಟ್ಟುವ ಮುಂಚಿನಿಂದ ಹಿಡಿದು ಸತ್ತ ನಂತರವೂ ಇರುತ್ತದೆ. ಮನುಷ್ಯನ ಬದುಕಿಗೆ ಊಟ, ನೀರು, ಉದ್ಯೋಗ ಎಷ್ಟು ಮುಖ್ಯವೋ ಹಕ್ಕುಗಳೂ ಅಷ್ಟೆ ಮುಖ್ಯವಾಗಿರುತ್ತವೆ.



ಮೈಸೂರಿನ ಮಹಾಜನ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಪ್ರೊ.ಆರ್.ಶಿವಪ್ಪ ಮಾತನಾಡಿದರು. ಡಾ.ಎಸ್. ವೆಂಕಟರಾಮು, ಕೆ.ಸುರೇಶ್ ಇತರರು ಇದ್ದರು.

ಇವು ಮನುಷ್ಯನ ಬೆಳವಣಿಗೆಗೆ ಸಹಕಾರಿಯಾಗಿರಲಿದ್ದು, ಹಕ್ಕುಗಳೊಂದಿಗೆ ನಮ್ಮ ಜವಾಬ್ದಾರಿಯನ್ನು ಅರಿತು ನಡೆಯಬೇಕಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ದಿಲ್ಲಿಯಲ್ಲಿ ಪ್ರತಿ ದಿನ ಆರು ಅತ್ಯಾಚಾರಗಳು ನಡೆಯುತ್ತವೆ. ಹೆಚ್ಚು ಸದ್ದು ಮಾಡುವ ನಿರ್ಭಯಾದಂತಹ ಪ್ರಕರಣ ಮಾತ್ರ ಸುದ್ದಿಯಾಗುತ್ತದೆ. ಉಳಿದ ಐದು ಪ್ರಕರಣಗಳು ಹೊರಬರುವುದೇ ಇಲ್ಲ. ಹಕ್ಕುಗಳನ್ನು ಅರಿತು ಹೋರಾಡಿದರೆ ಉಳಿದ ಪ್ರಕರಣಗಳ ಆರೋಪಿಗಳಿಗೂ ಶಿಕ್ಷೆಯಾಗುತ್ತದೆ ಎಂದರು.

ಮೈಸೂರು ವಿವಿ ಕುಲಸಚಿವ ಪ್ರೊ. ಆರ್.ಶಿವಪ್ಪ ಮಾತನಾಡಿ, ಮಾನವ ಹಕ್ಕುಗಳು ಎಂದ ಮಾತ್ರಕ್ಕೆ ಆ ಹಕ್ಕುಗಳನ್ನು ಮಾನವ ಕೇವಲ ತನ್ನ ದೃಷ್ಟಿಯಲ್ಲಿಯೇ ನೋಡುವುದಲ್ಲ. ಅನೇಕರು ನಮಗೆ ಧಾರ್ಮಿಕ ಸ್ವಾತಂತ್ರ್ಯ, ಹಕ್ಕು ಇದೆ ಎಂದು ಮತ್ತೊಬ್ಬರಿಗೆ ತೊಂದರೆ ಮಾಡುತ್ತಾರೆ. ಧಾರ್ಮಿಕ ಸ್ವಾತಂತ್ರ್ಯ ಎಂದರೆ ಮತ್ತೊಬ್ಬರಿಗೆ ತೊಂದರೆ ಮಾಡುವುದಲ್ಲ ಎಂದರು.

ಮನುಷ್ಯರು ಪ್ರಾಣಿ, ಪಕ್ಷಿ, ಪ್ರಕೃತಿಗೂ ಹಕ್ಕುಗಳು ಇವೆ ಎಂಬುದನ್ನು ಅರ್ಥ ಮಾಡಿಕೊಂಡು ಅವುಗಳ ಹಕ್ಕುಗಳನ್ನು ಗೌರವಿಸುವ ಮೂಲಕ ತಮ್ಮ ಹಕ್ಕುಗಳನ್ನು ಜವಾಬ್ದಾರಿಯಿಂದ ಚಲಾಯಿಸಬೇಕು. ಆಗ ಮಾತ್ರ ಒಂದು ಉತ್ತಮ ವ್ಯಕ್ತಿತ್ವ ರೂಪುಗೊಂಡು ಬೆಳೆಯುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ಅಧ್ಯಕ್ಷತೆ ವಹಿಸಿದ್ದರು. ಡಾ.ಎಸ್.ಆರ್.ರಮೇಶ, ಡಾ.ವಿಜಯ ಲಕ್ಷ್ಮಿ ಮುರುಳೀಧರ್ ಇತರರು ಉಪಸ್ಥಿತರಿದ್ದರು.

ಪ್ರಸ್ತುತ ವಿಶ್ವದಲ್ಲಿ 40 ಪ್ರಜಾಪ್ರಭುತ್ವ ರಾಷ್ಟ್ರಗಳು ಮಾತ್ರ ಇವೆ. ಈ ಪೈಕಿ ಪರಿಪೂರ್ಣ ಪ್ರಜಾಪ್ರಭುತ್ವ ರಾಷ್ಟ್ರ ಗಳು 28 ಮಾತ್ರವಿದ್ದು ಭಾರತ, ಅಮೆರಿಕ,ಇಂಗ್ಲೆಂಡ್ ಫೇಲ್ಡ್ ಡೆಮಾಕ್ರಸಿ ಪಟ್ಟಿಯಲ್ಲಿ ಇವೆ. -ಕೆ.ಸುರೇಶ್

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 2 ಫೆಬ್ರವರಿ 2020

■ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು : ಸ್ವಚ್ಛ ಪರಿವರ್ತನ 2020, ಮೈಸೂರು ವಿವಿ ರೆಡ್ ಕ್ರಾಸ್ ಸೊಸೈಟಿ ಅಧಿಕಾರಿ ದಿವಾಕರ್, ಸ್ಥಳ : ಕಾಲೇಜು ಕ್ವಾಡ್ರ್ಯಾಂಗಲ್, ಜಯಲಕ್ಷ್ಮಿಪುರಂ. ಬೆಳಿಗ್ಗೆ 7 ರಿಂದ ಬೆಳಿಗ್ಗೆ 10.30ರವರೆಗೆ.

ಪ್ರಜಾವಾಣಿ
ಭಾನುವಾರ • ಫೆಬ್ರುವರಿ 2, 2020

ಎಸ್‌ಬಿಆರ್‌ಆರ್ ಮಹಾಜನ
ಪ್ರಥಮದರ್ಜೆ ಕಾಲೇಜು, ರೆಡ್‌ಕ್ರಾಸ್
ಸೊಸೈಟಿ: ಸ್ವಚ್ಛ ಪರಿವರ್ತನ್ -2020.
ಸ್ಥಳ: ಕಾಲೇಜಿನ ಸಭಾಂಗಣ, ಬೆಳಿಗ್ಗೆ 7

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 3 ಮಾರ್ಚ್ 2020



ಮೈಸೂರಿನ ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ ಮಲ್ಲಮ್ಮ ಸ್ಮಾರಕ ಅಂತರ ಕಾಲೇಜು ಭಾವಗೀತೆ ಸ್ಪರ್ಧೆಯಲ್ಲಿ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಾದ ಭಾರತಿ ಹಾಗೂ ಬಿಂಬ ಪ್ರಥಮ ಹಾಗೂ ದ್ವಿತೀಯ ಬಹುಮಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿನಿಯರನ್ನು ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದರು.

ವಿಜಯ ಕರ್ನಾಟಕ

ಮಂಗಳವಾರ, 3 ಮಾರ್ಚ್ 2020,



ನಗರದ ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ ಮಲ್ಲಮ್ಮ ಸ್ಮಾರಕ ಅಂತರ ಕಾಲೇಜು ಭಾವಗೀತೆ ಸ್ಪರ್ಧೆಯಲ್ಲಿ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಾದ ಭಾರತಿ ಎಚ್.ಸಿ. ಹಾಗೂ ಬಿಂಬ ಸಿ., ಅವರು ಪ್ರಥಮ, ದ್ವಿತೀಯ, ಬಹುಮಾನ ಪಡೆದು ಪರ್ಯಾಯ ಪಾರಿತೋಷಕವನ್ನು ಪಡೆದುಕೊಂಡಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮು ಮತ್ತು ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಬಿ.ಆರ್. ಜಯಕುಮಾರಿ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 4 ಮಾರ್ಚ್ 2020

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಪರ್ಯಾಯ ಪಾರಿತೋಷಕ

ಮೈಸೂರು, ಮಾ.3– ಮೈಸೂರಿನ ಮಹಾರಾಣಿ ಮಹಿಳಾ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂತರ ಕಾಲೇಜು ಶ್ರೀಮತಿ ಎಂ.ಜಯ ಲಕ್ಷ್ಮಮ್ಮಣ್ಣಿ ಸ್ಮಾರಕ ಸಂಗೀತ ಸ್ಪರ್ಧೆಯಲ್ಲಿ ಹೆಚ್.ಸಿ.ಭಾರತಿ (ಭಾವಗೀತೆ ಮತ್ತು ದೇವರನಾಮ) ಪ್ರಥಮ, ಎಸ್.ಎಲ್.ಮನೋಜ್ಞ ಜಮದಗ್ನಿ (ದೇವರ ನಾಮ ಮತ್ತು ಶಾಸ್ತ್ರೀಯ ಸಂಗೀತ) ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದು ಪರ್ಯಾಯ ಪಾರಿತೋಷಕ ವನ್ನು ತಮ್ಮದಾಗಿಸಿಕೊಂಡಿದ್ದಾರೆ. ಸತತ 3 ವರ್ಷ ಪಾರಿತೋಷಕವನ್ನು ಪಡೆದ ವಿಜೇತರನ್ನು ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ಉಪ ಪ್ರಾಂಶುಪಾಲರಾದ ಶ್ರೀಮತಿ ಬಿ.ಆರ್. ಜಯಕುಮಾರಿ ಮತ್ತು ಡಾ.ಎಸ್.ಆರ್. ರಮೇಶ್, ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅಧ್ಯಾಪಕರು, ಅಧ್ಯಾಪಕೇತರರು ಅಭಿನಂದಿಸಿದರು.



STAR OF MYSORE

Wednesday 4th March 2020

Winners in Bhavageete

Students of SBRR Mahajana First Grade College — H.C. Bharathi and C.V. Bimba — who won first and second prizes respectively, for the third consecutive time, in 'Mallamma Memorial Inter-Collegiate Bhavageete Contest' held recently at Mallamma Marimallappa Women's Arts and Commerce College, are seen with College Principal Dr. S. Venkata Rao and Vice-Principal B.R. Jayakumari.



ವಿಜಯವಾಣಿ
ಕನ್ನಡಿಗರ ಧ್ವನಿ

ಗುರುವಾರ 5 ಮಾರ್ಚ್ 2020
5 MARCH 2020

ಸಂಗೀತದಲ್ಲಿ ಬಹುಮಾನ



ವಿಜಯವಾಣಿ ಚಿತ್ರ

ಅಂತರ ಕಾಲೇಜು ಸಂಗೀತ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಮಹಾಜನ ಕಾಲೇಜಿನ ವಿದ್ಯಾರ್ಥಿಗಳಾದ ಎಚ್.ಸಿ.ಭಾರತಿ, ಎಸ್.ಎಲ್.ಮನೋಜ್ಞ ಜಮದಗ್ನಿ ಅವರೊಂದಿಗೆ ಡಾ.ಎಸ್. ವೆಂಕಟರಾಮು, ಬಿ.ಆರ್.ಜಯಕುಮಾರಿ, ಡಾ.ಎಸ್.ಆರ್.ರಮೇಶ್ ಇದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಹಾರಾಣಿ ಮಹಿಳಾ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂತರ ಕಾಲೇಜಿನ ಶ್ರೀಮತಿ ಎಂ. ಜಯ ಲಕ್ಷ್ಮಮ್ಮಣ್ಣಿ ಸ್ಮಾರಕ ಸಂಗೀತ ಸ್ಪರ್ಧೆಯಲ್ಲಿ ಮಹಾಜನ ಕಾಲೇಜಿನ ವಿದ್ಯಾರ್ಥಿಗಳು ಬಹುಮಾನ ಪಡೆದಿದ್ದಾರೆ.

» ಮೂರು ವರ್ಷದಿಂದ ಪಾರಿತೋಷಕ

ಭಾವಗೀತೆ ಮತ್ತು ದೇವರನಾಮದಲ್ಲಿ ಎಚ್.ಸಿ.ಭಾರತಿ ಪ್ರಥಮ, ದೇವರನಾಮ ಮತ್ತು ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಎಸ್.ಎಲ್.ಮನೋಜ್ಞ ಜಮದಗ್ನಿ ದ್ವಿತೀಯ ಬಹುಮಾನದೊಂದಿಗೆ ಪರ್ಯಾಯ ಪಾರಿತೋಷಕ ತಮ್ಮದಾಗಿಸಿಕೊಂಡಿದ್ದಾರೆ. ಸತತವಾಗಿ 3 ವರ್ಷಗಳಿಂದ ವಿದ್ಯಾರ್ಥಿಗಳು ಪಾರಿತೋಷಕವನ್ನು ಪಡೆಯುತ್ತಿದ್ದಾರೆ. ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಉಪ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್ ಇತರರು ಇದ್ದರು.

DECCAN HERALD

WWW.DECCANHERALD.COM

Friday, March 13, 2020


MAHAJANA EDUCATION SOCIETY
Transforming Talents
25%
Fee Concession for Physically Challenged and Defence Persons (Whether in Service/ Ex-Service)
Accredited by NAAC with 'A' Grade & College with Potential for Excellence
Separate Hostel for Boys & Girls
Gym Area Playground & Lift Facilities
Mahajana Public School (CBSE - LKG to 10th)
Mahajana High School-State Board (English & Kannada Medium)
Mahajana PU College (Science, Commerce & Arts)
Mahajana First Grade College (Science, Commerce & Arts-Autonomous)
Mahajana PG (16+PG Courses) (Autonomous)
Mahajana Law College 3 Year L.L.B
Master of Tourism and Travel Management
Bachelor of Tourism and Hospitality
ONE STOP SOLUTION FOR ALL YOUR EDUCATIONAL NEEDS
Jayalakshmipuram, Mysuru 0821 - 2512065 / 4009600 info@mahajana.edu.in / mes@mahajana.edu.in www.mahajana.edu.in

DECCAN HERALD
WWW.DECCANHERALD.COM
Friday, March 13, 2020

Mahajana educational institutions: Better education for a better world

Mahajana institutions are known for quality education in the region. A student who joins Mahajana's at primary level can pursue studies up to PhD level today.



Mahajana First Grade College.


Mahajana Law College


Mahajana Public School

Mahajana Education Society (MES) is a premier educational institution in Mysuru city. It was established 83 years ago. It has six institutions under its umbrella - Mahajana High School, Mahajana Public School, Mahajana PU College, Mahajana First Grade College, Mahajana Postgraduate Centre, Mahajana Law College, apart from Mahajana Health Club, Mahajana Gents Hostel and Mahajana Ladies Hostel.

Mahajana educational institutions are known for quality education. Mahajana High School, the oldest of the Mahajana institutions, was started by philanthropists and educationists, such as Sri Amble Subramanya Iyer, S Ramaswamy, Rattehalli Ramappa and H V Shankar Rao. R Vasudev Murthy and G S Subramanyam gave further impetus for the growth of the institutions. The duo worked relentlessly to make Mahajana a household word in the city of Mysuru. Now, a student who joins Mahajana's at the primary level can pursue his studies up to PhD level.

Several students, who studied at Mahajana educational institutions, have achieved great laurels in various fields. Former chief minister S M Krishna, former minister B Rachaiah, spiritual leader Sadguru Jaggi Vasudev, actors Mandya Ramesh, Pavitra Lokesh, Yash, IMF adviser Geetha Gopinath, sportspersons Shreya Kiran (Kettlebell), Suchitra Jagadish (IPL), P Srinath, Pooja Venkatesh, singers Ananya Bhat and Raghu Dixit are some of them.


Mahajana High School

The students of Mahajana education institutions have excelled in studies, sports and cultural activities alike. The Mahajana Public School students have secured ranks in CHRD exams.

The Mahajana PU College, with a commitment to excellence, has the standard infrastructure and a state-of-the-art laboratory for Science subjects. Experienced and committed faculty members constantly enrich the students and guide them through value-based education to get into higher professional institutions to pursue further studies.

SBRR Mahajana First Grade College, established in 1982, offers BA, BCom, BBA, BCA, BSc and BBA (Tourism and Hospitality, Air travel) courses. In addition to these regular courses, several certificate/Diploma/Skill Enhancement programmes such as MS Excel and Tally with GST, CA, CS Foundation Training, ACCA UK Programme, training for Banking and competitive examinations, SAP-Finance, Artificial Intelligence and Machine Learning, Web Designing, Computer Hardware and Spoken English courses are offered.

More than 100+ well-qualified teachers with a commitment to the cause of education work for the welfare of the students. The college has NAAC 'A' Grade and enjoys the recognition of UGC as College with Potential for Excellence. The college enjoys autonomy status.

Seventy-five students of the college have secured ranks in the University of Mysore examinations. The students have excelled in sports, winning trophies both at national and international levels.

Mahajana Law College offers excellent education in Law. The college has quality infrastructure with qualified and experienced teachers. Mahajana PG Centre is an exclusive PG wing of SBRR Mahajana First Grade College. The centre was established in July 2003 with the motto "Enter to Learn and Depart to Serve". The centre offers MCA, MBA, MCom, MSc (Computer Science), MSc (Biotechnology), MSc (Microbiology), MSc (Biochemistry), MSc (Chemistry), MSc (Botany) MSW & MTTM. This centre is recognised as a research centre by the University of Mysore. The students can pursue PhD programmes in Life Sciences. The centre has a beautiful natural environment and excellent infrastructure.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ, 13 | ಮಾರ್ಚ್, 2020

ಮೌಲ್ಯಾಧಾರಿತ ಶಿಕ್ಷಣಕ್ಕೆ ಮಹಾಜನ ವಿದ್ಯಾಸಂಸ್ಥೆ

ಮೈಸೂರು ನಗರದ ಜಯಲಕ್ಷ್ಮೀಪುರಂನ ಮಹಾಜನ ಸಂಸ್ಥೆ ಒಂದು ಪ್ರತಿಷ್ಠಿತ ವಿದ್ಯಾಕೇಂದ್ರ. ಇದು 83 ವರ್ಷಗಳಿಂದಲೂ ಮೈಸೂರು ನಗರದಲ್ಲಿ ಶೈಕ್ಷಣಿಕ ಸೇವೆಯನ್ನು ನೀಡುತ್ತಾ ಬಂದಿದೆ. ಇದರ ಅಂಗ ಸಂಸ್ಥೆಗಳಾದ ಮಹಾಜನ ಪ್ರೈಮರಿ ಮಹಾಜನ ಪಬ್ಲಿಕ್ ಸ್ಕೂಲ್, ಮಹಾಜನ ಪದವಿಪೂರ್ವ ಕಾಲೇಜು, ಮಹಾಜನ ಪ್ರಥಮ ದರ್ಜೆ ಕಾಲೇಜು, ಮಹಾಜನ ಕಾನೂನು ಕಾಲೇಜು ಮತ್ತು ಮಹಾಜನ ಸ್ನಾತಕೋತ್ತರ ಕೇಂದ್ರ, ಮಹಾಜನ ಹಲ್ತ್ ಕ್ಲಬ್, ಮಹಾಜನ ಜಂಟ್ಸ್ ಹಾಸ್ಟೆಲ್, ಮಹಾಜನ ಲೇಡೀಸ್ ಹಾಸ್ಟೆಲ್ (2). ಇವುಗಳ ಮೂಲಕ ಮೈಸೂರು ನಗರದಲ್ಲಿ ನೀಡುತ್ತಿರುವ ಶೈಕ್ಷಣಿಕ ಸೇವೆಗಳು ಉಲ್ಲೇಖನೀಯವಾದವು.

ಈ ಸಂಸ್ಥೆಗಳು ತಮ್ಮ ಗುಣಮಟ್ಟದ ಶೈಕ್ಷಣಿಕ ಸೇವೆಗಳಿಂದ ಮೈಸೂರಿನವರಿಗೆ ಚಿರಪರಿಚಿತವಾಗಿವೆ. ಮಹಾಜನ ಪ್ರೈಮರಿ ಶಾಲೆಯು ಆಂಬಳೆ ಸುಬ್ಬಣ್ಣ ಅಯ್ಯರ್, ರಾಮಸ್ವಾಮಿ, ರಟ್ಟಿಹಳ್ಳಿ ರಾಮಪ್ಪ, ಎಸ್. ವಿ.ಶಂಕರ್ ರಾವ್ ಮುಂತಾದ ದಾನಿಗಳ ಮತ್ತು ಶಿಕ್ಷಣಾಸಕ್ತರ ಭದ್ರ ಬುನಾದಿಯಿಂದ ಸ್ಥಾಪಿತವಾಗಿರುವಂತೆಯೂ, 83 ವರ್ಷಗಳ ಹಿಂದೆ ಸ್ಥಾಪಿತವಾದ ಈ ವಿದ್ಯಾಸಂಸ್ಥೆಯನ್ನು ಆರ್. ವಾಸುದೇವಮೂರ್ತಿ ಹಾಗೂ ಜಿ.ಎಸ್.ಸುಬ್ಬಯ್ಯಶೆಂರಂತಹ ಹಿರಿಯರು ಸಂಸ್ಥೆಯನ್ನು ಬೆಳೆಸಿದ್ದಾರೆ.

ಈ ಇಬ್ಬರು ಹಿರಿಯರ ಮುಂದಾಳ್ತನ ಹಾಗೂ ಆದಿರತ ಪರಿಶ್ರಮಗಳಿಂದಾಗಿ ಮೈಸೂರು ನಗರದಲ್ಲಿ ಮಹಾಜನ ವಿದ್ಯಾಸಂಸ್ಥೆಇಂದು ಮನೆಮಾತಾಗಿದೆ. ಇಂದು ಒಬ್ಬ ವಿದ್ಯಾರ್ಥಿ ತನ್ನ ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾದರೆ ಪಿಎಚ್.ಡಿಯವರೆಗೂ ತನ್ನ ಅಧ್ಯಯನವನ್ನು ಅಲ್ಲಿ ಮುಂದುವರಿಸಬಹುದು. ಈ ರಾಜ್ಯದ ಪ್ರತಿಷ್ಠಿತ ವ್ಯಕ್ತಿಗಳಾದ ಮಾಜಿ ಮುಖ್ಯಮಂತ್ರಿ, ಎಸ್. ಎಂ.ಕೃಷ್ಣ, ರಾಜಕೀಯ ಧುರೀಣ ಬಿ.ರಾಚಯ್ಯ, ಆಧ್ಯಾತ್ಮಿಕ ಗುರು ಜಗದ್ಗುರು ಏಗ್ಡಿವಾನುದೇವ್, ಎಚ್.ಎಂ.ಚಿದಾಶಿವೆಗೌಡ, ಮತ್ತು ಸಿನಿ ತಾರೆಗಳಾದ ಪಮಿತಾ, ಲೋಕೇಶ್ (ರಾಷ್ಟ್ರಪ್ರಶಸ್ತಿ ವಿಜೇತ), ಮಂಡ್ಯ ರಮೇಶ್, ಯಶ್, ಪ್ರಸಿದ್ಧ ಕ್ರೀಡಾಪಟುಗಳಾದ ಪಿ.ತ್ರೀಲಾಕ್ಷ್ (ಟೆನಿಸ್), ಪೂಜಾ ವೆಂಕಟೇಶ್, ಶ್ರೇಯಾ ಮುಂತಾದವರು ಮಹಾಜನ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಾಗಿರುವುದು ಹೆಗ್ಗಳಿಕೆ.



ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಅಧ್ಯಯನದಲ್ಲಿ ಮಾತ್ರವಲ್ಲ, ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದಾರೆ. ಮಹಾಜನ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಸಿಐಟ್‌ಆರ್‌ಡಿ ಪರೀಕ್ಷೆಯಲ್ಲಿ ರ್‍ಯಾಂಕ್ ಜೊತೆಗೆ ಮೆರಿಟ್ ಆಫ್ ಎಕ್ಸಲೆನ್ಸ್ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಮಹಾಜನ ಪದವಿಪೂರ್ವ ಕಾಲೇಜು ಆತ್ಮತಮ ಮೂಲಸೌಕರ್ಯ ಹಾಗೂ ವಿಜ್ಞಾನ ವಿಷಯಗಳಿಗೆ ಆಗ್ಯತಾದ ಪ್ರಯೋಗಾಲಯಗಳನ್ನು ಹೊಂದಿದೆ.

ಮೌಲ್ಯಾಧಾರಿತ ಶಿಕ್ಷಣದ ಮೂಲಕ ಅನುಭವಿ ಹಾಗೂ ಬದ್ಧತೆಯುಳ್ಳ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಮಾಡುತ್ತಾ, ಇವರು ಉನ್ನತ ಶಿಕ್ಷಣ ಮುಂದುವರೆಸಲು ಆಸರೆಯಾಗಿದ್ದಾರೆ. ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ, ಬಿ.ಕಾಂ, ಬಿಸಿಎ, ಬಿ.ಎಸ್ಸಿ, ಬಿಬಿಎ (ಏವಿಯೇಷನ್ ಆಪರೇಷನ್ಸ್ ಮತ್ತು ಏರ್ ಟ್ರಾವೆಲ್) ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲದೆ, ಅನೇಕ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೊಮಾ, ಎಂಎಸ್ ಎಕ್ಸೆಲ್ ಮತ್ತು ಟ್ಯಾಲಿ, ಜಿಎಸ್‌ಟಿ, ಸಿಎ, ಸಿಎಸ್ ಫೌಂಡೇಷನ್ ತರಬೇತಿ, ಎಸಿಸಿಎ ಯುಕೆ, ಬ್ಯಾಂಕಿಂಗ್ ಪರೀಕ್ಷೆ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಸ್ಯಾಪ್ ಫೈನಾನ್ಸ್, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಮಷಿನ್ ಲರ್ನಿಂಗ್, ಮೆಶ್ ಡಿಸೈನಿಂಗ್, ಹಾರ್ಡ್‌ವೇರ್ ತರಬೇತಿ, ಸ್ಕೋಷನ್ ಇಂಗ್ಲಿಷ್ ಮುಂತಾದ ಕೌಶಲಾಭಿವೃದ್ಧಿ ಕಾರ್ಯಕ್ರಮಗಳೂ ಇಲ್ಲಿ ದೊರೆಯುತ್ತವೆ. 100ಕ್ಕೂ ಅಧಿಕ ನುರಿತ ಅಧ್ಯಾಪಕರು ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಬದ್ಧತೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಈ ಕಾಲೇಜು 'ನ್ಯಾಕ್'ನಿಂದ 'ಎ' ಗ್ರೇಡ್ ಮಾನ್ಯತೆ ಹೊಂದಿರುವುದರ ಜೊತೆಗೆ ಕ್ರೀಷ್ಟತೆಯ ಸಾಮರ್ಥ್ಯವುಳ್ಳ ಕಾಲೇಜು ಎಂದೂ ಯಾಜಸಿಯಿಂದ ಮಾನ್ಯತೆಯನ್ನು ಪಡೆದಿದೆ. ಅಲ್ಲದೆ, ಸ್ವಾಯತ್ತತೆಯ ಸ್ಥಾನಮಾನವನ್ನು ಸಹ ಹೊಂದಿದೆ. ಈ ಕಾಲೇಜಿನ 75 ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ರ್‍ಯಾಂಕ್‌ಗಳನ್ನು ಪಡೆದು 'ರೋಲ್ ಆಫ್ ಆನರ್' ಸ್ಥಾನವನ್ನು ಅಲಂಕರಿಸಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳು ಅಂತರ ವಿಶ್ವವಿದ್ಯಾನಿಲಯದ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಟ್ರೋಫಿ ಮತ್ತು ಪದಕ-ಬಿಮಾನಗಳನ್ನು ಪಡೆದಿದ್ದಾರೆ. ಮಹಾಜನ ಕಾನೂನು ಕಾಲೇಜು, ಕಾನೂನು ಶಿಕ್ಷಣದಲ್ಲಿ ಆತ್ಯತ್ಕಮ ಸೇವೆ ನೀಡುತ್ತಿದೆ. ಆತ್ಯತ್ಕಮ ಮೂಲಸೌಕರ್ಯ, ಅನುಭವಿ ಹಾಗೂ ತಜ್ಞತೆಯುಳ್ಳ ಪಡೆದ ಬೋಧಕ ವೃಂದವನ್ನು ಸಹ ಹೊಂದಿದೆ.

ಮಹಾಜನ ಸ್ನಾತಕೋತ್ತರ ವಿಭಾಗ 1999ರಲ್ಲಿ ಆರಂಭವಾಗಿ 2003ರಲ್ಲಿ ಮೀಟಿಗಳ್ಳಿಯಲ್ಲಿ ಪ್ರತ್ಯೇಕ ಕಟ್ಟಡವನ್ನು ಹೊಂದಿ, ಪ್ರಾಜಾ ಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರ ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿದೆ. ಕೇಂದ್ರವು ಮೈಸೂರಿನಲ್ಲಿ 2013ರ ಜುಲೈನಲ್ಲಿ ಪ್ರಾರಂಭವಾಯಿತು.

'ಕಲಿಕೆಗಾಗಿ ಬದ್ಧ- ಸೇವೆಗಾಗಿ ತರಳ' ಎಂಬುದು ಈ ಕೇಂದ್ರದ ಧ್ಯೇಯವಾಕ್ಯ. ಈ ಕೇಂದ್ರದಲ್ಲಿ ಎಂ.ಸಿ.ಎ, ಎಂ.ಬಿ.ಎ, ಎಂ.ಕಾಂ, ಎಂ.ಎಸ್ಸಿ (ಜೈವಿಕ ತಂತ್ರಜ್ಞಾನ), ಎಂ.ಎಸ್ಸಿ (ಗಣಕ ವಿಜ್ಞಾನ), ಎಂ.ಎಸ್ಸಿ (ಸೂಕ್ಷ್ಮಾಣು ಜೀವಶಾಸ್ತ್ರ), ಎಂ.ಎಸ್ಸಿ (ಜೈವಿಕ ರಸಾಯನಶಾಸ್ತ್ರ), ಎಂ.ಎಸ್ಸಿ (ರಸಾಯನಶಾಸ್ತ್ರ) ಎಂ.ಎಸ್.ಡಬ್ಲ್ಯೂ, ಎಂ.ಎಸ್ಸಿ (ಸ್ವಶಾಸ್ತ್ರ), ಮತ್ತು ಎಂ.ಟಿ.ಟಿ.ಎಂ. ಕೋರ್ಸ್‌ಗಳು ನಡೆಯುತ್ತಿವೆ.

ಈ ಸ್ನಾತಕೋತ್ತರ ಕೇಂದ್ರವು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರವಾಗಿ ಮನ್ನಣೆ ಪಡೆದಿದೆ. ವಿದ್ಯಾರ್ಥಿಗಳು ತಮ್ಮ ಸ್ನಾತಕೋತ್ತರ ಪದವಿ ನಂತರ ಇಲ್ಲಿ ಸಂಶೋಧನಾ ಕಾರ್ಯದೊಂದಿಗೆ ಪಿಎಚ್.ಡಿ ಮಾಡಬಹುದಾಗಿದೆ.

ಈ ಕೇಂದ್ರವು ಸುಂದರ ವಾತಾವರಣ ಹಾಗೂ ಸುಸಜ್ಜಿತವಾದ ಮೂಲಸೌಕರ್ಯ ಹೊಂದಿದೆ. ಈ ಕೇಂದ್ರದ ವಿದ್ಯಾರ್ಥಿಗಳು ಸತತವಾಗಿ ರ್‍ಯಾಂಕ್ ಮತ್ತು ಚಿನ್ನದ ಪದಕಗಳನ್ನು ಪಡೆಯುತ್ತಿದ್ದಾರೆ. ಅಲ್ಲದೆ. ಆಂತರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆ ಹಾಗೂ ಕ್ವಿಜ್, ಫ್ಯಾನ್ಸಿ ಮುಂತಾದವುಗಳಲ್ಲಿ ಭಾಗವಹಿಸಿ ಟ್ರೋಫಿ, ಬಹುಮಾನಗಳನ್ನು ಪಡೆಯುತ್ತಿದ್ದಾರೆ. ಎಲ್ಲಾ ಸ್ನಾತಕೋತ್ತರ ವಿಭಾಗಗಳೂ ಸಂಶೋಧನಾ ಅನುಭವುಳ್ಳ ಪರಿಣತಿ ಹೊಂದಿದ ಬೋಧಕ ವರ್ಗವನ್ನು ಹೊಂದಿರುವುದು ಈ ಕೇಂದ್ರದ ವೈಶಿಷ್ಟ್ಯ.

ಮಾಹಿತಿಗೆ: 0821-2512065, 4009600

MFGE In the Eyes of the Press.....

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 19 ಮಾರ್ಚ್ 2020

ಉತ್ತಮ ನಾಟಕ, ನಿರ್ದೇಶನ, ಪ್ರಸಾಧನ, ಪೋಷಕ ನಟ ಪ್ರಶಸ್ತಿ



ಮೈಸೂರು, ಮಾ. 18– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ರಂಗ ತಂಡ (ಸಾರಂತ) ಬಳ್ಳಾರಿಯ ರಂಗತೋರಣ, ಇತ್ತೀಚೆಗೆ ನಡೆಸಿದ 13ನೆಯ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿತ್ತು. ಕಾಲೇಜಿನ 19 ವಿದ್ಯಾರ್ಥಿಗಳು ಪಾಲ್ಗೊಂಡು 'ಅಂಧಯುಗ' ನಾಟಕವನ್ನು ಅಭಿನಯಿಸಿದರು.

ಧರ್ಮವೀರ್ ಭಾರತಿ ಅವರ 'ಅಂಧ ಯುಗ್' ಹಿಂದಿ ನಾಟಕದ ಕನ್ನಡ ಅನುವಾದವನ್ನು ಸಿದ್ದಲಿಂಗಪಟ್ಟಣಶೆಟ್ಟಿ ಹಾಗೂ ತಿಪ್ಪೇಸ್ವಾಮಿ ಮಾಡಿದ್ದಾರೆ. ಈ ನಾಟಕವನ್ನು ನಿರ್ದೇಶಿಸಿದವರು ಶ್ರೇಯಸ್.ಪಿ ಹಾಗೂ ಸಂಗೀತ ನಿರ್ದೇಶನ ಸುಬ್ರಹ್ಮಣ್ಯ ಮೈಸೂರು.

ಈ ನಾಟಕ ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಸುಚಿತ್ರ, ಸೈಯದ್ ವಾಸಿ ಅಬ್ಬಾಸ್, ಭಾರತಿ ಹೆಚ್.ಸಿ, ದೀಕ್ಷಿತ್, ದೀಪಕ್, ದಿವ್ಯಶ್ರೀ, ಮನೋಜ್, ನಿಖಿಲ್. ಪಿ, ರಾಘವೇಂದ್ರ, ಸುಬ್ರಹ್ಮಣ್ಯ ಪ್ರಜ್ವಲ್, ಮಹಾಶಾಂತೇಶ್, ವಿರೋಚನ್ ರಾಜೇ ಅರಸ್, ರಾಕೇಶ್, ವಿವೇಕ್, ಚಂದನ ವೇಣು ಗೋಪಾಲ್, ಗಂಗಾಧರ್, ಸುಶ್ರಾವ್ಯ ಹಾಗೂ ರೇಖಾ ಭಾಗವಹಿಸಿದ್ದರು. ಈ ನಾಟಕಕ್ಕೆ ಉತ್ತಮ ನಾಟಕ (ಮೊದಲನೆ ಬಹುಮಾನ), ನಿರ್ದೇಶನ ಪ್ರಶಸ್ತಿ, ಪ್ರಸಾದನ ಪ್ರಶಸ್ತಿ ದೊರಕಿದೆ. ಈ ನಾಟಕದಲ್ಲಿ ಅಶ್ವತ್ಥಾಮನ ಪಾತ್ರ ನಿರ್ವಹಿಸಿದ ನಿಖಿಲ್ ಅವರಿಗೆ ಉತ್ತಮ ಪೋಷಕ ನಟ ಪ್ರಶಸ್ತಿಯೂ ದೊರೆತಿದೆ.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಗುರುವಾರ,19 ಮಾರ್ಚ್ 2020,

ಮಹಾಜನ ಕಾಲೇಜಿಗೆ ನಾಟಕ ಪ್ರಶಸ್ತಿ

■ **ವಿಕ ಸುದ್ದಿಲೋಕ** ಮೈಸೂರು

ಬಳ್ಳಾರಿಯ ರಂಗತೋರಣ ವತಿಯಿಂದ ಆಯೋಜಿಸಿದ್ದ 13ನೇ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ರಂಗ ತಂಡ (ಸಾರಂತ) ನಾಟಕ ಪ್ರದರ್ಶನಕ್ಕೆ ಉತ್ತಮ ನಾಟಕ ಪ್ರಶಸ್ತಿ ಲಭಿಸಿದೆ.

ಧರ್ಮವೀರ್ ಭಾರತಿ ಅವರ ಅಂಧಯುಗ್ ಹಿಂದಿ ನಾಟಕವನ್ನು ಸಿದ್ದಲಿಂಗಪಟ್ಟಣ ಶೆಟ್ಟಿ ಮತ್ತು ತಿಪ್ಪೇಸ್ವಾಮಿ ಅವರು ಕನ್ನಡಕ್ಕೆ ಅನುವಾದಿಸಿರುವ ನಾಟಕ ವನ್ನು ಪಿ.ಶ್ರೇಯಸ್ ನಿರ್ದೇಶಿದ್ದಾರೆ. ಸುಬ್ರಹ್ಮಣ್ಯ ಸಂಗೀತ ನಿರ್ದೇಶನ ನೀಡಿದ್ದಾರೆ.

ಕಾಲೇಜಿನ 19 ವಿದ್ಯಾರ್ಥಿಗಳು ಪಾಲ್ಗೊಂಡು ಅಂಧಯುಗ ನಾಟಕ ಪ್ರದರ್ಶಿದರು. ನಾಟಕಕ್ಕೆ ಉತ್ತಮ ನಾಟಕ ಪ್ರಶಸ್ತಿ, ಉತ್ತಮ ನಿರ್ದೇಶನ ಪ್ರಶಸ್ತಿ, ಉತ್ತಮ ಪ್ರಸಾದನ ಪ್ರಶಸ್ತಿ ದೊರಕಿದೆ. ಈ ನಾಟಕದಲ್ಲಿ ಅಶ್ವತ್ಥಾಮನ ಪಾತ್ರ ನಿರ್ವಹಿಸಿದ ನಿಖಿಲ್‌ಗೆ ಉತ್ತಮ ಪೋಷಕ ನಟ ಪ್ರಶಸ್ತಿಯೂ ಸಹ ದೊರೆಯಿತು.

ನಾಟಕದಲ್ಲಿ ' ಸುಚಿತ್ರ, ಸೈಯದ್ ವಾಸಿ ಅಬ್ಬಾಸ್, ಎಚ್.ಸಿ.ಭಾರತಿ, ದೀಕ್ಷಿತ್, ದೀಪಕ್, ದಿವ್ಯಶ್ರೀ, ಮನೋಜ್, ಪಿ.ನಿಖಿಲ್, ರಾಘವೇಂದ್ರ, ಸುಬ್ರಹ್ಮಣ್ಯ ಪ್ರಜ್ವಲ್, ಮಹಾ ಶಾಂತೇಶ್, ವಿರೋಚನ್ ರಾಜೇ ಅರಸ್, ರಾಕೇಶ್, ವಿವೇಕ್, ಚಂದನ, ವೇಣುಗೋಪಾಲ್, ಗಂಗಾಧರ್, ಸುಶ್ರಾವ್ಯ ಹಾಗೂ ರೇಖಾ ಅವರನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.



ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ನಾಟಕ ಪ್ರಶಸ್ತಿ ಪಡೆದ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 16.3.2020

ಮೂರು ದಿನಗಳ ಕೌಶಲ್ಯ ತರಬೇತಿ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗಾವಕಾಶ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ 3 ದಿನಗಳ ಕೌಶಲ್ಯ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದ ತರಬೇತುದಾರರಾಗಿ ಸೈಫ್ ಉಲ್ಲಾ ಖಾನ್, ಶ್ರೀಹರಿ, ಸಲ್‌ಮಾನ್ ಅಹ್ಮದ್ ಪಾಲ್ಗೊಂಡು, ಸಾರ್ವಜನಿಕ ಭಾಷಣ, ಪ್ರಸ್ತುತತೆ, ತಂಡ ನಿರ್ಮಾಣ ಚಟುವಟಿಕೆಗಳು, ಸಮಯ ನಿರ್ವಹಣೆ ಮತ್ತು ಗುಂಪು ಚರ್ಚೆ ಕುರಿತು ವಿವರಿಸಿದರು.

ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ವೃತ್ತಿ ಮಾರ್ಗದರ್ಶಿ ಮತ್ತು ಉದ್ಯೋಗಾವಕಾಶ ವಿಭಾಗದ ಸಂಚಾಲಕಿ ರಂಜಿತಾ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 3 ಮಾರ್ಚ್ 2020



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವೃತ್ತಿ ಮಾರ್ಗದರ್ಶಿ ಮತ್ತು ಉದ್ಯೋಗಾವಕಾಶ ವಿಭಾಗ ಹಾಗೂ ಐಕ್ಯುಎಸಿ ಸಹಯೋಗದಲ್ಲಿ 3 ದಿನಗಳ ಕೌಶಲ್ಯ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಟಾಕ್ ಟು ಅಸ್ ಸಂಸ್ಥೆಯ ಸಹ ಸಂಸ್ಥಾಪಕ ಸೈಫ್‌ವುಲ್ಲಾ ಖಾನ್, ಶ್ರೀಹರಿ, ಸಲ್ಮಾನ್ ಅಹ್ಮದ್ ತರಬೇತುದಾರರಾಗಿ ಭಾಗವಹಿಸಿದ್ದರು. ಕಾಲೇಜು ಪ್ರಾಂಶುಪಾಲ ಡಾ.ಎಸ್.ವೆಂಕಟರಾಮು, ವೃತ್ತಿ ಮಾರ್ಗದರ್ಶಿ ಮತ್ತು ಉದ್ಯೋಗಾವಕಾಶ ವಿಭಾಗದ ಸಂಚಾಲಕಿ ರಂಜಿತಾ, ಸಹಾಯಕ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

STAR OF MYSORE

Tuesday 10th March 2020

Winners in Inter-Zonal Badminton Tourney



The Badminton team of SBRR Mahajana First Grade College, Jayalakshmipuram — (from left) Captain Abhi Abudhan, Bharath, Shivaprasad, Ashif and Prem — won first place in Mysore University Inter-Collegiate Inter-Zonal Tournament conducted by University of Mysore recently.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 10.3.2020

ಮಹಾಜನ ಕಾಲೇಜಿಗೆ ಸಮಗ್ರ ತಂಡ ಪ್ರಶಸ್ತಿ ದ್ವಿತೀಯ ಸ್ಥಾನ



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು, ಅಂತರ ವಲಯ ಮಟ್ಟ ಪಂದ್ಯಾವಳಿಯಲ್ಲಿ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ, ಸಮಗ್ರ ತಂಡ ಪ್ರಶಸ್ತಿಯನ್ನು 22 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜೇತ ತಂಡದ ನಾಯಕ ರಾದಕಿರಣ್‌ಕುಮಾರ್, ಸತೀಶ್, ಅಭಿಅಬುದನ್, ಕರಣ್ ಹಾಗೂ ಆಟಗಾರರನ್ನು ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಉಪ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಕ್ರೀಡಾ ಸಮಿತಿ ಸದಸ್ಯ ಡಾ.ಕೆ.ಕೆ. ಸೋಮ ಶೇಖರ್, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಚ್.ಎನ್. ಭಾಸ್ಕರ್, ಮಧುಸೂಧನ್ ಅಭಿನಂದಿಸಿದ್ದಾರೆ.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪತ್ರಿಕೆ
ಮಂಗಳವಾರ, 10 ಮಾರ್ಚ್ 2020



ಮೈಸೂರು ವಿಶ್ವದ್ಯಾನಿಲಯದ ವತಿಯಿಂದ ನಡೆದ ಪುರುಷರ ಅಂತರ ಕಾಲೇಜು ಮಟ್ಟದ ಪಂದ್ಯಾವಳಿಯಲ್ಲಿ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಸಮಗ್ರ ತಂಡ ಪ್ರಶಸ್ತಿಯನ್ನು 22 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದೆ. ಗೌರವ ಕಾರ್ಯದರ್ಶಿ ಡಾ. ಜಯಲಕ್ಷ್ಮಿ ಮುರಳೀಧರ್, ಕ್ರೀಡಾ ಸಮಿತಿ ಸದಸ್ಯ ಡಾ.ಸೋಮಶೇಖರ್, ದೈಹಿಕ ಶಿಕ್ಷಣ ನಿರ್ದೇಶಕ ಮಧುಸೂದನ್, ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ವಿಜಯವಾಣಿ

ಕನ್ನಡಿಗರ ಧ್ವನಿ

10 ಮಾರ್ಚ್ 2020 | ಮಂಗಳವಾರ

10 MARCH 2020

ಮೈಸೂರು: ಮೈಸೂರು ವಿಶ್ವವಿದ್ಯಾಲಯದಿಂದ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ವಿವಿಧ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು 22 ಅಂಕದೊಂದಿಗೆ ಸಮಗ್ರ ತಂಡದ ದ್ವಿತೀಯ ಪ್ರಶಸ್ತಿ ಪಡೆದಿದ್ದಾರೆ. ಕಾಲೇಜಿನ ಕ್ರೀಡಾ ಸಮಿತಿ ಸದಸ್ಯರಾದ ಡಾ.ಕೆ.ಕೆ. ಸೋಮಶೇಖರ್, ದೈಹಿಕ ಶಿಕ್ಷಣ ನಿರ್ದೇಶಕ ಮಧುಸೂಧನ್, ಪ್ರಾಂಶುಪಾಲ ಡಾ. ಎಸ್.ವೆಂಕಟರಾಮು, ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀಮುರಳೀಧರ್, ಉಪಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ತಂಡದ ನಾಯಕರಾದ ಕಿರಣ್ ಕುಮಾರ್, ಸತೀಶ್, ಅಭಿ ಅಬುದನ್, ಕರಣ್ ಇದ್ದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ದ್ವಿತೀಯ ಪ್ರಶಸ್ತಿ

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಗುರುವಾರ 19 ಮಾರ್ಚ್ 2020

ಕಿಕ್‌ಬಾಕ್ಸಿಂಗ್‌ನಲ್ಲಿ ಸಾಧನೆಗೈಯುತ್ತಿರುವ ಮೈಸೂರಿನ ಯುವಕ

ಮೈಸೂರು,ಮಾ.18(ವೈಡಿಎಸ್)–ಯಾರ ಸಹಕಾರವಿಲ್ಲದೆ ಕಿಕ್ ಬಾಕ್ಸಿಂಗ್‌ನಲ್ಲಿ ಮೈಸೂರಿನ ಯುವಕನೋರ್ವ ಸಾಧನೆಗೈಯ್ಯುತ್ತಿದ್ದು, ಕೇವಲ 2 ವರ್ಷದಲ್ಲಿ 9 ಚಿನ್ನ 3 ಬೆಳ್ಳಿ ಹಾಗೂ 2 ಕಂಚಿನ ಪದಕ ಮುಡಿಗೇರಿಸಿಕೊಂಡಿದ್ದಾರೆ.

2020ರ ಫೆಬ್ರವರಿ 9ರಿಂದ 13ರವರೆಗೆ ವಾಕೋ ಇಂಡಿಯನ್ ಕಿಕ್ ಬಾಕ್ಸಿಂಗ್ ಫೆಡರೇಷನ್, ವರ್ಲ್ಡ್ ಅಸೋಸಿಯೇಷನ್ ಆಫ್ ಕಿಕ್ ಬಾಕ್ಸಿಂಗ್ ಆರ್ಗನೈಜೇಷನ್ ಹಾಗೂ ಇಂಟರ್‌ನ್ಯಾಷನಲ್ ಒಲಿಂಪಿಕ್ ಕಮಿಟಿ ಸಂಯುಕ್ತಾಶ್ರಯದಲ್ಲಿ ಕೊಲ್ಕತ್ತಾದಲ್ಲಿ ಆಯೋಜಿಸಿದ್ದ 'ವಾಕೊ ಇಂಡಿಯನ್ ಓಪನ್ ಇಂಟರ್‌ನ್ಯಾಷನಲ್ ಕಿಕ್ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನಲ್ಲಿ 1 ಬೆಳ್ಳಿ, 1 ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಮೈಸೂರಿನ ಅಶೋಕಪುರಂ ನಿವಾಸಿ ಓಮೇಶ್ವರ್ ಮತ್ತು ಜೇಜಾಮಣಿ ದಂಪತಿ ಪುತ್ರ ಸುಹಾಸ್, 19ನೇ ವರ್ಷದಲ್ಲೇ ಕಿಕ್‌ಬಾಕ್ಸಿಂಗ್ ಅನ್ನು ಮೈಗೂಡಿಸಿಕೊಂಡು ಯಾರೊಬ್ಬರ ಸಹಕಾರವೂ ಇಲ್ಲದೆ ತನ್ನ ಪರಿಶ್ರಮದ ಮೂಲಕವೇ ಸಾಧನೆಗೈಯ್ಯುತ್ತಿದ್ದಾರೆ. ಸದ್ಯ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷ ಬಿಎ ವ್ಯಾಸಂಗ ಮಾಡುತ್ತಿದ್ದು, ವಿವೇಕಾನಂದ ನಗರದ ಅಕಾಡೆಮಿ ಆಫ್ ಸೆಲ್ಫ್ ಡಿಫೆನ್ಸ್ ಎಂಬ ತರಬೇತಿ ಶಾಲೆಯಲ್ಲಿ ಹರ್ಷ ಶಂಕರ್ ಎಂಬುವರ ಬಳಿ ಕಳೆದ 2 ವರ್ಷದಿಂದ ತರಬೇತಿ ಪಡೆಯುತ್ತಿದ್ದಾರೆ.



> ನಾನು ಐಟಿಐ ವ್ಯಾಸಂಗ ಮಾಡುತ್ತಿದ್ದಾಗ ಏನಾದರೂ ಸಾಧಿಸಬೇಕೆಂಬ ಛಲ ಹುಟ್ಟಿತು. ಅಂದಿನಿಂದಲೇ ವಿವೇಕಾನಂದ ನಗರದ ಹರ್ಷ ಶಂಕರ್ ಮತ್ತು ಮೈಸೂರು ವಿವಿ ಕೋಚ್ ಜಸ್ವಂತ್ ಎಂಬುವರ ಬಳಿ ಕಿಕ್ ಬಾಕ್ಸಿಂಗ್ ತರಬೇತಿ ಪಡೆದೆ. ಸತತ ಅಭ್ಯಾಸ ನಡೆಸಿ ಸ್ವಂತ ಖರ್ಚಿನಲ್ಲಿ ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿದ್ದೇನೆ.
>
> **–ಸುಹಾಸ್, ಕಿಕ್ ಬಾಕ್ಸಿಂಗ್ ಪಟು.**

ಬಹುಮಾನ: 2020ರ ಫೆಬ್ರವರಿ 9 ರಿಂದ 13ರವರೆಗೆ ನವದೆಹಲಿಯಲ್ಲಿ ವರ್ಲ್ಡ್ ಅಸೋಸಿಯೇಷನ್ ಆಫ್ ಕಿಕ್ ಬಾಕ್ಸಿಂಗ್ ಆರ್ಗನೈಜೇಷನ್ ಆಯೋಜಿಸಿದ್ದ '4ನೇ ಇಂಟರ್‌ನ್ಯಾಷನಲ್ ಕಿಕ್‌ಬಾಕ್ಸಿಂಗ್ ರೆಫ್ರಿ ಸೆಮಿನಾರ್–2020' ಪಂದ್ಯಾವಳಿಯ

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಮಂಗಳವಾರ, ಮಾರ್ಚ್ ೩, ೨೦೨೦

ತಂತ್ರಜ್ಞಾನದಲ್ಲಿ ಗುಣಮಟ್ಟದ ಶಿಕ್ಷಣ ಬಲಪಡಿಸಬೇಕಿದೆ

ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತ ಕಾರ್ಯಾಗಾರದಲ್ಲಿ ಅತುಲ್ ಬೆಂಗಾರಿ



ಮೈಸೂರಿನ ಮೇಟಗಳ್ಳಿಯಲ್ಲಿರುವ ಮಹಾಜನ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಗಳ ಕಾರ್ಯಾಗಾರದಲ್ಲಿ ಭಾಗವಹಿಸಿದ್ದವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು: ಇಂದಿನ ಜಾಗತೀಕರಣ, ಡಿಜಿಟಲ್ ತಂತ್ರಜ್ಞಾನ ಮತ್ತು ಕಂಪ್ಯೂಟರೀಕರಣ ವ್ಯವಸ್ಥೆಯಲ್ಲಿ ಬಾಲ್ಯ ಹಾಗೂ ಉನ್ನತ ಶಿಕ್ಷಣಗಳ ಸೌಲಭ್ಯ, ಸ್ಥಳೀಯ ಅಗತ್ಯತೆ ಮತ್ತು ಗುಣ ಮಟ್ಟದ ಶಿಕ್ಷಣವನ್ನು ಬಲಪಡಿಸುವುದು ಮುಖ್ಯವಾಗುತ್ತದೆ ಎಂದು ಪುಣೆಯ ಅಕ್ಯೂಮನ್ ಟುಡೆ ನಿರ್ದೇಶಕ ಅತುಲ್ ಬೆಂಗಾರಿ ಅಭಿಪ್ರಾಯಪಟ್ಟರು.

ಸೋಮವಾರ ನಗರದ ಮೇಟಗಳ್ಳಿಯಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕದ ವತಿಯಿಂದ ಪೂಜಾಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರದಲ್ಲಿ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಆಯೋಜಿಸಲಾಗಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮುಕ್ತ, ದೂರಶಿಕ್ಷಣ ವ್ಯವಸ್ಥೆ, ತಂತ್ರಜ್ಞಾನ ಮೂಲಕ ಔಪಚಾರಿಕ ಮತ್ತು ಅನೌಪಚಾರಿಕ ಕಲಿಕಾ ವಿಧಾನಗಳನ್ನು ರೂಢಿಸಿಕೊಳ್ಳಲು ಮಾರ್ಗಸೂಚಿ ಮೂಲಕ ಅವರು ಸಲಹೆ ನೀಡಿದರು.

> ಶಿಕ್ಷಕರು ಮತ್ತು ಪೋಷಕರಿಗಾಗಿ ಶೈಕ್ಷಣಿಕ ಚೌಕಟ್ಟು, ನಿರ್ದಿಷ್ಟ ತರಬೇತಿ, ವೃತ್ತಿಪರ ಮಾರ್ಗದರ್ಶನ ಅಭಿವೃದ್ಧಿ, ಮಕ್ಕಳ ಶ್ರೆಯೋಭಿವೃದ್ಧಿ, ಕಲಿಕೆಯ ಅಗತ್ಯಗಳನ್ನು ಸಕ್ರಿಯವಾಗಿ ಬೆಂಬಲಿಸಲು ಹಾಗೂ ಗುಣಮಟ್ಟದ ಸಂಪನ್ಮೂಲಗಳನ್ನು ಒದಗಿಸುವುದು ಮುಖ್ಯ.
>
> –ಅತುಲ್ ಬೆಂಗಾರಿ

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2019ರ ಬಗ್ಗೆ ಚರ್ಚೆ ನಡೆಸಲಾಯಿತು. ಶಾಲಾ ಶಿಕ್ಷಣಕ್ಕಾಗಿ ಹೊಸ ಪಠ್ಯಕ್ರಮ ಮತ್ತು ಬೋಧನಾಕ್ರಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ಕಂಠಪಾಠದ ಕಲಿಕೆಯನ್ನು ತಪ್ಪಿಸಲು ಮತ್ತು ಮಕ್ಕಳ ಸರ್ವ ತೋಮುಖ ಬೆಳವಣಿಗೆಗೆ ನೆರವಾಗುವ ಪದ್ಧತಿಯ ಬಗ್ಗೆ ಪರಸ್ಪರ ಚರ್ಚೆ ನಡೆಸಲಾಯಿತು.

2030ರ ವೇಳೆಗೆ ಸ್ಪಂದನಾಶೀಲ ಪಠ್ಯಕ್ರಮ ಮತ್ತು ಬೋಧನಾಕ್ರಮಗಳನ್ನು ರೂಪಿಸುವುದನ್ನು ಕುರಿತು ಹಾಜರಿದ್ದ ಅಧ್ಯಾಪಕ ವೃಂದದೊಂದಿಗೆ ಸಮಾಲೋಚನೆ ನಡೆಸಲಾಯಿತು.

ಎಸ್‌ಬಿಆರ್‌ಆರ್ ಮಹಾಜನ ವಿದ್ಯಾ ಸಂಸ್ಥೆಯ ಅಧ್ಯಕ್ಷ ಮುರಳೀಧರ್ ಭಾಗವತ್, ಉಪಾಧ್ಯಕ್ಷ ರವಿಕುಮಾರ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲ ಡಾ.ರೇಣುಕಾರ್ಯ, ಪ್ರವಾಸೋದ್ಯಮ ಮತ್ತು ಆತಿಥ್ಯ ಕಾಲೇಜಿನ ನಿರ್ದೇಶಕ ಕಮಾಂಡೋ ಸತೀಶ್, ಪ್ರಥಮ ದರ್ಜೆ ಕಾಲೇಜಿನ ಉಪಪ್ರಾಂಶುಪಾಲ ಡಾ.ಬಿ.ಆರ್.ಜಯಕುಮಾರಿ, ಸಮ್ಮೇಳನದ ಸಂಯೋಜಕಿ ಎಂ.ಎಸ್.ರಶ್ಮಿ ಅರಸ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆರ್. ರಮೇಶ್ ಕಾರ್ಯಾಗಾರದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

DECCAN HERALD
WWW.DECCANHERALD.COM

Tuesday
March 3, 2020



Students during the valedictory programme of Talents Forum of SBRR Mahajana First Grade College, in Mysuru, recently. DH PHOTO

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 3.3.2020

ಅಭಿವೃದ್ಧಿ ಪೂಜಾಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯಕ್ರಮ

ಮಹಾಜನ ಕಾಲೇಜಿನಲ್ಲಿ ಎನ್‌ಇಪಿ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕದಿಂದ ಶನಿವಾರ ಮೈಸೂರಿನ ಮೇಟಗಳ್ಳಿಯಲ್ಲಿರುವ ಪೂಜಾಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರದಲ್ಲಿ 'ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಗಳ' ಬಗ್ಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಪುಣೆಯ 'ಅಕ್ಯೂಮನ್ ಟುಡೆ' ನಿರ್ದೇಶಕ ಅತುಲ್ ಬೆಂಗಾರಿ ಮಾತನಾಡಿ, ರಾಷ್ಟ್ರೀಯ ಶಿಕ್ಷಣದ ಆಯೋಗದ ನೀತಿಯು ಇಂದಿನ ಜಾಗತೀಕರಣ, ಡಿಜಿಟಲ್ ತಂತ್ರಜ್ಞಾನ ಮತ್ತು ಕಂಪ್ಯೂಟರೀಕರಣ ವ್ಯವಸ್ಥೆಯಲ್ಲಿ ಬಾಲ್ಯ ಹಾಗೂ ಉನ್ನತ ಶಿಕ್ಷಣಗಳ ಸೌಲಭ್ಯ, ಸ್ಥಳೀಯ ಅಗತ್ಯತೆ ಮತ್ತು ಗುಣ ಮಟ್ಟದ ಶಿಕ್ಷಣವನ್ನು ಬಲಪಡಿಸುವಿಕೆ ಮುಖ್ಯವಾಗುತ್ತದೆ. ಇದರ ಬೆಳವಣಿಗೆಗೆ ಸೂಕ್ತ ಶೈಕ್ಷಣಿಕ ಮಾರ್ಗದರ್ಶಿ ಸೂತ್ರಗಳು ಅವಶ್ಯ ಹಾಗೂ ಈ ನಿಟ್ಟಿನಲ್ಲಿ ಶಿಕ್ಷಕರು ಮತ್ತು ಪೋಷಕರಿಗಾಗಿ ಶೈಕ್ಷಣಿಕ ಚೌಕಟ್ಟು, ನಿರ್ದಿಷ್ಟ ತರಬೇತಿ, ವೃತ್ತಿಪರ ಮಾರ್ಗದರ್ಶನ ಅಭಿವೃದ್ಧಿ ಮತ್ತು ಬೆಳವಣಿಗೆ ಮುಖ್ಯ ಎಂದರು. ಸಂಸ್ಥೆಯ ಅಧ್ಯಕ್ಷ ಮುರಳೀಧರ್ ಭಾಗವತ್, ಉಪಾಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಡಾ. ರೇಣುಕಾರ್ಯ, ಸತೀಶ್, ಡಾ. ಜಯಕುಮಾರಿ, ರಶ್ಮಿ ಆರಸ್, ಡಾ. ವೆಂಕಟರಾಮು, ಡಾ. ರಮೇಶ್ ಹಾಜರಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 4 ಮಾರ್ಚ್ 2020

ಮಹಾಜನದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕಾರ್ಯಾಗಾರ

ಮೈಸೂರು, ಮಾ.3– ಮೈಸೂರಿನ ಮೇಟಗಳ್ಳಿಯಲ್ಲಿರುವ ಪೂಜಾ ಭಾಗವತ್ ಮಹಾಜನ ಸ್ನಾತಕೋತ್ತರ ಕೇಂದ್ರದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕದ ವತಿಯಿಂದ 'ರಾಷ್ಟ್ರೀಯ ಶಿಕ್ಷಣ ನೀತಿ–2019' ಕಾರ್ಯಾಗಾರ ಮಂಗಳವಾರ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ಪುಣೆಯ ಅಕ್ಯೂಮನ್ ಟುಡೆ ನಿರ್ದೇಶಕ ಅತುಲ್ ಬೆಂಗಾರಿ ಮಾತನಾಡಿ, ಗುಣಮಟ್ಟದ ಶಿಕ್ಷಣ ನೀಡುವುದು ಮುಖ್ಯ. ಅದಕ್ಕೆ ಡಿಜಿಟಲ್ ತಂತ್ರಜ್ಞಾನದ ಬಳಕೆ ಅಗತ್ಯವಾಗಿದೆ. ಶಿಕ್ಷಕರು ವಿಶೇಷ ಬೋಧನಾ ಕೌಶಲಗಳನ್ನು ಕಲಿತು ಅಳವಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶಿಕ್ಷಕರಿಗೂ ಪ್ರಾಯೋಗಿಕ ತರಬೇತಿ ಅವಶ್ಯ ಎಂದರು. ಕಾರ್ಯಾಗಾರದಲ್ಲಿ ಎಸ್‌ಬಿಆರ್‌ಆರ್ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಉಪಾಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ, ಪ್ರಾಂಶುಪಾಲ ರೇಣುಕಾರ್ಯ, ಕಮಾಂಡೊ ಸತೀಶ್, ಬಿ.ಆರ್. ಜಯಕುಮಾರಿ, ಎಂ.ಎಸ್.ರಶ್ಮಿ ಅರಸ್, ವೆಂಕಟರಾಮು ಮತ್ತಿತರರಿದ್ದರು.